ಬುಧವಾರ, ಏಪ್ರಿಲ್ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 119 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಬಸವ ಜಯಂತಿ ಶುಭಾಶಯ

ಆಳ-ಅಗಲ
ಆನ್‌ಲೈನ್ ವೇದಿಕೆ: ಅಶ್ಲೀಲತೆ ತಡೆ ಹೇಗೆ?

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,288	24,335	₹1.01 ಲಕ್ಷ (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	84.96

ಸಿಜೆಐ ಆಗಿ ಗವಾಯಿ ನೇಮಕ

ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೇಮಕ ಮಾಡಿದ್ದಾರೆ 8

ಸಿಐಎಸ್‌ಸಿಇ: 10, 12ರ ಫಲಿತಾಂಶ ಇಂದು ಪ್ರಕಟ

ನವದೆಹಲಿ (ಪಿಟಿಐ): ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್‌ನ (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಯ ಫಲಿತಾಂಶವು ಬುಧವಾರ ಬೆಳಿಗ್ಗೆ 11 ಗಂಟೆಗೆ ಪ್ರಕಟವಾಗಲಿದೆ.

'ಮಂಡಳಿಯ ವೆಬ್‌ಸೈಟ್ ಅಥವಾ 'ಕೆರಿಯರ್ಸ್' ಪೋರ್ಟಲ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ. ಡಿಜಿ ಲಾಕರ್‌ನಲ್ಲಿಯೂ ಫಲಿತಾಂಶವನ್ನು ನೋಡಬಹುದು' ಎಂದು ಸಿಐಎಸ್‌ಸಿಇನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೋಸೆಫ್ ಇಮಾನ್ಯುಯೆಲ್ ಅವರು ಮಂಗಳವಾರ ತಿಳಿಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದಾಳಿಯ ಮಾದರಿ, ಗುರಿ, ಸಮಯ ನಿರ್ಧರಿಸಲು ಸಶಸ್ತ್ರ ಪಡೆಗಳಿಗೆ ಸ್ವಾತಂತ್ರ್ಯ

ಪ್ರತೀಕಾರ: ಸೇನೆಗೆ ಅಧಿಕಾರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪಹಲ್ಗಾಮ್‌ನ ಭಯೋತ್ಪಾದಕರ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಲು ಭಾರತವು ತನ್ನ ಆಯ್ಕೆಗಳನ್ನು ಪರಿಶೀಲಿಸುತ್ತಿರುವ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಇಲ್ಲಿ ಉನ್ನತ ಮಟ್ಟದ ಸಭೆ ನಡೆಸಿದರು. ಉಗ್ರರ ದಮನಕ್ಕೆ ದಾಳಿಯ ಮಾದರಿ, ಗುರಿ ಹಾಗೂ ಸಮಯ ನಿರ್ಧರಿಸಲು ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಕಾರ್ಯಾಚರಣೆ ಸ್ವಾತಂತ್ರ್ಯ ಇದೆ ಎಂದು ಮೋದಿ ಅವರು ಸೇನೆಗಳ ಮುಖ್ಯಸ್ಥರಿಗೆ ಸಂದೇಶ ನೀಡಿದರು.

ಭಯೋತ್ಪಾದಕರ ದಾಳಿಗೆ 26 ಮಂದಿ ಮೃತಪಟ್ಟ ಬಳಿಕ ಭದ್ರತೆ ಕುರಿತ ಸಂಪುಟ ಸಮಿತಿ ಸಭೆ ಎರಡನೇ ಬಾರಿ ನಡೆಯುತ್ತಿದೆ. ಅದಕ್ಕೆ ಒಂದು ದಿನ ಮೊದಲು ರಕ್ಷಣಾ ಸಚಿವ ರಾಜನಾಥ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಚೀಫ್ ಆಫ್ ಡಿಫೆನ್ಸ್ ಸ್ಟಾಫ್ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಅವರಲ್ಲದೆ ಸೇನೆ, ನೌಕಾಪಡೆ ಮತ್ತು ವಾಯುಪಡೆಯ ಮುಖ್ಯಸ್ಥರೊಂದಿಗೆ ನಡೆಸಿದ ಉನ್ನತ ಮಟ್ಟದ ಸಭೆಯಲ್ಲಿ ಮೋದಿ ಈ ಹೇಳಿಕೆ ನೀಡಿದ್ದಾರೆ. ಈ ನಡುವೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೋದಿ ಅವರನ್ನು ಭೇಟಿ ಮಾಡಿ ಸರ್ಕಾರದ ಕಾರ್ಯತಂತ್ರಗಳ ಕುರಿತು ಸಮಾಲೋಚನೆ ನಡೆಸಿದರು.

11ನೇ ಪುಟ ನೋಡಿ

ಪ್ರಧಾನಿ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಸಿಡಿಎಸ್ ಅನಿಲ್ ಚೌಹಾಣ್ ಹಾಗೂ ಸೇನೆ, ನೌಕಾಪಡೆ ಮತ್ತು ವಾಯುಪಡೆಯ ಮುಖ್ಯಸ್ಥರು ಪಾಲ್ಗೊಂಡರು – ಪಿಟಿಐ ಚಿತ್ರ

48 ಪ್ರವಾಸಿ ತಾಣ ಬಂದ್

ಶ್ರೀನಗರ: ಕಾಶ್ಮೀರದಾದ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿರುವ 48 ಪ್ರವಾಸಿ ತಾಣಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ಮುಚ್ಚಲಾಗಿದೆ.

ಪ್ರವಾಸಿಗರ ಸುರಕ್ಷತೆಗೆ ಬೆದರಿಕೆಯಿದೆ ಎಂಬ ಗುಪ್ತಚರ ವರದಿ ಮತ್ತು ಭಯೋತ್ಪಾದಕರ ಶೋಧ ಕಾರ್ಯಾಚರಣೆ ನಡೆಯುತ್ತಿರುವ ಕಾರಣ ಜಮ್ಮು ಮತ್ತು ಕಾಶ್ಮೀರದ ಆಡಳಿತವು ಈ ಕ್ರಮ ತೆಗೆದುಕೊಂಡಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಸಾರ್ವಜನಿಕ ಉದ್ಯಾನಗಳು ಸೇರಿದಂತೆ ಕಾಶ್ಮೀರದಾದ್ಯಂತ ಗುರುತಿಸಲಾದ 87 ಪ್ರವಾಸಿ ತಾಣಗಳಲ್ಲಿ ಅರ್ಧಕ್ಕೂ ಅಧಿಕ ಕಡೆ ಇದೀಗ ಪ್ರವಾಸಿಗರಿಗೆ ಬಾಗಿಲು ಮುಚ್ಚಲಾಗಿದೆ.

11ನೇ ಪುಟ ನೋಡಿ

ಗಡೀಪಾರು: ಶೌರ್ಯ ಚಕ್ರ ಪುರಸ್ಕೃತ ಯೋಧನ ತಾಯಿಗೆ ಸಂಕಷ್ಟ

ಪಾಕಿಸ್ತಾನ ಪ್ರಜೆಗಳನ್ನು ಗಡೀಪಾರು ಮಾಡುವ ಕೇಂದ್ರ ಸರ್ಕಾರದ ನಿರ್ಧಾರದ ಬಿಸಿ ಶೌರ್ಯ ಚಕ್ರ ಗೌರವಕ್ಕೆ ಪಾತ್ರರಾಗಿದ್ದ ಸೈನಿಕರೊಬ್ಬರ ತಾಯಿಗೂ ತಟ್ಟಿದೆ.

ಹುತಾತ್ಮ ಪೊಲೀಸ್ ಕಾನ್‌ಸ್ಟೆಬಲ್ ಮುದಸಿರ್ ಅಹ್ಮದ್ ಶೇಖ್ ಅವರ ತಾಯಿ ಶಮೀಮಾ ಅಖ್ತರ್ ಅವರನ್ನು ಜಮ್ಮು–ಕಾಶ್ಮೀರ ಸರ್ಕಾರ ಗಡೀಪಾರು ಮಾಡಲಿದೆ.

11ನೇ ಪುಟ ನೋಡಿ

ಕುಡುಪುವಿನಲ್ಲಿ ಗುಂಪು ಹಲ್ಲೆಯಿಂದ ಯುವಕ ಸಾವು; 15 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಅನುಪಮ್

ಮಂಗಳೂರು: 'ನಗರ ಹೊರವಲಯದ ಕುಡುಪುವಿನಲ್ಲಿ ಯುವಕನೊಬ್ಬ ಭಾನುವಾರ ಮೃತಪಟ್ಟಿದ್ದು, ಇದಕ್ಕೆ ಗುಂಪು ಹಲ್ಲೆಯೇ ಕಾರಣ ಎಂಬುದು ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ದೃಢಪಟ್ಟಿದೆ. ಹಲ್ಲೆ ನಡೆಸಿದ 15 ಆರೋಪಿಗಳನ್ನು ಬಂಧಿಸಿದ್ದೇವೆ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದರು.

5ನೇ ಪುಟ ನೋಡಿ

'ಮಾಜಿ ಕಾರ್ಪೊರೇಟರ್ ಪತಿ ಭಾಗಿ?'

'ಈ ಗಲಭೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಮಾಜಿ ಕಾರ್ಪೊರೇಟರ್ ಒಬ್ಬರ ಪತಿ ರವೀಂದ್ರ ಅವರು ಭಾಗಿಯಾಗಿರುವ ಮಾಹಿತಿ ಇದೆ. ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ' ಎಂದು ಕಮಿಷನರ್ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

5ನೇ ಪುಟ ನೋಡಿ

ಡಿಜಿಪಿ ಸೇವಾವಧಿ ಮೇ 21ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಅಲೋಕ್

ಬೆಂಗಳೂರು: ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಅವರ ಸೇವಾ ಅವಧಿಯನ್ನು ಮೇ 21ರವರೆಗೆ ವಿಸ್ತರಿಸಿ, ಸರ್ಕಾರ ಆದೇಶ ಹೊರಡಿಸಿದೆ.

8ನೇ ಪುಟ ನೋಡಿ

'30 ಸಾವಿರ ಮಹಿಳೆಯರಿಗೆ ಸ್ವ-ಉದ್ಯೋಗ ಯೋಜನೆ'

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ರಾಜ್ಯದ ಆಯ್ದ 100 ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರ ಆಕಾಂಕ್ಷೆ ಮತ್ತು ಆಸಕ್ತಿಗೆ ಅನುಗುಣವಾಗಿ ಉದ್ಯೋಗಾಧಾರಿತ ಕೌಶಲ ತರಬೇತಿ ನೀಡಲು ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ ಆರಂಭಿಸಲಾಗುತ್ತಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'29 ಜಿಲ್ಲೆಗಳಿಂದ ತಲಾ ಮೂರು ಗ್ರಾಮ ಪಂಚಾಯಿತಿಗಳಂತೆ ಒಟ್ಟು 87, ಬೆಳಗಾವಿ ಜಿಲ್ಲೆಯಲ್ಲಿ 7 ಮತ್ತು ತುಮಕೂರು ಜಿಲ್ಲೆಯ 6 ಗ್ರಾಮ ಪಂಚಾಯಿತಿ ಸೇರಿ ಒಟ್ಟು 100 ಗ್ರಾಮ ಪಂಚಾಯಿತಿಗಳಲ್ಲಿ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಯೋಗದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಪ್ರತಿ ಕೇಂದ್ರದಲ್ಲಿ ಸ್ವ-ಉದ್ಯೋಗ ಕೈಗೊಳ್ಳುವ ಮಹಿಳೆಯರಿಗೆ ಕೌಶಲ ಅಭಿವೃದ್ಧಿ ನಿಗಮ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ತರಬೇತಿ ನೀಡಿ, ಬ್ಯಾಂಕುಗಳೊಂದಿಗೆ ಸಂಪರ್ಕ ಏರ್ಪಡಿಸಿ 30 ಸಾವಿರ ಮಹಿಳೆಯರಿಗೆ ಸ್ವ-ಉದ್ಯೋಗ ಆರಂಭಿಸುವಂತೆ ಪ್ರೇರೇಪಿಸಲಾಗುವುದು. ಪ್ರತಿ ತರಬೇತಿ ಕೇಂದ್ರದಿಂದ 300 ಮಹಿಳೆಯರಿಗೆ ಕೌಶಲ ತರಬೇತಿ ನೀಡುವ ಗುರಿ ಹೊಂದಲಾಗಿದೆ' ಎಂದೂ ಮಾಹಿತಿ ನೀಡಿದ್ದಾರೆ.

ಆಸ್ತಿ ತೆರಿಗೆ: ಮೇ ಅಂತ್ಯದವರೆಗೆ ಶೇ 5ರ ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಪಾವತಿಸುವ ಮಾಲೀಕರಿಗೆ ಶೇ 5ರಷ್ಟು ರಿಯಾಯಿತಿಯನ್ನು ಮೇ ಅಂತ್ಯದವರೆಗೆ ವಿಸ್ತರಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಏಪ್ರಿಲ್ 30ರೊಳಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ನೀಡಲಾಗಿತ್ತು. ಈ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಿ ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 144 (8)ರಲ್ಲಿ ಸರ್ಕಾರವು ಪಾಲಿಕೆಯ ಶಿಫಾರಸ್ಸಿನ ಮೇರೆಗೆ ಅಧಿಸೂಚನೆ ಮೂಲಕ ಯಾವುದೇ ಹಣಕಾಸು ವರ್ಷಗಳಿಗೆ ರಿಯಾಯಿತಿ ಅವಧಿಯನ್ನು ವಿಸ್ತರಿಸಬಹುದು. ಇದರಂತೆ ನಗರಾಭಿವೃದ್ಧಿ ಇಲಾಖೆ ರಿಯಾಯಿತಿ ಅವಧಿ ವಿಸ್ತರಿಸಲು ಅನುಮತಿ ನೀಡಿದೆ. ಅದರ ಆಧಾರದಲ್ಲಿ ಸುತ್ತೋಲೆ ಹೊರಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಉಗ್ರರ ದಾಳಿ: ವ್ಯಾಖ್ಯಾನ ಮಾಡುವುದು ಸರಿಯಲ್ಲ'

ಬೆಂಗಳೂರು: 'ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದು ಸರಿಯಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಘಟನೆಯ ಬಗ್ಗೆ ನಾವು ಯಾರು ಕೂಡ ಹೆಚ್ಚು ಪ್ರತಿಕ್ರಿಯೆ ಮಾಡುವುದು ಸೂಕ್ತವಲ್ಲ. ದೇಶದ ಭದ್ರತೆ ಕಾಪಾಡುವುದು ಎಲ್ಲರ ಜವಾಬ್ದಾರಿ' ಎಂದರು.

'ಬಹಿರಂಗ ಹೇಳಿಕೆ ಬಗ್ಗೆ ಹೈಕಮಾಂಡ್ ಎಚ್ಚರಿಕೆ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ದೇಶದ ಭದ್ರತೆ ವಿಚಾರವನ್ನು ಪಕ್ಷಾತೀತವಾಗಿ ನೋಡಬೇಕು' ಎಂದು ಹಿಂದೆಯೇ ಹೇಳಿದ್ದೇನೆ' ಎಂದು ಹೇಳಿದರು.



ಮೇ 1ರಿಂದ ಸೇವೆ ಆರಂಭ • ಬಿಲ್ ಬುಕ್, ಆಹ್ವಾನ ಪತ್ರಿಕೆ, ನಿಯತಕಾಲಿಕೆಗಳಿಗೆ ಅವಕಾಶ ಇಲ್ಲ

ಪಠ್ಯ ಪುಸ್ತಕ, ಪುಸ್ತಕ ರವಾನೆಗೆ 'ಜ್ಞಾನ ಅಂಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯ ಪುಸ್ತಕ, ಗೈಡ್ ಮತ್ತು ಸಾಹಿತ್ಯ ಕೃತಿಗಳ ರವಾನೆಗಾಗಿಯೇ ಮೀಸಲಿರಿಸಿದ ಭಾರತೀಯ ಅಂಚೆ ಇಲಾಖೆಯ 'ಜ್ಞಾನ ಅಂಚೆ' ಸೇವೆ ಇದೇ ಮೇ 1ರಿಂದ ಆರಂಭವಾಗಲಿದೆ.

ಈ ಮೊದಲು ಪಠ್ಯ ಪುಸ್ತಕ, ಗೈಡ್ ಮತ್ತು ಸಾಹಿತ್ಯ ಕೃತಿಗಳನ್ನು ಭಾರತೀಯ ಅಂಚೆಯ 'ಬುಕ್ ಪ್ಯಾಕೆಟ್' ಮತ್ತು 'ಬುಕ್ ಪೋಸ್ಟ್'ಗಳ ಮೂಲಕ ಕಳುಹಿಸ ಬೇಕಿತ್ತು. ಭಾರತೀಯ ಅಂಚೆ ಕಾಯ್ದೆಗೆ 2023ರಲ್ಲಿ ತಿದ್ದುಪಡಿ ತರುವ ಮೂಲಕ 'ಬುಕ್ ಪ್ಯಾಕೆಟ್' ಸೇವೆಯನ್ನು 2024ರ ಜೂನ್‌ನಲ್ಲಿ ರದ್ದುಪಡಿಸಲಾಗಿತ್ತು. 'ಬುಕ್ ಪೋಸ್ಟ್' ಸೇವೆಯ ಹೆಸರನ್ನು ಬದಲಿಸಿ, ದರವನ್ನು ಏರಿಕೆ ಮಾಡಲಾಗಿತ್ತು.

ಬುಕ್ ಪ್ಯಾಕೆಟ್ ಮತ್ತು ಬುಕ್ ಪೋಸ್ಟ್ ಸೇವೆಗಳ ರದ್ದತಿಯಿಂದ ಪಠ್ಯಪುಸ್ತಕ, ಸಾಹಿತ್ಯ ಕೃತಿಗಳ ರವಾನೆ ದುಬಾರಿ ಬಾಬತ್ತಾಗಿ ಬದಲಾಗಿತ್ತು. ಈ ಬಗ್ಗೆ ಪ್ರಕಾಶಕರು, ಪ್ರಕಾಶಕರ ಸಂಘಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಅಂಚೆ ಇಲಾಖೆಗೆ ಪತ್ರ ಬರೆದಿತ್ತು.

ಈಗ ಭಾರತೀಯ ಅಂಚೆ ಕಾಯ್ದೆಗೆ ಮತ್ತೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರವು, 'ಜ್ಞಾನ ಅಂಚೆ' ಸೇವೆ ಆರಂಭಕ್ಕೆ ಮುಂದಾಗಿದೆ. ಪಠ್ಯ ಪುಸ್ತಕ, ಸಾಹಿತ್ಯ ಕೃತಿಗಳಿಗಷ್ಟೇ ಈ ಸೇವೆ ಮೀಸಲಾಗಿದೆ. ಬಿಲ್ ಬುಕ್‌ಗಳು, ಆಹ್ವಾನ ಪತ್ರಿಕೆಗಳು, ಕರಪತ್ರಗಳು, ನಿಯತಕಾಲಿಕೆಗಳಿಗೆ ಈ ಸೇವೆ ಲಭ್ಯವಿಲ್ಲ.

ಈ ಸೇವೆ ಅಡಿ ಪುಸ್ತಕಗಳನ್ನು ಕಳುಹಿಸುವವರು ಅದರ ಮೇಲೆ 'ಜ್ಞಾನ ಅಂಚೆ' ಎಂದು ಕಡ್ಡಾಯವಾಗಿ ನಮೂದಿಸಿರಬೇಕು. ಕಳುಹಿಸುವವರು ಮತ್ತು ಪಡೆಯುವವರ ಜತೆಗೆ ಪ್ರಕಾಶಕರ ಹೆಸರು ಹಾಗೂ ವಿಳಾಸ ಇರಬೇಕು. ಯಾವುದೇ ವಾಣಿಜ್ಯ ಉದ್ದೇಶದ ಕರಪತ್ರ ಮತ್ತು ಬರಹ ಇರಬಾರದು. ಕನಿಷ್ಠ 300 ಗ್ರಾಂನಿಂದ ಗರಿಷ್ಠ 5 ಕೆ.ಜಿ.ವರೆಗಿನ ಪಾರ್ಸಲ್‌ಗಳನ್ನು ಮಾತ್ರ 'ಜ್ಞಾನ ಅಂಚೆ' ಎಂದು ಪರಿಗಣಿಸಲಾಗುತ್ತದೆ ಎಂದು ಅಂಚೆ ಇಲಾಖೆ ಷರತ್ತು ವಿಧಿಸಿದೆ.

ಈ ಷರತ್ತುಗಳನ್ನು ಉಲ್ಲಂಘಿಸುವ ಪಾರ್ಸಲ್‌ಗಳನ್ನು, 'ಭಾರತೀಯ ಅಂಚೆ ಪಾರ್ಸಲ್' ಎಂದು ಪರಿಗಣಿಸಲಾಗುತ್ತದೆ. ಅಂತಹ ಪಾರ್ಸಲ್‌ಗಳಿಗೆ 'ಜ್ಞಾನ ಅಂಚೆ' ಶುಲ್ಕ ಮತ್ತು 'ಭಾರತೀಯ ಅಂಚೆ ಪಾರ್ಸಲ್' ಶುಲ್ಕದ ನಡುವಣ ವ್ಯತ್ಯಾಸದ ಎರಡು ಪಟ್ಟು ದಂಡ ವಿಧಿಸಲಾಗುತ್ತದೆ.

ಶುಲ್ಕ ಪಟ್ಟಿ ವಿವರ

ತೂಕ	ಶುಲ್ಕ
300 ಗ್ರಾಂವರೆಗೆ	₹20
301-500 ಗ್ರಾಂವರೆಗೆ	₹25
501-1,000 ಗ್ರಾಂವರೆಗೆ	₹35
1,001-2,000 ಗ್ರಾಂವರೆಗೆ	₹50
2,001-3,000 ಗ್ರಾಂವರೆಗೆ	₹65
3,001-4,000 ಗ್ರಾಂವರೆಗೆ	₹80
4,001-5,000 ಗ್ರಾಂವರೆಗೆ	₹100

ಯಾವುದಕ್ಕೆ ಅನ್ವಯ...

- ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳಿಗೆ ಕಳುಹಿಸುವ ಪಠ್ಯಪುಸ್ತಕಗಳು, ಅಭ್ಯಾಸ ಪುಸ್ತಕಗಳು
- ಸರ್ಕಾರದ ಸ್ವಾಯತ್ತ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಕಳಹಿಸುವ ಪಠ್ಯಪುಸ್ತಕಗಳು, ಅಭ್ಯಾಸ ಪುಸ್ತಕಗಳು
- ಈ ಪುಸ್ತಕಗಳು ಬಿಡಿ ಸಂಪುಟಗಳಲ್ಲಿ ಇರಬಹುದು ಅಥವಾ ಎಲ್ಲ ಸಂಪುಟಗಳನ್ನು ಒಳಗೊಂಡಿರಬಹುದು. ನಕ್ಷೆ, ಚಿತ್ರ, ಗ್ರಾಫ್ ಹಾಳೆ, ಖಾಲಿ ಹಾಳೆಗಳನ್ನು ಒಳಗೊಂಡಿರಬಹುದು
- ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಚಾರಗಳನ್ನು ಆಧರಿಸಿದ ಸಾಹಿತ್ಯ ಕೃತಿಗಳು

ಪರಿಶೀಲನೆಗೆ ಅವಕಾಶ

'ಜ್ಞಾನ ಅಂಚೆ' ಅಡಿ ಪಾರ್ಸಲ್ ಕಳುಹಿಸುವವರ ವಿಳಾಸಕ್ಕೆ ಭೇಟಿ ನೀಡಿ ಪರಿಶೀಲಿಸುವ ಅಧಿಕಾರವನ್ನು ಅಂಚೆ ಇಲಾಖೆ ಕಾಯ್ದಿರಿಸಿಕೊಂಡಿದೆ. ಹೀಗಾಗಿ 'ಜ್ಞಾನ ಅಂಚೆ'ಗಳ ಮೇಲೆ, ಅದನ್ನು ಕಳುಹಿಸುತ್ತಿರುವವರ ಮತ್ತು ವಾಪಸಾತಿ ವಿಳಾಸ ನಮೂದಿಸುವುದನ್ನು ಕಡ್ಡಾಯಗೊಳಿಸಿದೆ.

'ಅಂಚೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳು 'ಜ್ಞಾನ ಅಂಚೆ' ಕಳುಹಿಸುವವರ ವಿಳಾಸಕ್ಕೆ ಭೇಟಿ ನೀಡಿ ಪರಿಸೀಲನೆ ನಡೆಸಬಹುದು' ಎಂದು ತಿದ್ದುಪಡಿ ಕಾಯ್ದೆಯ 92ಎ (7) ಸೆಕ್ಷನ್‌ನಲ್ಲಿ ಉಲ್ಲೇಖಿಸಿದೆ.

ಸುದ್ದಿ 2 ನಿಮಿಷ

ಡ್ರಗ್ಸ್ ಮಾರಾಟ: ಇಬ್ಬರ ಬಂಧನ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ಮಂಗಳೂರಿನ ಡ್ರಗ್ಸ್ ಪೆಡ್ಲರ್ ಸೇರಿ ಇಬ್ಬರನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಗಳೂರು ಬಬ್ಬುಕಟ್ಟೆಯ ಸದಾಲತ್ ಉಲ್ಲಾ ಅಬ್ದುಲ್ ರಜಾಕ್(40) ಮತ್ತು ಫರ್ವೇಜ್(32) ಬಂಧಿತರು.

ಆರೋಪಿಗಳಿಂದ ₹25 ಲಕ್ಷ ಮೌಲ್ಯದ 225 ಗ್ರಾಂ. ತೂಕದ ಎಂಡಿಎಂಎ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಾಚೇನಹಳ್ಳಿ ಕೆರೆ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ತಿಳಿಸಿದರು.

ಫರ್ವೇಜ್ ಎಂಬಾತ ಅಬ್ದುಲ್ ರಜಾಕ್‌ನಿಂದ ಕಡಿಮೆ ಬೆಲೆಗೆ ಎಂಡಿಎಂಎ ಖರೀದಿಸಿ ನಗರಕ್ಕೆ ತಂದು ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದವರಿಗೆ ಮಾರಾಟ ಮಾಡುತ್ತಿದ್ದ ಎಂದು ಹೇಳಿದರು.

ಆರೋಪಿಗಳ ವಿರುದ್ಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯ ಅಡಿ ಪ್ರಕರಣ ದಾಖಲಾಗಿದೆ.

ನಗರದ 21 ವಿದ್ಯಾರ್ಥಿಗಳು ಜಪಾನ್ ಪ್ರವಾಸಕ್ಕೆ ಆಯ್ಕೆ

ಬೆಂಗಳೂರು: ಮಕ್ಕಳಲ್ಲಿ ಜಾಗತಿಕ ಮಟ್ಟದ ಉದ್ಯಮದ ಮನೋಭಾವ ಮೂಡಿಸಲು 'ಲರ್ನ್ ಎನ್ ಇನ್ಸ್ಪೈರ್' ಹಾಗೂ ನಿಶ್ಚಲ್ಸ್ ಸ್ಮಾರ್ಟ್ ಲರ್ನಿಂಗ್ ಸಲ್ಯೂಷನ್ಸ್ ಸಹಯೋಗದಲ್ಲಿ 'ಸ್ಪಾರ್ ಎಕ್ಸ್' ಯೋಜನೆ ಮೂಲಕ ನಗರದ ಆರು ಶಾಲೆಗಳ 21 ವಿದ್ಯಾರ್ಥಿಗಳು ಸೇರಿ ದೇಶದ 32 ವಿದ್ಯಾರ್ಥಿಗಳು ಜಪಾನ್‌ಗೆ ಕಲಿಕಾ ಪ್ರವಾಸ ಕೈಗೊಳ್ಳಲಿದ್ದಾರೆ.

ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆ, ಅಪೋಲೊ ನ್ಯಾಷನಲ್ ಪಬ್ಲಿಕ್ ಶಾಲೆ, ಅಂಬರ್ ವ್ಯಾಲಿ ರೆಸಿಡೆನ್ಸಿಯಲ್ ಶಾಲೆ, ಶಾರದಾ ವಿದ್ಯಾನಿಕೇತನ್, ಡಿಪಿಎಸ್, ಸರ್ವಪಲ್ಲಿ ವಿದ್ಯಾ ನಿಲಯಂ ಪ್ರೌಢ ಶಾಲೆಯ 21 ವಿದ್ಯಾರ್ಥಿಗಳು ಈ ಪ್ರವಾಸದಲ್ಲಿ ಉದ್ಯಮಶೀಲತೆಯ ಮೊದಲ ಹಂತದ ಕಲಿಕೆಗೆ ಆಯ್ಕೆಯಾಗಿದ್ದಾರೆ. ಐದು ದಿನಗಳ ಈ ಕಲಿಕಾ ಪ್ರವಾಸವು ಸಾಂಸ್ಕೃತಿಕ ಕಲಿಕೆ, ಜಪಾನಿನ ನವೋದ್ಯಮಗಳ ಜತೆ ಚರ್ಚೆ, ಕ್ಯೋಟೋ ಹಾಗೂ ಒಸಾಕಾದಲ್ಲಿರುವ ಪಾರಂಪರಿಕ ಸ್ಥಳಗಳಿಗೆ ಭೇಟಿಯನ್ನು ಒಳಗೊಂಡಿದೆ.

'ನಾನು ಮುನ್ನಡೆಸುತ್ತಿರುವ ಶಾಲೆಗಳ ಮಕ್ಕಳು ಈ ಕಾರ್ಯಕ್ರಮಕ್ಕೆ ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರ. ಮಕ್ಕಳು ಅಂತರರಾಷ್ಟ್ರೀಯ ಮಟ್ಟದ ವೇದಿಕೆ ಎದುರಿಸಲು ತಯಾರಿ ಮಾಡುವ ನಮ್ಮ ಬದ್ಧತೆಗೆ ಇದು ಸಾಕ್ಷಿಯಾಗಿದೆ' ಎಂದು ಐಶ್ವರ್ಯ ಡಿಕೆಎಸ್ ಹೆಗಡೆ ತಿಳಿಸಿದರು.

ಪ್ರಾಂಶುಪಾಲರನ್ನು ಕತ್ತರಿಸಿ ಫ್ರಿಜ್‌ನಲ್ಲಿ ಇಡುವುದಾಗಿ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಚಾರ್ಯ ಕಾಲೇಜಿಗೆ ಹುಸಿ ಬಾಂಬ್ ಬೆದರಿಕೆಯ ಇ–ಮೇಲ್ ಸಂದೇಶ ಬಂದಿದ್ದು, ಆರೋಪಿ ಪತ್ತೆಗೆ ಸೋಲದೇವನಹಳ್ಳಿ ಠಾಣೆಯ ಪೊಲೀಸರು ಶೋಧ ಆರಂಭಿಸಿದ್ದಾರೆ.

ಕಾಲೇಜಿನ ಆಡಳಿತ ಮಂಡಳಿಯವರು ನೀಡಿದ ದೂರು ಆಧರಿಸಿ ಏಪ್ರಿಲ್ 22ರಂದು ಸೋಲದೇವನಹಳ್ಳಿ ಠಾಣೆಯ ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದರು. ಸಿಜೆಎಂ ನ್ಯಾಯಾಲಯದ ಸೂಚನೆ ಸೂಚನೆ ಮೇರೆಗೆ ಈಗ ಎಫ್‌ಐಆರ್ ದಾಖಲಿಸಿ ಕೊಂಡು ತನಿಖೆ ಆರಂಭಿಸಿದ್ದಾರೆ ಎಂಬುದು ಗೊತ್ತಾಗಿದೆ.

ಇ–ಮೇಲ್‌ನಲ್ಲಿ ಏನಿತ್ತು?: 'ಏಪ್ರಿಲ್ 22ರಂದು ಆಚಾರ್ಯ ಕಾಲೇಜಿನ ಅಧಿಕೃತ ಇ–ಮೇಲ್ ಐ.ಡಿಗೆ ಅಪರಿಚಿತ ವ್ಯಕ್ತಿ ಸಂದೇಶ ಕಳುಹಿಸಿದ್ದ. ಕಾಲೇಜು ಆವರಣದಲ್ಲಿ ಬಾಂಬ್ ಇಡಲಾಗಿದೆ. ಅದು ಸ್ಫೋಟಗೊಳ್ಳಲಿದೆ. ಪ್ರಾಂಶುಪಾಲರನ್ನು ಕತ್ತರಿಸಿ ದೇಹವನ್ನು ಫ್ರಿಜ್‌ನಲ್ಲಿ ಇಡಲಾಗುವುದು ಎಂದು ಇ–ಮೇಲ್‌ನಲ್ಲಿ ಬರೆಯಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಾಲೇಜು ಆಡಳಿತ ಮಂಡಳಿಯವರು ನೀಡಿದ ಮಾಹಿತಿ ಮೇರೆಗೆ ಅಂದೇ ಕಾಲೇಜು ಆವರಣಕ್ಕೆ ತೆರಳಿ ಪರಿಶೀಲನೆ ನಡೆಸಲಾಗಿತ್ತು. ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿಯೂ ಸ್ಥಳಕ್ಕೆ ತೆರಳಿ ತಪಾಸಣೆ ನಡೆಸಿದರು. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಬೆದರಿಕೆ ಸಂದೇಶ ಹೊತ್ತು ತಂದಿದ್ದ ಇ–ಮೇಲ್ ಅನ್ನು ತಾಂತ್ರಿಕ ತಜ್ಞರು ಪರಿಶೀಲಿಸುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

ವೃತ್ತಿಪರ ಅಂತರ ರಾಜ್ಯ ಕಳ್ಳನ ಬಂಧನ

₹30 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ • ತಲೆಮರೆಸಿಕೊಂಡ ಮತ್ತೊಬ್ಬನಿಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಅಂತರ ರಾಜ್ಯ ಕಳ್ಳನನ್ನು ಕೆ.ಆರ್.ಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿಯ ಗಿಜ್ಜಲುಕುಂಟ ಗ್ರಾಮದ ಚಲ್ಲ ನರಸಿಂಹಲು (32) ಬಂಧಿತ ಆರೋಪಿ. ಮತ್ತೊಬ್ಬ ಆರೋಪಿ ಶ್ರೀನಿವಾಸ್ ಅಲಿಯಾಸ್ ಸೀನ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ.

ಆರೋಪಿಯಿಂದ ₹30 ಲಕ್ಷ ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಸಾಮಗ್ರಿಯನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಎಲೆಕ್ಟ್ರಾನಿಕ್ ಸಿಟಿ ಕೋನಪ್ಪನ ಅಗ್ರಹಾರದ ಗೋವಿಂದಶೆಟ್ಟಿ ಪಾಳ್ಯದಲ್ಲಿ ಆರೋಪಿ ಬಾಡಿಗೆ ಮನೆಯಲ್ಲಿ ನೆಲಸಿದ್ದ. ಹಗಲು ವೇಳೆ ಬೀಗ ಹಾಕಿದ ಮನೆಗಳನ್ನು ಗುರುತಿಸಿ ರಾತ್ರಿ ವೇಳೆ ಕಳ್ಳತನ ಮಾಡುತ್ತಿದ್ದ ಎಂದು ಅವರು ಮಾಹಿತಿ ನೀಡಿದರು.

ದೂರುದಾರರು ಅಕ್ಟೋಬರ್ 15ರಂದು ಮನೆಗೆ ಬೀಗ ಹಾಕಿಕೊಂಡು ಸಂಬಂಧಿಕರ ಮನೆಗೆ ತೆರಳಿದ್ದರು. ಅಕ್ಟೋಬರ್ 15ರಂದು ವಾಪಸ್ ಬಂದು ನೋಡುವಾಗ ಮನೆಯ ಬೀಗ ಒಡೆದು ಚಿನ್ನಾಭರಣ ಕಳ್ಳತನ ಮಾಡಿಕೊಂಡು ಹೋಗಿರುವುದು ಗೊತ್ತಾಗಿತ್ತು. ಮನೆಯ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಕೋನಪ್ಪನ ಅಗ್ರಹಾರದ ಹುಸ್ಕೂರು ಕೆರೆಯ ಬಳಿ ಆರೋಪಿಯನ್ನು ಬಂಧಿಸಲಾಯಿತು ಎಂದು ತಿಳಿಸಿದರು.

ಆರೋಪಿಯ ಬಂಧನದಿಂದ ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ 10 ಕನ್ನ ಕಳವು ಹಾಗೂ ಎರಡು ಮನೆ ಕಳ್ಳತನ, ಕಾಡುಗೋಡಿ ಠಾಣೆಯಲ್ಲಿ ದಾಖಲಾಗಿದ್ದ ಒಂದು ಕನ್ನ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

₹10 ಲಕ್ಷ ಬೆಲೆ ಬಾಳುವ ಚಿನ್ನಾಭರಣ ಕಳ್ಳತನ: ಮತ್ತೊಬ್ಬ ವೃತ್ತಿಪರ ಕಳ್ಳ ಜ್ಞಾನ ಪ್ರಕಾಶ್ ಎಂಬಾತನನ್ನು ಕೆ.ಆರ್.ಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹10 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕೋಲಾರ ಜಿಲ್ಲೆಯ ಕೆಜಿಎಫ್ ತಾಲ್ಲೂಕಿನ ಅಂಡರ್ ಸನ್ ಪೇಟೆಯ ಲೂರ್ದು ನಗರದ ಜ್ಞಾನ ಪ್ರಕಾಶ್ ನಗರಕ್ಕೆ ಬಂದು ತನ್ನ ಸಹಚರ ಪ್ರೇಮ್ ಜತೆಗೆ ಸೇರಿಕೊಂಡು ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿದ್ದ ಎಂದು ಪೊಲೀಸರು ಹೇಳಿದರು.

ಶ್ರೀನಿವಾಸ್

ಜ್ಞಾನ ಪ್ರಕಾಶ್

ಅಪರಾಧ ಸುದ್ದಿ

ಮನೆಯಲ್ಲಿ ಕಳ್ಳತನ: ಇಬ್ಬರ ಸೆರೆ

ಮತ್ತೊಂದು ಪ್ರಕರಣದಲ್ಲಿ ಕಾವೇರಿ ನಗರದ ಮನೆಯೊಂದರಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಾರ್ಚ್ 6ರಂದು ಮನೆಯ ಮಾಲೀಕರು ಬೀಗ ಹಾಕಿಕೊಂಡು ಸ್ನೇಹಿತರ ಮನೆಗೆ ಹೋಗಿದ್ದರು. ರಾತ್ರಿ ವಾಪಸ್ ಬಂದು ನೋಡಿದಾಗ, ಕೊಠಡಿಯ ಬೀರುವಿನಲ್ಲಿಟ್ಟಿದ್ದ 30 ಗ್ರಾಂ. ಚಿನ್ನಾಭರಣ ಕಳವಾಗಿರುವುದು ಗೊತ್ತಾಯಿತು. ಪ್ರಕರಣ ದಾಖಲಿಸಿಕೊಂಡು ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡರು.

'ಬೇಗೂರಿನ ಕೆನರಾ ಬ್ಯಾಂಕ್ ಬಳಿ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸಹಚರನ ಜತೆ ಸೇರಿ ಕಳವು ಮಾಡಿರುವುದಾಗಿ ಒಪ್ಪಿಕೊಂಡ. ಆರೋಪಿಯ ಸಹಚರನನ್ನು ಕೋಡಿಚಿಕ್ಕನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಡಿ.ಮಾರ್ಟ್ ಬಳಿ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಯಿತು. ಕಳವು ಮಾಡಿದ ಚಿನ್ನಾಭರಣಗಳನ್ನು ಬೆಳ್ಳಂದೂರು ಹಾಗೂ ಚಿಕ್ಕಪೇಟೆ ಆಭರಣ ಅಂಗಡಿಗಳಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ. ಆಭರಣ ಅಂಗಡಿ ಮಾಲೀಕರು ಚಿನ್ನವನ್ನು ಠಾಣೆಗೆ ತಂದು ಒಪ್ಪಿಸಿದರು' ಎಂದು ಹೇಳಿದರು.

ರಸ್ತೆ ದಾಟುತ್ತಿದ್ದ ವೇಳೆ ಟಿಪ್ಪರ್ ಡಿಕ್ಕಿ: ಚಾಲಕ ಪರಾರಿ

ಅಪಘಾತ: ಪೌರಕಾರ್ಮಿಕ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಸ್ಟ್ ಆಫ್ ಕಾರ್ಡ್ ರಸ್ತೆಯ ಶಿವನಗರ ಮೇಲ್ಸೇತುವೆಯ ಕೆಳಗಿರುವ ರಸ್ತೆಯಲ್ಲಿ ಟಿಪ್ಪರ್ ಡಿಕ್ಕಿಯಾಗಿ ಪೌರಕಾರ್ಮಿಕ ಮಹಿಳೆ, ಶ್ರೀರಾಂಪುರದ ನಿವಾಸಿ ಸರೋಜಮ್ಮ(51) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಂಗಳವಾರ ಬೆಳಿಗ್ಗೆ 6.30ರ ಸುಮಾರಿಗೆ ಬಯೊಮೆಟ್ರಿಕ್ ಹಾಜರಾತಿ ನೀಡಲು ಸರೋಜಮ್ಮ ಅವರು ತೆರಳುತ್ತಿದ್ದರು. ಅದೇ ವೇಳೆ ವೇಗವಾಗಿ ಬಂದ ಟಿಪ್ಪರ್ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಗಂಭೀರವಾಗಿ ಗಾಯಗೊಂಡಿದ್ದ ಸರೋಜಮ್ಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಅಪಘಾತ ನಡೆದ ಬಳಿಕ ಟಿಪ್ಪರ್ ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿ ಆಗಿದ್ದಾನೆ. ಆರೋಪಿಯ ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಸಿಗ್ನಲ್‌ನಲ್ಲಿ ಕೆಂಪು ದೀಪ ಉರಿಯುತ್ತಿದ್ದುದ್ದನ್ನು ಗಮನಿಸಿದ್ದ ಸರೋಜಮ್ಮ ಅವರು ರಸ್ತೆ ದಾಟಲು ಮುಂದಾಗಿದ್ದರು. ತಕ್ಷಣವೇ ಹಸಿರು ದೀಪ ಉರಿಯಲು ಆರಂಭಿಸಿದ್ದರಿಂದ ಚಾಲಕ ಟಿಪ್ಪರ್ ಮುಂದಕ್ಕೆ ಚಲಾಯಿಸಿದ್ದ. ಟಿಪ್ಪರ್‌ನ ಮುಂದಿನ ಚಕ್ರ ಹರಿದ ಪರಿಣಾಮ ಮಹಿಳೆ ಸ್ಥಳದಲ್ಲೇ ಮೃತಪಟ್ಟರು' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ವಿಜಯನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ಕು ಕಾರುಗಳು ಜಖಂ: ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಮೇಲ್ಸೇತುವೆಯಲ್ಲಿ ಸೋಮವಾರ ತಡರಾತ್ರಿ ಸರಣಿ ಅಪಘಾತ ಸಂಭವಿಸಿದ್ದು, ನಾಲ್ಕು ಕಾರು ಜಖಂಗೊಂಡಿವೆ. ಮುಂದಿನ ಕಾರು ವೇಗವಾಗಿ ಚಲಿಸುತ್ತಿತ್ತು. ಆ ಕಾರಿನ ಚಾಲಕ ಏಕಾಏಕಿ ಬ್ರೇಕ್ ಒತ್ತಿದ್ದರಿಂದ ಸರಣಿ ಅಪಘಾತ ವಾಗಿದೆ. ಕಾರಿನಲ್ಲಿದ್ದ ಪ್ರಯಾಣಿಕರು ಪಾರಾಗಿದ್ದಾರೆ. ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ನೇಮಕಾತಿ ಪತ್ರ ಪಡೆಯಬೇಕಿದ್ದ ಸರೋಜಮ್ಮ

ಸರೋಜಮ್ಮ

ಪೌರಕಾರ್ಮಿಕರ ಸೇವೆಯನ್ನು ರಾಜ್ಯ ಸರ್ಕಾರ ಕಾಯಂ ಮಾಡಿದ್ದು, ಮೇ 1ರಂದು ನೇಮಕಾತಿ ಪತ್ರ ವಿತರಿಸಲಾಗುತ್ತಿದೆ. ಬಿಬಿಎಂಪಿಯಲ್ಲಿ ನೇರಪಾವತಿ ವ್ಯವಸ್ಥೆಯಡಿ ಪೌರಕಾರ್ಮಿಕರಾಗಿದ್ದ ಸರೋಜಮ್ಮ ಅವರ ಸೇವೆಯನ್ನೂ ಕಾಯಂಗೊಳಿಸಲಾಗುತ್ತಿತ್ತು. ನೇಮಕಾತಿ ಪತ್ರ ಪಡೆಯಲು ಅವರು ಸಿದ್ಧತೆ ಮಾಡಿಕೊಂಡಿದ್ದರು. ಅಷ್ಟರಲ್ಲಿ ಈ ರೀತಿಯ ಘಟನೆ ನಡೆದಿದೆ ಎಂದು ಕುಟುಂಬದವರು ಕಣ್ಣೀರು ಹಾಕಿದರು.

'ಬಯೋಮೆಟ್ರಿಕ್ ಹಾಜರಾತಿಗೆ ಅರ್ಧ ಗಂಟೆ ಮಾತ್ರ ಸಮಯ ನೀಡಲಾಗಿದೆ. ಅರ್ಧ ತಾಸಿನ ಒಳಗಾಗಿ ಬಯೊಮೆಟ್ರಿಕ್‌ನಲ್ಲಿ ಹಾಜರಿ ಹಾಕಿ ಕೆಲಸಕ್ಕೂ ಹೋಗಬೇಕೆಂಬ ನಿಯಮ ಬಿಬಿಎಂಪಿಯಲ್ಲಿದೆ. ಇದೇ ಕಾರಣಕ್ಕೆ ಸರೋಜಮ್ಮ ಅವರು ಬೇಗನೆ ರಸ್ತೆ ದಾಟಲು ಮುಂದಾಗಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ' ಎಂದು ಪೌರಕಾರ್ಮಿಕರ ಪರಿವರ್ತನಾ ಸಂಘದ ಅಧ್ಯಕ್ಷ ಸಿ.ಎನ್.ಆನಂದ್ ನೋವು ತೋಡಿಕೊಂಡರು.

'ನಗರದಲ್ಲಿ ಇದೇ ರೀತಿಯ ಹಲವು ಘಟನೆಗಳು ನಡೆದಿವೆ. ಅಪಘಾತದಿಂದ ಮೃತಪಟ್ಟ ಪೌರಕಾರ್ಮಿಕರ ಕುಟುಂಬದ ಸದಸ್ಯರಿಗೆ ಇದುವರೆಗೂ ಕೆಲಸ ನೀಡಿಲ್ಲ' ಎಂದು ಆಕ್ರೋಶ ಹೊರಹಾಕಿದರು.

ದ್ವಿಚಕ್ರ ವಾಹನ ಕಳವು: ಇಬ್ಬರ ಸೆರೆ

ಬೆಂಗಳೂರು: ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ತಮಿಳುನಾಡಿನ ಇಬ್ಬರು ಆರೋಪಿಗಳನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಸುರೇಶ್(22) ಮತ್ತು ಬಾಲು(21) ಬಂಧಿತರು. ಆರೋಪಿಗಳಿಂದ ₹10 ಲಕ್ಷ ಮೌಲ್ಯದ 12 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತರು ನೀಡಿದ ಮಾಹಿತಿ ಮೇರೆಗೆ ಕೂಡ್ಲುಗೇಟ್ ಬಸ್ ನಿಲ್ದಾಣದ ಖಾಲಿ ಜಾಗದಲ್ಲಿ ನಿಲುಗಡೆ ಮಾಡಿದ್ದ ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಚಿನ್ನದ ಉಂಗುರ ಪಡೆದು ವಂಚಿಸಿದ ನಕಲಿ ನಾಗಾ ಸಾಧು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ನಾಗಾ ಸಾಧುವೊಬ್ಬ ಕಾರು ಚಾಲಕನಿಂದ 10 ಗ್ರಾಂ. ಚಿನ್ನದ ಉಂಗುರ ಪಡೆದು ವಂಚಿಸಿದ ಘಟನೆ ನಗರದಲ್ಲಿ ನಡೆದಿದೆ.

ನಗರದ ಪ್ಯಾಲೇಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಮುಂಭಾಗದಲ್ಲಿ ಈ ಘಟನೆ ನಡೆದಿದ್ದು, ವಂಚನೆಗೊಳಗಾದ ವೆಂಕಟಕೃಷ್ಣಯ್ಯ ಅವರ ದೂರು ಆಧರಿಸಿ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏಪ್ರಿಲ್ 19ರಂದು ತನ್ನ ಮಾಲೀಕರನ್ನು ಮನೆಗೆ ಬಿಟ್ಟು, ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ ಕುಳಿತಿದ್ದ ವೆಂಕಟಕೃಷ್ಣಯ್ಯರ ಬಳಿ ನಾಗಾ ಸಾಧು ಸೋಗಿನಲ್ಲಿ ಬಂದಿದ್ದ ಆರೋಪಿ, 'ನನಗೆ ಆಯಾಸವಾಗಿದೆ, ಐದು ನಿಮಿಷ ಕಾರಿನಲ್ಲಿ ವಿಶ್ರಾಂತಿ ಪಡೆಯುತ್ತೇನೆ' ಎಂದು ಕೇಳಿದ್ದ. ಆಯಾಸವಾಗಿರಬಹುದೆಂದು ಭಾವಿಸಿದ್ದ ವೆಂಕಟಕೃಷ್ಣಯ್ಯ, ಆತನಿಗೆ ವಿಶ್ರಾಂತಿ ಪಡೆಯಲು ಅವಕಾಶ ನೀಡಿದ್ದರು ಎಂದು ಪೊಲೀಸರು ತಿಳಿಸಿದರು.

'ಈ ವೇಳೆ ಚಾಲಕನ ಮನೆಯಲ್ಲಿ ಎಷ್ಟು ಜನರಿದ್ದಾರೆ ಎಂದು ವಿಚಾರಿಸಿದ್ದ ಆರೋಪಿ, ಅವರಿಗೆ ಐದು ರುದ್ರಾಕ್ಷಿ ಮಣಿಗಳನ್ನು ನೀಡಿ, ಒಂದು ವಾಪಸ್ ಪಡೆದಿದ್ದ. ಬಳಿಕ ಅದನ್ನು ಪೇಪರ್‌ನಲ್ಲಿ ಮಡಚಿ ತೆರೆದಾಗ ರುದ್ರಾಕ್ಷಿ ಮಣಿ ಬದಲು ಅದು ಹೂವಾಗಿ ಮಾರ್ಪಟ್ಟಿತ್ತು. ಇದು ಶುಭ ಸೂಚಕ ಅಂತ ಹೇಳಿದ ಆರೋಪಿ, ಚಾಲಕನ ಕೈಯಲ್ಲಿದ್ದ 10 ಗ್ರಾಂ. ತೂಕದ ಚಿನ್ನದ ಉಂಗುರ ಪಡೆದುಕೊಂಡಿದ್ದ. ಬಳಿಕ ಮಹಾಕಾಳೇಶ್ವರನ ವಿಭೂತಿ ಎಂದು ಅವರ ಹಣೆಗೆ ಬಳಿದಿದ್ದ. ಬಳಿಕ ಇಲ್ಲಿಂದ ಹಿಂದಿರುಗಿ ನೋಡದೇ ಹೋಗು, ಇಲ್ಲದಿದ್ದರೆ ನಿನಗೆ ಕೆಡುಕಾಗುತ್ತದೆ ಎಂದು ಹೆದರಿಸಿದ್ದ' ಎಂದು ಪೊಲೀಸರು ಹೇಳಿದರು.

ಆರೋಪಿಯ ಮಾತು ನಂಬಿ, ಮಂಕು ಬಂದಂತಾಗಿ ವೆಂಕಟಕೃಷ್ಣಯ್ಯ ಕಾರಿನಲ್ಲಿ ಸ್ಥಳದಿಂದ ತೆರಳಿದ್ದರು. ಬಳಿಕ ಮನೆಯವರಿಗೆ ವಿಚಾರ ತಿಳಿಸಿದ ನಂತರ ಪೊಲೀಸರಿಗೆ ದೂರು ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಕೋಲಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ, ನ್ಯೂ ಕೋಲಾರ ಆಸ್ಪತ್ರೆ ಕಟ್ಟಡ, ಕುವೆಂಪು ನಗರ, ಕೋಲಾರ–563101
ದೂ:08152–229225, Email-cdpoklr@gmail.com
ಸಂ:ಶಿಅಯೋಕೋ/ಬಾ.ಮೂ.ಸಿ/ಟೆಂಡರ್/2025–26
ದಿನಾಂಕ: 24.04.2025

ಟೆಂಡರ್ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ 2025–26 ನೇ ಸಾಲಿಗೆ ಐ.ಸಿ.ಡಿ.ಎಸ್ ಯೋಜನೆಯಡಿ 2 ಗ್ರೂಪ್ ಡಿ ಹುದ್ದೆಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಪಡೆಯಲು ಇ–ಟೆಂಡರ್ ಸಲ್ಲಿಸಲು **Karnataka Public Procurement Portal Website address:https://kppp.karnataka.gov.in** ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆ ಉಳ್ಳವರು **ದಿನಾಂಕ: 23.05.2025** ರ **ಮಧ್ಯಾಹ್ನ 10:00** ರೊಳಗೆ ಸಲ್ಲಿಸಲು ಕೋರಿದೆ.

ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:37/ಕೆಎಸ್ಎಂಸಿಎ/2025–26

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ. 05/2025/ಎಸ್‌ಬಿಸಿ
ದಿನಾಂಕ : 25–04–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಸಂಕ್ಷಿಪ್ತ ವಿವರಣೆ : ಇಮೇಜ್ ಅನ್ಯಾಲಿಸಿಸ್ ಮತ್ತು ರಿಪೋರ್ಟ್ ಜನರೇಷನ್ ಸಾಫ್ಟ್‌ವೇರ್ ಬಿಡಿಭಾಗಗಳೊಂದಿಗೆ ಇನ್‌ಫ್ರಾ–ರೆಡ್ ಥರ್ಮೋ ವಿಷನ್ ಕ್ಯಾಮೆರಾದ ಸರಬರಾಜು.
ಇಮೇಜ್ ಅನ್ಯಾಲಿಸಿಸ್ ಮತ್ತು ರಿಪೋರ್ಟ್ ಜನರೇಷನ್ ಸಾಫ್ಟ್‌ವೇರ್ ಬಿಡಿಭಾಗಗಳೊಂದಿಗೆ ಇನ್‌ಫ್ರಾ–ರೆಡ್ ಥರ್ಮೋ ವಿಷನ್ ಕ್ಯಾಮೆರಾದ ವಾರ್ಷಿಕ ನಿರ್ವಹಣಾ ಗುತ್ತಿಗೆ. (**ಟೆಂಡರ್ ಸಂ. ಎಲ್8255137ಎ**) (**ಪ್ರಮಾಣ : 13 ಸಂಖ್ಯೆಗಳು**)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **20–05–2025 ರಂದು 10:30 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು
ಪಿಯುಬಿ/76/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
South Western Railway - SWR | SWRRLY | SWRRLY

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

3 ಸಾವಿರಕ್ಕೂ ಹೆಚ್ಚು ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ಅನುಕೂಲ
ಹೊರಗುತ್ತಿಗೆ ನೌಕರರಿಗೆ ಪ್ರತ್ಯೇಕ ನಿಯಮ? 5
ಜಲಮಂಡಳಿಯ ದತ್ತಾಂಶಕ್ಕೆ ಕನ್ನ 2B
12 ಟನ್ ಚಿನ್ನ ಮಾರಾಟ ನಿರೀಕ್ಷೆ 12

ಅಕ್ಷಯ ತೃತೀಯ...
ಬೆಂಗಳೂರಿನ ಎಂ.ಜಿ ರಸ್ತೆಯಲ್ಲಿರುವ ಆಭರಣ ಮಳಿಗೆಯೊಂದರಲ್ಲಿ ಅಕ್ಷಯ ತೃತೀಯ ಮುನ್ನಾ ದಿನವಾದ ಮಂಗಳವಾರ ಮಹಿಳೆಯರು ಆಭರಣ ಖರೀದಿಸಿದರು

ಓಲಾ, ಉಬರ್, ರ್‍ಯಾಪಿಡೊ ಸೇವೆ ಜೂನ್ 15ರವರೆಗೆ ಮುಂದುವರಿಸಲು ಅನುಮತಿ

ಬೈಕ್ ಸೇವೆ ವಿಸ್ತರಣೆಗೆ ಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ, ಉಬರ್ ಮತ್ತು ರ್‍ಯಾಪಿಡೊ ಸೇವೆಯನ್ನು ಜೂನ್ 15ರವರೆಗೆ ಮುಂದುವರಿಸಲು ಹೈಕೋರ್ಟ್ ಅನುಮತಿ ನೀಡಿದೆ.

'ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯದಲ್ಲಿ ಮುಂದುವರೆಸಲು ನಿರ್ದೇಶಿಸಬೇಕು' ಎಂದು ಕೋರಿ ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್', 'ರೋಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರ್‍ಯಾಪಿಡೊ)' ಮತ್ತು 'ಎಎನ್ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ)' ಕಂಪನಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಂಪ್ರಸಾದ್ ಅವರಿದ್ದ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ಶ್ರೀನಿವಾಸ ರಾಘವನ್ ಮತ್ತು ಅರುಣ್ ಕುಮಾರ್, 'ಕರ್ನಾಟಕದಲ್ಲಿ ಆರು ಲಕ್ಷಕ್ಕೂ ಹೆಚ್ಚು ಜನರು, ಬೈಕ್ ಟ್ಯಾಕ್ಸಿ ಸೇವೆ ಒದಗಿಸುವ ಮೂಲಕ ತಮ್ಮ ಜೀವನವನ್ನು ಕಟ್ಟಿಕೊಂಡಿದ್ದಾರೆ. ಏಕಾಏಕಿ ಬೈಕ್ ಟ್ಯಾಕ್ಸಿಗಳ ಸೇವೆಯನ್ನು ಸ್ಥಗಿತಗೊಳಿಸಿದರೆ ಅವರ ದೈನಂದಿನ ಜೀವನ ನಿರ್ವಹಣೆ ಕಷ್ಟವಾಗಲಿದೆ. ಈಗಾಗಲೇ, ದೇಶದಾದ್ಯಂತ 19 ರಾಜ್ಯ ಸರ್ಕಾರಗಳು ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗೆ ನಿಯಮಗಳನ್ನು ರೂಪಿಸಿವೆ. ಆದರೆ, ರಾಜ್ಯದಲ್ಲಿ ಈವರೆಗೂ ಯಾವುದೇ ನಿಯಮಗಳನ್ನು ರೂಪಿಸಿಲ್ಲ. ಹೀಗಾಗಿ, ಹೈಕೋರ್ಟ್ ಈ ಹಿಂದೆ ಸೇವೆ ನಿರ್ಬಂಧಿಸಿ ಆದೇಶಿಸಿರುವ ಕಾಲಾವಕಾಶವನ್ನು ವಿಸ್ತರಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಬೈಕ್ ಟ್ಯಾಕ್ಸಿಗಳ ಸೇವೆಯನ್ನು ಜೂನ್ 15ರವರೆಗೂ ವಿಸ್ತರಿಸಿ ಆದೇಶಿಸಿತು. ಅರ್ಜಿದಾರರಾದ ರ್‍ಯಾಪಿಡೊ ಪರ ಹೈಕೋರ್ಟ್ ವಕೀಲರುಗಳಾದ ಎ.ವಿ.ನಿಶಾಂತ್, ಓಲಾ ಪರ ಕೆ.ಎನ್.ಚೇತನಾ ಮತ್ತು ಉಬರ್ ಪರ ಪಿ.ಎನ್.ಮನಮೋಹನ್ ವಕಾಲತ್ತು ವಹಿಸಿದ್ದಾರೆ.

'ಮೋಟಾರು ವಾಹನ ಕಾಯ್ದೆ-1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರ್‍ಯಾಪಿಡೊಗಳು ತಮ್ಮ ಬೈಕ್ ಟ್ಯಾಕ್ಸಿ ಸೇವೆಯನ್ನು ಆರು ವಾರಗಳ ಒಳಗಾಗಿ ನಿರ್ಬಂಧಿಸಬೇಕು' ಎಂದು ಇದೇ ನ್ಯಾಯಪೀಠ ಈ ಹಿಂದಿನ ವಿಚಾರಣೆ ವೇಳೆ ಆದೇಶಿಸಿತ್ತು.

ಆಕಾರ್ ಪಟೇಲ್ ವಿರುದ್ಧದ ಪ್ರಕರಣಕ್ಕೆ ತಡೆ

ಸದ್ಯ ಕಾರ್ಯಾಚರಣೆ ಸ್ಥಗಿತಗೊಳಿಸಿರುವ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಎಐಐಪಿಎಲ್) ಮತ್ತು ಸಂಸ್ಥೆಯ ಮಾಜಿ ನಿರ್ದೇಶಕ ಆಕಾರ್ ಪಟೇಲ್ ವಿರುದ್ಧದ ಹಣ ಅಕ್ರಮ ವರ್ಗಾವಣೆ ಆರೋಪದ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಜಾರಿ ನಿರ್ದೇಶನಾಲಯದ (ಇ.ಡಿ) ದೂರು ಆಧರಿಸಿ ನನ್ನ ವಿರುದ್ಧ ದಾಖಲಿಸಲಾಗಿರುವ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿ ಎಐಐಪಿಎಲ್ ಮತ್ತು ಆಕಾರ್ ಪಟೇಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಿ.ಅನಂತ ಪದ್ಮನಾಭನ್ ಅವರ ಪರವಾಗಿ ತಡೆ ನೀಡುವ ಮೂಲಕ ಸಮನ್ವಯ ಪೀಠವು ಈಗಾಗಲೇ ಮಧ್ಯಂತರ ಪರಿಹಾರ ಒದಗಿಸಿದೆ.

ಎಐಐಪಿಎಲ್ ಮತ್ತು ಆಕಾರ್ ಪಟೇಲ್ ವಿರುದ್ಧದ ಆರೋಪಗಳೂ ಇದೇ ಸ್ವರೂಪ ಹೊಂದಿರುವ ಕಾರಣ, ಆಕಾರ್ ಪಟೇಲ್ ಮತ್ತು ಎಐಐಪಿಎಲ್ ವಿರುದ್ಧದ ಇ.ಡಿ ಕಾರ್ಯಾಚರಣೆಗೆ ತಡೆ ವಿಧಿಸಲಾಗಿದೆ' ಎಂದು ನ್ಯಾಯಪೀಠ ಆದೇಶಿಸಿದೆ.

ಬನ್ನಂಜೆ ರಾಜಗೆ ಪೆರೋಲ್

ಉದ್ಯಮಿಯೊಬ್ಬರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಭೂಗತ ಪಾತಕಿ ಬನ್ನಂಜೆ ರಾಜ ತಮ್ಮ ತಂದೆಯ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುವಾಗುವಂತೆ ಹೈಕೋರ್ಟ್ 15 ದಿನಗಳ ಪೆರೋಲ್ ನೀಡಿ ಬಿಡುಗಡೆಗೆ ಆದೇಶಿಸಿದೆ.

ಈ ಕುರಿತಂತೆ ಬನ್ನಂಜೆ ರಾಜ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ 15 ದಿನಗಳ ಪೆರೋಲ್ ಮಂಜೂರು ಮಾಡಿ ಆದೇಶಿಸಿದೆ. ಬನ್ನಂಜೆ ರಾಜ ಬಿಡುಗಡೆಯಾಗುವ ದಿನಕ್ಕೆ ಅನ್ವಯವಾಗುವಂತೆ ಕಠಿಣ ಷರತ್ತುಗಳನ್ನು ವಿಧಿಸಿರುವ ನ್ಯಾಯಪೀಠ, ರಾಜಗೆ ನಾಲ್ವರು ಪೊಲೀಸರನ್ನು ಒಳಗೊಂಡ ಬೆಂಗಾವಲು ವಾಹನ ಕಲ್ಪಿಸಿದ್ದು, 'ಇದಕ್ಕೆ ತಗಲುವ ವೆಚ್ಚವನ್ನು ಬನ್ನಂಜೆ ರಾಜನೇ ಪಾವತಿಸಬೇಕು' ಎಂದು ನಿರ್ದೇಶಿಸಿದೆ. 'ನನ್ನ ತಂದೆ ಮಲ್ಪೆಯ ಸುಂದರ ಶೆಟ್ಟಿಗಾರ್ (86) ಅವರ ಅಂತಿಮ ವಿಧಿವಿಧಾನ ಪೂರೈಸುವ ಸಲುವಾಗಿ ಪೆರೋಲ್ ಮೇಲೆ ನನ್ನ ಬಿಡುಗಡೆಗೆ ಆದೇಶಿಸಬೇಕು' ಎಂದು ರಾಜ ಕೋರಿದ್ದರು. ಬನ್ನಂಜೆ ರಾಜ ಪರ ಹೈಕೋರ್ಟ್ ವಕೀಲ ಸಿರಾಜುದ್ದೀನ್ ಅಹ್ಮದ್ ಮತ್ತು ಪ್ರಾಸಿಕ್ಯೂಷನ್ ಪರ ರಾಹುಲ್ ಕಾರ್ಯಪ್ಪ ಹಾಜರಿದ್ದರು.

ಕನಕಲಕ್ಷ್ಮಿಗೆ ಷರತ್ತುಬದ್ಧ ಜಾಮೀನು

'ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿನ ಕೋಟ್ಯಂತರ ರೂಪಾಯಿಗಳ ಅವ್ಯವಹಾರ ಆರೋಪಕ್ಕೆ ಸಂಬಂಧಿಸಿದ ಹಗರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಡಿವೈಎಸ್‌ಪಿ ಬಿ.ಎಂ.ಕನಕಲಕ್ಷ್ಮಿ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಕನಕಲಕ್ಷ್ಮಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಜಾಮೀನು ಮಂಜೂರು ಮಾಡಿ ಆದೇಶಿಸಿದೆ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಎಸ್.ಶ್ಯಾಮಸುಂದರ್ ವಾದ ಮಂಡಿಸಿದ್ದರು. ನಿಗಮದ ಹಣ ದುರ್ಬಳಕೆ ಪ್ರಕರಣದಲ್ಲಿ ಆರೋಪಿಯಾಗಿದ್ದ ವಕೀಲೆ ಎಸ್.ಜೀವಾ ಅವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಕನಕಲಕ್ಷ್ಮಿ ಅವರನ್ನು ಬಂಧಿಸಲಾಗಿತ್ತು.



ಬಸವ ಬೆಳಗು... ನಗರದ ಚಾಲುಕ್ಯ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಕಲಾವಿದರು ಬಸವ ಜಯಂತಿ ಪ್ರಯುಕ್ತ ಬೆಳ್ಳಿ ಬಣ್ಣ ಹಚ್ಚುವ ಮೂಲಕ ಹೊಸ ಹೊಳಪು ನೀಡಿದರು

ಚಿತ್ರ: ರಂಜು ಪಿ.

ವಕೀಲರ ಸಂಘದ ಸಮಾರಂಭದಲ್ಲಿ ಮುಖ್ಯಮಂತ್ರಿ

'ವಕೀಲರು ಅಸಮಾನತೆ ನಿವಾರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಸಮನ್ವಯತೆಯಿಂದ ಕೆಲಸ ಮಾಡದೇ ಹೋದರೆ ಭಾರಿ ಕಷ್ಟವಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ದೇಶದ, ನಾಡಿನ ರಕ್ಷಣೆ ವಕೀಲರ ಕೈಯ್ಯಲ್ಲಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ವಕೀಲರ ಸಂಘದ (ಎಎಬಿ) ವಾರ್ಷಿಕ ದಿನಾಚರಣೆ-2025 ಹಾಗೂ ವಕೀಲರ ರಕ್ಷಣಾ ಕಾಯ್ದೆ ಅನುಷ್ಠಾನಗೊಳಿಸಿದ ಕಾರಣಕ್ಕಾಗಿ ಸಂಘದಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, 'ವಕೀಲರು ಸಂವಿಧಾನವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅದನ್ನು ಅನುಷ್ಠಾನಕ್ಕೆ ತರಲು ಮತ್ತು ಸಮಾಜದಲ್ಲಿನ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಿಸಬೇಕು' ಎಂದರು.

'ಬಹು ವರ್ಷಗಳಿಂದ ಬೇಡಿಕೆಯಲ್ಲಿದ್ದ ವಕೀಲರ ರಕ್ಷಣಾ ಕಾಯ್ದೆಯನ್ನು ನನ್ನ ಅವಧಿಯಲ್ಲಿ ಜಾರಿಗೆ ತರಲಾಗಿದೆ. ಈ ಮೂಲಕ ಅವರಿಗೆ ರಕ್ಷಣೆಯ ಖಾತ್ರಿ ದೊರೆತಿದೆ ಎಂಬ ಸಮಾಧಾನ ನನಗಿದೆ. ಕೋರ್ಟ್ ಮೆಟ್ಟಿಲೇರಿ ನ್ಯಾಯ ಪಡೆಯುವುದು ದುಬಾರಿಯಾಗಿರುವ ದಿನಗಳಲ್ಲಿ ವಕೀಲರು ಕೇವಲ ಶುಲ್ಕ ಪಡೆಯಲು ವೃತ್ತಿ ನಡೆಸದೆ, ಕಕ್ಷಿದಾರರ ಹಕ್ಕುಗಳನ್ನು ರಕ್ಷಿಸಲು, ಸಮಾಜದಲ್ಲಿನ ಅಸಮಾನತೆಯನ್ನು ತೊಲಗಿಸಲು ಮತ್ತು ತ್ವರಿತ ನ್ಯಾಯದಾನ ಆಗುವಂತೆ ನೋಡಿಕೊಳ್ಳಲು ಯತ್ನಿಸಬೇಕು' ಎಂದರು.

ವಕೀಲರ ರಕ್ಷಣಾ ಕಾಯ್ದೆ ಜಾರಿಯಾಗಿ ವರ್ಷ ಪೂರೈಸಿದ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರು ವಕೀಲರ ಸಂಘದ ವತಿಯಿಂದ ಮಂಗಳವಾರ ನಗರದ ಸಿಟಿ ಸಿವಿಲ್ ಕೋರ್ಟ್ ವಕೀಲರ ಸಭಾಂಗಣದಲ್ಲಿ ಅಭಿನಂದಿಸಲಾಯಿತು. ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಮತ್ತು ಸಂಘದ ಪದಾಧಿಕಾರಿಗಳು ಇದ್ದರು

3ನೇ ಪುಟ ನೋಡಿ

368 ಮರ ಉಳಿಸಲು ಮನವಿ

ಬೆಂಗಳೂರು: ಕಂಟೋನ್ಮೆಂಟ್ ಪ್ರದೇಶದಲ್ಲಿರುವ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಅಭಿವೃದ್ಧಿಗಾಗಿ ಕಡಿಯಲು ಉದ್ದೇಶಿಸಿರುವ 368 ಮರಗಳನ್ನು ಉಳಿಸಬೇಕು ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಅವರು ಮನವಿ ಮಾಡಿದ್ದಾರೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಪತ್ರ ಬರೆದಿರುವ ಅವರು, 'ಮಂಡ್ಯ, ಮೈಸೂರು ಮುಂತಾದ ಕಡೆ ಮರಗಳನ್ನು ಕಡಿದಿದ್ದ ಕಾರಣ ಆಕ್ರೋಶ, ಪ್ರತಿಭಟನೆಗಳು ನಡೆದಿದ್ದವು. ಆ ವೇಳೆ ನೀವು, ಅಧಿಕಾರಿಗಳಿಗೆ ಆದೇಶ ನೀಡಿ ಕ್ರಮ ಕೈಗೊಂಡಿದ್ದೀರಿ. ಈಗ ಬೆಂಗಳೂರಿನಲ್ಲಿ 368 ಮರಗಳನ್ನು ಉಳಿಸಿಕೊಂಡು ಪರಿಸರ ಸಂರಕ್ಷಣೆ ವಿಷಯದಲ್ಲಿ ನಿಮಗಿರುವ ಬದ್ಧತೆ ಮತ್ತು ಕಾಳಜಿಯನ್ನು ತೋರಬೇಕು' ಎಂದಿದ್ದಾರೆ.

ಸ್ಮಾರ್ಟ್ ಮೀಟರ್: ಪಿಐಎಲ್‌ಗಳ ಒಟ್ಟಿಗೇ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸ್ಮಾರ್ಟ್ ಮೀಟರ್‌ಗಳ ಅಳವಡಿಕೆಯ ಕಡ್ಡಾಯಕ್ಕೆ ಒತ್ತಾಯಿಸುವ ಹಾಗೂ ಸ್ಮಾರ್ಟ್ ಮೀಟರ್ ಖರೀದಿಗೆ ಹೊರಡಿಸಿರುವ ಟೆಂಡರ್ ಪ್ರಶ್ನಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಒಟ್ಟಾಗಿ ವಿಚಾರಣೆ ನಡೆಸುವುದಾಗಿ ಹೈಕೋರ್ಟ್ ತಿಳಿಸಿದೆ.

ಸ್ಮಾರ್ಟ್ ಮೀಟರ್ ಕಡ್ಡಾಯಗೊಳಿಸಿದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಮತ್ತಿಕೆರೆಯ ಎನ್.ಜಯಪಾಲ ಹಾಗೂ ಮುನಿಸ್ವಾಮಿ ಗೌಡ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸುವ ಮುನ್ನ ಈ ಮಾಹಿತಿ ನೀಡಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಮತ್ತು ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಹಾಜರಿದ್ದರು. 'ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದಂತೆ ಟೆಂಡರ್ ನೀಡಿರುವುದು ಕಾನೂನು ಬಾಹಿರವಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.



ಕರ್ನಾಟಕ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ
ನಾಡಿನ ಸಮಸ್ತ ಜನತೆಗೆ
ಸಾಂಸ್ಕೃತಿಕ ನಾಯಕ
ವಿಶ್ವಗುರು ಬಸವಣ್ಣನವರ
ಜಯಂತಿಯ ಶುಭಾಶಯಗಳು
ದಿನಾಂಕ: 30.04.2025, ಬುಧವಾರ

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ।
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದಿನಸಯ್ಯಾ।
ಕೂಡಲ ಸಂಗಮದೇವಯ್ಯಾ, ನಿಮ್ಮ ಮನೆಯ ಮಗನೆಂದಿನಸಯ್ಯಾ॥"

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರೊಂದಿಗೆ ಶ್ರೀ ವಿಜಯಾನಂದ ಎಸ್. ಕಾಶಪ್ಪನವರ್, ಮಾನ್ಯ ಅಧ್ಯಕ್ಷರು, ಕರ್ನಾಟಕ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ ರವರು ನಿಗಮದ ಅಭಿವೃದ್ಧಿ ಕುರಿತು ಚರ್ಚಿಸುತ್ತಿರುವುದು.

ನಿಗಮದ ಯೋಜನೆಗಳು

ಜೀವಜಲ ಯೋಜನೆ
ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಕೊಳವೆಬಾವಿ ಕೊರೆಯಲು ರೂ.3.75 ಲಕ್ಷದಿಂದ ರೂ.4.75 ಲಕ್ಷದವರೆಗೆ ಸಾಲ ಮತ್ತು ಸಹಾಯಧನ

ಕಾಯಕಕಿರಣ ಯೋಜನೆ
ಸ್ವಯಂ ಉದ್ಯೋಗ ಕೈಗೊಳ್ಳಲು ರೂ. 1.00 ಲಕ್ಷದಿಂದ ರೂ.2.00 ಲಕ್ಷದವರೆಗಿನ ಘಟಕ ವೆಚ್ಚದ ಶೇ.20 ರಷ್ಟು ಸಹಾಯಧನ ಹಾಗೂ ಉಳಿಕೆ ಶೇ.80ರಷ್ಟು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ

ಬಸವ ಬೆಳಗು ಯೋಜನೆ
ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 1.00 ಲಕ್ಷಗಳ ಮಿತಿಯಲ್ಲಿ ಗರಿಷ್ಠ ರೂ.5.00 ಲಕ್ಷಗಳವರೆಗೆ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲ

ವಿದೇಶ ವಿದ್ಯಾವಿಕಾಸ ಯೋಜನೆ
ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಗರಿಷ್ಠ ರೂ.25.00 ಲಕ್ಷಗಳಂತೆ 3 ವರ್ಷಗಳ ಅವಧಿಗೆ ಗರಿಷ್ಠ ರೂ.50.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ

ವಿಭೂತಿ ನಿರ್ಮಾಣ ಘಟಕ
ರೂ.4.00 ಲಕ್ಷಗಳವರೆಗಿನ ಘಟಕ ವೆಚ್ಚದಲ್ಲಿ ರೂ.40,000/- ಸಹಾಯಧನ ಹಾಗೂ ರೂ.3.60 ಲಕ್ಷ ವಾರ್ಷಿಕ ಶೇ.3ರ ಬಡ್ಡಿದರದಲ್ಲಿ ಸಾಲ

ಭೋಜನಾಲಯ ಕೇಂದ್ರ
ಹೋಟೆಲ್ ಉದ್ದಿಮೆಗೆ ರೂ.5.00 ಲಕ್ಷಗಳ ಘಟಕ ವೆಚ್ಚ ರೂ.40,000/- ಸಹಾಯಧನ ಹಾಗೂ ಉಳಿಕೆ ಶೇ.4ರ ಬಡ್ಡಿದರದಲ್ಲಿ ಸಾಲ

ಸ್ವಾವಲಂಬಿ ಸಾರಥಿ ಯೋಜನೆ
ನಾಲ್ಕು ಚಕ್ರಗಳ ವಾಹನವನ್ನು ಖರೀದಿಸಲು ರಾಷ್ಟ್ರೀಕೃತ ಬ್ಯಾಂಕ್ / ಗ್ರಾಮೀಣ ಬ್ಯಾಂಕ್‌ಗಳು / ಹಣಕಾಸು ಸಂಸ್ಥೆಗಳು ಮಂಜೂರು ಮಾಡಿದ ಸಾಲಕ್ಕೆ ಶೇ.50ರಷ್ಟು ಅಥವಾ ಗರಿಷ್ಠ ರೂ.3.00 ಲಕ್ಷಗಳವರೆಗೆ ಸಹಾಯಧನ

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ್ ತಂಗಡಗಿ ರವರು ಮತ್ತು ಮಾನ್ಯ ಅಧ್ಯಕ್ಷರು, ಕರ್ನಾಟಕ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ ಶ್ರೀ ವಿಜಯಾನಂದ ಎಸ್. ಕಾಶಪ್ಪನವರ್ ರವರು ಕಚೇರಿಯ ಉದ್ಘಾಟನೆಯ ಸಂದರ್ಭದಲ್ಲಿ

ಕರ್ನಾಟಕ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ,
5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560 001. ದೂರವಾಣಿ: 080-22865522,
ಮೊಬೈಲ್: 9900012351, ಇ-ಮೇಲ್: mdkvldcl@karnataka.gov.in,
ವೆಬ್‌ಸೈಟ್: https://kvldcl.karnataka.gov.in

ಸ್ವ ಸಹಾಯ ಸಂಘಗಳಿಗೆ ಉತ್ತೇಜನ
ವೀರಶೈವ-ಲಿಂಗಾಯತ ಸಮುದಾಯದ ಸ್ವ ಸಹಾಯ ಸಂಘದವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಈ ಯೋಜನೆಯಡಿ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಹಾಗೂ ಸಹಾಯಧನವನ್ನು ನೀಡಲಾಗುವುದು.

ಆಹಾರವಾಹಿನಿ
2025-26 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಈ ಯೋಜನೆ ಮುಖೇನ ವಿದ್ಯುತ್ ಚಾಲಿತ ನಾಲ್ಕು ಚಕ್ರಗಳ ವಾಹನ ಖರೀದಿಸಿ, ಆಹಾರ ಕಿಯೋಸ್ಕ್ (Kiosk) ಪ್ರಾರಂಭಿಸಲು ಪ್ರತಿ ಫಲಾನುಭವಿಗೆ ಗರಿಷ್ಠ ರೂ. 3.00 ಲಕ್ಷ ಸಹಾಯಧನವನ್ನು ಒದಗಿಸಲಾಗುವುದು.

"ಎಲ್ಲಾ ಮಾನವರು ಸ್ವತಂತ್ರರಾಗಿಯೇ ಜನಿಸಿದ್ದಾರೆ, ಘನತೆ ಹಾಗೂ ಹಕ್ಕುಗಳಲ್ಲಿ ಸಮಾನರಾಗಿದ್ದಾರೆ. ವಿವೇಕ ಮತ್ತು ಅಂತಕರಣಗಳನ್ನು ಪಡೆದವರಾದ್ದರಿಂದ ಅವರು ಪರಸ್ಪರ ಸಹೋದರ ಭಾವದಿಂದ ವರ್ತಿಸಬೇಕು" -ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಂಜಯ್ ಬಿ. ಶೆಟ್ಟೆಣ್ಣವರ್, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹಡಗಲಿ ಅರುಣ್‌ಕುಮಾರ್, ಕೆ.ಜಿ.ಎಸ್. (ಹಿ.ಶ್ರೇಣಿ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ

2.90 ಲಕ್ಷಕ್ಕೂ ಹೆಚ್ಚು ಗ್ರಾಹಕರ ಮಾಹಿತಿ ಕಳವು: ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲು

ಜಲಮಂಡಳಿಯ ದತ್ತಾಂಶಕ್ಕೆ ಕನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ (ಬಿಡಬ್ಲ್ಯುಎಸ್‌ಎಸ್‌ಬಿ) ಕಾವೇರಿ ನೀರಿನ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವ ಪೋರ್ಟಲ್ (ಜಾಲತಾಣ) ಹ್ಯಾಕ್ ಮಾಡಿ, ಅಲ್ಲಿಂದ 2.90 ಲಕ್ಷಕ್ಕೂ ಹೆಚ್ಚು ಗ್ರಾಹಕರ ದತ್ತಾಂಶಗಳನ್ನು ಕಳವು ಮಾಡಲಾಗಿದೆ.

ಈ ಸಂಬಂಧ ಹಲಸೂರು ಗೇಟ್ ಉಪ ವಿಭಾಗದ ಕೇಂದ್ರ ವಿಭಾಗದ ಸೆನ್ ಠಾಣೆಗೆ ದೂರು ನೀಡಲಾಗಿದ್ದು, ಸೈಬರ್ ಅಪರಾಧ ವಿಭಾಗದ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದಾರೆ.

ದತ್ತಾಂಶ ರಕ್ಷಣೆಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದು ಎಂಜಿನಿಯರ್ ವಿ.ಸನತ್‌ಕುಮಾರ್ ದೂರಿನಲ್ಲಿ ಕೋರಿದ್ದಾರೆ.

‘ಉಳಿದ ದತ್ತಾಂಶ ಕಳವು ಆಗದಂತೆ ಹಾಗೂ ಅನಧಿಕೃತ ವ್ಯಕ್ತಿಗಳು ಜಾಲತಾಣವನ್ನು ಪ್ರವೇಶಿಸದಂತೆ ಜಲಮಂಡಳಿಯಿಂದ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ತನಿಖೆಗೆ ಅಗತ್ಯವಿರುವ ತಾಂತ್ರಿಕ ವಿವರ ಹಾಗೂ ದಾಖಲಾತಿಗಳನ್ನು ನೀಡಲಾಗುವುದು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸೈಬರ್ ಅಪರಾಧಿಗಳು ಅಥವಾ ಹ್ಯಾಕರ್‌ಗಳು ಕಳವು ಮಾಡಿದ ಈ ದಾಖಲೆಗಳ ಮೂಲಕ ಗ್ರಾಹಕರ ಪಾನ್, ಆಧಾರ್ ನಂಬರ್, ಪಾವತಿ ದತ್ತಾಂಶ ಮತ್ತು ಮೊಬೈಲ್ ಸಂಖ್ಯೆಗಳನ್ನು ಆನ್‌ಲೈನ್‌ನಲ್ಲಿ 500 ಡಾಲರ್‌ಗೆ (₹42,517) ಮಾರಾಟಕ್ಕೆ ಇಟ್ಟಿದ್ದರು. ಬೆಂಗಳೂರಿನ ಕ್ಲೌಡ್‌ಸೆಕ್ ಎಂಬ ಸೈಬರ್ ಸೆಕ್ಯುರಿಟಿ ಕಂಪನಿ ನಡೆಸಿದ ತನಿಖೆಯಿಂದ ಈ ದತ್ತಾಂಶ ಕಳವು ಪ್ರಕರಣ ನಡೆದಿರುವುದು ಗೊತ್ತಾಗಿತ್ತು.

ತನಿಖೆ ನಡೆಸಿದ ಕಂಪನಿಯ ಸಂಶೋಧನಾಧಿಕಾರಿ ಸೌರಜೀತ್ ಮಜುಂದಾರ್ ಅವರು ಸಿದ್ಧಪಡಿಸಿರುವ ತನಿಖಾ ವರದಿಯನ್ನು ಜಲಮಂಡಳಿ ಅಧ್ಯಕ್ಷರು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಶೇಷ ಕರ್ತವ್ಯ ಅಧಿಕಾರಿಗೆ ಇ–ಮೇಲ್ ಮೂಲಕ ರವಾನಿಸಿದ್ದಾರೆ.

ಸೈಬರ್ ಅಪರಾಧಿಗಳು ಜಲಮಂಡಳಿಯ ದತ್ತಾಂಶಗಳನ್ನು ಕಳವು ಮಾಡಿ, ಅದಕ್ಕೆ ‘ಪೈರೇಟ್ಸ್–ಗೋಲ್ಡ್’(pirates_gold) ಎಂಬ ಬಳಕೆದಾರರ ಹೆಸರಿನಲ್ಲಿ (ಯೂಸರ್ ನೇಮ್) ಭೂಗತ ದತ್ತಾಂಶ ಸೋರಿಕೆ ಜಾಲತಾಣವಾಗಿರುವ ‘ಬ್ರೀಚ್ ಫೋರಂ’ ಎಂಬ ವೇದಿಕೆಯಲ್ಲಿ ಮಾರಾಟಕ್ಕೆ ಇಟ್ಟಿದ್ದರು. ಇದನ್ನು ಕ್ಲೌಡ್‌ಸೆಕ್‌ನ ಕೃತಕ ಬುದ್ಧಿಮತ್ತೆ ಡಿಜಿಟಲ್ ರಿಸ್ಕ್ ಪ್ಲಾಟ್‌ಫಾರ್ಮ್ ಆಗಿರುವ ಎಕ್ಸ್‌ವಿಜಿಲ್ ಸಂಸ್ಥೆಯು ಏಪ್ರಿಲ್ 10ರಂದು ಪತ್ತೆ ಮಾಡಿತ್ತು.

‘ಹ್ಯಾಕರ್‌ಗಳು ಬ್ರೀಚ್ ಫೋರ್‌ಂನಲ್ಲಿ ಹಾಕಿದ್ದ ಆರಂಭದ ಪೋಸ್ಟ್‌ನಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿ ಡೇಟಾಬೇಸ್ ಪ್ರವೇಶ ಪಡೆಯಲು 500 ಡಾಲರ್ ಮೊತ್ತವನ್ನು ನಿಗದಿ ಪಡಿಸಿದ್ದರು. ನಂತರ, ಮಾತುಕತೆ ಮೂಲಕ ನಿಗದಿತ ಮೊತ್ತವನ್ನು ಕಡಿತಗೊಳಿಸಲು ಪ್ರಯತ್ನಿಸಿದ್ದರು’ ಎಂದು ಕ್ಲೌಡ್‌ಡೆಸ್ಕ್ ವರದಿಯಲ್ಲಿ ತಿಳಿಸಿದೆ.

‘ದತ್ತಾಂಶ ಬಳಕೆಗೆ ಅನುಮತಿ ಪಡೆದವರಿಗೆ 2,91,212 ಬಳಕೆದಾರರ ದಾಖಲೆಗಳನ್ನು ಬಳಸಿಕೊಳ್ಳಲು ಸಾಧ್ಯವಿದೆ. ಆದರೆ, ಇದು ಬಳಕೆದಾರರ ಪಾಸ್‌ವರ್ಡ್‌ಗಳನ್ನು ಒಳಗೊಂಡಿಲ್ಲ’ ಎಂದು ಪೋಸ್ಟ್‌ನಲ್ಲಿ ಹೇಳಲಾಗಿತ್ತು.

‘ಜಲಮಂಡಳಿಯ ದತ್ತಾಂಶ ಬಳಕೆಗೆ ಪ್ರವೇಶ ಪಡೆಯುವವರು, ಜಲಮಂಡಳಿಯ ನಿರ್ಣಾಯಕ ಕಾರ್ಯಾಚರಣೆಯ ದತ್ತಾಂಶಗಳಾದ (ಕ್ರಿಟಿಕಲ್ ಆಪರೇಷನಲ್ ಡೇಟಾ) ಪಾವತಿ ದಾಖಲೆಗಳು ಅಥವಾ ದೂರು ದಾಖಲೆ ಮತ್ತಿತರ ದತ್ತಾಂಶಗಳನ್ನು ಪರಿಷ್ಕರಿಸಲು ಅಥವಾ ಅಳಿಸಿ ಹಾಕಲು ಅವಕಾಶವಿರುತ್ತದೆ’ ಎಂದು ಪೋಸ್ಟ್‌ನಲ್ಲಿ ವಿವರಿಸಲಾಗಿತ್ತು.

‘ಇವೆಲ್ಲದರ ನಡುವೆ ನಮ್ಮ ದತ್ತಾಂಶ ಸುರಕ್ಷಿತವಾಗಿವೆ. ಅಗತ್ಯವಾದ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ’ ಎಂದು ಜಲಮಂಡಳಿಯ ಮೂಲಗಳು ತಿಳಿಸಿವೆ.

‘ಸಂಪೂರ್ಣ ಬಿಲ್ಲಿಂಗ್ ಡೇಟಾವನ್ನು ಕರ್ನಾಟಕ ಸರ್ಕಾರ ನಿರ್ವಹಿಸುವ ರಾಜ್ಯ ದತ್ತಾಂಶ ಕೇಂದ್ರದಲ್ಲಿ ಸಂಗ್ರಹಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಬಗೆಹರಿದ ನೀರು ಪೂರೈಕೆ ಸಮಸ್ಯೆ

ಮಹದೇವಪುರದ ವೈಟ್‌ಫೀಲ್ಡ್ ಮುಖ್ಯ ರಸ್ತೆಯಲ್ಲಿರುವ ಟ್ರೈಫೆಕ್ಟ ಸ್ಟಾರ್‌ಲೈಟ್ ಅಪಾರ್ಟ್‌ಮೆಂಟ್‌ನಲ್ಲಿ ಉಂಟಾಗಿದ್ದ ಕಾವೇರಿ ನೀರು ಪೂರೈಕೆಯ ವ್ಯತ್ಯಯವನ್ನು ಜಲಮಂಡಳಿ ಸರಿಪಡಿಸಿದೆ.

‘172 ಮನೆಗಳಿರುವ ಅಪಾರ್ಟ್‌ಮೆಂಟ್‌ನಲ್ಲಿ ವಾರಕ್ಕೆ ಎರಡು ದಿನ ಪೂರೈಕೆಯಾಗುವ ಕಾವೇರಿ ನೀರಿನ ಪ್ರಮಾಣ ಕಡಿಮೆ ಇತ್ತು. ಜಲಮಂಡಳಿಯ ನಿಗದಿಯಂತೆ ನಿತ್ಯ ತಲಾವಾರು 200 ಲೀಟರ್ ನೀರು ಪೂರೈಕೆಯಾಗಬೇಕಿತ್ತು. ಆದರೆ 172 ಲೀಟರ್‌ಗಿಂತ ಕಡಿಮೆ ನೀರು ಪೂರೈಕೆಯಾಗುತ್ತಿತ್ತು’ ಎಂದು ಅಪಾರ್ಟ್‌ಮೆಂಟ್ ನಿವಾಸಿಗಳು ದೂರಿದ್ದರು.

ಈ ಕುರಿತು ‘ಪ್ರಜಾವಾಣಿ’ಯ ಏಪ್ರಿಲ್ 17ರ ಸಂಚಿಕೆಯಲ್ಲಿ ‘ಕೋಟಿ ಕೊಟ್ಟರೂ ಮನೆಗೆ ಬಾರದ ಕಾವೇರಿ’ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.

ವರದಿಗೆ ಸ್ಪಂದಿಸಿದ ಜಲಮಂಡಳಿ ಸಿಬ್ಬಂದಿ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ, ಸಮಸ್ಯೆಯನ್ನು ಪರಿಹರಿಸಿದ್ದಾರೆ. ‘ಜಲಮಂಡಳಿಯ ಎಂಜಿನಿಯರ್ ಸಮಸ್ಯೆಯನ್ನು ಪರಿಹರಿಸಿದ್ದಾರೆ. ಈಗ ನೀರು ಪೂರೈಕೆ ಸಾಕಷ್ಟು ಸುಧಾರಿಸಿದೆ’ ಎಂದು ಅಪಾರ್ಟ್‌ಮೆಂಟ್ ನಿವಾಸಿ ಹಾಗೂ ಬೆಂಗಳೂರು ಅಪಾರ್ಟ್‌ಮೆಂಟ್ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿಷ್ಣುಗಟ್ಟುಪಲ್ಲಿ ಮಾಹಿತಿ ನೀಡಿದರು.

‘ನೀರು ಬರುತ್ತಿದೆ, ಪ್ರಮಾಣ ಕಡಿಮೆ’

‘ನಮ್ಮ ಅಪಾರ್ಟ್‌ಮೆಂಟ್‌ಗೆ ನೀರು ಪೂರೈಕೆ ಆರಂಭವಾಗಿದೆ. ಆದರೆ, ಪ್ರಮಾಣ ಕಡಿಮೆ ಇದೆ’ ಎಂದು ವರ್ತೂರು ರಸ್ತೆಯ ಕುಂದನಹಳ್ಳಿ ಗೇಟ್ ಸಮೀಪವಿರುವ ಶ್ರೀರಾಮ್ ಸಮೃದ್ಧಿ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಮಾಹಿತಿ ನೀಡಿದ್ದಾರೆ.

‘2007ರಲ್ಲಿ ಕಾವೇರಿ ಸಂಪರ್ಕ ಪಡೆದಿದ್ದ ಅಪಾರ್ಟ್‌ಮೆಂಟ್‌ಗೆ ನೀರು ಪೂರೈಕೆ ಚೆನ್ನಾಗಿತ್ತು. ಕಾವೇರಿ 5ನೇ ಹಂತ ಯೋಜನೆ ಆರಂಭದ ನಂತರ ವರ್ಷದಿಂದ ನೀರು ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿದೆ’ ಎಂದು ನಿವಾಸಿಗಳು ದೂರಿದ್ದರು. ಈ ವಿಚಾರವನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

‘ಸದ್ಯಕ್ಕೆ ಜಲಮಂಡಳಿ ಸಮಸ್ಯೆ ಬಗೆಹರಿಸಿದೆ. ಆದರೆ, ಹಿಂದೆ ಪೂರೈಕೆಯಾಗುತ್ತಿದ್ದಷ್ಟು ಪ್ರಮಾಣದಲ್ಲಿ ನೀರು ಬರುತ್ತಿಲ್ಲ. ಇದು ಇನ್ನಷ್ಟು ಸುಧಾರಣೆಯಾಗಬೇಕಿದೆ’ ಎಂದು ಅಪಾರ್ಟ್‌ಮೆಂಟ್ ನಿವಾಸಿ ಸಲೀಂ ತಿಳಿಸಿದರು.

ವೀಣಾ ವಾದನ

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಸುಮಾ ಸುಧೀಂದ್ರ ಅವರು ವೀಣಾ ವಾದನವನ್ನು ಮಂಗಳವಾರ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಸುಷ್ಮಾಗೆ ‘ಗೌರಿಸುಂದರ್ ಪ್ರಶಸ್ತಿ’

ಬೆಂಗಳೂರು: ಸುಂದರ ಪ್ರಕಾಶನ ನೀಡುವ 2025ನೇ ಸಾಲಿನ ‘ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ’ಗೆ ರಂಗ ನಟಿ, ನಿರ್ದೇಶಕಿ ಎಸ್.ವಿ. ಸುಷ್ಮಾ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಕವಿಗಳಾದ ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್ ಹಾಗೂ ಇಂದಿರಾ ಸುಂದರ್ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೇ 11ರಂದು ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಸಾಪ ಪ್ರಕಟಣೆಗಳಿಗೆ ರಿಯಾಯಿತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ ಸಂಸ್ಥಾಪನಾ ದಿನಾಚರಣೆಯ ಪ್ರಯುಕ್ತ ಮೇ ತಿಂಗಳು ಪೂರ್ತಿ ತನ್ನ ಪ್ರಕಟಣೆಗಳ ಮೇಲೆ ಶೇ 75ರವರೆಗೂ ರಿಯಾಯಿತಿ ಘೋಷಿಸಿದೆ.

ಮೇ 5ರಂದು ಕಸಾಪ 111ನೇ ಸಂಸ್ಥಾಪನಾ ದಿನವನ್ನು ಆಚರಿಸಲಿದೆ. ಈವರೆಗೆ 1,800ಕ್ಕೂ ಹೆಚ್ಚು ಶೀರ್ಷಿಕೆಗಳಡಿ ಪುಸ್ತಕಗಳನ್ನು ಪರಿಷತ್ತು ಪ್ರಕಟಿಸಿದೆ. ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಶೇ 10ರಿಂದ ಶೇ 75ರವರೆಗೆ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಚಾಮರಾಜಪೇಟೆಯಲ್ಲಿರುವ ಪರಿಷತ್ತಿನ ಗಳಗನಾಥ ಮಳಿಗೆಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೂ ಪುಸ್ತಕಗಳ ಮಾರಾಟ ನಡೆಯಲಿದ್ದು, ಈ ಕೊಡುಗೆಯ ಸದುಪಯೋಗ ಮಾಡಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಅಪರ್ಣಾ, ಲೋಕೇಶ್ ನೇಮಕಾತಿ

ಬೆಂಗಳೂರು: ಕರ್ನಾಟಕ ಪ್ರಜ್ಞಾವಂತ ಪಕ್ಷದ ಮಹಿಳಾ ಘಟಕಕ್ಕೆ ಅಧ್ಯಕ್ಷೆಯಾಗಿ ವಕೀಲೆ ಕೆ.ಎಸ್. ಅಪರ್ಣಾ ಹಾಗೂ ಯುವ ಘಟಕದ ಅಧ್ಯಕ್ಷರಾಗಿ ಉದ್ಯಮಿ ಲೋಕೇಶ್ ನೇಮಕಗೊಂಡಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಪಕ್ಷದ ಸಂಸ್ಥಾಪನಾಧ್ಯಕ್ಷ ಡಿ. ಮಹೇಶ್ ಗೌಡ ಅವರು ನೇಮಕಾತಿ ಪ್ರತಿ ಹಸ್ತಾಂತರಿಸಿ, ಮಾತನಾಡಿದರು.

ಪಹಲ್ಗಾಮ್‌ನಲ್ಲಿ ಮಡಿದವರಿಗೆ ಶ್ರದ್ಧಾಂಜಲಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಿಂದ ಮೃತಪಟ್ಟ 26 ಮಂದಿ ನಾಗರಿಕರಿಗೆ ಶ್ರೀಪೂಜ್ಯಭಾರತ ಜನಜಾಗೃತಿ ವೇದಿಕೆ ಹಾಗೂ ಉಲ್ಲಾಳು ವಾರ್ಡ್‌ನ ಬಿಜೆಪಿ ಕಾರ್ಯಕರ್ತರು ಮೆರವಣಿಗೆ ನಡೆಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಕೆಎಚ್‌ಬಿ ಕಾಲೊನಿಯ (ನೇತಾಜಿ ಬಡಾವಣೆ) ಬಳಿಯ 80 ಅಡಿ ರಸ್ತೆಯಿಂದ ವಳಗೇರಹಳ್ಳಿಯ ಹೊಯ್ಸಳ ಸರ್ಕಲ್‌ವರೆಗೆ ಮೆರವಣಿಗೆ ನಡೆಸಲಾಯಿತು. ‘ಭಯೋತ್ಪಾದಕರನ್ನು ಹೊಡೆದು ಹಾಕಬೇಕು. ಕೃತ್ಯಕ್ಕೆ ಸಹಕಾರ ನೀಡಿದವರನ್ನು ಸದೆಬಡಿಯಬೇಕು’ ಎಂದು ಮೆರವಣಿಗೆಯಲ್ಲಿ ಭಾಗವಹಿಸಿದ್ದವರು ಘೋಷಣೆ ಕೂಗಿದರು.

ವೇದಿಕೆ ಅಧ್ಯಕ್ಷ ಟೊಯೊಟಾ ಎಂಪ್ಲಾಯಿಸ್ ಸಂಘದ ಅಧ್ಯಕ್ಷ ದೀಪಕ್ ಮತ್ತು ಬಿಜೆಪಿ ಮುಖಂಡ ನಾಗದೇವನಹಳ್ಳಿ ಎನ್.ಸಿ.ಕುಮಾರ್ ಮಾತನಾಡಿ, ‘ದುಷ್ಕರ್ಮಿಗಳನ್ನು ಯಾವುದೇ ಕಾರಣಕ್ಕೂ ಬಿಡಬಾರದು. ಉಗ್ರ ಶಿಕ್ಷೆಯಾಗಲಿ’ ಎಂದು ಒತ್ತಾಯಿಸಿದರು.

ಬಿಬಿಎಂಪಿ ಮಾಜಿ ಸದಸ್ಯ ರ.ಆಂಜನಪ್ಪ, ಜೆ.ರಮೇಶ್, ಕೆ.ಆರ್. ಸುಧೀರ್, ನಾಗರಾಜು ಮತ್ತು ಟೊಯೋಟಾ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಕಾಶ್ಮೀರದಲ್ಲಿ ಪ್ರವಾಸಿಗರ ಮೇಲಿನ ದಾಳಿಯನ್ನು ಖಂಡಿಸಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು

ನಗರದಲ್ಲಿ ಇಂದು

ಸಂದೀಪ್ ಶಾಸ್ತ್ರಿ ಅವರ ‘ಟ್ರ್ಯಾಕಿಂಗ್ ಕಂಟೆಂಪರರಿ ಟ್ರೆಂಡ್ಸ್ ಇನ್ ಇಂಡಿಯನ್ ಪಾಲಿಟಿಕ್ಸ್: ರಿಫ್ಲೆಕ್ಷನ್ಸ್ ಆನ್ ನ್ಯಾಷನಲ್ ಡೆವಲಪ್‌ಮೆಂಟ್ಸ್ ಆ್ಯಂಡ್ ಎಮರ್ಜಿಂಗ್ ಇಶ್ಯೂಸ್ ಇನ್ ದಿ ಸ್ಟೇಟ್ಸ್’ ಪುಸ್ತಕ ಬಿಡುಗಡೆ: ಅತಿಥಿಗಳು: ರೋಹಿತ್ ಪುಂಜ, ಪಿ.ಎಸ್. ಜಯರಾಮು, ನರೇಶ್ ರಾವ್, ಪ್ರಿಯಾಂಕಾ ಮಾಥೂರ್, ರೋಹಿಣಿ ಸ್ವಾಮಿ, ಆಯೋಜನೆ: ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯ, ಸ್ಥಳ: ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಯಲಹಂಕ, ಮಧ್ಯಾಹ್ನ 2

4ನೇ ಬಿಎಸ್‌ಜಿ ಸುಸ್ಥಿರತೆ ಸಮಾವೇಶ: ಅತಿಥಿಗಳು: ಶಾಮಾ ಕಾರ್ಕಲ್, ಒಡೆಟ್ಟೆ ಕರ್ತಕ್, ವಿಪುಲ್ ಅರೋರ, ಬೆನೆಡಿಕ್ಟ್ ಪರಮಾನಂದ, ಆಯೋಜನೆ: ಭಾರತ್ ಸೋಕಾ ಗಕ್ಕೈ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಸಂಜೆ 4

ಭರತನಾಟ್ಯ ರಂಗಪ್ರವೇಶ: ಶ್ರಾವ್ಯಾ ರಾವ್, ನಟುವಾಂಗ: ಕೃತಿ ನಾಗರಾಜ್, ಗಾಯನ: ವಿ.ರೋಹನ್ ಭಟ್ ಉಪ್ಪೂರು, ಮೃದಂಗ: ವಿ.ಶ್ರೀಹರಿ, ಕೊಳಲು: ವಿ.ನರಸಿಂಹಮೂರ್ತಿ, ವೀಣೆ: ವಿ.ಗೋಪಾಲ ವೆಂಕಟರಾಮನ್, ಸ್ಥಳ: ಪ್ರಭಾತ್ ಕಲಾದ್ವಾರಕ ಸಭಾಂಗಣ, ಕೋರಮಂಗಲ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಸಂವೃತ ಕಿಶೋರ್, ಅತಿಥಿಗಳು: ಶುಭಾ ಧನಂಜಯ್, ರೇವತಿ ನರಸಿಂಹನ್, ವೆಂಕಟೇಶ್, ಆಯೋಜನೆ: ನಿತ್ಯ ನರ್ತನ ಪ್ರಿಯೆ, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ವೈಯಾಲಿಕಾವಲ್, ಸಂಜೆ 5.30

ಬಸವೇಶ್ವರ ಜಯಂತಿ ಅಂಗವಾಗಿ ಬಸವ ಉತ್ಸವ: ಉದ್ಘಾಟನೆ: ಶಿವರುದ್ರ ಸ್ವಾಮೀಜಿ, ಉಪಸ್ಥಿತಿ: ಎಸ್. ಸಿದ್ದಯ್ಯ ಗುರೂಜಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಜಗಜ್ಯೋತಿ ಬಸವೇಶ್ವರ ವಿದ್ಯಾರ್ಥಿ ನಿಲಯ, ವಿಜಯನಗರ, ಬೆಳಿಗ್ಗೆ 6.30

ಬಸವ ಜಯಂತಿ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ, ದಾಸೋಹರತ್ನ ಪ್ರಶಸ್ತಿ ಪ್ರದಾನ: ಕೆ. ಮೋಹನ್‌ದೇವ ಆಳ್ವ, ಅಧ್ಯಕ್ಷತೆ: ಅರವಿಂದ ಜತ್ತಿ, ಪ್ರಶಸ್ತಿ ಪುರಸ್ಕೃತರು: ತೋಂಟಪ್ಪ ಉತ್ತಂಗಿ, ಆಯೋಜನೆ ಹಾಗೂ ಸ್ಥಳ: ಅನುಭವ ಮಂಟಪ ಸಭಾಂಗಣ, ಬಸವ ಸಮಿತಿ, ಬಸವೇಶ್ವರ ರಸ್ತೆ, ಬೆಳಿಗ್ಗೆ 10

ಬಸವ ಜಯಂತಿ: ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ವೀರಶೈವ ಲಿಂಗಾಯತ ವೇದಿಕೆ, ಸ್ಥಳ: ಆಂಜನೇಯಸ್ವಾಮಿ ದೇವಸ್ಥಾನ, ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರಸ್ತೆ, ಬೆಳಿಗ್ಗೆ 10.30

ಸಾಕೇತರಾಮನ್

ಶಿವಾನಂದ ಹೆಗಡೆ

87ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಎ.ಆರ್. ಅನಿರುದ್ಧ್ ಮತ್ತು ತಂಡ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಎಸ್. ಸಾಕೇತರಾಮನ್, ಮೈಸೂರು ಕಾರ್ತಿಕ್, ಎನ್.ಸಿ. ಭಾರದ್ವಾಜ್, ಭರದ್ವಾಜ್ ಸಥವಲ್ಲಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

‘ವಾಲಿ ಮೋಕ್ಷ’ ಯಕ್ಷಗಾನ: ನಿರ್ದೇಶನ: ಕೆರೆಮನೆ ಶಿವಾನಂದ ಹೆಗಡೆ, ಮೇಳ: ಇಡಗುಂಜಿ ಮೇಳ ಕೆರೆಮನೆ, ಆಯೋಜನೆ: ಆರೋಹಣ ಸೇವಾ ಪ್ರತಿಷ್ಠಾನ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕನಕಪುರ ರಸ್ತೆ, ಮಧ್ಯಾಹ್ನ 12.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪುರುಷ ವೇಷ ಧರಿಸಿ ಕಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊದಲ್ಲಿ ಬಂದು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಇಬ್ಬರು ಮಹಿಳೆಯರನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಿಲೋಫರ್ ಹಾಗೂ ಶಬ್ರೀನ್ ತಾಜ್ ಅವರನ್ನು ಬಂಧಿಸಿ, 130 ಗ್ರಾಂ ಚಿನ್ನಾಭರಣ ಹಾಗೂ ಆಟೊ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಪುರುಷ ವೇಷ ಧರಿಸಿ ಆಟೊ ಚಲಾಯಿಸುತ್ತಿದ್ದ ನಿಲೋಫರ್, ಮನೆ, ಅಂಗಡಿಗಳಲ್ಲಿ ಚಿನ್ನಾಭರಣ, ನಗದು ಕಳ್ಳತನ ಮಾಡುತ್ತಿದ್ದಳು. ಕಳೆದ ವರ್ಷ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ನಿಲೋಫರ್‌ಳನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದರು. ಜೈಲಿನಿಂದ ಹೊರಬಂದ ಬಳಿಕ ಶಬ್ರೀನ್ ತಾಜ್ ಜತೆ ಸೇರಿದ್ದ ನಿಲೋಫರ್, ಕಳ್ಳತನದ ಚಾಳಿ ಮುಂದುವರೆಸಿದ್ದಳು’ ಎಂದು ಪೊಲೀಸರು ಹೇಳಿದರು.

ನಿಲೋಫರ್

ಶಬ್ರೀನ್ ತಾಜ್

ಮಾರ್ಚ್ 17ರಂದು ಬೊಮ್ಮನಹಳ್ಳಿ ವ್ಯಾಪ್ತಿಯ ಮನೆಯ ಬೀಗ ಮುರಿದಿದ್ದ ಆರೋಪಿಗಳು, 130 ಗ್ರಾಂ. ಚಿನ್ನಾಭರಣ ಹಾಗೂ ₹3 ಲಕ್ಷ ನಗದು ದೋಚಿ ಪರಾರಿಯಾಗಿದ್ದರು.

ಮನೆ ಮಾಲೀಕ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಇಬ್ಬರೂ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳು ಮೈಕೋ ಲೇಔಟ್ ಠಾಣೆ ವ್ಯಾಪ್ತಿಯಲ್ಲಿಯೂ ಮನೆ ಕಳ್ಳತನ ಮಾಡಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಡಿ.ಜೆ.ಹಳ್ಳಿ, ಟ್ಯಾನರಿ ರಸ್ತೆಯಲ್ಲಿರುವ ಆಭರಣ ಅಂಗಡಿಗಳಿಂದ ಆರೋಪಿಗಳು ಅಡಮಾನ ಇರಿಸಿದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಮದ್ಯದ ಅಮಲಿನಲ್ಲಿ ಕಾರ್ಮಿಕನ ಕೊಲೆ

ಬೆಂಗಳೂರು: ಶೆಡ್‌ನಲ್ಲಿ ನಡೆದ ಗಲಾಟೆಯಲ್ಲಿ ಕಾರ್ಮಿಕನನ್ನು ಇರಿದು ಕೊಲೆ ಮಾಡಿರುವ ಘಟನೆ ಕಾಡುಗೋಡಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಜಾರ್ಖಂಡ್‌ನ ಪವನ್ ಯಾದವ್(55) ಕೊಲೆಯಾದ ಕಾರ್ಮಿಕ. ಕೃತ್ಯ ಎಸಗಿದ ಆರೋಪದ ಅಡಿ ಗಣೇಶ್ ಧಾರ್(46) ಎಂಬಾತನನ್ನು ಬಂಧಿಸಲಾಗಿದೆ. ಆರೋಪಿ ಏಪ್ರಿಲ್ 28ರಂದು ಸಂಜೆ 4 ಗಂಟೆ ಸುಮಾರಿಗೆ ಪವನ್ ಯಾದವ್‌ನನ್ನು ಚಾಕುವಿನಿಂದು ಇರಿದು ಕೊಲೆ ಮಾಡಿದ್ದ. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪವನ್ ಯಾದವ್ ಮತ್ತು ಗಣೇಶ್ ಧಾರ್ ಎರಡು ವರ್ಷಗಳಿಂದ ನಗರದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಒಂದು ವಾರದಿಂದ ಸೀಗೇಹಳ್ಳಿಯಲ್ಲಿ ಇರುವ ಅಪಾರ್ಟ್‌ಮೆಂಟ್‌ವೊಂದರ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿದ್ದರು. ಪಕ್ಕದಲ್ಲಿರುವ ಶೆಡ್‌ನಲ್ಲಿ ವಾಸವಾಗಿದ್ದರು. ಸೋಮವಾರ ಇಬ್ಬರೂ ಕೆಲಸಕ್ಕೆ ತೆರಳದೆ ಶೆಡ್‌ನಲ್ಲೇ ಇದ್ದರು. ಮಧ್ಯಾಹ್ನವೇ ಮದ್ಯದ ಪಾರ್ಟಿ ನಡೆಸಿದ್ದರು. ಮೊಬೈಲ್‌ನಲ್ಲಿ ಸಿನಿಮಾ ನೋಡುತ್ತಿದ್ದರು ಎಂಬುದು ಗೊತ್ತಾಗಿದೆ. ಆಗ ಕೌಟುಂಬಿಕ ವಿಚಾರ ಪ್ರಸ್ತಾಪವಾಗಿ ಗಲಾಟೆ ನಡೆದಿದ್ದು, ಗಲಾಟೆ ವಿಕೋಪಕ್ಕೆ ಹೋಗಿ ಪವನ್ ಯಾದವ್‌ನನ್ನು ಕೊಲೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಟ್ಟಡ ನಿರ್ಮಾಣ ಕಾಮಗಾರಿಯ ಗುತ್ತಿಗೆದಾರರೊಬ್ಬರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ವಕೀಲರು ಅಸಮಾನತೆ ನಿವಾರಿಸಲಿ’

ಎರಡನೇ ಮುಖಪುಟದಿಂದ...

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ಪದಾಂಕಿತ ಹಿರಿಯ ವಕೀಲ ಮತ್ತು ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ‘ವಕೀಲರು ಅನ್ಯಾಯವನ್ನು ಸಹಿಸಬಾರದು. ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಹೋರಾಟದ ಮನಃಸ್ಥಿತಿ ರೂಪಿಸಿಕೊಳ್ಳಬೇಕು’ ಎಂದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಉಪಾಧ್ಯಕ್ಷ ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ, ಖಜಾಂಚಿ ಶ್ವೇತಾ ರವಿಶಂಕರ್ ಮತ್ತು ಸಂಘದ ನಾಲ್ಕೂ ಘಟಕಗಳ ಪದಾಧಿಕಾರಿಗಳು ಹಿರಿ–ಕಿರಿಯ ವಕೀಲರು ಸಾವಿರಾರು ಸಂಖ್ಯೆಯಲ್ಲಿ ಹಾಜರಿದ್ದರು.

ಸರ್ಕಾರಿ ವಕೀಲರು ಕೋರ್ಟ್‌ನಲ್ಲಿ ಮಾತೇ ಆಡುವುದಿಲ್ಲ: ‘ನನಗೀಗ 78 ವರ್ಷ. ನಾನು ದೈಹಿಕ ಮತ್ತು ಮಾನಸಿಕವಾಗಿ ಒಕೆ’ ಎಂದು ಆತ್ಮವಿಶ್ವಾಸದಿಂದ ಮಾತನಾಡಿದ ಸಿದ್ದರಾಮಯ್ಯ ಅವರು, ‘ನಾನು ವಕೀಲನಾಗಿದ್ದಾಗ ಪೂರ್ಣ ಪ್ರಮಾಣದಲ್ಲಿ ವೃತ್ತಿ ನಡೆಸಲಿಲ್ಲ. ಅರ್ಧ ಕಾಲು ವಕೀಲಿಕೆ, ಇನ್ನರ್ಧ ಕಾಲು ರಾಜಕೀಯದಲ್ಲಿ ಇರಿಸಿದ್ದೆ. ಒಂದು ಬಾರಿ ಮೈಸೂರು ವಕೀಲರ ಸಂಘದ ಕಾರ್ಯದರ್ಶಿಯೂ ಆಗಿದ್ದೆ’ ಎಂದು ತಮ್ಮ ಹಳೆಯ ದಿನಗಳನ್ನು ನೆನಪಿಸಿಕೊಂಡರು.

‘ನಾನು ಯಾವತ್ತೂ ಹಣ ಸಂಪಾದನೆಗೆ ವಕೀಲಿಕೆ ನಡೆಸಲೇ ಇಲ್ಲ. ಆವತ್ತಿನ ತಿಂಡಿ, ಊಟ ಪೂರೈಸಿದರೆ ಸಾಕು. ನಾಳಿನ ಯೋಚನೆಯನ್ನೇ ಮಾಡುತ್ತಿರಲಿಲ್ಲ’ ಎಂದ ಅವರು, ‘ವಕೀಲರು ಕೋರ್ಟ್‌ನಲ್ಲಿ ಹೆಚ್ಚು ಮಾತನಾಡಬೇಕು ಎಂದು ನಮ್ಮ ಸೀನಿಯರ್ ಯಾವಾಗಲೂ ಹೇಳುತ್ತಿದ್ದರು. ಆದರೆ, ಇವತ್ತು ನಮ್ಮ ಸರ್ಕಾರಿ ವಕೀಲರು ಕೋರ್ಟ್‌ಗಳಲ್ಲಿ ಮಾತೇ ಆಡುವುದಿಲ್ಲ ಎಂಬುದನ್ನು ಕೇಳಿದ್ದೇನೆ’ ಎಂದರು. ಬೆಂಗಳೂರು ವಕೀಲರ ಸಂಘದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿರುವುದನ್ನು ಇದೇ ವೇಳೆ ಮುಖ್ಯಮಂತ್ರಿಗಳು ಮುಕ್ತಕಂಠದಿಂದ ಶ್ಲಾಘಿಸಿದರು.

ಕಾಲಮಿತಿಯಲ್ಲಿ ಅನುದಾನ ಬಳಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನಗಳನ್ನು ಕಾಲಮಿತಿಯಲ್ಲಿ ಬಳಕೆ ಮಾಡಿ, ಸಾರ್ವಜನಿಕರಿಗೆ ಸೌಲಭ್ಯಗಳನ್ನು ಒದಗಿಸಬೇಕು ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಅವರು ಮಹಾನಗರಪಾಲಿಕೆಗಳ ಆಯುಕ್ತರಿಗೆ ಸೂಚನೆ ನೀಡಿದರು.

ಎಲ್ಲಾ ಮಹಾನಗರ ಪಾಲಿಕೆ ಆಯುಕ್ತರೊಂದಿಗೆ ಮಂಗಳವಾರ ವಿಡಿಯೊ ಸಂವಾದ ನಡೆಸಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ ದೂರುಗಳು ಬಂದ ತಕ್ಷಣವೇ ಸಮಸ್ಯೆಗಳನ್ನು ಪರಿಹರಿಸಬೇಕು. ಯಾವುದೇ ಕಾರಣಕ್ಕೂ ನಾಗರಿಕರು ಇಲಾಖೆಯ ಕೇಂದ್ರ ಕಚೇರಿವರೆಗೆ ಸಮಸ್ಯೆಗಳನ್ನು ಹೊತ್ತು ತರಬಾರದು ಎಂದು ನಿರ್ದೇಶನ ನೀಡಿದರು.

ಕೇಂದ್ರದ ಯೋಜನೆಗಳ ಬಗ್ಗೆಯೂ ಗಮನಹರಿಸಬೇಕು ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳನ್ನು ಕೈಗೆತ್ತಿಕೊಂಡು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಪಾಲಿಕೆ ವ್ಯಾಪ್ತಿಯ ಕಸ ವಿಲೇವಾರಿ ಸಮಸ್ಯೆ, ರಸ್ತೆಗಳ ಕಾಮಗಾರಿ ಸೇರಿ ಹಲವು ಕಾಮಗಾರಿಗಳನ್ನು ಲೋಪವಾಗದಂತೆ ಕೈಗೊಳ್ಳಬೇಕು. ಮಹತ್ವಾಕಾಂಕ್ಷೆಯ ಇ-ಖಾತಾ ಸೌಲಭ್ಯವನ್ನು ಅರ್ಹ ನಾಗರಿಕರಿಗೆ ವಿತರಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರಾದ ಪ್ರಭುಲಿಂಗ ಕವಳಿಕಟ್ಟಿ, 10 ಪಾಲಿಕೆಗಳ ಆಯುಕ್ತರು ಮತ್ತು ಅಧಿಕಾರಿಗಳು ಪಾಲ್ಗೊಂಡಿದ್ದರು.

ಬಿ.ಕೆ. ಪವಿತ್ರ ವರ್ಗಾವಣೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಬಿ.ಕೆ. ಪವಿತ್ರ ಅವರನ್ನು ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ಹುದ್ದೆಯಲ್ಲಿದ್ದ ರಾಘವನ್ ಅವರು ಮಂಗಳವಾರ ವಯೋನಿವೃತ್ತಿ ಹೊಂದಿದ್ದರು. ಇದರಿಂದ ತೆರವಾದ ಸ್ಥಾನಕ್ಕೆ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕರ ಹುದ್ದೆಯಲ್ಲಿದ್ದ ಪವಿತ್ರ ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರಿಗೆ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕರ ಹುದ್ದೆಯನ್ನೂ ಹೆಚ್ಚುವರಿಯಾಗಿ ನೀಡಲಾಗಿದೆ.

1,000 ಗ್ರಾಮ ಆಡಳಿತಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಣೆ

‘ಲಂಚ ಇಲ್ಲದೇ ಕೆಲಸ ಕೊಟ್ಟಿದ್ದೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿಯನ್ನು ಒಂದೇ ಒಂದು ರೂಪಾಯಿ ಲಂಚವಿಲ್ಲದೇ, ಮಧ್ಯವರ್ತಿಗಳ ಹಾವಳಿಯೂ ಇಲ್ಲದೇ ಮಾಡಿದ್ದೇವೆ. ನೀವು ಸಹ ಜನರ ಸೇವೆ ಮಾಡುವಾಗ ಒಂದು ರೂಪಾಯಿ ಲಂಚ ಪಡೆಯದೇ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಕಂದಾಯ ಇಲಾಖೆಯಲ್ಲಿ ಆಯ್ಕೆಯಾಗಿರುವ 1,000 ಗ್ರಾಮ ಆಡಳಿತಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರಗಳ ವಿತರಣೆ ಮತ್ತು 4,000 ಕ್ರೋಮ್ ಬುಕ್ ವಿತರಣೆ ಹಾಗೂ ಸಾಧನೆಯ ಹಾದಿ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕಂದಾಯ ಇಲಾಖೆಯಲ್ಲಿ ಹೊಸದಾಗಿ ಆಯ್ಕೆಯಾಗಿರುವ ಗ್ರಾಮ ಆಡಳಿತಾಧಿಕಾರಿಗಳಿಗೆ ಸಿದ್ದರಾಮಯ್ಯ ಅವರು ನೇಮಕಾತಿ ಆದೇಶ ಪತ್ರ ವಿತರಿಸಿದರು. ಕೃಷ್ಣಬೈರೇಗೌಡ ಇದ್ದರು.

‘ಹಿಂದೆ ಎಚ್.ಜಿ. ಗೋವಿಂದೇಗೌಡರು ಶಿಕ್ಷಣ ಸಚಿವರಾಗಿದ್ದಾಗ ಲಂಚ ಮತ್ತು ಮಧ್ಯವರ್ತಿಗಳು ಇಲ್ಲದೇ ಒಂದು ಲಕ್ಷ ಶಿಕ್ಷಕರನ್ನು ನೇಮಕ ಮಾಡಲಾಗಿತ್ತು. ಈಗ 1000 ಗ್ರಾಮ ಆಡಳಿತಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಇದಕ್ಕೆ ಆರು ಲಕ್ಷ ಅರ್ಜಿಗಳು ಬಂದಿದ್ದವು. ಕೆಇಎ ನಡೆಸಿದ ಪರೀಕ್ಷೆಯಲ್ಲಿ ಮೆರಿಟ್ ಆಧಾರದಲ್ಲಿ ಆಯ್ಕೆ ಆಗಿದ್ದಾರೆ. ಒಟ್ಟು 9,834 ಗ್ರಾಮ ಆಡಳಿತಾಧಿಕಾರಿಗಳಿದ್ದು, ಅದರಲ್ಲಿ 8,003 ಜನ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ.

ಹೊಸದಾಗಿ 1,000 ಜನ ಸೇರ್ಪಡೆಯಾಗುತ್ತಿದ್ದು, ಇನ್ನೂ 500 ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದು’ ಎಂದರು. ‘ಗ್ರಾಮ ಆಡಳಿತಾಧಿಕಾರಿಗಳು ಉತ್ತಮ ನಡತೆ, ಸಂಪರ್ಕವನ್ನು ಹೊಂದಿದ್ದರೆ ರೈತರು ನಿಮ್ಮ ಮಾತನ್ನು ಕೇಳುತ್ತಾರೆ. ಗ್ರಾಮ ಆಡಳಿತಾಧಿಕಾರಿಗಳು ಒಳ್ಳೆಯ ರೀತಿಯ ಕೆಲಸ ಮಾಡಿಕೊಟ್ಟರೆ ಅವರ ಮೇಲೂ ಗೌರವವಿರುತ್ತದೆ. ಜನರ ಕೆಲಸ ದೇವರ ಕೆಲಸ ಎಂಬುದುದನ್ನು ನೆನಪಿಟ್ಟುಕೊಳ್ಳಬೇಕು’ ಎಂದೂ ಹೇಳಿದರು.

‘ಹಿಂದೆ ಶಾನುಭೋಗರು ಜಮೀನಿನ ವಿವರ ಬರೆಯುತ್ತಿದ್ದರು. ಶಾನುಭೋಗರು ಎಂದರೆ ರೈತರಿಗೆ ಗುರುಗಳಿದ್ದಂತೆ. ಅವರು ಹೇಳಿದ್ದೇ ಅಂತಿಮ ಎಂಬಂತಿತ್ತು. ಅವರಲ್ಲಿ ಕೆಲವರು ಉತ್ತಮ ಕೆಲಸ ಮಾಡುತ್ತಿದ್ದರೆ, ಕೆಲವರು ಕಿತಾಪತಿ ಮಾಡುತ್ತಿದ್ದರು’ ಎಂದು ಸಿದ್ದರಾಮಯ್ಯ ಹೇಳಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ‘ರಾಜ್ಯದ ಇತಿಹಾಸದಲ್ಲಿ ಏಕಕಾಲಕ್ಕೆ ಸಾವಿರ ಜನರ ನೇಮಕ ಇದೇ ಮೊದಲು ನಡೆದಿದೆ. ಈ ಹಿಂದೆ, ಪಿಯು ಅಂಕದ ಆಧಾರದಲ್ಲಿ ಆಯಾ ಜಿಲ್ಲೆಗಳಿಗೆ ಸೀಮಿತವಾಗಿ ನೇಮಕಾತಿ ಆಗುತ್ತಿತ್ತು. ಆದರೆ, ನೇಮಕಾತಿ ಪ್ರಕ್ರಿಯೆಯಲ್ಲಿ ಹಲವು ಜಿಲ್ಲೆಗಳಲ್ಲಿ ಪಾರದರ್ಶಕತೆ ಇಲ್ಲ ಎಂಬ ದೂರು ಇತ್ತು. ನಮ್ಮ ಸರ್ಕಾರ ಬಂದ ಮೇಲೆ ಒಂದೇ ಬಾರಿಗೆ ಎಲ್ಲ ಜಿಲ್ಲೆಯವರಿಗೂ ಸಮಾನ ಅವಕಾಶ ಸಿಗಬೇಕು ಎಂಬ ಪಾರದರ್ಶಕ ವಾಗಿ ನೇಮಕ ಆರಂಭಿಸಲಾಯಿತು’ ಎಂದರು.

ಗ್ರಾಮ ಆಡಳಿತಾಧಿಕಾರಿಗಳ ಕೆಲಸದ ಹೊರೆ ತಗ್ಗಿಸಲು 4,000 ಲ್ಯಾಪ್‌ಟಾಪ್ ವಿತರಿಸಲಾಗಿದೆ ಎಂದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಬೆಂಗಳೂರು ಪ್ರಾದೇಶಿಕ ಆಯುಕ್ತ ಆದಿತ್ಯ ಆಮ್ಲಾನ್ ಬಿಸ್ವಾಸ್, ಕಂದಾಯ ಆಯುಕ್ತ ಸುನಿಲ್‌ಕುಮಾರ್ ಇದ್ದರು.

‘ನನ್ನ ಶಿಫಾರಸೂ ನಡೆಯಲ್ಲ’

‘ಗ್ರಾಮ ಆಡಳಿತ ಅಧಿಕಾರಿ ಕೆಲಸಕ್ಕೆ ಶಿಫಾರಸು ಮಾಡುವಂತೆ ಏಳೆಂಟು ಜನ ನನ್ನ ಬಳಿಯೂ ಬಂದಿದ್ದರು. ಆದರೆ, ನಾನೇ ಮನಸ್ಸು ಮಾಡಿದರೂ ಶಿಫಾರಸು ಮಾಡಲು ಸಾಧ್ಯವಾಗದಂತೆ ಪಾರದರ್ಶಕವಾಗಿ ಪರೀಕ್ಷೆ ನಡೆಸಲಾಗಿದೆ’ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು. ‘ಉತ್ತರ ಪತ್ರಿಕೆಗಳನ್ನು ತಿದ್ದುವುದು ಸೇರಿ ಯಾವ ಅಕ್ರಮ ಚಟುವಟಿಕೆಗಳಿಗೂ ಆಸ್ಪದ ಇಲ್ಲದಂತೆ ಪರೀಕ್ಷೆ ನಡೆಸಲಾಗಿದೆ. ಇಲ್ಲಿ ಕೆಲಸ ಗಿಟ್ಟಿಸಿದವರು ಹುದ್ದೆಗಾಗಿ ಒಂದು ಪೈಸೆ ಯಾರಿಗಾದರೂ ಲಂಚ ಕೊಟ್ಟಿದ್ದೀರಾ ಹೇಳಿ, ಇದೇ ಕಾರಣಕ್ಕೆ ಒಂದೂ ತಕರಾರು ಬಂದಿಲ್ಲ’ ಎಂದರು.

ಇಬ್ಬರು ಕಾನ್‌ಸ್ಟೆಬಲ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಳಗಾವಿ ಸಮಾವೇಶದಲ್ಲಿ ಗಲಾಟೆ

ಬೆಳಗಾವಿ: ನಗರದಲ್ಲಿ ಸೋಮವಾರ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಬಿಜೆಪಿ ಕಾರ್ಯಕರ್ತರ ಗದ್ದಲ ತಡೆಯಲು ವಿಫಲರಾದ ಕಾರಣ ನೀಡಿ, ನಗರದ ಖಡೇಬಜಾರ್ ಠಾಣೆಯ ಕಾನ್‌ಸ್ಟೆಬಲ್ ಬಿ.ಎ. ನೌಕುಡಿ ಮತ್ತು ಕ್ಯಾಂಪ್ ಠಾಣೆಯ ಕಾನ್‌ಸ್ಟೆಬಲ್ ಮಲ್ಲಪ್ಪ ಹಡಗಿನಾಳ ಅವರನ್ನು ಅಮಾನತುಗೊಳಿಸಿ ಉತ್ತರ ವಲಯ ಐಜಿಪಿ ಚೇತನಸಿಂಗ್ ರಾಥೋಡ್ ಆದೇಶ ಹೊರಡಿಸಿದ್ದಾರೆ.

‘ಇಡೀ ಸಮಾವೇಶದ ಆಗು-ಹೋಗುಗಳ ಮೇಲೆ ನಿಗಾ ಇಡಲು ಇಬ್ಬರಿಗೂ ಜವಾಬ್ದಾರಿ ವಹಿಸಲಾಗಿತ್ತು. ಕಪ್ಪು ಬಾವುಟ ಪತ್ತೆ ಮಾಡುವಲ್ಲಿ, ಗಲಾಟೆಯ ವಿಷಯ ಮೇಲಧಿಕಾರಿಗಳಿಗೆ ತಿಳಿಸುವಲ್ಲಿ ಲೋಪ ಎಸಗಿದ್ದಾರೆ. ಜವಾಬ್ದಾರಿ ಸರಿಯಾಗಿ ನಿರ್ವಹಿಸದ ಕಾರಣ ಅಮಾನತು ಮಾಡಲಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಸಮಾವೇಶದ ಸ್ಥಳಕ್ಕೆ ನುಗ್ಗಿದ ಬಿಜೆಪಿಯ ಆರು ಕಾರ್ಯಕರ್ತೆಯರು ಕಪ್ಪು ಬಾವುಟ ಪ್ರದರ್ಶಿಸಿದ್ದರು. ಸಿ.ಎಂ ವಿರುದ್ಧ ಘೋಷಣೆ ಕೂಗಿದ್ದರು. ಈ ಎಲ್ಲದರ ಮಧ್ಯೆ ಭದ್ರತಾ ವೈಫಲ್ಯ ಬಗ್ಗೆ ಸಿಟ್ಟಿಗೆದ್ದು ಮುಖ್ಯಮಂತ್ರಿ ಅವರು ಎಎಸ್ಪಿ ನಾರಾಯಣ ಭರಮಣಿ ಅವರ ಮೇಲೆ ಕೈ ಎತ್ತಲು ಮುಂದಾಗಿದ್ದರು.

‘ಕಾರ್ಯಕ್ರಮದಲ್ಲಿ ಹಿರಿಯ ಅಧಿಕಾರಿಗಳ ಲೋಪವೂ ಕಂಡುಬಂದಿದೆ. ಅವರನ್ನು ಬಿಟ್ಟು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ. ಇದು ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ’ ಎಂಬ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು.

ಸಿ.ಎಂ ತರಾಟೆ: ಸಮಾವೇಶದ ಬಳಿಕ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸಿ.ಎಂ. ಸಿದ್ದರಾಮಯ್ಯ ಎಲ್ಲ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು. ಲೋಪದ ಬಗ್ಗೆ ತೀವ್ರ ತರಾಟೆ ತೆಗೆದುಕೊಂಡು ಶಿಸ್ತಿನ ಕ್ರಮ ಅನಿವಾರ್ಯವಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದರು ಎಂದು ಮೂಲಗಳು ತಿಳಿಸಿವೆ.

ನಾನೇಕೆ ರಾಜೀನಾಮೆ ಕೊಡಲಿ: ಸಿ.ಎಂ.

ಬೆಂಗಳೂರು: ‘ಮುಖ್ಯಮಂತ್ರಿ ಹುದ್ದೆಗೆ ನಾನೇಕೆ ರಾಜೀನಾಮೆ ನೀಡಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

‘ಬೆಳಗಾವಿಯಲ್ಲಿ ಪೊಲೀಸ್ ಅಧಿಕಾರಿ ಮೇಲೆ ಕೈಎತ್ತಿದ ಘಟನೆಗೆ ಸಂಬಂಧಿಸಿದಂತೆ ವಿರೋಧಪಕ್ಷಗಳು ನಿಮ್ಮ ರಾಜೀನಾಮೆ ಕೇಳಿವೆಯಲ್ಲ’ ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು, ‘ಬಿಜೆಪಿಯವರು ಏನು ಬೇಕಾದರೂ ಹೇಳಿಕೊಂಡು ಆನಂದಿಸಲಿ, ನಾನು ರಾಜೀನಾಮೆ ನೀಡುವುದಿಲ್ಲ’ ಎಂದರು. ‘ನಿನ್ನೆಯ (ಸೋಮವಾರದ) ಘಟನೆಗೆ ಪ್ರತಿಕ್ರಿಯಿಸುವುದಿಲ್ಲವೇ’ ಎಂಬ ಪ್ರಶ್ನೆಗೆ ಇಲ್ಲ, ‘ಏನು ಹೇಳಬೇಕೋ ಅದನ್ನು ಈಗಾಗಲೇ ಹೇಳಿದ್ದೇನೆ. ಪ್ರತಿಕ್ರಿಯಿಸುವುದಿಲ್ಲ’ ಎಂದರು.

ಬದುಕ ಬಂಗಾರವಾಗಿಸುವ ಅಕ್ಷಯ ತೃತೀಯಾ

• ನವೀನ ಗಂಗೋತ್ರಿ

ಇಂದು ಅಕ್ಷಯ ತೃತೀಯಾ

ಅಕ್ಷಯ ತೃತೀಯಾ ಎಂದರೆ ಬಂಗಾರ, ಬೆಳ್ಳಿ, ವಾಹನ, ಭೂಮಿ ಇತ್ಯಾದಿಗಳನ್ನು ಖರೀದಿಸಬೇಕಾದ ಕಾಲ ಎಂಬ ಲೋಕರೂಢಿಯ ಹೊರತಾಗಿ ಈ ದಿನಕ್ಕೆ ಇರುವ ಸಾಂಸ್ಕೃತಿಕ ಮಹತ್ವ ವಿಚಾರಣೀಯ.

ಬೆಂಗಳೂರಿನ ಎಂ.ಜಿ ರಸ್ತೆಯಲ್ಲಿರುವ ‘ನವರತನ್’ ಆಭರಣ ಮಳಿಗೆಯಲ್ಲಿ ಅಕ್ಷಯ ತೃತೀಯ ಮುನ್ನಾ ದಿನವಾದ ಮಂಗಳವಾರ ₹3.5 ಕೋಟಿ ಬೆಲೆಬಾಳುವ 3 ಕೆ.ಜಿ ತೂಕದ ಚಿನ್ನದ ಕಿರೀಟ ಖರೀದಿಯಲ್ಲಿ ತೊಡಗಿರುವ ಮಹಿಳೆಯರು ಪ್ರಜಾವಾಣಿ ಚಿತ್ರ:ರಂಜು ಪಿ

ನಮ್ಮಲ್ಲಿ ಪ್ರಚಲಿತದಲ್ಲಿರುವ ಮಂಗಳಮಯ ಶಬ್ದಗಳಲ್ಲಿ ‘ಸ್ವಸ್ತಿ’ ಮತ್ತು ’ವೃದ್ಧಿ’ ಪದಗಳು ಪ್ರಸಿದ್ಧವಾಗಿವೆ. ಸ್ವಸ್ತಿ ಎನ್ನುವ ಪದಕ್ಕೆ ಒಳಿತು ಎನ್ನುವ ಅರ್ಥ, ಹಾಗೇನೆ ವೃದ್ಧಿ ಎನ್ನುವ ಪದಕ್ಕೆ ಬೆಳವಣಿಗೆ, ಏರಿಕೆ, ಏಳ್ಗೆ ಇತ್ಯಾದಿ ಅರ್ಥಗಳಿವೆ. ಸ್ವಸ್ತಿಯ ವೃದ್ಧಿ ಎಂದರೆ ಒಳಿತಿನ ಬೆಳವಣಿಗೆ; ಪ್ರತಿಯೊಬ್ಬ ಸಚ್ಚಿಂತನೆಯ ನಾಗರಿಕನ ಎಂದಿನ ಬಯಕೆ. ಒಳಿತಿನ ಬೆಳವಣಿಗೆ ನಿರಂತರವಾಗಿ ಇರಬೇಕು. ಎಂದರೆ ಅದು ಅಕ್ಷಯವಾಗಬೇಕು ಎಂದು ಬಯಸುವುದು ಸಾಂಸ್ಕೃತಿಕವಾಗಿ ಶ್ರೀಮಂತವಾದ ಎಲ್ಲ ಸಮುದಾಯಗಳ ಆಶಯ. ‘ಅಕ್ಷಯ ತೃತೀಯಾ’ ಎನ್ನುವ ಆಭಾರತವ್ಯಾಪಿ ಹಬ್ಬವನ್ನು ನಾವು ಅರ್ಥಮಾಡಿಕೊಳ್ಳಬೇಕಿರುವುದು ಈ ನಿಟ್ಟಿನಲ್ಲಿ. ಕ್ಷಯವಿಲ್ಲದ, ಎಂದರೆ ಕುಂದಿಲ್ಲದ ವೃದ್ಧಿಯ ಆಶಯವಿರುವ ಹಬ್ಬವೇ ಅಕ್ಷಯ ತೃತೀಯಾ. ದ್ರವ್ಯಗಳಲ್ಲಿ, ಎಂದರೆ ಧನಕನಕಾದಿಗಳಲ್ಲಿ ಅಕ್ಷಯತನವನ್ನು ಸಾಧಿಸುವುದು ಕೇವಲ ಭೌತಿಕವಾದ ದೃಷ್ಟಿ. ಹಬ್ಬದ ಹಿನ್ನೆಲೆಯಲ್ಲಿ ನಮ್ಮ ಚಿಂತನಸ್ತರವು ಈ ಭೌತಿಕತೆಯ ಪರಿಧಿಯನ್ನು ಮೀರಿ ಕೊಂಚ ಎತ್ತರಕ್ಕೇರಿದರೆ ಅದು ಹಬ್ಬದ ಆಚರಣೆಯ ಸಾರ್ಥಕತೆ.

ಎಲ್ಲ ಭಾರತೀಯ ಹಬ್ಬಗಳಂತೆ ಅಕ್ಷಯ ತೃತೀಯಾ ಹಬ್ಬದ ಹಿನ್ನೆಲೆಯಲ್ಲಿಯೂ ನಾನಾ ಕಥೆಗಳ ಸಂತೆಯೇ ಇದೆ. ಭಗವಾನ್ ಶ್ರೀಕೃಷ್ಣನ ಕೃಪಾಧಾರೆಯಲ್ಲಿ ಸುದಾಮನೆಂಬೋ ಕಡುಬಡವ ಗೆಳೆಯನ ಬಡತನವೆಲ್ಲ ಕೊಚ್ಚಿಹೋದ ದಿವಸ ಅಕ್ಷಯ ತೃತೀಯ. ಶ್ರೀಕೃಷ್ಣನ ಔದಾರ್ಯ ಮತ್ತು ಕಾರುಣ್ಯದ ಇನ್ನೊಂದು ಕಥೆಯೂ ಅಕ್ಷಯ ತೃತೀಯಾದ ಹಬ್ಬದೊಂದಿಗೆ ಮಿಳಿತಗೊಂಡಿದೆ; ಅದುವೇ ಕಾಡುಪಾಲಾದ ಪಾಂಡವರ ಊಟದ ವ್ಯವಸ್ಥೆಗಾಗಿ ಶ್ರೀಕೃಷ್ಣನು ದ್ರೌಪದಿಗೆ ಅಕ್ಷಯ ಪಾತ್ರವನ್ನು ಕೊಡಮಾಡಿದ ಕಥೆ. ಭಗೀರಥನ ತಪಸ್ಸಿಗೆ ಮೆಚ್ಚಿ ಸ್ವರ್ಗಂಗೆ ಭೂಮಿಗೊಲಿದ ದಿನವೂ ವೈಶಾಖ ಶುದ್ಧ ತೃತೀಯಾ ದಿನವೇ – ಎಂದರೆ ಅಕ್ಷಯ ತೃತೀಯಾ ದಿನವೇ ಹೌದಂತೆ. ಮತ್ತೆ ಬ್ರಹ್ಮಕ್ಷತ್ರದ ಮೂರ್ತರೂಪವಾದ ಪರಶುರಾಮಾವತಾರವಾದದ್ದು ಈ ಪುಣ್ಯದಿನದಂದೇ. ಮಹರ್ಷಿ ವ್ಯಾಸರು ಭಾರತಕಥೆಯನ್ನು ಗಣೇಶನಿಗೆ ಹೇಳಿ ಬರೆಸಲು ಮೊದಲುಮಾಡಿದ ದಿನವೂ ಇದುವೇ. ಇನ್ನೆಷ್ಟೋ ಅಕ್ಷಯ ತೃತೀಯದ ಕಥೆಗಳು ಶಿವಸಂಪ್ರದಾಯದೊಂದಿಗೂ ಮಿಳಿತವಾಗಿವೆ.

ಅಕ್ಷಯ ತೃತೀಯಕ್ಕೆ ಕಥೆಗಳ ಹಿನ್ನೆಲೆ ಇರುವುದಷ್ಟೇ ಅಲ್ಲ, ಭಾರತದ ಶ್ರದ್ಧಾಜಗತ್ತಿನ ಆಚರಣೆಗಳಿಗೂ ಇದು ಪ್ರಶಸ್ತವಾದ ದಿನ. ಬೇರೆ ದಿನಗಳಂದು ಶುಭಕಾರ್ಯಕ್ಕೆ ಶುಭಮುಹೂರ್ತವನ್ನು ಹುಡುಕಿದರೆ ಅಕ್ಷಯ ತೃತೀಯಾ ದಿನದಂದು ಮಾತ್ರ ಶುಭಕಾರ್ಯಕ್ಕೆ ದಿನವಿಡೀ ಮುಹೂರ್ತವೇ. ಹಾಗಾಗಿ ಶಾಂತಿಕ, ಪೌಷ್ಟಿಕ ಮತ್ತು ಉಪನಯನಾದಿ ಸಂಸ್ಕಾರಕರ್ಮಗಳನ್ನು ಈ ದಿನದಂದು ಮಾಡುವುದಿದೆ. ವಿಶ್ವಪ್ರಸಿದ್ಧ ಪುರಿ ಜಗನ್ನಾಥನ ರಥೋತ್ಸವ ಮೊದಲುಗೊಳ್ಳುವುದು ಈ ದಿನದಂದೇ. ಅಕ್ಷಯ ತೃತೀಯಾ, ಅಕ್ಷತ ತದಿಗೆ, ಆಖಾತೀಜ್ – ಹೀಗೆ ನಾನಾ ಹೆಸರುಗಳಲ್ಲಿ ಗುರುತಾಗಿರುವ ಈ ಹಬ್ಬವು ಕರ್ನಾಟಕ, ಒಡಿಶಾ, ಉತ್ತರಪ್ರದೇಶ, ಮಹಾರಾಷ್ಟ್ರ ಮತ್ತು ಪಶ್ಚಿಮವಂಗ ರಾಜ್ಯಗಳಲ್ಲಿ ವಿಶೇಷವಾಗಿ ಆಚರಣೆಯಲ್ಲಿದೆ.

ಮಾನವನು ಸಮಾಜಜೀವನಕ್ಕೆ ಬಂದಾಗಿನಿಂದಲೂ ಸಂಪತ್ತಿಗೆ ಇನ್ನೊಂದು ಹೆಸರೆಂದರೆ ಬಂಗಾರ ಎನ್ನುವ ಭಾವನೆ ಬೆಳೆದುಬಂದಿದೆ. ಅದು ಅಸತ್ಯವೇನಲ್ಲ. ಜಗತ್ತಿನ ಚಾಲ್ತಿ ಹಣಗಳು ಒಂದು ದಿನ ಹೇಳಹೆಸರಿಲ್ಲದೆ ಹೋಗಬಹುದು. ಆದರೆ ಬಂಗಾರ ಮಾತ್ರವೇ ಮಾನವಸಮಾಜ ಇರುವವರೆಗೂ ತನ್ನ ಮೌಲ್ಯವನ್ನು ಉಳಿಸಿಕೊಳ್ಳುತ್ತದೆ. ಹಾಗಾಗಿ ಲೋಕದ ದೃಷ್ಟಿಯಿಂದ ಅದರ ಸಂಗ್ರಹ ತಪ್ಪಲ್ಲ. ಅಕ್ಷಯ ತೃತೀಯಾ ದಿನವು ಅದಕ್ಕೆ ನಿಮಿತ್ತವಾಗುವುದೂ ಸರಿಯೇ.

ಆದರೆ ಬೆಳ್ಳಿ, ಬಂಗಾರ, ಭೂಮಿ ಇತ್ಯಾದಿಗಳ ಸಂಗ್ರಹಕ್ಕೆ ಪ್ರಶಸ್ತವಾದ ದಿನ ಎಂಬುದರ ಜೊತೆಗೇ ಅಕ್ಷಯ ತೃತೀಯಾ ಎನ್ನುವುದು ದಾನಕ್ಕೂ ಪ್ರಶಸ್ತವಾಗಿದೆ ಎಂಬುದನ್ನು ನೆನೆದುಕೊಳ್ಳಬೇಕು. ದ್ರವ್ಯಸಂಗ್ರಹವು ಈ ಲೋಕದ ಜೊತೆಗಿನ ನಮ್ಮ ಬಂಧನವನ್ನು ಇನ್ನಷ್ಟು ಬಿಗಿಗೊಳಿಸಿದರೆ ದಾನವೆಂಬುದು ಆ ಬಂಧನದಿಂದ ಬಿಡುಗಡೆಯಾಗಿದೆ. ಬಿಡುಗಡೆ ಮತ್ತು ಬಂಧನಗಳ ನಡುವೆ ಸಮತೋಲನವನ್ನು ಕಾಯ್ದುಕೊಂಡು ಪರಮಲೌಕಿಕರೂ ಅಥವಾ ಪೂರ್ತಿ ಲೋಕಾತೀತರೂ ಆಗದೆ ಬದುಕುವ ಕಮಲದೆಲೆಯ ವಿದ್ಯೆಯನ್ನು ಆವಾಹಿಸಿಕೊಳ್ಳಬೇಕು. ಅಕ್ಷಯ ತೃತೀಯಾ ದಿನವು ಅಂಥದೊಂದು ಪರ್ವಕಾಲ.❖

ಜೋಸ್ ಆಲುಕ್ಕಾಸ್‌ನಿಂದ ಅಕ್ಷಯ ತೃತೀಯ ವಿಶೇಷ ಕೊಡುಗೆ

ಬೆಂಗಳೂರು: ಆಭರಣ ಮಾರಾಟ ಕ್ಷೇತ್ರದ ಖ್ಯಾತ ಜೋಸ್ ಆಲುಕ್ಕಾಸ್ ಈ ಬಾರಿಯ ಅಕ್ಷಯ ತೃತೀಯ ಹಬ್ಬದ ಪ್ರಯುಕ್ತ ಕರ್ನಾಟಕದಾದ್ಯಂತ ತನ್ನ ಎಲ್ಲ ಮಳಿಗೆಗಳಲ್ಲಿ ಮರೆಯಲಾಗದ ವಿಶೇಷ ಕೊಡುಗೆ ಮಾರಾಟವನ್ನು ಹಮ್ಮಿಕೊಂಡಿದೆ.

ಹಬ್ಬದ ಕೊಡುಗೆಗಳ ಭಾಗವಾಗಿ ₹75 ಸಾವಿರ ಮೌಲ್ಯದ ಚಿನ್ನಾಭರಣ ಖರೀದಿಸುವ ಗ್ರಾಹಕರು ಉಚಿತ ಚಿನ್ನದ ನಾಣ್ಯವನ್ನು ಪಡೆಯಲಿದ್ದಾರೆ. ಇದು ಸಂಪ್ರದಾಯ ಮತ್ತು ಉಡುಗೊರೆಯ ಪರಿಪೂರ್ಣ ಮಿಶ್ರಣವನ್ನು ಸೃಷ್ಟಿಸಲಿದೆ. ಇದರ ಜತೆ ವಜ್ರದ ಆಭರಣದ ಪ್ರತಿ ಕ್ಯಾರೆಟ್ ಮೇಲೆ ₹15,000 ರಿಯಾಯಿತಿ ಮತ್ತು ಪ್ರತಿ ಕ್ಯಾರೆಟ್ ಖರೀದಿಗೆ ಹೆಚ್ಚುವರಿ 500 ಮಿಲಿ ಗ್ರಾಂ ಚಿನ್ನದ ನಾಣ್ಯ ಉಚಿತ. ಪ್ಲಾಟಿನಂ ಅಭರಣಗಳಲ್ಲಿ ಆಸಕ್ತಿ ಹೊಂದಿರುವ ಗ್ರಾಹಕರಿಗೆ ಜೋಸ್ ಆಲುಕ್ಕಾಸ್ ಮೇಕಿಂಗ್ ಚಾರ್ಜಸ್ ಮೇಲೆ ಶೇ 15ರಷ್ಟು ರಿಯಾಯಿತಿ ಸಹ ನೀಡುತ್ತಲಿದೆ. ಇಷ್ಟೇ ಅಲ್ಲದೆ, ಚಿನ್ನಾಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ 30% ವರೆಗೆ ರಿಯಾಯಿತಿಯನ್ನು ಪಡೆಯಬಹುದಾಗಿದೆ.

ಜೋಸ್ ಆಲುಕ್ಕಾಸ್ ಸಂಸ್ಥೆ ಅಧ್ಯಕ್ಷ ಜೋಸ್ ಆಲುಕ್ಕಾಸ್ ಅವರು ಮಾತನಾಡಿ ‘ಈ ವರ್ಷ ನಮ್ಮ ಗ್ರಾಹಕರಿಗೆ ವಿಶೇಷವಾದ ಹೆಚ್ಚುವರಿ ಕೊಡುಗೆಗಳನ್ನು ನೀಡಲು ನಾವು ಉತ್ಸುಕರಾಗಿದ್ದೇವೆ. ಈ ಆಫರ್‌ಗಳು ಗ್ರಾಹಕರ ಮನೆಗಳಲ್ಲಿ ಇನ್ನಷ್ಟು ಸಂತೋಷ ಮತ್ತು ಸಮೃದ್ಧಿಯನ್ನು ತರಲಿವೆ ಎಂದು ಭಾವಿಸುತ್ತೇವೆ. ಅಕ್ಷಯ ತೃತೀಯ ಆಭರಣ ಖರೀದಿಗೆ ಸೂಕ್ತ ಸಮಯ’ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಹಕರು ತಮ್ಮಲ್ಲಿರುವ ಹಳೆಯ ಬ್ರ್ಯಾಂಡ್ ಚಿನ್ನವನ್ನು ಹೊಸ HUID ಪ್ರಮಾಣೀಕೃತಯ ಆಭರಣಗಳೊಂದಿಗೆ ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಎಲ್ಲ ಆಫರ್‌ಗಳು ಜೋಸ್ ಆಲುಕ್ಕಾಸ್‌ನ ರಾಜ್ಯದ ಎಲ್ಲ ಶೋರೂಮ್‌ಗಳಲ್ಲಿ ಸೀಮಿತ ಅವಧಿಗೆ ಮಾತ್ರ ಮಾನ್ಯವಾಗಿರುತ್ತವೆ. ಹಬ್ಬದ ಋತುವಿನ ವಿಶೇಷ ಕೊಡುಗೆ ಮಾರಾಟ ಗ್ರಾಹಕರಲ್ಲಿ ಮತ್ತಷ್ಟು ಮೆರುಗು ನೀಡುವುದಲ್ಲದೆ ಹಣ ಉಳಿತಾಯಕ್ಕೆ ಆಸ್ಪದ ನೀಡಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಕಾಂಗ್ರೆಸ್ ಪ್ರತಿಭಟನಾ ಸಮಾವೇಶ ನಾಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಅಗತ್ಯ ವಸ್ತುಗಳ ಬೆಲೆ ಏರಿಕೆ ಕ್ರಮ ಸೇರಿ ಕೇಂದ್ರ ಸರ್ಕಾರವು ಜನವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಮೇ 1ರಂದು ಮಧ್ಯಾಹ್ನ 3 ಗಂಟೆಗೆ ಹುಬ್ಬಳ್ಳಿಯ ಗಿರಣಿಚಾಳ ಮೈದಾನದಲ್ಲಿ ಕಾಂಗ್ರೆಸ್ ವತಿಯಿಂದ ‘ಸಂವಿಧಾನ ಬಚಾವೋ ಅಭಿಯಾನ’ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ’ ಎಂದು ಎಐಸಿಸಿ ಕಾರ್ಯದರ್ಶಿ ಮಯೂರ ಜಯಕುಮಾರ ಹೇಳಿದರು.

‘ಕೇಂದ್ರ ಸರ್ಕಾರವು ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ದರ ಏರಿಕೆ ಮಾಡಿ ಜನರನ್ನು ಸಂಕಷ್ಟಕ್ಕೀಡು ಮಾಡಿದೆ. ಇದರ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಸಮಾವೇಶ ನಡೆಯಲಿದೆ’ ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೆವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ ರಾಜ್ಯದ ಎಲ್ಲ ಕಾಂಗ್ರೆಸ್ ನಾಯಕರು, ಸಚಿವರು, ಶಾಸಕರು ಪಾಲ್ಗೊಳ್ಳುವರು’ ಎಂದು ಅವರು ತಿಳಿಸಿದರು.

ವಿವಿಧ ಎಸ್ಕಾಂಗಳ 3 ಸಾವಿರಕ್ಕೂ ಹೆಚ್ಚು ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ಅನುಕೂಲ

ಹೊರಗುತ್ತಿಗೆ ನೌಕರರಿಗೆ ಪ್ರತ್ಯೇಕ ನಿಯಮ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಇಲಾಖೆಯ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 20 ವರ್ಷಗಳಿಂದ ಕೆಲಸ ಮಾಡುತ್ತಿರುವ ಮೂರು ಸಾವಿರಕ್ಕೂ ಹೆಚ್ಚು ಗ್ರಾಮ ವಿದ್ಯುತ್ ಪ್ರತಿನಿಧಿಗಳು (ಜಿವಿಪಿ) ಸೇರಿದಂತೆ ಹೊರ ಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸುವ ಉದ್ದೇಶದಿಂದ ಪ್ರತ್ಯೇಕ ನಿಯಮ ರೂಪಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

'ನಿಯಮದ ಪ್ರಕಾರ ಹೊರಗುತ್ತಿಗೆ ಕೆಲಸಗಾರರಿಗೆ ನೇರವಾಗಿ ವೇತನ ಪಾವತಿ ವ್ಯವಸ್ಥೆ ಸರಿಯಲ್ಲ. ಆದರೆ, ಹೊರ ಗುತ್ತಿಗೆ ಕೆಲಸಗಾರರು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಪ್ರಾಣಾಪಾಯದ ಕೆಲಸಗಳನ್ನು ನಿರ್ವಹಿಸುತ್ತಿರುವ ಕಾರಣ, ಈ ಕೆಲಸಗಾರರಿಗೆ ಸೇವಾ ಭದ್ರತೆ ಒದಗಿಸಲು ಪ್ರತ್ಯೇಕ ನಿಯಮ ರೂಪಿಸಬಹುದು' ಎಂದು ಇಂಧನ ಇಲಾಖೆಗೆ ಕಾನೂನು ಇಲಾಖೆ ಅಭಿಪ್ರಾಯ ನೀಡಿದೆ.

ಎಲ್ಲಿ, ಎಷ್ಟು 'ಗ್ರಾಮ ವಿದ್ಯುತ್ ಪ್ರತಿನಿಧಿ'

ಎಸ್ಕಾಂ	ಕಾರ್ಯನಿರ್ವಹಿಸುತ್ತಿರುವ ಜಿವಿಪಿ
ಬೆಸ್ಕಾಂ	1,023
ಮೆಸ್ಕಾಂ	137
ಜೆಸ್ಕಾಂ	899
ಹೆಸ್ಕಾಂ	1,285
ಸೆಸ್ಕ್	434
ಒಟ್ಟು	3,778

ಜಿವಿಪಿಗಳ ಸೇವೆ ಸಕ್ರಮ ಮತ್ತು ವಿವಿಧ ಸೌಲಭ್ಯಗಳನ್ನು ಒದಗಿಸುವ ಕುರಿತಂತೆ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಲು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಸೂಚನೆ ನೀಡಿದ್ದರು.

2004–05ನೇ ಸಾಲಿನ ಬಜೆಟ್ ಘೋಷಣೆಯಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಿವಿಪಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಎಸ್ಕಾಂಗಳ ವ್ಯಾಪ್ತಿಯಲ್ಲಿ ಮಾಪಕ ಓದುವ, ಡಿಮ್ಯಾಂಡ್ ಸಂಗ್ರಹಣೆ, ಸಣ್ಣಪುಟ್ಟ ದುರಸ್ತಿ ಕೆಲಸಗಳನ್ನು ಅವರು ಮಾಡುತ್ತಿದ್ದಾರೆ. ಒಂದು ವರ್ಷದ ಅವಧಿಗೆ ಒಪ್ಪಂದ ಮಾಡಿಕೊಂಡು ನೇಮಿಸಿ, ಬಳಿಕ ಪ್ರತಿವರ್ಷ ಆ ಒಪ್ಪಂದವನ್ನು ನವೀಕರಿಸಲಾಗುತ್ತದೆ.

ಜಿವಿಪಿಗಳ ಬೇಡಿಕೆಗಳನ್ನು ಪರಿಶೀಲಿಸಲು ಬೆಸ್ಕಾಂನ ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಲ್ಲಿ 13 ಮಂದಿಯ ಸಮಿತಿ ರಚಿಸಲಾಗಿತ್ತು. ಆ ಸಮಿತಿ ನೀಡಿದ ವರದಿಯಂತೆ ಎಲ್ಲ ಎಸ್ಕಾಂಗಳಲ್ಲಿ ಕರ್ತವ್ಯ ನಿರ್ವಹಿಸುವ ಜಿವಿಪಿಗಳ ಸಂಭಾವನೆಯನ್ನು ಏಕರೂಪವಾಗಿ ₹17,320 ಎಂದು ನಿಗದಿಪಡಿಸಲಾಗಿದೆ. ಜೊತೆಗೆ ವಿದ್ಯುತ್ ಅವಘಡಕ್ಕೆ ಒಳಗಾದರೆ ವೈದ್ಯಕೀಯ ವೆಚ್ಚವಾಗಿ ₹5 ಸಾವಿರ, ನಿಧನರಾದರೆ ₹2 ಲಕ್ಷ ಪರಿಹಾರ ನೀಡಲಾಗುತ್ತದೆ. ಜೊತೆಗೆ, ನಿಗದಿಪಡಿಸಿದ ಗುರಿ ಪೂರ್ಣಗೊಳಿಸಿದವರಿಗೆ ₹5 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತಿದೆ.

ತಮ್ಮನ್ನು ಕಾಯಂಗೊಳಿಸುವಂತೆ ಮತ್ತು ನಿರ್ವಹಿಸುವ ಹುದ್ದೆಗೆ ಸಮಾನಾಂತರ ಹುದ್ದೆಯ ಆರ್ಥಿಕ ಸೌಲಭ್ಯ ನೀಡುವಂತೆ ಜಿವಿಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಸೇವೆ ಕಾಯಂ ಬದಲು ಸೇವಾ ಬದ್ಧತೆಗಾಗಿ ಒಂದು ಯೋಜನೆ ರೂಪಿಸುವಂತೆ ನ್ಯಾಯಾಲಯ ಆದೇಶ ನೀಡಿತ್ತು. ಆ ಆದೇಶವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಮೇಲ್ಮನವಿಯಲ್ಲಿ ಇದೇ ಜ. 24ರಂದು ಅಂತಿಮ ತೀರ್ಪು ನೀಡಿದ್ದ ನ್ಯಾಯಾಲಯ, ಜಿವಿಪಿಗಳು ನಿಭಾಯಿಸುತ್ತಿರುವ ಕೆಲಸವನ್ನು ಪರಿಗಣಿಸಿ ಪ್ರತ್ಯೇಕ ಯೋಜನೆ ರೂಪಿಸಲು ನಾಲ್ಕು ತಿಂಗಳ ಒಳಗೆ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ದೇಶನ ನೀಡಿತ್ತು.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಫೆ. 21ರಂದು ನಡೆದ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರ ಸಭೆಯಲ್ಲಿ, 'ಕೆಇಆರ್‌ಸಿ ನಿರ್ದೇಶನದ ಅನ್ವಯ ಮುಂದಿನ ದಿನಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಲಾಗುವುದು. ಹೀಗಾಗಿ ಜಿವಿಪಿಗಳ ಸೇವೆಯ ಅಗತ್ಯ ಇಲ್ಲ' ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಹೀಗಾಗಿ, ಹೈಕೋರ್ಟ್ ಜ. 24ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಕುರಿತಂತೆ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಲು ನಿರ್ಧರಿಸಲಾಗಿತ್ತು.

'ಚನ್ನಗಿರಿ ಕ್ಷೇತ್ರದಲ್ಲಿ ಜಾತಿವಾರು ಜನಸಂಖ್ಯೆಯ ಮಾಹಿತಿ ಸಂಗ್ರಹ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲೆಯ ಚನ್ನಗಿರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸವರಾಜು ವಿ. ಶಿವಗಂಗಾ ಅವರು ತಮ್ಮ ಕ್ಷೇತ್ರದಲ್ಲಿರುವ ವಿವಿಧ ಗ್ರಾಮಗಳಲ್ಲಿನ ವಿವಿಧ ಜಾತಿವಾರು ಜನಸಂಖ್ಯೆಯ ಮಾಹಿತಿ ಪಡೆಯಲು ತಮ್ಮ ಬೆಂಬಲಿಗರಿಂದ ವೈಯಕ್ತಿಕವಾಗಿ ದತ್ತಾಂಶ ಸಂಗ್ರಹಕ್ಕೆ ಮುಂದಾಗಿದ್ದಾರೆ.

ಚನ್ನಗಿರಿ ಕ್ಷೇತ್ರ ವ್ಯಾಪ್ತಿಯಲ್ಲಿನ ಪ್ರತಿ ಗ್ರಾಮಗಳಲ್ಲೂ ಬೆಂಬಲಿಗರ ಮೂಲಕ ಮತದಾರರ ಪಟ್ಟಿ ಆಧರಿಸಿ, 'ಯಾವ್ಯಾವ ಜಾತಿ ಜನರು ಎಷ್ಟು ಸಂಖ್ಯೆಯಲ್ಲಿದ್ದಾರೆ' ಎಂಬ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯವನ್ನು ಆರಂಭಿಸಲಾಗಿದೆ.

'ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿಗಣತಿ ವರದಿ) ಪ್ರಕಾರ ರಾಜ್ಯದಲ್ಲಿ ಸಾದು ಲಿಂಗಾಯತ ಸಮುದಾಯದ ಕೇವಲ 67,000 ಜನರಿದ್ದಾರೆ. ಆದರೆ, ವಾಸ್ತವದಲ್ಲಿ ನನ್ನ ಕ್ಷೇತ್ರದಲ್ಲೇ ಅಂದಾಜು 67,000ರಷ್ಟು ಸಾದು ಲಿಂಗಾಯತ ಸಮುದಾಯದರಿದ್ದಾರೆ. ರಾಜ್ಯದಲ್ಲಿ ಈ ಸಮುದಾಯದ ಒಟ್ಟು 40 ಲಕ್ಷದಷ್ಟು ಜನರಿದ್ದಾರೆ. ಬೆಂಬಲಿಗರು, ಕಾರ್ಯಕರ್ತರ ಸಹಕಾರದಿಂದ ಕ್ಷೇತ್ರದ ಪ್ರತೀ ಗ್ರಾಮಗಳಲ್ಲೂ ಜಾತಿವಾರು ಮಾಹಿತಿ ಸಂಗ್ರಹಿಸುತ್ತಿದ್ದೇವೆ. ಅಂಕಿ–ಅಂಶ ಒಟ್ಟುಗೂಡಿಸುತ್ತಿದ್ದೇವೆ. ಸಮಯ ಬಂದಾಗ ಆ ಅಂಕಿ–ಅಂಶವನ್ನು ಬಹಿರಂಗ ಪಡಿಸುತ್ತೇನೆ' ಎಂದು ಶಾಸಕ ಬಸವರಾಜು ವಿ. ಶಿವಗಂಗಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬಸವರಾಜು ವಿ. ಶಿವಗಂಗಾ

'ಮೇ ತಿಂಗಳಲ್ಲಿ ಮೂರೂ ತಿಂಗಳ ಗೃಹಲಕ್ಷ್ಮಿ ಹಣ'

ಬೆಳಗಾವಿ: 'ಬಾಕಿ ಉಳಿದಿರುವ ಮೂರು ತಿಂಗಳ (ಜನವರಿ, ಫೆಬ್ರವರಿ, ಮಾರ್ಚ್) ಗೃಹಲಕ್ಷ್ಮಿ ಹಣವನ್ನು ಮೇ ತಿಂಗಳಲ್ಲಿ ಬಿಡುಗಡೆ ಮಾಡಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

'ಮೂರು ತಿಂಗಳ ಹಣ ಬಿಡುಗಡೆಗೆ ಹಣಕಾಸು ಇಲಾಖೆಯಿಂದ ಅನುಮೋದನೆ ಸಿಕ್ಕಿದೆ. ಒಂದು ವಾರ ಒಂದು ತಿಂಗಳ ಹಣ, ಮತ್ತೊಂದು ವಾರ ಮತ್ತೊಂದು ತಿಂಗಳ ಹಣವನ್ನು ಗೃಹಲಕ್ಷ್ಮಿಯರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಛಾವ್' ನೃತ್ಯ

ಮೈಸೂರಿನ ಮಾನಸಗಂಗೋತ್ರಿಯಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಆಯೋಜಿಸಿರುವ ಸಂಗೀತ ಮತ್ತು ನೃತ್ಯೋತ್ಸವದಲ್ಲಿ ಮಂಗಳವಾರ ಜಾರ್ಖಂಡ್‌ನ 'ಛಾವ್' ನೃತ್ಯ ಕಲಾವಿದ ಪರೀಕ್ಷಿತ್ ಮೆಹತೊ ಮತ್ತು ತಂಡದವರು ಪ್ರಸ್ತುತ ಪಡಿಸಿದ 'ಮಹಿಷಾಸುರ ಮರ್ದಿನಿ' ನೃತ್ಯ ರೂಪಕದ ದೃಶ್ಯ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ ಟಿ.

ವರ್ಷದಲ್ಲಿ ಒಂದೇ ಹೆರಿಗೆ ಮಾಡಿಸಿದ ವೈದ್ಯ

ಜಿ.ಪಂ ತ್ರೈಮಾಸಿಕ ಕೆಡಿಪಿ ಸಭೆ; ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಸಾಗರದ ಸರ್ಕಾರಿ ವಿಭಾಗೀಯ ಆಸ್ಪತ್ರೆಯ ಹೆರಿಗೆ ಮತ್ತು ಸ್ತ್ರೀರೋಗ ತಜ್ಞರೊಬ್ಬರು ಕಳೆದೊಂದು ವರ್ಷದಲ್ಲಿ ಕೇವಲ ಒಂದು ಹೆರಿಗೆ ಮಾಡಿಸಿದ್ದಾರೆ. ಸೊರಬ ತಾಲ್ಲೂಕಿನ ಕುಪ್ಪಗಡ್ಡೆ ಸರ್ಕಾರಿ ಆಸ್ಪತ್ರೆಯಲ್ಲಿ ಮೂವರು ಸ್ಟಾಫ್ ನರ್ಸ್‌ಗಳಿದ್ದು, ಮೂರು ವರ್ಷಗಳಿಂದ ಅಲ್ಲಿ ಒಂದೂ ಹೆರಿಗೆ ಆಗಿಲ್ಲ. ಎಲ್ಲ ಗರ್ಭಿಣಿಯರನ್ನೂ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಲಾಗುತ್ತಿದೆ. ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿದರೆ ₹50,000ದಿಂದ ₹1 ಲಕ್ಷ ಬಿಲ್ ಪಾವತಿಸಬೇಕಿದೆ. ಹೀಗಾದರೆ ಬಡವರು ಬದುಕುವುದು ಹೇಗೆ?..'

ಇಲ್ಲಿ ಮಂಗಳವಾರ ನಡೆದ ಜಿಲ್ಲಾ ಪಂಚಾಯಿತಿ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಕೇಳಿದ ಈ ಪ್ರಶ್ನೆಯು ಗಂಭೀರ ಚರ್ಚೆಗೆ ವೇದಿಕೆಯಾಯಿತು.

ಭಾರತಿ ಶೆಟ್ಟಿ ಅವರ ಆರೋಪವನ್ನು ಸಭೆಯಲ್ಲಿದ್ದ ಡಿಎಚ್‌ಒ ಡಾ.ನಟರಾಜ್ ಒಪ್ಪಿಕೊಂಡರಲ್ಲದೆ, 'ವಿಭಾಗೀಯ ಆಸ್ಪತ್ರೆಯ ವೈದ್ಯರ ವಿರುದ್ಧ ಕ್ರಮ ಕೈಗೊಂಡಿದ್ದು, ವಾರಕ್ಕೆ ಮೂರು ದಿನ ಹೊಸನಗರ ಆಸ್ಪತ್ರೆಗೆ ನಿಯೋಜನೆ ಮಾಡಲಾಗಿದೆ' ಎಂದರು.

ಇದರಿಂದ ಕೆಂಡಾಮಂಡಲವಾದ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, 'ಸರ್ಕಾರಿ ಸಂಬಳ–ಸವಲತ್ತು ಪಡೆಯುವ ವೈದ್ಯರು, ನರ್ಸ್‌ಗಳು ಹೆರಿಗೆ ಮಾಡಿಸದೇ ಕಾಲಹರಣ ಮಾಡುತ್ತಿದ್ದರೆ ಜಿಲ್ಲಾ ಕೇಂದ್ರದಲ್ಲಿ ಕುಳಿತು ನೀವೇನು ಮಾಡುತ್ತಿದ್ದೀರಿ?' ಎಂದು ತರಾಟೆಗೆ ತೆಗೆದುಕೊಂಡರು. ಸದರಿ ವೈದ್ಯರನ್ನು ತಕ್ಷಣ ಸಾಗರ ತಾಲ್ಲೂಕಿನಿಂದ ಬೇರೆಡೆಗೆ ವರ್ಗಾವಣೆ ಮಾಡುವಂತೆ ಸೂಚಿಸಿದರು.

ಆಗ ಮಧ್ಯ ಪ್ರವೇಶಿಸಿದ ಶಾಸಕ ಗೋಪಾಲಕೃಷ್ಣ ಬೇಳೂರು, 'ನನ್ನ ಕ್ಷೇತ್ರಕ್ಕೆ ಆ ವೈದ್ಯ ಬೇಡ' ಎಂದು ಕೋರಿದರು.

'ಖಾಸಗಿ ಆಸ್ಪತ್ರೆಗೆ ಲಾಭ ತಂದುಕೊಡಲು ಸಹಜ ಹೆರಿಗೆಗಿಂತ ಶಸ್ತ್ರಚಿಕಿತ್ಸೆಗೆ ಒತ್ತು ಕೊಡುತ್ತಾರೆ. ಜಿಲ್ಲೆಯ ಖಾಸಗಿ ಆಸ್ಪತ್ರೆಗಳಲ್ಲಿ ಸಹಜ ಹೆರಿಗೆ ಹಾಗೂ ಶಸ್ತ್ರಚಿಕಿತ್ಸೆಯ ಅಂಕಿ–ಅಂಶ ಪರಿಶೀಲಿಸಿ ಕ್ರಮ ಕೈಗೊಳ್ಳಿ' ಎಂದು ಭಾರತಿ ಶೆಟ್ಟಿ ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ, 'ಸರ್ಕಾರಿ ಆಸ್ಪತ್ರೆಗಳಲ್ಲಿ ಸಹಜ ಹೆರಿಗೆ ಮಾಡಿಸಿದರೆ ವೈದ್ಯರಿಗೆ ಕೊಡುವ ಪ್ರೋತ್ಸಾಹಧನವನ್ನು ಸರ್ಕಾರ ಹೆಚ್ಚಳ ಮಾಡಲಿ. ಆಗ ಖಾಸಗಿ ಆಸ್ಪತ್ರೆಗಳಿಗೆ 'ರೆಫರ್' ಮಾಡುವುದು ತಪ್ಪಲಿದೆ' ಎಂದು ಅವರು ಸಲಹೆ ನೀಡಿದರು.

ಮೇ 2ರ ಸಚಿವ ಸಂಪುಟ ಸಭೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ ದತ್ತಾಂಶ ಅಧ್ಯಯನ ವರದಿಯ ಕುರಿತು ಚರ್ಚೆ ನಡೆಸಲು ಮೇ 2ರಂದು ನಡೆಯಬೇಕಿದ್ದ ಸಚಿವ ಸಂಪುಟ ಸಭೆಯನ್ನು ಮುಂದೂಡಲಾಗಿದ್ದು, ಮೇ 9ಕ್ಕೆ ಸಭೆ ನಡೆಯಲಿದೆ.

ಏಪ್ರಿಲ್ 17ರಂದು ಕರೆದಿದ್ದ ಸಭೆಯಲ್ಲಿ ದತ್ತಾಂಶಗಳ ಕುರಿತು ಸುದೀರ್ಘ ಚರ್ಚೆ ನಡೆದಿತ್ತು. 'ಹೆಚ್ಚಿನ ಚರ್ಚೆಗಾಗಿ, ತಾಂತ್ರಿಕ ಮಾಹಿತಿಯೂ ಸೇರಿದಂತೆ ಇನ್ನೂ ಹೆಚ್ಚಿನ ಮಾಹಿತಿ ಅಗತ್ಯವಿರುವುದರಿಂದ ಅದನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹೀಗಾಗಿ ಚರ್ಚೆ ಅಪೂರ್ಣಗೊಂಡಿದೆ. ಮೇ 2ರಂದು ಸಂಪುಟ ಸಭೆ ನಡೆಸಲಾಗುವುದು' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದರು.

ವರದಿಯ ಕುರಿತಂತೆ ಎಲ್ಲ ಸಚಿವರೂ ತಮ್ಮ ಮುಕ್ತ ಅಭಿಪ್ರಾಯಗಳನ್ನು ಲಿಖಿತ ರೂಪದಲ್ಲಿ ಮುಂದಿನ ಸಂಪುಟ ಸಭೆಯ ವೇಳೆ ಸಲ್ಲಿಸಬೇಕು ಎಂದು ಮುಖ್ಯಮಂತ್ರಿಯವರು ಸಭೆಯಲ್ಲಿ ಸೂಚಿಸಿದ್ದರು.

ಮೇ 2ರ ಸಚಿವ ಸಂಪುಟ ಸಭೆಯ ತೀರ್ಮಾನವನ್ನು ನೋಡಿ ಮುಂದಿನ ಹೋರಾಟದ ರೂಪುರೇಷೆ ನಿರ್ಧರಿಸುವುದಾಗಿ ವೀರಶೈವ–ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಮುಖಂಡರು ಹೇಳಿದ್ದರು.

ಮಹೇಶ್ ಜೋಶಿ ಅಮಾನತು ಮಾಡಿ, ಕಸಾಪ ಉಳಿಸಿ ಆಂದೋಲನ

ಮೇ 17ರಂದು ಮಂಡ್ಯದಲ್ಲಿ ಸಮಾವೇಶ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಅಮಾನತು ಮಾಡಿ, ಕನ್ನಡ ಸಾಹಿತ್ಯ ಪರಿಷತ್ತು ಉಳಿಸಿ' ಆಂದೋಲನದ ಅಂಗವಾಗಿ ಸಮಾನ ಮನಸ್ಕರ ಒಕ್ಕೂಟದ ತೀರ್ಮಾನದಂತೆ ಮೊದಲ ಹಂತದಲ್ಲಿ ಮಂಡ್ಯದಲ್ಲಿ ಮೇ 17ರಂದು ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ. ಜಯಪ್ರಕಾಶಗೌಡ ತಿಳಿಸಿದರು.

'ಸಮಾವೇಶದ ಸಂಬಂಧ, ಮೇ 4ರಂದು ಸಂಘದಲ್ಲಿ ಜಿಲ್ಲೆಯ ಹಿರಿಯ ಸಾಹಿತಿಗಳು, ಕನ್ನಡಪರ, ರೈತಪರ ಹೋರಾಟಗಾರರು ಮತ್ತು ಎಲ್ಲ ಪ್ರಗತಿಪರ ಸಂಘಟನೆಗಳ ಮುಖಂಡರ ಸಭೆ ಕರೆಯಲಾಗಿದೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜಯಪ್ರಕಾಶ ಗೌಡ

'ಸಮಾವೇಶದಲ್ಲಿ ಮುಖ್ಯಮಂತ್ರಿ ಚಂದ್ರು, ಮುದ್ದುಕೃಷ್ಣ, ಹಂ.ಪ. ನಾಗರಾಜಯ್ಯ, ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಜನವಾದಿ ಸಂಘಟನೆಯ ಕೆ.ಎಸ್. ವಿಮಲಾ, ಮಾವಳ್ಳಿ ಶಂಕರ್, ಜಿ.ಕಪ್ಪಣ್ಣ, ಡಾ.ವಸುಂಧರಾ ಭೂಪತಿ, ಕೆ.ಮರುಳಸಿದ್ದಪ್ಪ ಹಾಗೂ ಮೈಸೂರು, ಹಾಸನ, ರಾಮನಗರ, ಚಾಮರಾಜನಗರ, ಕೊಡಗು ಜಿಲ್ಲೆಯ ಮುಖಂಡರು ಭಾಗವಹಿಸಲಿದ್ದಾರೆ' ಎಂದರು.

'ಪರಿಷತ್ತನ್ನು ಸರ್ವಾಧಿಕಾರದತ್ತ ಕೊಂಡೊಯ್ಯುತ್ತಿರುವ, ಆರ್ಥಿಕ ಅಶಿಸ್ತಿನ ಮೂಲಕ ದಿವಾಳಿ ಮಾಡುತ್ತಿರುವ, ಅಧಿಕಾರ ಕೇಂದ್ರೀಕರಣಕ್ಕಾಗಿ ಮನಸ್ಸಿಗೆ ಬಂದಂತೆ ಬೈಲಾ ತಿದ್ದುಪಡಿ ಮಾಡುತ್ತಿರುವ, ಪ್ರಶ್ನಿಸಿದವರಿಗೆ ನೋಟಿಸ್ ಮೊಕದ್ದಮೆಗಳಿಂದ ಕಿರುಕುಳ ನೀಡುತ್ತಿರುವ, ಸಾಹಿತ್ಯ ಚಟುವಟಿಕೆಗಳಿಂದ ಪರಿಷತ್ತನ್ನು ದೂರವಾಗಿಸುತ್ತಿರುವ ಅಧ್ಯಕ್ಷ ಮಹೇಶ್ ಜೋಶಿ ಅವರನ್ನು ಅಮಾನತ್ತಿನಲ್ಲಿಟ್ಟು, ಕೂಡಲೇ ಆಡಳಿತಾಧಿಕಾರಿಯನ್ನು ನೇಮಿಸಬೇಕು' ಎಂದು ಒತ್ತಾಯಿಸಿದರು.

'ಅಧ್ಯಕ್ಷರಿಗೆ ಕೊಟ್ಟಿರುವ ಸಂಪುಟ ದರ್ಜೆ ಸ್ಥಾನಮಾನವನ್ನು ತಕ್ಷಣ ಸರ್ಕಾರ ಹಿಂಪಡೆಯಬೇಕು, 2022 ಮತ್ತು 2023ನೇ ಸಾಲಿನಲ್ಲಿ ತಿದ್ದುಪಡಿಯಾಗಿರುವ ಬೈಲಾವನ್ನು ರದ್ದುಪಡಿಸಬೇಕು. ಸಕಾರಣವಿಲ್ಲದೆ ಕೆಲವು ಆಜೀವ ಸದಸ್ಯರ ಸದಸ್ಯತ್ವವನ್ನು ಅಮಾನತಿನಲ್ಲಿಟ್ಟಿರುವ ಆದೇಶವನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿದರು.

ವೈದ್ಯೆ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮಂಗಳೂರು: ಭಾರತ ವಿರೋಧಿ ಸಂದೇಶವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಆರೋಪದ ಮೇಲೆ ನಗರದ ಖಾಸಗಿ ಆಸ್ಪತ್ರೆಯೊಂದರ ವೈದ್ಯೆ ವಿರುದ್ಧ ಇಲ್ಲಿಯ ದಕ್ಷಿಣ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಹೈಲ್ಯಾಂಡ್ ಆಸ್ಪತ್ರೆಯ ವೈದ್ಯೆ ಡಾ.ಅತೀಫಾ ವಿರುದ್ಧ ಭಾರತೀಯ ನ್ಯಾಯಸಂಹಿತೆಯ ಸೆಕ್ಷನ್ 353 (ಕಿಡಿಗೇಡಿತನದ ಬರಹ ಪ್ರಕಟಿಸುವುದು) ಹಾಗೂ ಸೆಕ್ಷನ್ 196 (ಧರ್ಮಗಳ ನಡುವೆ ದ್ವೇಷ ಹಬ್ಬಿಸಲು ಯತ್ನಿಸುವುದು) ಪ್ರಕರಣ ದಾಖಲಿಸಿಕೊಂಡಿದ್ದೇವೆ. ವೈದ್ಯೆಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿದ್ದೇವೆ. ಆಕೆಯ ಸಂದೇಶ ಹಂಚಿಕೊಳ್ಳಲು ಬಳಸಿದ ಮೊಬೈಲ್ ಅನ್ನು ವಶಪಡಿಸಿಕೊಂಡಿದ್ದು, ಪರಿಶೀಲನೆಗಾಗಿ ವಿಧಿವಿಜ್ಞಾನ ತಜ್ಞರಿಗೆ ಕಳುಹಿಸಿದ್ದೇವೆ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಇಲ್ಲಿ ತಿಳಿಸಿದರು.

ವೈದ್ಯೆಯು ಸಂಸ್ಥೆಯ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂಬ ಕಾರಣಕ್ಕೆ ಹೈಲ್ಯಾಂಡ್ ಆಸ್ಪತ್ರೆಯು ಆಕೆಯನ್ನು ಕೆಲಸದಿಂದ ವಜಾಮಾಡಿದೆ.

ವೈದ್ಯೆಯ ಬರಹವನ್ನು ವಿಶ್ವ ಹಿಂದೂ ಪರಿಷತ್‌ನ ದಕ್ಷಿಣ ಪ್ರಾಂತ ಕಾರ್ಯವಾಹ ಶರಣ್ ಪಂಪ್‌ವೆಲ್ ಫೇಸ್‌ಬುಕ್‌ನಲ್ಲಿ ಈಚೆಗೆ ಹಂಚಿಕೊಂಡಿದ್ದು, ಆಕೆ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದರು.

ಗುಂಪು ಹಲ್ಲೆಯಿಂದ ಯುವಕ ಸಾವು; 15 ಮಂದಿ ಬಂಧನ

ಒಂದನೇ ಪುಟದಿಂದ...

ಮಂಗಳವಾರ ಈ ಕುರಿತು ಮಾಹಿತಿ ನೀಡಿದ ಅವರು, 'ಕುಡುಪು ತಿರುವೈಲು ಗ್ರಾಮದ ನಡುಮನೆಯ ಸಚಿನ್ ಟಿ. (26), ದೇವದಾಸ್ (50), ತಿರುವೈಲ್ ಗ್ರಾಮದ ಮಂಗಳನಗರದ ಮಂಜುನಾಥ್ (32), ನೀರುಮಾರ್ಗ ಪದಮಲೆ ಸುಬ್ರಹ್ಮಣ್ಯ ನಗರದ ಸಾಯಿದೀಪ್ (29), ಮಂಗಳನಗರ ನಿತೇಶ್ ಕುಮಾರ್ ಅಲಿಯಾಸ್ ಸಂತೋಷ್ (33), ಕುಡುಪು ಕಟ್ಟೆ ನಡುಮನೆಯ ದೀಕ್ಷಿತ್ ಕುಮಾರ್ (32), ವಾಮಂಜೂರು ದೇವರ ಪದವು ನಿವಾಸಿ ಸಂದೀಪ್ (23), ಕುಡುಪು ನಡುಮನೆ 9ನೇ ಅಡ್ಡರಸ್ತೆ ಬಳಿನಿವಾಸಿ ವಿವಿಯನ್ ಅಳ್ವಾರಿಸ್ (41), ಕುಡುಪುಕಟ್ಟೆಯ ಶ್ರೀದತ್ತ (32), ಕದ್ರಿ ಕೈಬಟ್ಟಲ್‌ನ ರಾಹುಲ್ (23), ಕುಲಶೇಖರ ಜ್ಯೋತಿ ನಗರದ ಪ್ರದೀಪ್ ಕುಮಾರ್ (35), ಪದವು ಗ್ರಾಮದ ಶಕ್ತಿನಗರ ಬೌಲ್ಯದ ಮನೀಷ್ ಶೆಟ್ಟಿ (21), ಕುಡುಪುಕಟ್ಟೆ, ನೆಕ್ಕರೆ ರಸ್ತೆಯ ಧನುಷ್ (31), ಕುಲಶೇಖರದ ದೀಕ್ಷಿತ್ (27), ಕುಡುಪು ದೇವಸ್ಥಾನದ ಬಳಿ ನಿವಾಸಿ ಕಿಶೋರ್ ಕುಮಾರ್ (37) ಬಂಧಿತರು. ಇನ್ನುಳಿದ ಆರೋಪಿಗಳ ಪತ್ತೆಗೂ ಕ್ರಮ ವಹಿಸಲಾಗಿದೆ. ಆರೋಪಿಗಳು ಯಾವ ಸಂಘಟನೆಗೆ ಸೇರಿದವರು ಎಂಬ ಮಾಹಿತಿ ಇಲ್ಲ' ಎಂದು ತಿಳಿಸಿದರು.

'ಇದೇ 27ರಂದು ಸಂಜೆ ಸುಮಾರು 5.30 ಗಂಟೆಗೆ ಕುಡುಪು ಭಟ್ರ ಕಲ್ಲುರ್ಟಿ ದೈವಸ್ಥಾನದ ಸಮೀಪದಲ್ಲಿ ಯುವಕನ ಮೃತದೇಹ ಪತ್ತೆಯಾದ ಬಗ್ಗೆ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ಬಂದಿತ್ತು. ಸ್ಥಳೀಯ ಪೊಲೀಸರು ಮತ್ತು ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಮೃತದೇಹದಲ್ಲಿ ಗಂಭೀರ ಗಾಯಗಳು ಕಂಡುಬಂದಿರಲಿಲ್ಲ. ಅನುಮಾನಾಸ್ಪದ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡಿದ್ದೆವು. ನಗರದ ಜಿಲ್ಲಾ ಸರ್ಕಾರಿ ವೆನ್ಲಾಕ್ ಆಸ್ಪತ್ರೆ ತಜ್ಞವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿ ಪ್ರಾಥಮಿಕ ವರದಿ ನೀಡಿದ್ದಾರೆ. ಅದರ ಪ್ರಕಾರ, ಮೃತ ಯುವಕನ ಬೆನ್ನಿನ ಭಾಗದಲ್ಲಿ ಬಲವಾದ ಹೊಡೆತದ ಬಹಳಷ್ಟು ಗಾಯಗಳಾಗಿದ್ದು, ಅದರಿಂದ ಉಂಟಾದ ರಕ್ತಸ್ರಾವ, ಆಘಾತ ಮತ್ತು ಸೂಕ್ತ ಸಮಯದಲ್ಲಿ ಸರಿಯಾದ ಚಿಕಿತ್ಸೆ ಸಿಗದೇ ಯುವಕ ಮೃತಪಟ್ಟಿದ್ದು ದೃಢಪಟ್ಟಿದೆ' ಎಂದು ಅವರು ವಿವರಿಸಿದರು.

> ಗುಂಪು ಹಲ್ಲೆ ನಡೆಸಿ ಹತ್ಯೆ ಮಾಡಿರುವ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಿದ ಸ್ಥಳೀಯ ಪೊಲೀಸ್ ಸಿಬ್ಬಂದಿಯನ್ನು ತಕ್ಷಣವೇ ಅಮಾನತುಗೊಳಿಸಬೇಕು
>
> **ಶಾಹುಲ್ ಹಮೀದ್,** ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕ ಅಧ್ಯಕ್ಷ

'ಪೊಲೀಸರ ಇನ್ನೊಂದು ತಂಡವು ಕ್ರಿಕೆಟ್ ಪಂದ್ಯದ ವೇಳೆ ನಡೆದ ಬೆಳವಣಿಗೆಗಳ ಮಾಹಿತಿ ಕಲೆಹಾಕಿದೆ. ಅದರ ಪ್ರಕಾರ ಇದು ಗುಂಪು ಹಲ್ಲೆಯಿಂದ ಆಗಿರುವ ಸಾವು ಎಂದು ಖಚಿತ ಪಟ್ಟಿದೆ. ಭಾನುವಾರ ಮಧ್ಯಾಹ್ನ 3 ಗಂಟೆಗೆ ಸುಮಾರಿಗೆ ಕುಡುಪು ಭಟ್ರ ಕಲ್ಲುರ್ಟಿ ದೈವಸ್ಥಾನದ ಬಳಿಯ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಿತ್ತು. ಆ ಸಮಯದಲ್ಲಿ ಯುವಕ ಅಲ್ಲಿಗೆ ಹೋಗಿದ್ದ. ಅಲ್ಲಿ ಕ್ರಿಕೆಟ್ ಆಡುತ್ತಿದ್ದವರಿಗೂ ಆತನಿಗೂ ಜಗಳ ನಡೆದಿತ್ತು. ಆರೋಪಿ ಸಚಿನ್ ಆತನಿಗೆ ಹಲ್ಲೆ ನಡೆಸಿದ್ದ. ನಂತರ ಅಲ್ಲಿದ್ದ 30ಕ್ಕೂ ಹೆಚ್ಚು ಮಂದಿ ಸೇರಿ ಆತನ ಮೇಲೆ ಕೈಯಿಂದ ಹೊಡೆದು, ಕಾಲಿನಿಂದ ಒದ್ದು, ಕಟ್ಟಿಗೆಯಿಂದ ಹೊಡೆದು ಹಲ್ಲೆ ನಡೆಸಿದ್ದರು. ಸ್ಥಳದಲ್ಲಿದ್ದ ಕೆಲವರು ತಡೆಯಲು ಯತ್ನಿಸಿದರೂ ಕೇಳದೇ ಹಲ್ಲೆ ನಡೆಸಿದ್ದರು. ಆತ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದ' ಎಂದರು.

'ಗುಂಪು ಹಲ್ಲೆ– ಮೊದಲ ಪ್ರಕರಣ': ಕುಲಶೇಖರ ಕೇಶವ ಕಂಪೌಂಡ್‌ನ ನಿವಾಸಿ ದೀಪಕ್ ಕುಮಾರ್ (33) ಈ ಕೃತ್ಯದ ಕುರಿತು ದೂರು ನೀಡಿದ್ದಾರೆ. ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಗುಂಪು ಹಲ್ಲೆಗೆ ಪ್ರತ್ಯೇಕವಾದ ಸೆಕ್ಷನ್ 103(2) ಅಳವಡಿಸಲಾಗಿದೆ. ಕಮಿಷನರೇಟ್ ವ್ಯಾಪ್ತಿಯಲ್ಲಿ ಈ ಸೆಕ್ಷನ್ ಅಡಿ ದಾಖಲಾದ ಮೊದಲ ಪ್ರಕರಣ' ಎಂದು ಕಮಿಷನರ್ ತಿಳಿಸಿದರು.

'ಮಾಜಿ ಕಾರ್ಪೊರೇಟರ್ ಪತಿ ಭಾಗಿ?'

ಒಂದನೇ ಪುಟದಿಂದ...

'ಯುವಕ ಏಕಾಏಕಿ ಸ್ಥಳಕ್ಕೆ ಹೋಗಿದ್ದ. ಆತ ಯಾವ ತಂಡದ ಪರವಾಗಿಯೂ ಕ್ರಿಕೆಟ್ ಆಡಿರಲಿಲ್ಲ. ಆತ ಮದ್ಯಪಾನ ಮಾಡಿದ್ದನೋ ಇಲ್ಲವೋ ಎಂಬುದು ಮರಣೋತ್ತರ ಪರೀಕ್ಷೆಯಲ್ಲಿ ಗೊತ್ತಾಗುತ್ತದೆ' ಎಂದರು.

'ಯುವಕ ಭಾರತ ವಿರೋಧಿ ಘೋಷಣೆ ಕೂಗಿದ್ದ' ಎಂಬ ವದಂತಿ ಕುರಿತು ಪ್ರತಿಕ್ರಿಯಿಸಿದ ಕಮಿಷನರ್, 'ಸದ್ಯಕ್ಕೆ ತನಿಖೆ ಪ್ರಗತಿಯಲ್ಲಿದೆ' ಎಂದರು.

ಕೊಲೆಯಾದವ ವಯನಾಡ್‌ನ ಅಶ್ರಫ್

ಮಂಗಳೂರಿನಲ್ಲಿ ಸಾಮೂಹಿಕ ಹಲ್ಲೆಗೊಳಗಾಗಿ ಸಾವಿಗೀಡಾದ ಯುವಕ ಕೇರಳದ ವಯನಾಡ್ ಜಿಲ್ಲೆಯ ಪುಲ್ಪಳ್ಳಿ ನಿವಾಸಿ ಎಂದು ಅಲ್ಲಿನ ಪೊಲೀಸರು ಖಚಿತಪಡಿಸಿದ್ದಾರೆ.

'ಪುಲ್ಪಳ್ಳಿಯ ಸಾಂದೀಪನಿ ಕಾಲೊನಿಯ ಮೂಚಿಕ್ಕಾರನ್ ಎಂಬಲ್ಲಿಯ ಕುಂಞಾಯಿ ಅವರ ಮಗ ಅಶ್ರಫ್ ಕೊಲೆಯಾದ ವ್ಯಕ್ತಿ. ಮಲಪ್ಪುರಂ ಜಿಲ್ಲೆಯವರಾದ ಇವರು ಕೆಲವು ವರ್ಷಗಳ ಹಿಂದೆ ವಯನಾಡ್ ಜಿಲ್ಲೆಗೆ ಬಂದಿದ್ದರು. ತಂದೆ, ಇಬ್ಬರು ಸಹೋದರರು ಮತ್ತು ಇಬ್ಬರು ಸಹೋದರಿಯರು ಇರುವ ಅಶ್ರಫ್ ವ್ಯಾಪಾರದಲ್ಲಿ ನಷ್ಟ ಅನುಭವಿಸಿದ ನಂತರ ಊರು ಬಿಟ್ಟಿದ್ದರು' ಎಂದು ವಯನಾಡ್ ವಿಶೇಷ ಪೊಲೀಸ್ ದಳದ ರೆಜಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮಂಗಳೂರಿನಲ್ಲಿ ಚಿಂದಿ ಆಯ್ದು ಬದುಕುತ್ತಿದ್ದ ಅಶ್ರಫ್ ರಾತ್ರಿ ವೇಳೆ ಅಂಗಡಿಗಳ ಮುಂದೆ ಮಲಗುತ್ತಿದ್ದರು. ಈಚೆಗೆ ಊರಿಗೆ ಬಂದಿದ್ದ ಅವರು ಹಬ್ಬ ಮುಗಿಸಿ ವಾಪಸಾಗಿದ್ದರು. ಅವರು ಮಾನಸಿಕ ಅಸ್ವಸ್ಥ ಎಂದು ಕುಟುಂಬದವರು ತಿಳಿಸಿದ್ದಾರೆ' ಎಂದು ರೆಜಿ ವಿವರಿಸಿದರು.

ಕೊಡಗು, ಬೀದರ್: ಮುಂದುವರಿದ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಬೀದರ್: ಕೊಡಗು ಜಿಲ್ಲೆಯ ನಾಪೋಕ್ಲು ಹೋಬಳಿ ವ್ಯಾಪ್ತಿಯಲ್ಲಿ ಮಳೆ ಮುಂದುವರಿದಿದ್ದು, ಹೋಬಳಿಯ ಕೊಳಕೇರಿ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಮಂಗಳವಾರ ಭಾರಿ ಮಳೆ ಸುರಿಯಿತು. ನಾಪೋಕ್ಲು ಪಟ್ಟಣ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲೂ ಗುಡುಗು, ಸಿಡಿಲಿನಿಂದ ಕೂಡಿದ ಬಿರುಸಿನ ಮಳೆಯಾಯಿತು. ಬೀದರ್ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಮಂಗಳವಾರ ಮಧ್ಯಾಹ್ನ ಗುಡುಗು ಸಹಿತ ಬಿರುಗಾಳಿ ಮಳೆಯಾಗಿದೆ.

ಹಲವು ದಿನಗಳಿಂದ ನಾಪೋಕ್ಲು ಹೋಬಳಿ ವ್ಯಾಪ್ತಿಯಲ್ಲಿ ಬಿರುಸಿನ ಮಳೆಯಾಗುತ್ತಿದ್ದು, ಕೆರೆತೋಡುಗಳಲ್ಲಿ ನೀರು ತುಂಬಿ ಹರಿಯುತ್ತಿದೆ.

ಬೀದರ್ ತಾಲ್ಲೂಕಿನ ಇಸ್ಲಾಂಪುರದಲ್ಲಿ ಮನೆಯ ತಗಡಿನ ಶೀಟುಗಳು ಹಾರಿ ಹೋಗಿವೆ. ಬುಡಸಮೇತ ಮರಗಳು ನೆಲಕ್ಕುರುಳಿವೆ. ತಾಲ್ಲೂಕಿನ ಯರನಳ್ಳಿ, ಯದಲಾಪೂರ, ಚಿಟ್ಟಾ ಸೇರಿದಂತೆ ಹಲವೆಡೆ ಮಳೆಯಾಗಿದೆ.

ಔರಾದ್ ತಾಲ್ಲೂಕಿನ ಜೋಜನಾ ಮುಖ್ಯರಸ್ತೆಗೆ ಅಡ್ಡಲಾಗಿ ಬೃಹತ್ ಮರ ಉರುಳಿ ಬಿದ್ದಿದೆ. ತಾಲ್ಲೂಕಿನ ಮಣಿಗೇಂಪುರದಲ್ಲಿ ಮನೆಯ ಪತ್ರಾಸ್ ಹಾರಿ ಹೋಗಿ ಹಾನಿಯಾಗಿದೆ. ಭಾಲ್ಕಿ, ಬಸವಕಲ್ಯಾಣ, ಹುಲಸೂರ ತಾಲ್ಲೂಕಿನಲ್ಲೂ ಮಳೆಯಾಗಿದೆ.

ಮೈಸೂರು, ಮಂಡ್ಯ ನಗರದಲ್ಲಿಯೂ ರಾತ್ರಿ ವೇಳೆ ಮಳೆಯಾಗಿದೆ.

ಕೂಡ್ಲಿಗಿ ವರದಿ (ವಿಜಯನಗರ ಜಿಲ್ಲೆ): ಪಟ್ಟಣ ಸೇರಿ ಸುತ್ತಮುತ್ತಲ ಗ್ರಾಮಗಳಲ್ಲಿ ಮಂಗಳವಾರ ಸಂಜೆ 15 ನಿಮಿಷ ಗಾಳಿ, ಗುಡುಗು ಸಹಿತ ಬಿರುಸಿನ ಮಳೆ ಸುರಿಯಿತು. ಬಲವಾಗಿ ಗಾಳಿ ಬೀಸಿದ್ದರಿಂದ ವಿದ್ಯುತ್ ಕಂಬಗಳು ಮುರಿದಿವೆ.

ಹರಪನಹಳ್ಳಿ ತಾಲ್ಲೂಕಿನ ಹಾರಕನಾಳ್ ದೊಡ್ಡ ತಾಂಡಾದಲ್ಲಿ ಗಾಳಿ ಸಹಿತ ಬಿರುಸಿನ ಮಳೆ ಸುರಿದಿದ್ದರಿಂದ ಮರ ಬಿದ್ದು ಮನೆ ಹಾನಿಗೊಂಡಿದೆ. ಐದಾರು ವಿದ್ಯುತ್ ಕಂಬಗಳೂ ಮುರಿದು ಬಿದ್ದಿವೆ. ಇನ್ನೂ ಎರಡು ಮನೆಗಳ ಚಾವಣಿ ಹಾರಿಹೋಗಿವೆ.

ಕೊಡಗು ಜಿಲ್ಲೆಯ ನಾಪೋಕ್ಲು ವ್ಯಾಪ್ತಿಯ ಬೇತು ಗ್ರಾಮದ ಕೆರೆಯಲ್ಲಿ ಸತತ ಮಳೆಯಿಂದ ನೀರು ತುಂಬಿದೆ ಪ್ರಜಾವಾಣಿ ಚಿತ್ರ/ಸಿ.ಎಸ್.ಸುರೇಶ್

ಸಿಇಟಿ: ಮೇ 5ರಿಂದ ವಿಶೇಷ ಕೆಟಗರಿ ಪ್ರಮಾಣಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಕೆಟಗರಿಗಳ ಅಡಿ 'ಸಿಇಟಿ-2025'ಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣಪತ್ರಗಳನ್ನು ಮೇ 5ರಿಂದ 14ರ ಒಳಗೆ ಮಲ್ಲೇಶ್ವರದಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿಗೆ ಖುದ್ದು ಸಲ್ಲಿಸಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಡಿಫೆನ್ಸ್, ಎಕ್ಸ್-ಡಿಫೆನ್ಸ್, ಸಿಎಪಿಎಫ್, ಸಿಆರ್‌ಪಿಎಫ್, ಸಿಐಎಸ್‌ಎಫ್, ಬಿಎಸ್‌ಎಫ್, ಐಟಿಬಿಪಿ, ಎಕ್ಸ್-ಸಿ ಎಪಿಎಫ್, ಸ್ಕೌಟ್ಸ್ ಮತ್ತು ಗೈಡ್ಸ್, ಆಂಗ್ಲೊ ಇಂಡಿಯನ್ ಹಾಗೂ ಎನ್‌ಸಿಸಿ ಕೋಟಾದಡಿ ಸೀಟು ಕ್ಲೇಮು ಮಾಡಿರುವ ಅಭ್ಯರ್ಥಿಗಳಿಗೆ ಇದು ಅನ್ವಯವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಸಿಎಪಿಎಫ್, ಸಿಆರ್‌ಪಿಎಫ್, ಸಿಐಎಸ್‌ಎಫ್, ಬಿಎಸ್‌ಎಫ್, ಟಿಬಿಪಿ ಅಡಿ ಕ್ಲೇಮು ಮಾಡಿರುವವರು ಮೇ 5ರಂದು ಪ್ರಮಾಣಪತ್ರಗಳನ್ನು ಸಲ್ಲಿಸಬೇಕು. ಎಕ್ಸ್- ಡಿಫೆನ್ಸ್, ಎಕ್ಸ್–ಸಿಎಪಿಎಫ್ ಅಭ್ಯರ್ಥಿಗಳು ಮೇ 6 ಹಾಗೂ 7ರಂದು, ಡಿಫೆನ್ಸ್ ಕ್ಲೇಮು ಮಾಡಿರುವವರು 8 ಹಾಗೂ 9ರಂದು, ಸ್ಕೌಟ್ಸ್ ಮತ್ತು ಗೈಡ್ಸ್, ಆಂಗ್ಲೊ ಇಂಡಿಯನ್ ಕೋಟಾ ಕೋರಿರುವವರು 12ರಂದು ಮತ್ತು ಎನ್‌ಸಿಸಿ ಕ್ಲೇಮು ಮಾಡಿರುವವರು 13 ಹಾಗೂ 14ರಂದು ಪ್ರಮಾಣಪತ್ರಗಳನ್ನು ಸಲ್ಲಿಸಬೇಕು. ಅಭ್ಯರ್ಥಿಗಳು ಬೆಳಿಗ್ಗೆ 10.30ರಿಂದ ಸಂಜೆ 5:30ರ ಒಳಗೆ ಹಾಜರಾಗಿ ಪ್ರಮಾಣಪತ್ರಗಳನ್ನು ಸಲ್ಲಿಸಬೇಕು. ಕ್ರೀಡಾ ಕೋಟಾದಡಿಗೆ ಸಂಬಂಧಿಸಿದ ಪ್ರಮಾಣಪತ್ರಗಳನ್ನು ಸಲ್ಲಿಸಲು ಶೀಘ್ರ ದಿನಾಂಕ ಪ್ರಕಟಿಸಲಾಗುವುದು ಎಂದೂ ತಿಳಿಸಲಾಗಿದೆ.

ಮೂಲದಾಖಲೆ ಪರಿಶೀಲನೆ: ಸಿಇಟಿ- 25ರ ಅರ್ಜಿ ನಮೂನೆಯಲ್ಲಿ ಅರ್ಹತಾ ಕಂಡಿಕೆ ಬಿ, ಸಿ, ಡಿ, ಇ, ಎಫ್, ಜಿ, ಎಚ್, ಐ, ಜೆ, ಕೆ, ಎಲ್, ಎಂ, ಎನ್ ಮತ್ತು ಒ ಗಳಡಿ ಸೀಟು ಕ್ಲೇಮ್ ಮಾಡಿರುವ ಅಭ್ಯರ್ಥಿಗಳಿಗೆ ಮೇ 5ರಿಂದ 15ರವರೆಗೆ ಮೂಲ ದಾಖಲೆಗಳ ಖುದ್ದು ಪರಿಶೀಲನೆ ನಡೆಯಲಿದೆ. ದಾಖಲಾತಿ ಪರಿಶೀಲನೆಗೆ ಹಾಜರಾಗುವ ಮೊದಲು ಅರ್ಹತಾ ಕ್ಲಾಸ್ ಕೋಡ್ ಅಡಿಯಲ್ಲಿ ಪ್ರಮಾಣಪತ್ರಗಳನ್ನು ಸಲ್ಲಿಸುವ ಬಗ್ಗೆ ಕೆಇಎ ವೆಬ್ ಸೈಟ್ http://kea.kar.nic.in ನಲ್ಲಿ ಹಾಗೂ ಇ-ಬ್ರೋಷರ್‌ನಲ್ಲಿ ವಿವರಿಸಲಾಗಿದೆ.

ದಾಖಲಾತಿ ಪರಿಶೀಲನೆಗೆ ಬರುವ ಮೊದಲು ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ನಲ್ಲಿ ಸ್ಲಾಟ್ ಬುಕ್ ಮಾಡಿಕೊಂಡು ನಿಗದಿಯಾದ ದಿನದಂದೇ ಪರಿಶೀಲನೆಗೆ ಹಾಜರಾಗಬೇಕು ಎಂದೂ ಪ್ರಸನ್ನ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಜಾತಿ ಕೇಳಿ ಹೊರಗೆ ನಿಲ್ಲಿಸುವವರೂ ಭಯೋತ್ಪಾದಕರೇ'

ಬಾಗಲಕೋಟೆ: 'ಯಾವ ಜಾತಿ ಎಂದು ಕೇಳಿ ಹೊರಗೆ ನಿಲ್ಲಿಸುವವರು, ಧರ್ಮ ಕೇಳಿ ಗುಂಡು ಹೊಡೆಯುವವರು, ಇಬ್ಬರೂ ಭಯೋತ್ಪಾದಕರೇ' ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನ ಜಯಂತಿ ಪ್ರಯುಕ್ತ ಕೂಡಲಸಂಗಮದಲ್ಲಿ ಮಂಗಳವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದ್ದ 'ಅನುಭವ ಮಂಟಪ– ಬಸವಾದಿ ಶರಣರ ವೈಭವ'ದಲ್ಲಿ ಮಾತನಾಡಿದ ಅವರು, 'ಹುಲಿಯು ಹುಲಿ ಕೊಲ್ಲುವುದಿಲ್ಲ. ಸಿಂಹವು ಸಿಂಹವನ್ನು ಕೊಲ್ಲುವುದಿಲ್ಲ. ಆದರೆ, ಮನುಷ್ಯ ಮನುಷ್ಯನನ್ನು ಕೊಲ್ಲಲು ಹೇಸುವುದಿಲ್ಲ. ಇದು ಯಾವ ಧರ್ಮ' ಎಂದು ಪ್ರಶ್ನಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ. ಬೈಲೂರು ನಿಷ್ಕಲಮಂಟಪದ ನಿಜಗುಣಾನಂದ ಸ್ವಾಮೀಜಿ ಮಾತನಾಡಿದರು.

ಇಳಕಲ್ ಚಿತ್ತರಗಿ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ ಇದ್ದರು.

ನಾಲೆಗೆ ಬಿದ್ದ ಕಾರು ಮೂವರ ಶವ ಪತ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆ.ಆರ್.ಎಸ್. ಅಣೆಕಟ್ಟೆ ಸಮೀಪದ ನಾರ್ತ್ ಬ್ಯಾಂಕ್ ಗ್ರಾಮದ ಬಳಿ ಇರುವ ವಿಶ್ವೇಶ್ವರಯ್ಯ ನಾಲೆಗೆ ಬಿದ್ದ ಕಾರಿನಲ್ಲಿ ಮೂವರ ಮೃತದೇಹಗಳು ಮಂಗಳವಾರ ಪತ್ತೆಯಾಗಿವೆ.

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಹೆಬ್ಬಾಳು ಗ್ರಾಮದ ಕುಮಾರಸ್ವಾಮಿ (38), ಅವರ ಮಕ್ಕಳಾದ ಅದ್ವೈತ್ (8) ಮತ್ತು ಅಕ್ಷತಾ (3) ಎಂದು ಗುರುತಿಸಲಾಗಿದೆ.

ಏ.16ರಂದು ಮಕ್ಕಳೊಂದಿಗೆ ಬೆಂಗಳೂರಿನಿಂದ ಕೆ.ಆರ್. ನಗರಕ್ಕೆ ಹೊರಟಿದ್ದ ಕುಮಾರಸ್ವಾಮಿ ಅವರ ಸುಳಿವು ಸಿಕ್ಕಿರಲಿಲ್ಲ. 19ರಂದು ಕೆ.ಆರ್. ನಗರ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಪೊಲೀಸ್ ಮತ್ತು ಅಗ್ನಿಶಾಮಕ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಕಾರು ಮತ್ತು ಮೃತದೇಹಗಳನ್ನು ಮೇಲಕ್ಕೆತ್ತಿವೆ. 'ಕಾರು ನಾಲೆಗೆ ಉರುಳಲು ಕಾರಣದ ಕುರಿತು ತನಿಖೆ ನಡೆದಿದೆ' ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ. ಕೆ.ಆರ್.ಎಸ್. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತಪಟ್ಟ ಕುಮಾರಸ್ವಾಮಿ ಮತ್ತು ಅವರ ಮಕ್ಕಳಾದ ಅದ್ವೈತ್, ಅಕ್ಷತಾ

ಸುಭಾಷಿತ

ನಮ್ಮ ಕಾರ್ಯಗಳಿಂದ ಉತ್ತಮ, ಅಧಮ ಎನಿಸಿಕೊಳ್ಳುತ್ತೇವೆಯೇ ವಿನಾ ಜಾತಿಯಿಂದಲ್ಲ.

–ಬಸವಣ್ಣ

ದತ್ತಾಂಶ ಸುರಕ್ಷತಾ ಕಾಯ್ದೆ ಮಾಹಿತಿಯ ಹಕ್ಕಿಗೆ ವಿಘ್ನ ಆಗದಿರಲಿ

ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯ ಅಂಶವೊಂದರ ಮೇಲೆ 'ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆ– 2023' ಬೀರಬಹುದಾದ ನಕಾರಾತ್ಮಕ ಪರಿಣಾಮಗಳ ಬಗ್ಗೆ ಗಂಭೀರ ಸ್ವರೂಪದ ಕಳವಳಗಳು ವ್ಯಕ್ತವಾಗಿವೆ. ದತ್ತಾಂಶ ಸುರಕ್ಷತಾ ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಈ ಕಾಯ್ದೆಯ ಸೆಕ್ಷನ್ 44(3), ಮಾಹಿತಿ ಹಕ್ಕು ಕಾನೂನಿನ ಸೆಕ್ಷನ್ 8(1)(ಜೆ)ಯಲ್ಲಿ ಬದಲಾವಣೆ ತರುವ ಉದ್ದೇಶ ಹೊಂದಿದೆ. ಅಂದರೆ, ಯಾವುದೇ 'ವೈಯಕ್ತಿಕ ಮಾಹಿತಿ'ಯನ್ನು ಬಹಿರಂಗಪಡಿಸಬೇಕಿಲ್ಲ ಎಂಬ ಬದಲಾವಣೆ ತರುವ ಉದ್ದೇಶ ಅದರಲ್ಲಿದೆ. ಇದರ ಅರ್ಥ ಏನೆಂದರೆ, 'ವೈಯಕ್ತಿಕ ಮಾಹಿತಿ'ಯನ್ನೂ ಒಳಗೊಂಡ ಯಾವುದೇ ಸಾರ್ವಜನಿಕ ಮಾಹಿತಿಯನ್ನು ಬಹಿರಂಗಪಡಿಸಲಾಗುವುದಿಲ್ಲ. ಮಾಹಿತಿ ಹಕ್ಕು ಕಾನೂನಿನ ಸೆಕ್ಷನ್ 8(1)(ಜೆ) ಪ್ರಕಾರ, 'ವೈಯಕ್ತಿಕ ಮಾಹಿತಿಗೆ ಸಂಬಂಧಿಸಿದ ವಿವರಗಳು' ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದವಲ್ಲ ಎಂದಾದರೆ, ಖಾಸಗಿತನದಲ್ಲಿ ಅನಗತ್ಯ ಮಧ್ಯಪ್ರವೇಶ ಮಾಡುತ್ತವೆ ಎಂದಾದರೆ, ಸರ್ಕಾರಿ ಸಂಸ್ಥೆಗಳು ಅಂತಹ ಮಾಹಿತಿಯನ್ನು ಬಹಿರಂಗಪಡಿಸದೇ ಇರಬಹುದು. ಆದರೆ, ಅಂತಹ ಮಾಹಿತಿಯನ್ನು ಬಹಿರಂಗಪಡಿಸುವುದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ಮೇಲ್ಮನವಿ ಪ್ರಾಧಿಕಾರವು ಹೇಳಿದರೆ, ಆ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಸೆಕ್ಷನ್ 8(1)(ಜೆ)ಗೆ ಈಗ ತಿದ್ದುಪಡಿ ತರಲು ಉದ್ದೇಶಿಸಲಾಗಿದ್ದು, ಯಾವುದೇ ವಿನಾಯಿತಿಗಳು ಇಲ್ಲದೆ ಮಾಹಿತಿಯನ್ನು 'ವೈಯಕ್ತಿಕ' ಎಂದು ವರ್ಗೀಕರಿಸಿ, ಆ ಮಾಹಿತಿ ಬಹಿರಂಗಪಡಿಸುವುದನ್ನು ತಡೆಹಿಡಿಯಬಹುದು.

ಕಾಯ್ದೆಯ ಯಾವುದೇ ಅಂಶವು ಖಾಸಗಿತನದ ಹಕ್ಕಿಗೆ ಧಕ್ಕೆ ತರುವುದಿಲ್ಲ ಎಂಬುದನ್ನು ಖಾತರಿಪಡಿಸಬೇಕು

ಖಾಸಗಿತನದ ಹಕ್ಕು ಮತ್ತು ಮಾಹಿತಿ ಹಕ್ಕು ದೇಶದಲ್ಲಿ ಮೂಲಭೂತ ಹಕ್ಕುಗಳ ಸಾಲಿಗೆ ಸೇರಿವೆ. ಖಾಸಗಿತನವು ಮೂಲಭೂತ ಹಕ್ಕುಗಳ ಸಾಲಿಗೆ ಸೇರಿದೆ ಎಂಬುದನ್ನು ಸುಪ್ರೀಂ ಕೋರ್ಟ್, 2017ರಲ್ಲಿ ಕೆ.ಎಸ್. ಪುಟ್ಟಸ್ವಾಮಿ ಪ್ರಕರಣದಲ್ಲಿ ಹೇಳಿತು. ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿ ಮಾಹಿತಿ ಹಕ್ಕನ್ನು ಗುರುತಿಸಲಾಗುತ್ತಿದೆ. ಈ ಎರಡೂ ಹಕ್ಕುಗಳು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಅಗತ್ಯವಾಗಿ ಇರಬೇಕಾದವು. ಈ ಎರಡೂ ಹಕ್ಕುಗಳು ಪರಸ್ಪರ ವಿರುದ್ಧವಾದವು ಅಲ್ಲ, ಅವುಗಳನ್ನು ಒಂದು ಇನ್ನೊಂದಕ್ಕೆ ವಿರುದ್ಧ ಎಂದು ಚಿತ್ರಿಸಬೇಕಾಗಿಯೂ ಇಲ್ಲ. ಆದರೆ ದತ್ತಾಂಶ ಸುರಕ್ಷತಾ ಕಾಯ್ದೆಯ ಸೆಕ್ಷನ್ 44(3) ಇದೇ ಕೆಲಸ ಮಾಡಲು ಯತ್ನಿಸುತ್ತಿದೆ. 'ವೈಯಕ್ತಿಕ' ಎಂಬ ಪದವನ್ನು ತಪ್ಪಾಗಿ ವ್ಯಾಖ್ಯಾನಿಸುವ, ಸಾರ್ವಜನಿಕ ಹಿತಾಸಕ್ತಿ ಇರುವ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಆರ್‌ಟಿಐ ಅಡಿಯಲ್ಲಿ ಬಹಿರಂಗಪಡಿಸುವುದಕ್ಕೆ ಅಡ್ಡಿ ಉಂಟುಮಾಡಲು ಬಳಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಆದರೆ ಖಾಸಗಿತನದ ಹಕ್ಕು ಮತ್ತು ಪಾರದರ್ಶಕತೆಯ ನಡುವೆ ಸೌಹಾರ್ದ ಸಂಬಂಧ ಇರಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ ಎಂಬುದು ಇಲ್ಲಿ ಗಮನಾರ್ಹ.

ದತ್ತಾಂಶ ಸುರಕ್ಷತಾ ಕಾಯ್ದೆ ಕೂಡ ನಾಗರಿಕರ ಖಾಸಗಿತನವನ್ನು ಉಲ್ಲಂಘಿಸುತ್ತದೆ. ಈ ಕಾಯ್ದೆಯ ಸೆಕ್ಷನ್ 17(2)(ಎ) ಪ್ರಕಾರ, ಸರ್ಕಾರದ ಏಜೆನ್ಸಿಗಳಿಗೆ ಕಾಯ್ದೆಯಿಂದ ವಿನಾಯಿತಿ ಇರುತ್ತದೆ. ಆ ಏಜೆನ್ಸಿಗಳು ನಾಗರಿಕರ ವೈಯಕ್ತಿಕ ದತ್ತಾಂಶವನ್ನು ಪಡೆಯಲು ಅವಕಾಶ ಇರುತ್ತದೆ. ಇದು ನಾಗರಿಕರ ಹಕ್ಕುಗಳನ್ನು ಉಲ್ಲಂಘಿಸುತ್ತದೆ, ನಾಗರಿಕರ ವೈಯಕ್ತಿಕ ದತ್ತಾಂಶದ ರಕ್ಷಣೆಯ ಹೊಣೆಯಿಂದ ತಪ್ಪಿಸಿಕೊಳ್ಳಲು ಸರ್ಕಾರಕ್ಕೆ ಅನುವು ಮಾಡಿಕೊಡುತ್ತದೆ. ಸರ್ಕಾರದ ಯಾವುದೇ ಪ್ರಾಧಿಕಾರವು ದತ್ತಾಂಶವನ್ನು ಬಳಕೆ ಮಾಡಿಕೊಂಡ ನಂತರದಲ್ಲಿ ಅದನ್ನು ಅಳಿಸಿಹಾಕುವ ಹೊಣೆ ಹೊರಬೇಕಿಲ್ಲ ಎಂದೂ ಕಾಯ್ದೆಯು ಹೇಳುತ್ತದೆ. ಇದರಿಂದಾಗಿ ಸರ್ಕಾರದ ಏಜೆನ್ಸಿಗಳಿಗೆ ವೈಯಕ್ತಿಕ ದತ್ತಾಂಶಗಳನ್ನು ಅನಿರ್ದಿಷ್ಟ ಅವಧಿಗೆ ಇರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ವ್ಯಕ್ತಿಗಳ ವಿರುದ್ಧ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ. ಆರ್‌ಟಿಐ ಕಾಯ್ದೆಯನ್ನು ಸರ್ಕಾರವು ಹಲವು ಕ್ರಮಗಳ ಮೂಲಕ ನಿಧಾನವಾಗಿ ದುರ್ಬಲಗೊಳಿಸಿದೆ. ಆರ್‌ಟಿಐ ಕಾಯ್ದೆಗೆ ತಿದ್ದುಪಡಿ ತರಲು ಹೇಳುವ ದತ್ತಾಂಶ ಸುರಕ್ಷತಾ ಕಾಯ್ದೆಯಲ್ಲಿನ ಅಂಶವನ್ನು ಸರ್ಕಾರವು ಹಿಂಪಡೆಯಬೇಕು. ಅಲ್ಲದೆ, ದತ್ತಾಂಶ ಸುರಕ್ಷತಾ ಕಾಯ್ದೆಯ ಯಾವುದೇ ಅಂಶವು ಖಾಸಗಿತನದ ಹಕ್ಕಿಗೆ ಧಕ್ಕೆ ತರುವುದಿಲ್ಲ ಎಂಬುದನ್ನು ಖಾತರಿಪಡಿಸಬೇಕು.

ದಿನದ ಟ್ವೀಟ್

ಬೀದಿನಾಯಿ ಹಾವಳಿ ನಿಯಂತ್ರಿಸಿ

ಬೀದಿನಾಯಿಗಳ ಉಪಟಳದ ನಿಯಂತ್ರಣವು ಸ್ಥಳೀಯ ಆಡಳಿತಗಳಿಗೆ ಸಂಬಂಧಿಸಿದ ವಿಷಯ. ಭಾರತದಲ್ಲಿ ಸ್ಥಳೀಯ ಸರ್ಕಾರಗಳು ಬಹುಮಟ್ಟಿಗೆ ಅಸ್ತಿತ್ವದಲ್ಲೇ ಇಲ್ಲ. ಕನಿಷ್ಠಪಕ್ಷ ರಾಜ್ಯ ಆರೋಗ್ಯ ಇಲಾಖೆಯಾದರೂ ಈ ಬಗ್ಗೆ ಕಾಳಜಿ ವಹಿಸಬೇಕು. ಕೇಂದ್ರದ ಮಟ್ಟದಲ್ಲಿ ಪ್ರಾಣಿ ಕಲ್ಯಾಣ ಮಂಡಳಿ ಅಥವಾ ಅರಣ್ಯ ಇಲಾಖೆ ಕಾಳಜಿ ತೋರಬೇಕು. ಆದರೆ ವಾಸ್ತವದಲ್ಲಿ ಸರ್ಕಾರದ ಯಾರೊಬ್ಬರೂ ಯಾವ ಹಂತದಲ್ಲೂ ಈ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಎಂತಹ ಅವ್ಯವಸ್ಥೆ!

ಬಾಲಾಜಿ

ಕಿಡಿನುಡಿ

ಮುಖ್ಯಮಂತ್ರಿಯಾಗಿರಲಿ, ಪ್ರಧಾನಿಯಾಗಿರಲಿ ಅಥವಾ ಸಾಮಾನ್ಯ ವ್ಯಕ್ತಿಯೇ ಆಗಿರಲಿ, ಯಾರೊಬ್ಬರೂ ಹೀಗೆ ನಡೆದುಕೊಳ್ಳಬಾರದು. ಗೌರವ ಕೊಟ್ಟು ಗೌರವ ಪಡೆಯಬೇಕು.

(ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಅಧಿಕಾರಿಯ ಮೇಲೆ ಕೈ ಎತ್ತಲು ಮುಂದಾದ ಪ್ರಕರಣಕ್ಕೆ ಪ್ರತಿಕ್ರಿಯೆ)

ಅರುಣ್ ಕುಮಾರ್

25 ವರ್ಷಗಳ ಹಿಂದೆ

ಭಾನುವಾರ, 30-4-2000

• ನೀರಿಗಾಗಿ ಹಿಂಸಾಚಾರ ಗಾಳಿಯಲ್ಲಿ ಗುಂಡು

ಹಾವೇರಿ, ಏ. 29– ಕುಡಿಯುವ ನೀರಿಗಾಗಿ ಆಗ್ರಹಿಸಿ ಇಂದು ಕರೆ ನೀಡಿದ್ದ 'ಸವಣೂರು ಬಂದ್' ಹಿಂಸಾಚಾರಕ್ಕೆ ತಿರುಗಿ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ, ಅಶ್ರುವಾಯು ಪ್ರಯೋಗಿಸಿ, ಲಾಠಿ ಪ್ರಹಾರ ಮಾಡಿ ಪ್ರತಿಭಟನಕಾರರನ್ನು ಚದುರಿಸಿದರು.

ಶಿಗ್ಗಾವಿ ನಾಗನೂರು ಕೆರೆಯಿಂದ ಸವಣೂರಿಗೆ ಪೈಪ್‌ಲೈನ್ ಮೂಲಕ ನೀರು ಪೂರೈಸಬೇಕೆಂದು ಆಗ್ರಹಿಸಿ ಇಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ಮೆರವಣಿಗೆ ಹೊರಟ ಸುಮಾರು ಎರಡು ಸಾವಿರ ಪ್ರತಿಭಟನಕಾರರು ಪೊಲೀಸರ ಕಣ್ತಪ್ಪಿಸಿ ನಾಲ್ಕು ಗುಂಪುಗಳಾಗಿ ಚದುರಿದರು.

ಒಂದು ಗುಂಪು ಪುರಸಭೆಗೆ ಮುತ್ತಿಗೆ ಹಾಕಿತು. ಇನ್ನೊಂದು ಗುಂಪು ತಾಲ್ಲೂಕು ಕಚೇರಿಯನ್ನು ಆಕ್ರಮಿಸಿತು ಹಾಗೂ ಮತ್ತೊಂದು ಗುಂಪು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದತ್ತ ಧಾವಿಸಿ ಬಸ್ಸಿನಲ್ಲಿದ್ದ ಡೀಸೆಲ್ ತೆಗೆದು ಐದು ಬಸ್ಸುಗಳಿಗೆ ಬೆಂಕಿ ಹಚ್ಚಿತು. ಕೂಗಾಟ, ಚೀರಾಟಗಳ ನಡುವೆ ಪ್ರಯಾಣಿಕರು ದಿಕ್ಕಾಪಾಲಾಗಿ ಚದುರಿದರು.

ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಗಗನದೀಪ್ ಅವರು ಮುಂಜಾಗ್ರತಾ ಕ್ರಮವಾಗಿ ಸವಣೂರಿನಲ್ಲಿ ಇಂದಿನಿಂದ ಮೂರು ದಿನಗಳವರೆಗೆ ಕಲಂ 144ರ ಅಡಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

• ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಗೆ ಮಹಿಳಾ ಮೇಯರ್

ಹುಬ್ಬಳ್ಳಿ, ಏ. 29– ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಯ 24ನೇ ಮೇಯರ್ ಆಗಿ ಜನತಾದಳ (ಎಸ್) ಪಕ್ಷದ ಸರಳಾ ಗುರುನಾಥಸಾ ಭಾಂಡಗೆ ಮತ್ತು ಉಪಮೇಯರ್ ಆಗಿ ಕಾಂಗ್ರೆಸ್ (ಐ) ಪಕ್ಷದ ಅಲ್ತಾಫ ಹುಸೇನ್ ಹಳ್ಳೂರ ಇಂದು ಆಯ್ಕೆಯಾದರು.

ಇದರೊಂದಿಗೆ ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಯ ಇತಿಹಾಸದಲ್ಲಿಯೇ ಮೊದಲ ಮಹಿಳಾ ಮೇಯರ್ ಎಂಬ ಕೀರ್ತಿಗೆ ಸರಳಾ ಭಾಂಡಗೆ ಅವರು ಭಾಜನರಾದರು.

50 ವರ್ಷಗಳ ಹಿಂದೆ

ಬುಧವಾರ, 30-4-1975

• ಕರ್ನಾಟಕಕ್ಕೆ ಬೆಳಗಾವಿ ಮಹಾಜನ್ ವರದಿಗೆ ಒಪ್ಪಿಗೆ

ನವದೆಹಲಿ, ಏ. 29– ಬೆಳಗಾವಿ ಕರ್ನಾಟಕದಲ್ಲೇ ಉಳಿಯಬೇಕೆಂಬುದೂ ಸೇರಿದಂತೆ ಮಹಾಜನ್ ಆಯೋಗದ ಪ್ರಮುಖ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಕಾರ್ಯಗತಗೊಳಿಸಬೇಕೆಂಬ ತೀರ್ಮಾನಕ್ಕೆ ಗೃಹ ಸಚಿವಾಲಯ ಬಂದಿದೆ.

ಆಯೋಗದ ಶಿಫಾರಸುಗಳ ಪರೀಕ್ಷೆಯನ್ನು ಸಚಿವಾಲಯವು ಪೂರ್ಣಗೊಳಿಸಿದೆ.

ಗೃಹ ಸಚಿವ ಕೆ. ಬ್ರಹ್ಮಾನಂದ ರೆಡ್ಡಿ ಅವರು ಈಗಾಗಲೇ ಈ ಸಂಬಂಧದಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರೊಡನೆ ಮಾತುಕತೆ ನಡೆಸಿದ್ದಾರೆ.

ಆಯೋಗದ ಪ್ರಮುಖ ಶಿಫಾರಸುಗಳನ್ನು ತಿರಸ್ಕರಿಸುವುದಕ್ಕೆ ಗಾಂಧಿ ಅವರು ವಿರೋಧವಾಗಿದ್ದಾರೆಂದು ವರದಿಯಾಗಿದೆ. ಹೀಗೆ ಮಾಡಿದರೆ ಅದು ಅಪಾಯಕಾರಕ ಸಂಪ್ರದಾಯ ಹಾಕಿಕೊಟ್ಟಂತೆ ಆಗುವುದು ಎಂಬುದು ಅವರ ಅಭಿಪ್ರಾಯ.

• ಚುನಾವಣೆ ವೆಚ್ಚದ ಮಿತಿ ಏರಿಕೆ ಪ್ರಶ್ನೆ ಪರಿಶೀಲನೆಯಲ್ಲಿ

ನವದೆಹಲಿ, ಏ. 29– ಚುನಾವಣೆ ವೆಚ್ಚದ ಮಿತಿಯನ್ನು ಹೆಚ್ಚಿಸುವ ಪ್ರಶ್ನೆಯನ್ನು ಸರ್ಕಾರವು ರಾಜಕೀಯ ಪಕ್ಷಗಳ ಜತೆ ಸಮಾಲೋಚಿಸಿ, ಪರಿಶೀಲಿಸುತ್ತಿದೆ ಎಂದು ಕಾನೂನು ಸಚಿವ ಎಚ್.ಆರ್. ಗೋಖಲೆ ಇಂದು ಲೋಕಸಭೆಗೆ ತಿಳಿಸಿದರು.

ಅಲ್ಲದೆ ಅಭ್ಯರ್ಥಿಗಳ ವೆಚ್ಚವನ್ನು ತುಂಬಿಕೊಡುವ ಪ್ರಶ್ನೆಯನ್ನೂ ಸರ್ಕಾರ ಪರಿಶೀಲಿಸುತ್ತಿದೆ ಎಂದೂ ಅವರು ಸ್ವರಣ್ ಸಿಂಗ್ ಅವರ ಪ್ರಶ್ನೆಗೆ ಉತ್ತರಿಸಿದರು.

ರಾಜ್ಯದ ಮೂರೂ ಪ್ರಮುಖ ಪಕ್ಷಗಳು ಅಸ್ಥಿರತೆಯನ್ನು ಎದುರಿಸುತ್ತಿವೆ

ಪಕ್ಷಗಳ ಒಳಬೇಗುದಿಗೆ ಕೊನೆಯಿಲ್ಲ

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಕರ್ನಾಟಕದ ಪ್ರಮುಖ ರಾಜಕೀಯ ಪಕ್ಷಗಳು ಗಂಭೀರ ಸ್ವರೂಪದ ಆಂತರಿಕ ದ್ವಂದ್ವಗಳನ್ನು ಎದುರಿಸುತ್ತಿವೆ. ರಾಜಕೀಯ ನಾಯಕರು ತಮ್ಮದೇ ಪಕ್ಷದೊಳಗೆ ಎದುರಿಸುವ ರಾಜಕೀಯ ಸ್ಪರ್ಧೆಯ ಪರಿಣಾಮ ಇದು. ವೈಯಕ್ತಿಕ ಮಟ್ಟದಲ್ಲಿ ರಾಜಕೀಯ ಹಗೆ ತೀರಿಸಿಕೊಳ್ಳುವುದು, ಅವಕಾಶಗಳನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳುವುದು, ವೈಯಕ್ತಿಕ ಲಾಭ ಮಾಡಿಕೊಳ್ಳುವುದು... ಇವೆಲ್ಲ ಸಾಮಾನ್ಯವಾಗಿ ಪಕ್ಷದ ಒಗ್ಗಟ್ಟಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಇವೆಲ್ಲ ಕರ್ನಾಟಕದ ಎಲ್ಲ ಪ್ರಮುಖ ಪಕ್ಷಗಳ ಪಾಲಿಗೆ ಶಾಪವಾಗಿ ಪರಿಣಮಿಸಿರುವಂತಿವೆ.

ಕಾಂಗ್ರೆಸ್ಸಿನ ಸ್ಥಿತಿಯನ್ನು ನೋಡೋಣ. ಪಕ್ಷದ ಹೈಕಮಾಂಡ್ ಗಟ್ಟಿಯಾಗಿ ಮಾತನಾಡುತ್ತಿಲ್ಲವಾದ ಕಾರಣಕ್ಕೆ, ರಾಜ್ಯ ಘಟಕಗಳಲ್ಲಿ ಭಿನ್ನಾಭಿಪ್ರಾಯ ಹೆಚ್ಚಾಗಿದೆ, ಭಿನ್ನಾಭಿಪ್ರಾಯಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಲಾಗುತ್ತಿದೆ. ಇದಕ್ಕೆ ಕರ್ನಾಟಕದ ಕಾಂಗ್ರೆಸ್ ಕೂಡ ಹೊರತಲ್ಲ.

ರಾಜ್ಯದಲ್ಲಿ ಸರ್ಕಾರ ರಚಿಸಿದ ನಂತರದಲ್ಲಿ ಎಲ್ಲರ ಗಮನ ಇದ್ದದ್ದು ಸಚಿವ ಸ್ಥಾನ ಮತ್ತು ಖಾತೆಗಳ ಮೇಲೆ. ಹೀಗಾಗಿ, ಪಕ್ಷದ ಕೆಲಸಗಳು ಆದ್ಯತೆಯ ಪಟ್ಟಿಯಲ್ಲಿ ಕೆಳಗಿನ ಸ್ಥಾನ ಪಡೆದವು. ಸಚಿವ ಸ್ಥಾನಗಳ ಮೇಲೆ ಕಣ್ಣಿಟ್ಟವರ ಸಂಖ್ಯೆ ಹೆಚ್ಚಿದ್ದ ಕಾರಣದಿಂದಾಗಿ, ಪಕ್ಷದಲ್ಲಿ ಅತೃಪ್ತಿ, ಗೊಣಗಾಟ ಮತ್ತು ಗುಂಪುಗಾರಿಕೆ ಸಹಜವೇ ಆಗಿತ್ತು. ರಾಜ್ಯದಲ್ಲಿ ಸರ್ಕಾರ ರಚಿಸಿದ ಒಂದೇ ವರ್ಷದಲ್ಲಿ ಲೋಕಸಭಾ ಚುನಾವಣೆ ಇದ್ದದ್ದು, ಭಿನ್ನ ಗುಂಪುಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಪಕ್ಕಕ್ಕೆ ಇರಿಸಬೇಕು, ಪಕ್ಷವು ಒಂದಾಗಿ ಚುನಾವಣೆ ಎದುರಿಸಬೇಕು ಎಂಬ ಮನವಿ ಮಾಡುವುದಕ್ಕೆ ಒಳ್ಳೆಯ ಕಾರಣವಾಗಿ ಒದಗಿಬಂತು. ಲೋಕಸಭಾ ಚುನಾವಣೆಯ ಫಲಿತಾಂಶವು ರಾಜ್ಯದ ಕಾಂಗ್ರೆಸ್ ಪಾಲಿಗೆ ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲವಾದರೂ, ಅದು 2019ರಂತೆ ಕಳಪೆ ಆಗಿರಲಿಲ್ಲ. ಹೀಗಿದ್ದರೂ ಪರಸ್ಪರ ದೂಷಣೆಗಳು ಆರಂಭವಾದವು.

ಸಾಧನೆ ಚೆನ್ನಾಗಿಲ್ಲದ ಸಚಿವರು ಹೊಸಬರಿಗೆ ಅವಕಾಶ ಮಾಡಿಕೊಡಬೇಕು ಎಂಬ ಮಾತುಗಳು ಆರಂಭವಾದವು. ಇನ್ನೊಂದು ಕಡೆ, ಹಲವು ಉಪಮುಖ್ಯಮಂತ್ರಿಗಳು ಬೇಕು, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬೇರೊಬ್ಬರು ಬರಬೇಕು ಎಂಬ ಆಗ್ರಹಗಳು ಬಂದವು. ಈ ಎಲ್ಲ ಆಗ್ರಹಗಳನ್ನು ಮಂಡಿಸಿದವರು ತಮ್ಮ ನಾಯಕನ ಪರವಾಗಿ ಮಾತನಾಡುತ್ತಿದ್ದರು. ತಮ್ಮ ನಾಯಕನ ವಿರೋಧಿಗಳ ಮೇಲೆ ವಾಗ್ದಾಳಿ ನಡೆಸಿದರೆ ತಮಗೆ ರಾಜಕೀಯವಾಗಿ ಏನಾದರೂ ಪ್ರಯೋಜನ ಆದೀತು ಎಂಬ ನಿರೀಕ್ಷೆಯಲ್ಲಿ ಅವರೆಲ್ಲ ತೀಕ್ಷ್ಣವಾಗಿ ಮಾತನಾಡುತ್ತಿದ್ದರು.

ಪರಸ್ಪರ ಸಂಬಂಧವಿರುವ ಎರಡು ಬೆಳವಣಿಗೆಗಳು ಈಚಿನ ದಿನಗಳಲ್ಲಿ ಕಾಣಿಸಿಕೊಂಡಿವೆ. ಮೊದಲನೆಯದು, ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆ ಆಗುವ ಸಂದರ್ಭದಲ್ಲಿ ಒಂದು ಒಪ್ಪಂದ ಆಗಿದೆ, ಅರ್ಧ ಅವಧಿ (ಅಥವಾ ಕೆಲವರ ಪ್ರಕಾರ ಲೋಕಸಭಾ ಚುನಾವಣೆ ನಂತರ) ಸರ್ಕಾರದ ಮುಖ್ಯಸ್ಥರ ಬದಲಾವಣೆ ಆಗುತ್ತದೆ, ಉಪಮುಖ್ಯಮಂತ್ರಿ ಆಗಿರುವವರು ಮುಖ್ಯಮಂತ್ರಿ ಆಗುತ್ತಾರೆ ಎಂಬ ಮಾತುಗಳು ಗಟ್ಟಿಯಾಗಿ ಕೇಳಿಬಂದವು. ಮುಖ್ಯಮಂತ್ರಿಯ ಬೆಂಬಲಕ್ಕೆ ಇರುವ ಹಿರಿಯ ಮುಖಂಡರು ಹಾಗೂ ಉಪಮುಖ್ಯಮಂತ್ರಿಯವರ ಬೆಂಬಲಕ್ಕೆ ನಿಂತ ಹಿರಿಯ ಮುಖಂಡರ ನಡುವೆ ಪ್ರಚ್ಛನ್ನ ಸಮರವೊಂದು ನಡೆದಿತ್ತು. ಈ ನಡುವೆ ಆಡಳಿತವು ಆದ್ಯತೆ ಪಡೆಯಲಿಲ್ಲ.

ಇದಕ್ಕೆ ಸಂಬಂಧಿಸಿದ ಒಂದು ಚರ್ಚೆ ಜಾತಿ ಜನಗಣತಿಗೆ ಸಂಬಂಧಿಸಿದ್ದು. ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಈ ಹಿಂದೆ ನಡೆದ ಜಾತಿ ಜನಗಣತಿಯ ವರದಿಯನ್ನು ದಶಕದಿಂದ ಶೈತ್ಯಾಗಾರದಲ್ಲಿ ಇರಿಸಲಾಗಿತ್ತು. ಮುಖ್ಯಮಂತ್ರಿಯವರು ಇದನ್ನು ಎರಡು ದೃಷ್ಟಿಕೋನದಿಂದ ಮುನ್ನೆಲೆಗೆ ತಂದರು. ಮೊದಲನೆಯದು, ಇದು ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಇಷ್ಟವಾದ ವಿಚಾರ. ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡುವ ಪಕ್ಷದ ನಿಲುವಿಗೆ ಅನುಗುಣವಾಗಿ ಮುಖ್ಯಮಂತ್ರಿಯವರು ಇದನ್ನು ಮತ್ತೆ ಚರ್ಚೆಯ ಕೇಂದ್ರಕ್ಕೆ ತಂದರು. ಎರಡನೆಯದು, ಒಬಿಸಿ ಸಮುದಾಯಗಳಲ್ಲಿ ಪ್ರಭಾವಿ ಅಲ್ಲದ ಸಮುದಾಯಗಳ, ಪರಿಶಿಷ್ಟ ಜಾತಿಗಳ ಮತ್ತು ಮುಸ್ಲಿಮರ ಸಶಕ್ತೀಕರಣಕ್ಕೆ ವರದಿಯು ಒತ್ತು ನೀಡಿರುವಂತಿದೆ. ತಮ್ಮನ್ನು 'ಅಹಿಂದ' ನಾಯಕ ಎಂದು ಬಿಂಬಿಸಿಕೊಂಡಿರುವ ಮುಖ್ಯಮಂತ್ರಿಯವರ ನಿಲುವುಗಳಿಗೆ ಇದು ಪೂರಕವಾಗಿದೆ. ತಮ್ಮನ್ನು ಸುತ್ತುವರಿದಂತಿರುವ ಹಲವು ವಿವಾದಗಳ ಬಿಸಿ ತಗ್ಗಿಸುವ ಯತ್ನ ನಡೆಸುವುದಕ್ಕೆ ಈ ವರದಿಯು ಒಂದು ಅವಕಾಶ ನೀಡುತ್ತದೆ.

ಜಾತಿ ಜನಗಣತಿಗೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ಲಭ್ಯವಿರುವ ದತ್ತಾಂಶವನ್ನು ಪರಿಶೀಲಿಸಿದರೆ, ಜಾತಿ ಜನಗಣತಿಯು ರಾಜ್ಯದ ಎರಡು ಪ್ರಮುಖ ಪ್ರಭಾವಿ ಸಮುದಾಯಗಳ– ಒಕ್ಕಲಿಗ ಮತ್ತು ಲಿಂಗಾಯತ– ಸಂಖ್ಯೆಯನ್ನು ಕಡಿಮೆ ತೋರಿಸಿರುವಂತಿದೆ. 1957ರಿಂದಲೂ ಈ ಎರಡು ಸಮುದಾಯಗಳ ಶಾಸಕರ ಸಂಖ್ಯೆಯು ರಾಜ್ಯದಲ್ಲಿ ಇತರ ಸಮುದಾಯಗಳ ಶಾಸಕರ ಸಂಖ್ಯೆಗಿಂತ ಹೆಚ್ಚಾಗಿಯೇ ಇದೆ. ಹಾಲಿ ವಿಧಾನ ಸಭೆಯಲ್ಲಿಯೂ ಈ ಎರಡು ಸಮುದಾಯಗಳಿಗೆ ಸೇರಿದ ಶಾಸಕರ ಸಂಖ್ಯೆಯು ಇತರ ಸಮುದಾಯಗಳ ಶಾಸಕರ ಸಂಖ್ಯೆಗಿಂತ ಹೆಚ್ಚಾಗಿಯೇ ಇದೆ. ಈ ಮಾತು ಮೂರೂ ಪ್ರಮುಖ ರಾಜಕೀಯ ಪಕ್ಷಗಳಿಗೆ ಅನ್ವಯವಾಗುವಂತೆ ಇದೆ.

ಜಾತಿ ಜನಗಣತಿಯ ವರದಿಯನ್ನು ಸಂಪುಟದಲ್ಲಿ ಚರ್ಚೆಗೆ ತರಲು ಮುಖ್ಯಮಂತ್ರಿ ನಡೆಸಿದ ಯತ್ನದ ಫಲವಾಗಿ, ಪ್ರಭಾವಿ ಜಾತಿಗಳ ಶಾಸಕರಿಂದ ತಕ್ಷಣವೇ ಪ್ರತಿಕ್ರಿಯೆ ಎದುರಾಯಿತು. ಅವರು ಜಾತಿ ಜನಗಣತಿ ವರದಿಯಲ್ಲಿ ಉಲ್ಲೇಖವಾಗಿರುವ ಅಂಕಿ–ಅಂಶಗಳನ್ನು ಪ್ರಶ್ನಿಸಿದರು, ಸಮೀಕ್ಷೆಯು ಎಷ್ಟರಮಟ್ಟಿಗೆ ಸರಿಯಾಗಿ ನಡೆದಿದೆ ಎಂಬ ಪ್ರಶ್ನೆ ಎತ್ತಿದರು, ಸಮೀಕ್ಷೆಯು ನಡೆದು ಒಂದು ದಶಕ ಕಳೆದಿದೆ ಎಂಬ ವಿಷಯಕ್ಕೆ ಆದ್ಯತೆ ಕೊಟ್ಟರು. ಈ ಪ್ರಕ್ರಿಯೆಯಲ್ಲಿ ಪಕ್ಷದಲ್ಲಿನ ಒಡಕುಗಳು ಮತ್ತೆ ಬಹಿರಂಗವಾಗಿವೆ.

ಕರ್ನಾಟಕದ ಬಿಜೆಪಿಯಲ್ಲಿ ಅದರದೇ ಆದ ಸಮಸ್ಯೆಗಳು ಇವೆ. ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಬೆಂಬಲಿಗರನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಲು ಕೂಡ ಮನಸ್ಸು ಮಾಡದ ಕೆಲವರು ಭಿನ್ನ ದನಿಗಳಲ್ಲಿ ಮಾತನಾಡುತ್ತಿದ್ದಾರೆ. ವಿಧಾನಸಭೆಯಲ್ಲಿಯೂ ಬಿಜೆಪಿಯು ಒಗ್ಗಟ್ಟಿನ ದನಿಯಲ್ಲಿ ಮಾತನಾಡಿದಂತೆ ಕಾಣಲಿಲ್ಲ, ಗುಂಪುಗಾರಿಕೆಯು ಎದ್ದು ಕಾಣುತ್ತಿತ್ತು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಿದ ಕ್ರಮವು ಬಹಳ ತಡವಾಗಿ ಬಂತು, ಅವರನ್ನು ಉಚ್ಚಾಟಿಸುವ ವೇಳೆಗಾಗಲೇ ಪಕ್ಷಕ್ಕೆ ಬಹಳಷ್ಟು ಹಾನಿ ಆಗಿಹೋಗಿತ್ತು.

ಬಿಜೆಪಿಯ ಒಳಗಿನ ಜಗಳವು ಸರ್ಕಾರಕ್ಕೆ ಸವಾಲು ಹಾಕುವ ಶಕ್ತಿಯನ್ನು ಉಡುಗಿಸಿದೆ. ಬಿಜೆಪಿಯ ವರಿಷ್ಠರು ರಾಷ್ಟ್ರಮಟ್ಟದ ವಿಚಾರಗಳ ಬಗ್ಗೆ ಹೆಚ್ಚು ಗಮನ ಹರಿಸಿರುವಂತೆ ಕಾಣುತ್ತಿದೆ, ಅವರು ರಾಜ್ಯ ಘಟಕದಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಗಮನ ನೀಡಲಿಲ್ಲ.

ಜೆಡಿಎಸ್ ಪಕ್ಷವು ಕೇಂದ್ರ ಸರ್ಕಾರದಲ್ಲಿ ತಾನು ಹೊಂದಿರುವ ಪಾತ್ರವನ್ನು ಅನುಭವಿಸುವುದರಲ್ಲಿ ಖುಷಿ ಕಾಣುತ್ತಿದೆ. ಆದರೆ ಇದಕ್ಕಾಗಿ ಪಕ್ಷವು ಒಂದಿಷ್ಟು ಬೆಲೆ ತೆರಬೇಕಾಗಿ ಬಂದಿದೆ. ಅಂದರೆ, ರಾಜ್ಯ ಮಟ್ಟದಲ್ಲಿ ಪಕ್ಷವನ್ನು ನಿರ್ಲಕ್ಷಿಸಲಾಗಿದೆ, ಪಕ್ಷದ ಬೆಂಬಲಿಗರ ಸಂಖ್ಯೆ ಕಡಿಮೆ ಆಗಿದೆ. ಮುಂದಿನ ವಿಧಾನಸಭಾ ಚುನಾವಣೆ ಹತ್ತಿರವಾಗುವ ಹೊತ್ತಿನಲ್ಲಿಯೂ ಬಿಜೆಪಿ–ಜೆಡಿಎಸ್ ಮೈತ್ರಿಯು ಮುಂದುವರಿದಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಜೆಡಿಎಸ್ ನಾಯಕತ್ವವು ಪಕ್ಷದ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಸಾಕಷ್ಟು ಕೆಲಸ ಮಾಡುತ್ತಿಲ್ಲ ಎಂಬ ಭಾವನೆ ಹಲವರಲ್ಲಿದೆ.

ರಾಜ್ಯದ ಮೂರೂ ಪ್ರಮುಖ ಪಕ್ಷಗಳು ಅಸ್ಥಿರತೆಯನ್ನು ಎದುರಿಸುತ್ತಿವೆ. ಆದರೆ ಹೀಗಾಗಿರುವುದಕ್ಕೆ ಮೂರೂ ಪಕ್ಷಗಳಲ್ಲಿನ ಕಾರಣಗಳು ಭಿನ್ನವಾಗಿವೆ. ತಕ್ಷಣಕ್ಕೆ ಯಾವುದೇ ಚುನಾವಣೆ ಇಲ್ಲವಾಗಿರುವ ಕಾರಣ ಪಕ್ಷದ ಸಂಘಟನೆಯ ಬಗ್ಗೆ ಹೆಚ್ಚಿನ ಗಮನವನ್ನು ಯಾರೂ ನೀಡುತ್ತಿಲ್ಲ. ಸಂಘಟನೆಯ ಕಡೆ ಗಮನ ಹರಿಯಬೇಕು ಎಂದಾದರೆ ಬಹುಶಃ ಇನ್ನೊಂದು ಚುನಾವಣೆಯೇ ಎದುರಾಗಬೇಕೇನೊ...

ಚುರುಮುರಿ



ನಾನು ಸಿ.ಎಂ ಆದ್ರೆ...!

• ಚಂದ್ರಕಾಂತ ವಡ್ಡು

ಮಡದಿ ಏರ್ಪಡಿಸಿದ್ದ ಸಮ್ಮರ್ ಕ್ಯಾಂಪ್‌ನಲ್ಲಿ ತಿಂಗಳೇಶ ಮಕ್ಕಳ ಸಂದರ್ಶನಕ್ಕೆ ಮುಂದಾದ.

'ಕ್ಯಾಂಪಿಗೆ ದೊಡ್ಡವರ ಮಕ್ಕಳೇ ಹೆಚ್ಚಾಗಿ ಬಂದಿದ್ದಾರೆ. ನೀವು ಕೆಪಿಎಸ್ಸಿಯವರ ಥರ ತಪ್ಪುತಪ್ಪು ಪ್ರಶ್ನೆ ಕೇಳಿ ಮರ್ಯಾದೆ ತೆಗೀಬ್ಯಾಡ್ರಿ' ಮಡದಿಯ ಎಚ್ಚರಿಕೆ.

'ಮಕ್ಕಳೇನು ನನ್ನ ಪ್ರಶ್ನೆಗಳಿಗೆ ಉತ್ತರಿಸಿ ಜಿಲ್ಲಾಧಿಕಾರಿಗಳಾಗಬೇಕಿಲ್ಲ. ಸರಳ ಪ್ರಶ್ನೆಗಳನ್ನೇ ಕೇಳ್ತೀನಿ'.

'ಅಯ್ಯೋ... ನಿಮ್ಮ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿ ಡಿ.ಸಿನೂ ಆಗಬೇಕಿಲ್ಲ, ತಪ್ಪಾಗಿ ಉತ್ತರಿಸಿ ಶಾಸಕರೂ ಆಗೋದಿಲ್ಲ, ಅರ್ಧಂಬರ್ಧ ಉತ್ತರಿಸಿ ಸಾಹಿತಿನೂ ಆಗಲಿಕ್ಕಿಲ್ಲ ಬಿಡಿ'.

'ಆಯ್ತಮ್ಮಾ, ವಿಧಾನಸಭೆ ಪ್ರಶ್ನೋತ್ತರ ಥರ ಒಬ್ಬರು ಕೇಳಿದಂತೆ, ಇನ್ನೊಬ್ಬರು ಹೇಳಿದಂತೆ ಮಾಡಿ ಮುಗಿಸುತ್ತೇವೆ, ಸರೀನಾ?'

'ಗಲಾಟೆ ಮಾಡಿದರು ಅಂತ ಖಾದರ ಸಾಹೇಬರ ಥರ ಹುಡುಗರನ್ನು ಹೊರಗೆ ಹಾಕೀರಿ, ಜೋಕೆ' ಎಚ್ಚರಿಕೆ ಜೊತೆ ತಿಂಗಳೇಶನನ್ನು ಕ್ಯಾಂಪ್ ಒಳಗೆ ಬಿಟ್ಟಳು.

'ಮಕ್ಕಳೇ ನಿಮಗೆ ಗೊತ್ತಲ್ಲ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಈಗ ಒಬ್ಬೊಬ್ಬರಾಗಿ ಹೇಳಿ, ದೊಡ್ಡವರಾದ ಮೇಲೆ ನೀವು ಏನಾಗ್ತೀರಿ?'

'ಸರ..., ನಾನು ಸಾಹಿತಿ ಆಗ್ತೀನ್ರೀ' ಹುಡುಗನ ಕಣ್ಣುಗಳಲ್ಲಿ ಕನಸುಗಳು.

'ಓಹ್! ಗುಡ್, ಯಾವುದಾದರೂ ಸಾಹಿತ್ಯ ಪುಸ್ತಕ ಓದೀಯೇನಪಾ?'

'ಹ್ಞೂಂ..., 'ಕಾನೂನು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿ ಓದೇನ್ರೀ ಸರ'. ಆನಂದ ಲಾಯರ್ ಮಗ ಅನ್ನೋದು ಖಾತರಿ ಆಯ್ತು. 'ಸಾರ್, ನಾನು ವಿ.ಸಿ ಆಗ್ತೀನಿ. ಆನಂದನಿಗೆ ನಾಡೋಜ ಪದವಿ ಕೊಡುಸ್ತೀನಿ' ಗುತ್ತಿಗೆದಾರನ ಮಗ ಆಫರ್ ಕೊಟ್ಟ. 'ನಾನು ಐಪಿಎಸ್ ಮಾಡಿ ಎಸ್.ಪಿ ಆಗ್ತೀನಿ' ಮೋಹನ ಸೆಟೆದು ನಿಂತ. ಪಕ್ಕದಲ್ಲಿದ್ದ ಯೋಗೀಶ, 'ನಾನು ಆದ್ರೆ ಮುಖ್ಯಮಂತ್ರಿನೇ ಆಗೋದು' ಎಂದು ತೋಳೇರಿಸಿದ.

'ಮುಖ್ಯಮಂತ್ರಿ ಆಗಿ ಏನು ಮಾಡ್ತೀಯ?'

'ಎಸ್.ಪಿ ಆಗುವ ಮೋಹನನ ಕಪಾಳಕ್ಕೆ ಬಿಗೀತೀನಿ'. ಮುಂದಿನ ಪ್ರಜೆಯ ಮುಂಗಡ ಕನಸಿಗೆ ತಿಂಗಳೇಶ ಬೆಚ್ಚಿಬಿದ್ದ!

ಸಂಗತ

ಬಸವಣ್ಣ ಎಂಬ ಸಾರ್ವಜನಿಕ ಸ್ವಗತ

ಬಸವಣ್ಣನ ತಾತ್ವಿಕತೆಯಲ್ಲಿ ಹಲವು ಒಳಸುಳಿಗಳು ಇವೆ

• ಎಚ್.ಎನ್. ಮುರಳೀಧರ

ಬಸವಣ್ಣನಿಗಿಂತಲೂ ಹೆಚ್ಚು ಸಾರ್ವಜನಿಕವಾದ ವ್ಯಕ್ತಿಯನ್ನಾಗಲಿ, ವ್ಯಕ್ತಿತ್ವವನ್ನಾಗಲಿ ಕಲ್ಪಿಸಿಕೊಳ್ಳುವುದು ಕಷ್ಟವೇ ಸರಿ. ಜನರನ್ನು ಬಿಟ್ಟು ಆತನಿಲ್ಲ, ಆತನನ್ನು ಬಿಟ್ಟು ಜನರಿಲ್ಲ. ಒಬ್ಬ ವ್ಯಕ್ತಿ ಹೀಗಾದಾಗ ಆತನ ಮಾತು– ಮನಸ್ಸು ಕೂಡ– ತನ್ನೆಲ್ಲ ಅರ್ಥಛಾಯೆಗಳಲ್ಲಿ ಸಾರ್ವಜನಿಕವಾಗದೆ ಗತ್ಯಂತರವೇ ಇಲ್ಲ. ಸಾರ್ವಜನಿಕತೆಗೆ ಒಂದು ಲೋಲುಪಗುಣ ಇದೆ. ಹೀಗಾಗಿ, ಆ ಮಾತು ಕೂಡ ಈ ಲೋಲುಪತೆಯ ಲೇಪನದಿಂದ ಪಾರಾಗುವುದು ಕಷ್ಟ. ಇದರ 'ಸಾರ್ವಜನಿಕ' ಪರಿಣಾಮಗಳನ್ನು ವಿವರಿಸಬೇಕಾದ ಅಗತ್ಯವಿಲ್ಲ.

'ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ, ಕುಂದು ಹೆಚ್ಚ ನುಡಿವೆ' ಎಂಬ ಮಾತು ಬಸವಣ್ಣನಲ್ಲೇ ಬಂದಿದೆ. ಇದು ತನ್ನ ಮಾತನ್ನೂ ಅಂತೆಯೇ ಮನವನ್ನೂ ತಾನೇ ನೋಡಿಕೊಂಡು ಆಡಿದ ಮಾತು. ಹೀಗೆ ಮಾತು ಬೇರೊಂದು ಬಗೆಯದಾಗ ಬೇಕಾದರೆ ಸಾರ್ವಜನಿಕವೆಂಬುದರ ಪರಿಭಾವನೆಯ ಸ್ವರೂಪವೂ ಬೇರೊಂದೇ ಆಗಬೇಕಾಗುತ್ತದೆ. ಬಸವಣ್ಣನಲ್ಲಿ ಸಾರ್ವಜನಿಕತೆ, ವೈಯಕ್ತಿಕತೆಗಳೆರಡೂ ಬೇರೊಂದು ನೆಲೆಯಲ್ಲಿ ಕಟ್ಟಲ್ಪಡುತ್ತವೆ. ಇದರ ವಿಸ್ತರಣೆ ಎಂಬಂತೆ ಮಾತಿನ ಕಟ್ಟಡವೂ ವಿಶಿಷ್ಟವೇ ಆಗುತ್ತದೆ. ಇದನ್ನು ಹೀಗೆ ವಿವರಿಸಿಕೊಳ್ಳಲು ಪ್ರಯತ್ನಿಸಬಹುದು.

ಬಸವಣ್ಣನಲ್ಲಿ 'ಕೂಡಲಸಂಗಮ' ಎನ್ನುವುದು ಎಲ್ಲ ಅರ್ಥಗ್ರಹಿಕೆಗಳ, ಎಲ್ಲ ಮೌಲ್ಯನಿರ್ಣಯಗಳ, ಅಷ್ಟೇಕೆ ಎಲ್ಲ 'ಕಟ್ಟುವಿಕೆ'ಗಳ ಮೂಲಭೂತ ಮಾನದಂಡ. ಸಕಲ ಅಸ್ತಿತ್ವಗಳ ಮೂಲಸೆಲೆಯೂ ತಳಹದಿಯೂ ಆಗಿರುವ ಜಂಗಮವೆನ್ನುವಂಥದ್ದು ಕೂಡ ಕೂಡಲಸಂಗಮದ ಆಧಾರದ ಮೇಲೆಯೇ ನಿಂತಿರುವಂಥದ್ದು. ಪ್ರಾರಂಭಿಕವಾಗಿ ಕೂಡಲಸಂಗಮದೇವನು 'ಒಡಲಿಲ್ಲದ ನಿರಾಳ ಕರ್ತೃ'ವಾದವನು. ಈತನು ತನ್ನನ್ನು ತಾನು ಪ್ರಕಟಿಸಿಕೊಳ್ಳುವುದೇ 'ಜಂಗಮಮುಖ ಲಿಂಗ'ವಾಗುವುದರ ಮೂಲಕ. ಆದರೆ ಈ ಪ್ರಕಟಗೊಳ್ಳುವಿಕೆ ಎನ್ನುವುದು ಕೂಡ ವ್ಯಕ್ತಿನಿರಪೇಕ್ಷ ನೆಲೆಯದಲ್ಲ. ಅದು ವಾಸ್ತವಗೊಂಡು ಜೀವತಳೆಯುವುದೇ ಒಂದು ವಿಶಿಷ್ಟವಾದ ವ್ಯಕ್ತಿಗತ ನೆಲೆಯಲ್ಲಿ.

ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ?
ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೇ ರೂಪಾದೆ.
ಇನ್ನು ಜಂಗಮವೆ ಲಿಂಗವೆಂದು ನಂಬಿದೆ
ಕೂಡಲಸಂಗಮದೇವ.

ಇಲ್ಲಿ ನೀನು–ನಾನುಗಳಿವೆ. ಆದರೆ ಇವೆರಡೂ ಪರಸ್ಪರ ಪೃಥಕ್ಕಾದವುಗಳಲ್ಲ. ನಿನ್ನೊಳಗೆ ನಾನಿದೆ, ನನ್ನೊಳಗೆ ನೀನಿದೆ. ಅರಿಯದ ಮುನ್ನ ಇಲ್ಲದಂತಿದ್ದ 'ನೀನು' ತೋರುವ ಹಂಬಲದಿಂದ ರೂಪವಾಗುತ್ತದೆ. ರೂಪವಾಗುವುದೆಂದರೆ ಜಂಗಮವಾಗುವುದು. ಜಂಗಮವಾಗುವುದರ ಮೂಲಕವೇ ಲಿಂಗವಾದರೂ ತನ್ನತನವನ್ನು ವಾಸ್ತವಗೊಳಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಜಂಗಮವೂ ಲಿಂಗವೂ ತನ್ನತನದ ಅನುಸಂಧಾನದ ವಿಭಿನ್ನ ಹಾಗೂ ಅಭಿನ್ನ ಆಯಾಮಗಳೇ ಆಗಿವೆ.

ಜಂಗಮದರ್ಶನಕ್ಕೆ ಸಂಬಂಧಿಸಿದಂತೆಯೇ ಬಸವಣ್ಣನ ತಾತ್ವಿಕತೆಯಲ್ಲಿ ಹಲವು ಒಳಸುಳಿಗಳಿವೆ. ಲಿಂಗವನ್ನು ಜಂಗಮವಾಗಿಯೇ ಸಂಧಿಸಬೇಕಾದ ಅನಿವಾರ್ಯವನ್ನು ಅದು ಒಂದು ತಾತ್ವಿಕ ಅಗತ್ಯವನ್ನಾಗಿ ಮಾಡುತ್ತದೆ. ಅದಕ್ಕೆ ತಕ್ಕಂತೆ ಲಿಂಗವೂ ಪ್ರತ್ಯಕ್ಷದರ್ಶನದಿಂದ ತನ್ನನ್ನು ಹೊರತುಪಡಿಸಿಕೊಳ್ಳಲು ಏನೆಲ್ಲವನ್ನೂ ಮಾಡಲು ಸಿದ್ಧವಿರುತ್ತದೆ. ಇಷ್ಟಲ್ಲದೆ 'ಸಂಗಮದೇವ'ನನ್ನು ನೇರವಾಗಿ ಸಂಧಿಸುವೆನೆನ್ನುವುದೇ ಬಸವಣ್ಣನ ಪ್ರಕಾರ 'ಅಹಂಕಾರವ ಮಾಡಿ'ದಂತೆ. ಏಕೆಂದರೆ ಸಂಗನು 'ಕಂಡಹರೆಂದು ಕಣ್ಗೆ, ಕೇಳಿಹರೆಂದು ಕಿವಿಗೆ, ಮುಟ್ಟಿಹರೆಂದು ಕೈಗೆ, ನೆನೆದಹರೆಂದು ಮನಕ್ಕೆ...' ಮರೆಮಾಡಿಕೊಂಡುಬಿಟ್ಟಿದ್ದಾನೆ. ಇಷ್ಟಾದರೂ 'ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ'. ಆದ್ದರಿಂದಲೇ ಬಸವಣ್ಣನಲ್ಲಿ ಲಿಂಗದ ಅಗತ್ಯಗಳೆಲ್ಲವೂ ಜಂಗಮದ ಸಮರ್ಪಣೆಯಾಗಿ ಪರಿವರ್ತಿತವಾಗುತ್ತವೆ. ಹೀಗಾಗಿಯೇ,

ನಯನದಾಹಾರವ ಜಂಗಮವ ನೋಡಿಸುವೆ
ಶ್ರೋತೃದಾಹಾರವ ಜಂಗಮವ ಕೇಳಿಸುವೆ
ಘ್ರಾಣದಾಹಾರವ ಜಂಗಮವ ವಾಸಿಸುವೆ
ಜಿಹ್ವೆಯಾಹಾರವ ಜಂಗಮವನೂಡಿಸುವೆ
ತ್ವಚದಾಹಾರವ ಜಂಗಮಕ್ಕೆ ಹೊದ್ದಿಸುವೆ...

ಲಿಂಗಜಂಗಮಗಳ ಸಮೀಕರಣದ ಮೂಲಕ ಅಂಗದ ವಿಕಾಸವು ಬಸವಣ್ಣನಲ್ಲಿ ಅತ್ಯಂತ ಸಹಜವಾದ ಮಾನವೀಕರಣದ ಸಂಗತಿಯಾಗಿರುವುದು ಒಂದು ದೊಡ್ಡ ವಿಸ್ಮಯವೆಂದೇ ಹೇಳಬೇಕಾಗಿದೆ.

ಇದರ ಮುಂದುವರಿಕೆಯಾಗಿ ಗಮನಿಸಿಕೊಳ್ಳಬೇಕಾದ ಸಂಗತಿಯೊಂದಿದೆ. ಅದೆಂದರೆ ಸಾಧಾರಣ ವ್ಯಾವಹಾರಿಕ ನೆಲೆಯಲ್ಲಿ, ಅರ್ಥಾತ್ ನಿರ್ದಿಷ್ಟಪಡಿಸಿ ಹೇಳುವುದಾದರೆ ಸಾಮಾನ್ಯ 'ಸಾರ್ವಜನಿಕ'ದಲ್ಲಿ, ನಾವು ಯಾವುದನ್ನೆಲ್ಲ ನುಡಿಯ ವಿಭಿನ್ನ ವರಸೆಗಳೆಂದು ಗುರುತಿಸುತ್ತೇವೆಯೋ ಅವೆಲ್ಲ ಇಲ್ಲಿ ಒಂದು ಬಗೆಯ ವಿಶಿಷ್ಟ ವಿಲೀನೀಕರಣಕ್ಕೆ ಒಳಪಡುತ್ತವೆ. ನಿದರ್ಶನಕ್ಕೆ ನೋಡುವುದಾದರೆ, ಇಲ್ಲಿ 'ಹೇಳುವುದು' ಬೇರೆಯಲ್ಲ, 'ಹೇಳಿಕೊಳ್ಳುವುದು' ಬೇರೆಯಲ್ಲ. ಆದ್ದರಿಂದಲೇ ಬಸವಣ್ಣನಲ್ಲಿ ಮೇಲ್ನೋಟಕ್ಕೆ 'ಪರಗತ'ಗಳೆಂದು ತೋರುವಂಥ ನುಡಿಗಳೂ ಸ್ವರೂಪತಃ 'ಸ್ವಗತ'ಗಳೇ ಆಗಿರುತ್ತವೆ. ಕೂಡಲಸಂಗಮದೇವನೊಂದಿಗಿನ ಸಂವಾದಾತ್ಮಕ ಮಾತುಕತೆಗಳಲ್ಲಿಯೂ ತನ್ನನ್ನು ತಾನು ಉದ್ದೇಶಿಸಿಕೊಳ್ಳುವ ಗುಣವೇ ತೋರುತ್ತದೆ. 'ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು' ಎಂಬ ಮಾತಿನಲ್ಲಿಯೂ ಅನವರತವೂ ತನ್ನ ನುಡಿಯನ್ನು ತಾನೇ ಪರೀಕ್ಷಿಸಿಕೊಳ್ಳುವ ನಿಕಷವೊಂದರ ಸ್ಥಾಪನೆಯಾಗುತ್ತದೆ. ಇಷ್ಟಲ್ಲದೆ ಇದು ಭಕ್ತನ ನುಡಿಯೂ ಹೌದು, ಭಕ್ತಿಯ ನುಡಿಯೂ ಹೌದು. ಬಸವಣ್ಣನೇ 'ಹೇಳುವಂತೆ' (!) –

ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ.

ನಡೆಯೊಳಗೆ ನುಡಿಯ ಪೂರೈಸುವೆ;
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ.
ಒಂದು ಜವೆ ಕೊರತೆಯಾದರೆ
ಎನ್ನನದ್ದಿ ನೀನೆದ್ದುಹೋಗು,
ಕೂಡಲಸಂಗಮದೇವಾ.

ವಾಚಕರ ವಾಣಿ

ಯುದ್ಧದಿಂದ ಯಾರಿಗೂ ಒಳಿತಾಗದು

ಪಹಲ್ಗಾಮ್‌ನಲ್ಲಿ 26 ಪ್ರವಾಸಿಗರ ಹತ್ಯೆ ನಡೆದ ಬಳಿಕ ಜನಸಾಮಾನ್ಯರು ಭಾವೋದ್ವೇಗಕ್ಕೆ ಒಳಗಾಗಿದ್ದಾರೆ. ಕೆಲವರು ಯುದ್ಧ ಆಗಬೇಕು ಅನ್ನುತ್ತಿದ್ದಾರೆ. ಇದೆಲ್ಲ ಸಹಜ. ಎರಡು ಮಹಾಯುದ್ಧಗಳ ಘೋರ ಪರಿಣಾಮಗಳನ್ನು ಜಗತ್ತು ಕಂಡಿದೆ, ಅನುಭವಿಸಿದೆ. ಯುದ್ಧ ಯಾರಿಗೂ ಒಳಿತನ್ನು ತರುವುದಿಲ್ಲ. ಅದು ಒಂದು ಸಂಸ್ಕೃತಿಯನ್ನೇ ನಾಶ ಮಾಡುತ್ತದೆ. ಮನುಷ್ಯ ವೈಜ್ಞಾನಿಕವಾಗಿ, ಯಾಂತ್ರಿಕವಾಗಿ ಎಷ್ಟೇ ಮುಂದುವರಿದರೂ ಮಾನವೀಯತೆ ಇಲ್ಲವಾದಲ್ಲಿ ಜಗತ್ತು ಸರ್ವನಾಶದತ್ತ ಸಾಗುತ್ತದೆ. ಇದಕ್ಕೆ ರಷ್ಯಾ, ಇಸ್ರೇಲ್‌ನಂತಹ ದೇಶಗಳ ಯುದ್ಧಗಳು, ಮಣಿಪುರದಲ್ಲಿ ನಡೆದ ಅಮಾನವೀಯ ಕೃತ್ಯಗಳೇ ಸಾಕ್ಷಿ. ನಿತ್ಯವೂ ಮದ್ದು ಗುಂಡುಗಳ ಶಬ್ದ, ತಮ್ಮವರನ್ನು ಕಳೆದುಕೊಂಡವರ ಆಕ್ರಂದನ ನಮ್ಮ ಎದೆಯನ್ನು ನಡುಗಿಸಿವೆ. ಇಂದು ನಾವು 'ಯುದ್ಧಗಳ ಪ್ರಪಂಚ'ದಲ್ಲಿ ಬದುಕುತ್ತಿದ್ದೇವೆ. ಯಾವಾಗ, ಎಲ್ಲಿ, ಏನು ಬೇಕಾದರೂ ಸಂಭವಿಸಬಹುದು. ಯಾರದೋ ಕಾರಣಕ್ಕೆ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಸಾಮಾಜಿಕ ನೀತಿ-ಮೌಲ್ಯಗಳ ಅಧಃಪತನ ಹೆಚ್ಚುತ್ತಿರುವ ಈ ಸಂಕೀರ್ಣ ಸಮಯದಲ್ಲಿ ಶಾಂತಿಯುತ, ಸೌಹಾರ್ದ ಭವಿಷ್ಯಕ್ಕಾಗಿ ನಾವು ಚಿಂತಿಸಬೇಕಾಗಿದೆ.

ಮಹೇಂದ್ರ ಟಿ.ಎಂ., ಶಿವಮೊಗ್ಗ

ಮರಗಳ ಹನನ: ಸ್ವಯಂ ವಿವೇಚನೆ ಇಲ್ಲವೇ?

'ಕಂಟೋನ್ಮೆಂಟ್ ರೈಲ್ವೇಸ್ ಕಾಲೊನಿ ಆವರಣದಲ್ಲಿ ವಾಣಿಜ್ಯ ಉದ್ದೇಶದ ಅಭಿವೃದ್ಧಿ ಯೋಜನೆಗಾಗಿ 368 ಮರಗಳನ್ನು ತೆರವುಗೊಳಿಸಲಾಗುತ್ತಿದೆ. ನಾಗರಿಕರು ಹತ್ತು ದಿನಗಳ ಒಳಗಾಗಿ ಆಕ್ಷೇಪ ಸಲ್ಲಿಸಬಹುದು' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅರಣ್ಯ ವಿಭಾಗ ಪ್ರಕಟಣೆ ಹೊರಡಿಸಿದೆ. ಇದಕ್ಕೆ 'ಪರಿಸರಕ್ಕಾಗಿ ನಾವು ಸಂಘಟನೆ'ಯ ಸದಸ್ಯರು ಸೇರಿದಂತೆ ಹಲವಾರು ಮಂದಿ ವಿರೋಧ ವ್ಯಕ್ತಪಡಿಸಿದ್ದಾರೆ.

ಮರ ಕಡಿಯುವ ಈ ವಿಚಾರಕ್ಕೆ ನಾಗರಿಕರು ಆಕ್ಷೇಪ ಸಲ್ಲಿಸಬಹುದು ಎಂಬುದೇ ವಿಪರ್ಯಾಸದ ಪ್ರಕಟಣೆ. ನಾಗರಿಕರಷ್ಟೇ ಆಕ್ಷೇಪಿಸಬೇಕೆ? ಅರಣ್ಯ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳ ಆಕ್ಷೇಪ ಇರುವುದಿಲ್ಲವೇ? ಅವಕ್ಕೆ ಸ್ವಯಂ ವಿವೇಚನೆ ಇಲ್ಲವೇ? ಯಾವುದನ್ನು ಮಾಡಬಾರದು ಎಂಬ ವಿವೇಕ ಇಲಾಖೆಗಳಿಗೆ ಇರಬೇಕು. ವಾಣಿಜ್ಯ ಉದ್ದೇಶದ ಅಭಿವೃದ್ಧಿಯ ನೆಪದಲ್ಲಿ ಮರಗಳ ಹನನ ಕೂಡದು. ಹಾಗೆ ವಾಣಿಜ್ಯ ಕಟ್ಟಡ ಬೇಕೆಂದಾದಲ್ಲಿ ಬೇರೆಡೆ ನಿರ್ಮಿಸಲಿ. ಅಭಿವೃದ್ಧಿಯ ನೆಪದಲ್ಲಿ ಈಗಾಗಲೇ ಸಾವಿರಾರು ಮರಗಳನ್ನು ಕಳೆದುಕೊಂಡು ಬೆಂಗಳೂರು ನಲುಗುತ್ತಿದೆ. ಮೂರ್ನಾಲ್ಕು ದಶಕಗಳ ಹಿಂದೆ ಉತ್ತಮ ಹವಾಮಾನವಿದ್ದ ನಗರವು ತಾಪಮಾನದ ಏರಿಕೆಯಿಂದ ತತ್ತರಿಸುತ್ತಿದೆ.

ಎಲ್ಲ ಮರಗಳನ್ನು ಕಡಿದು ಹಾಕಿ ಬರೀ ಕಟ್ಟಡಗಳನ್ನು ನಿರ್ಮಿಸುವುದು ಅಭಿವೃದ್ಧಿ ಅಲ್ಲ. ಮರಗಳಿಲ್ಲದೆ ನರರಿಲ್ಲ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಆನೆ ನಡೆದದ್ದೇ ದಾರಿ ಎಂಬಂತೆ ವರ್ತಿಸಬಾರದು. ಹಣವೊಂದೇ ಮನುಷ್ಯನಿಗೆ ಸಕಲವನ್ನೂ ನೀಡದು ಎಂಬ ಅರಿವಿರಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ರಾಜಕಾರಣಿಗಳಲ್ಲಿ ಮಾಯವಾಗುತ್ತಿದೆ ಸಜ್ಜನಿಕೆ

ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಅಧಿಕಾರಿಯೊಬ್ಬರ ಮೇಲೆ ಕೈ ಎತ್ತಲು ಮುಂದಾದದ್ದು ದುರದೃಷ್ಟಕರ ಸಂಗತಿ. ನಾಡನ್ನು ಆಳುವ ಮುಖ್ಯಮಂತ್ರಿಯವರೇ ಹೀಗೆ ತಾಳ್ಮೆ ಕಳೆದುಕೊಂಡರೆ ಹೇಗೆ? ಇವರ ಕೆಳಗಿನವರಿಗೆ ಇವರು ಯಾವ ರೀತಿಯ ಸಂದೇಶ ನೀಡುತ್ತಾರೆ? ಇದು ಮುಖ್ಯಮಂತ್ರಿ ಸ್ಥಾನದ ಘನತೆಯನ್ನು ಕಳೆಯುವುದಿಲ್ಲವೇ? ಸಮಕಾಲೀನ ರಾಜಕಾರಣ ತಲುಪಿರುವ ದುರಂತದ ಸ್ಥಿತಿಗೆ ಈ ಪ್ರಕರಣ ಸಾಕ್ಷಿಯಾಗಿದೆ. ಸಾಮಾನ್ಯ ಜನರಿಗೆ ಮಾದರಿಯಾಗಿ ಇರಬೇಕಾದ ರಾಜಕಾರಣಿಗಳಲ್ಲಿ ಸಜ್ಜನಿಕೆ ಮಾಯವಾಗುತ್ತಿರುವುದು ದುರಂತದ ಸಂಗತಿ. ನಾನು ಕಂಡಂತೆ, ಸುಮಾರು 30 ವರ್ಷಗಳ ಹಿಂದೆ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯ ಸಚಿವರಾಗಿದ್ದ ಕೆ.ಆರ್.ನಗರದ ಎಸ್.ನಂಜಪ್ಪ ಅವರು ಯಾವ ಕೆಳಹಂತದ ನೌಕರರನ್ನೂ ಏಕವಚನದಲ್ಲಿ ಮಾತನಾಡಿಸುತ್ತಿರಲಿಲ್ಲ. ಆದರೆ ಇಂದಿನ ರಾಜಕಾರಣಿಗಳ ನಡವಳಿಕೆಯನ್ನು ನೋಡಿದರೆ ವಿಷಾದವಾಗುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಬೀದಿನಾಯಿಗಳ ನಿರ್ವಹಣೆ: ವ್ಯವಸ್ಥೆಗಿರಲಿ ಹೊಣೆ

ಬೀದಿನಾಯಿಗಳಿಗೆ ಅನ್ನ ಹಾಕುವವರು ಅವುಗಳಿಗೆ ಲಸಿಕೆ ಹಾಗೂ ಜಂತುನಾಶಕ ಔಷಧಿಗೂ ವ್ಯವಸ್ಥೆ ಮಾಡಬೇಕು ಎಂದು ಡಾ. ಮುರಳೀಧರ ಕಿರಣಕೆರೆ ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಏ. 29). ಭಾರತದಲ್ಲಿ ಬೀದಿನಾಯಿಗಳ ಸಂಖ್ಯೆ ವಿಪರೀತ ಎನ್ನುವಷ್ಟಿದೆ. ಜನಸಾಮಾನ್ಯರು ನಿತ್ಯವೂ ಇವುಗಳಿಂದ ಅನೇಕ ಬಗೆಯ ತೊಂದರೆಗಳಿಗೆ ಒಳಗಾಗುತ್ತಲೇ ಇದ್ದಾರೆ. ನಾಡಿನಲ್ಲಿ ಮಾತ್ರವಲ್ಲ ಕಾಡಿನಲ್ಲೂ ಈ ಗ್ರಾಮಸಿಂಹಗಳ ಹಾವಳಿ ಮಿತಿಮೀರಿದೆ. ಊರಿನಲ್ಲಿ ಅನ್ನಾಹಾರ ಸಿಗದೇ ಇದ್ದಾಗ ಊರಾಚೆಗೆ ಬರುವ ಬೀದಿನಾಯಿಗಳು ನೆಲವಾಸಿ ಹಕ್ಕಿಗಳ ಮೊಟ್ಟೆ, ಮರಿಗಳನ್ನು ತಿನ್ನುವ ಮೂಲಕ ಅವುಗಳ ಸಂತತಿಗೆ ಕಂಟಕವಾಗುತ್ತವೆ. ಇದಲ್ಲದೆ ಕಾಡುಮೊಲ, ಕಬ್ಬೆಕ್ಕು, ಉಡ, ನರಿ, ಕಾಡುಕುರಿ, ಜಿಂಕೆ, ಕೃಷ್ಣಮೃಗದಂತಹವುಗಳನ್ನು ಬೇಟೆಯಾಡುತ್ತವೆ. ಜೊತೆಗೆ ತಮ್ಮಲ್ಲಿ ಇರಬಹುದಾದ ಕಾಯಿಲೆಗಳನ್ನು ಕಾಡುಜೀವಿಗಳಿಗೆ ವರ್ಗಾಯಿಸಿ ಅವುಗಳ ಅವನತಿಗೆ ಕಾರಣವಾಗುತ್ತವೆ. ಕಾಡುತೋಳಗಳೊಂದಿಗೆ ಸ್ನೇಹ ಸಂಪಾದಿಸಿ ಸಂತಾನೋತ್ಪತ್ತಿ ನಡೆಸಿ, ಅವುಗಳ ಮೂಲತಳಿಯ ಮೇಲೂ ಪ್ರಭಾವ ಬೀರುತ್ತವೆ. ಇನ್ನು ಚಿರತೆಯಂತಹ ಮಾಂಸಾಹಾರಿ ಪ್ರಾಣಿಗಳು ಇವುಗಳನ್ನು ಬೇಟೆಯಾಡಲು ನಾಡಿಗೆ ಬಂದು ಮಾನವ-ಪ್ರಾಣಿ ಸಂಘರ್ಷಕ್ಕೆ ಕಾರಣವಾಗುತ್ತವೆ.

ಇಷ್ಟೆಲ್ಲ ತೊಂದರೆ ಕೊಡುವ ಬೀದಿನಾಯಿಗಳನ್ನು ನಿಯಂತ್ರಣ ಮಾಡುವುದು ಪ್ರಸ್ತುತ ನಮ್ಮ ಮುಂದಿರುವ ಸವಾಲು. ಆದರೆ ಅತ್ಯಧಿಕ ಸಂಖ್ಯೆಯಲ್ಲಿರುವ ಬೀದಿನಾಯಿಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಬರೀ ಜನಸಾಮಾನ್ಯರಿಗೆ ವಹಿಸುವುದು ಉಚಿತವಲ್ಲ. ಜೀವನ ನಿರ್ವಹಣೆಯೇ ಕಷ್ಟವಾಗಿರುವ ಜನಸಾಮಾನ್ಯರು ತಮ್ಮ ತಟ್ಟೆಯಲ್ಲಿ ಮಿಕ್ಕುಳಿದ ಆಹಾರವನ್ನು ಯಾವುದೋ ಬೀದಿನಾಯಿಗೆ ಹಾಕಿ ಕೈತೊಳೆದುಕೊಳ್ಳಬಲ್ಲರೇ ವಿನಾ ಅವುಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾರರು ಮತ್ತು ಅವರು ಹಾಗೆ ವಹಿಸಬೇಕೆಂದು ನಿರೀಕ್ಷಿಸುವುದೂ ತಪ್ಪು. ಹಾಗಾಗಿ, ಅವುಗಳ ಜವಾಬ್ದಾರಿಯನ್ನು ಸ್ಥಳೀಯ ಆಡಳಿತ ವ್ಯವಸ್ಥೆಯೇ ಹೊರಬೇಕು. ಕಾಲಕಾಲಕ್ಕೆ ಅವುಗಳಿಗೆ ಔಷಧಿ, ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯಂತಹ ಕ್ರಮಗಳನ್ನು ಸ್ಥಳೀಯ ಸಂಘಸಂಸ್ಥೆಗಳ ಸಹಕಾರದೊಂದಿಗೆ ಕೈಗೊಳ್ಳಬೇಕು. ಆಗ ಮಾತ್ರ ಬೀದಿನಾಯಿಗಳ ಸಂಖ್ಯೆ ಹತೋಟಿಗೆ ಬರಲು ಹಾಗೂ ಆರೋಗ್ಯಕರ ವಾತಾವರಣ ಸೃಷ್ಟಿಯಾಗಲು ಸಾಧ್ಯ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆನ್‌ಲೈನ್ ವೇದಿಕೆ ಅಶ್ಲೀಲತೆ ತಡೆ ಹೇಗೆ?

ಓವರ್ ದ ಟಾಪ್ (ಒಟಿಟಿ) ವೇದಿಕೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ಷೇಪಾರ್ಹ, ಅಸಭ್ಯ, ಅಶ್ಲೀಲ ವಿಡಿಯೊ ಮತ್ತು ವಿಚಾರಗಳು ಪ್ರಸಾರವಾಗುವ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದ್ದು, ಈ ಸಂಬಂಧ ಶಾಸಕಾಂಗ ಮತ್ತು ಕಾರ್ಯಾಂಗ ಕಾರ್ಯಪ್ರವೃತ್ತವಾಗಬೇಕು ಎಂದಿದೆ. ಭಾರತದಲ್ಲಿ ಡಿಜಿಟಲ್ ಮಾಧ್ಯಮಗಳ ಮೂಲಕ ಮಕ್ಕಳು ಮತ್ತು ಮಹಿಳೆಯರ ಅಶ್ಲೀಲ ಚಿತ್ರ, ವಿಡಿಯೊ ಮತ್ತು ವಿಚಾರಗಳು ವ್ಯಾಪಕವಾಗಿ ಹಂಚಿಕೆಯಾಗುತ್ತಿವೆ. ಆದರೆ, ಅಷ್ಟೇ ವೇಗವಾಗಿ ಅವುಗಳನ್ನು ನಿಯಂತ್ರಿಸುವ ಕೆಲಸ ಆಗುತ್ತಿಲ್ಲ. ಇತ್ತೀಚೆಗೆ ಕೇಂದ್ರ ಸರ್ಕಾರವು ಒಟಿಟಿ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಮತ್ತು ವಿಕೃತ ವಿಡಿಯೊಗಳ ಹಂಚಿಕೆ ತಡೆ ಸಂಬಂಧ ಕೆಲವು ನಿರ್ದೇಶನಗಳನ್ನು ನೀಡಿದೆ. ಆದರೆ, ಈ ದಿಸೆಯಲ್ಲಿ ಆಗಬೇಕಾದ ಕೆಲಸ ಇನ್ನೂ ಬಹಳಷ್ಟಿದೆ



• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ಭಾರತದಲ್ಲಿ ಇಂಟರ್‌ನೆಟ್ ಬಳಕೆ ವ್ಯಾಪಕವಾಗಿದೆ. ಅದಕ್ಕೆ ಸಂವಾದಿಯಾಗಿ ಮನರಂಜನಾ ಉದ್ಯಮ ಹೊಸ ಆಯಾಮ ಪಡೆದುಕೊಂಡಿದ್ದು, ಒಟಿಟಿ ವೇದಿಕೆಗಳು (50ಕ್ಕೂ ಹೆಚ್ಚು ಇವೆ) ಜನಪ್ರಿಯವಾಗಿವೆ. ಸಿನಿಮಾಗಳನ್ನು ಪ್ರದರ್ಶನ (ಸ್ಟ್ರೀಮಿಂಗ್) ಮಾಡುವುದರ ಜತೆಗೆ ಈ ವೇದಿಕೆಗಳಿಗಾಗಿಯೇ ವೆಬ್ ಸರಣಿಗಳು ಮತ್ತಿತರ ವಿಡಿಯೊಗಳನ್ನು ರೂಪಿಸಿ, ಪ್ರಸಾರ ಮಾಡಲಾಗುತ್ತಿದೆ. ಹೀಗೆ ಪ್ರಸಾರವಾಗುತ್ತಿರುವ ಸಿನಿಮಾ, ವೆಬ್ ಸರಣಿಗಳಲ್ಲಿ ಅಶ್ಲೀಲತೆ (ಪೋರ್ನೋಗ್ರಫಿ) ಹೆಚ್ಚಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ಡಿಜಿಟಲ್ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಸ್ಮಾರ್ಟ್ ಟಿವಿ, ಕಂಪ್ಯೂಟರ್, ಸ್ಮಾರ್ಟ್ ಫೋನ್‌ಗಳಲ್ಲಿ ಸಿನಿಮಾ, ವೆಬ್ ಸರಣಿ, ವೆಬ್‌ಸೈಟ್‌ಗಳನ್ನು ವೀಕ್ಷಿಸಬಹುದು. ಇವು ವ್ಯಕ್ತಿಗತ ಮಾಧ್ಯಮಗಳು ಆಗಿರುವುದರಿಂದ ಏಕಾಂತದಲ್ಲಿ ನೋಡಲು ಅವಕಾಶವಿದ್ದು, ಮಾಧ್ಯಮ ಬಳಕೆಯ ಚಿತ್ರಣವನ್ನೇ ಬದಲಾಯಿಸಿವೆ. ವಿವಿಧ ರೀತಿಯ ವಸ್ತು, ವಿಚಾರ, ವಿಡಿಯೊಗಳನ್ನು ಇವು ನೇರವಾಗಿ ಬಳಕೆದಾರರ ಮನೆ, ಮನಗಳಿಗೆ ತಲುಪಿಸುತ್ತಿವೆ.

ಸೆನ್ಸಾರ್‌ರಹಿತ ಒಟಿಟಿ: ಸಿನಿಮಾಗಳಿಗೆ ಹೋಲಿಸಿದರೆ, ಒಟಿಟಿಗಳಲ್ಲಿ ಪ್ರಸಾರವಾಗುತ್ತಿರುವ ವಿಡಿಯೊಗಳಲ್ಲಿ ಹೆಚ್ಚು ಅಶ್ಲೀಲತೆ ಇದೆ ಎನ್ನುವ ದೂರು ಇದೆ. ಸಿನಿಮಾಗೆ ಸೆನ್ಸಾರ್‌ಶಿಪ್ ವ್ಯವಸ್ಥೆ ಇದೆ. ಆಯಾ ಸಿನಿಮಾದ ವಸ್ತು, ಗುಣಮಟ್ಟಕ್ಕೆ ತಕ್ಕಂತೆ 'ಯು' (ಎಲ್ಲರೂ ನೋಡಬಹುದಾದ ಚಿತ್ರ), 'ಎ' (ವಯಸ್ಕರಿಗೆ ಮಾತ್ರ), 'ಯು/ಎ' (ಮಕ್ಕಳು ಹಿರಿಯರ ಮಾರ್ಗದರ್ಶನದಲ್ಲಿ ನೋಡಬೇಕಾದ ಚಿತ್ರ) ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ. ಯಾವ ವಸ್ತುವಿನ ಸಿನಿಮಾ ಯಾವ ವಯಸ್ಸಿನವರಿಗೆ ಸೂಕ್ತ ಎನ್ನುವುದನ್ನು ಆ ಪ್ರಮಾಣಪತ್ರಗಳ ಆಧಾರದಲ್ಲಿ ತಿಳಿಯಬಹುದಾಗಿದೆ. ಸಿನಿಮಾವನ್ನು ಮನರಂಜನಾ ವಾಹಿನಿಗಳಲ್ಲಿ ಪ್ರಸಾರ ಮಾಡುವಾಗ ಅವುಗಳಲ್ಲಿನ ಅಶ್ಲೀಲ, ಹಿಂಸಾಚಾರದ ದೃಶ್ಯಗಳನ್ನು ಕತ್ತರಿಸಿ, ನಂತರ ಪ್ರಸಾರ ಮಾಡಲಾಗುತ್ತದೆ.

> ಭಾರತದಲ್ಲಿ ಅಶ್ಲೀಲ ವಿಡಿಯೊ, ಚಿತ್ರಗಳನ್ನು, ಸಾಹಿತ್ಯವನ್ನು (ಪೋರ್ನೋಗ್ರಫಿ) ಖಾಸಗಿಯಾಗಿ ವೀಕ್ಷಿಸುವುದು, ಓದುವುದು ಅಪರಾಧ ಅಲ್ಲ. ಆದರೆ, ಅದನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದು, ಪ್ರಕಟಿಸುವುದು, ಮಾರಾಟ ಮಾಡುವುದು, ಹಂಚುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ

ಆದರೆ, ಒಟಿಟಿಗಳಲ್ಲಿ ಪ್ರಸಾರವಾಗುವ ಸಿನಿಮಾ, ವೆಬ್‌ಸರಣಿ ಇತ್ಯಾದಿಗಳಿಗೆ ಯಾವುದೇ ರೀತಿಯ ಸೆನ್ಸಾರ್‌ಶಿಪ್ ವ್ಯವಸ್ಥೆಯಾಗಲಿ, ನಿರ್ಬಂಧವಾಗಲಿ ಇಲ್ಲ. ಕುಟುಂಬ ಒಟ್ಟಿಗೆ ಕೂತು ನೋಡಲು ಮುಜುಗರ ಪಡಬೇಕಾದಂಥ, ಮಕ್ಕಳು ಮತ್ತು ಯುವಜನರ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂಥ ವಸ್ತು/ದೃಶ್ಯಗಳು ಒಟಿಟಿ ವೇದಿಕೆಗಳಲ್ಲಿ ನೇರವಾಗಿ ಪ್ರಸಾರವಾಗುತ್ತಿವೆ. ಇದರಿಂದ ಮಕ್ಕಳು ತಮಗೆ ಸೂಕ್ತವಲ್ಲದ ವಿಚಾರ/ದೃಶ್ಯಗಳನ್ನು ಯಾವುದೇ ನಿಯಂತ್ರಣವಿಲ್ಲದೆ ನೋಡುತ್ತಿದ್ದಾರೆ. ಅಂಥ ಸಿನಿಮಾ, ವೆಬ್‌ಸರಣಿ ರೂಪಿಸುವ ನಿರ್ಮಾಪಕರು, ನಿರ್ದೇಶಕರ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ (ಸೆಕ್ಷನ್ 19 (2)) ಹಕ್ಕನ್ನು ಚಲಾಯಿಸುವ ಜತೆಗೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ನೈತಿಕ ಮೌಲ್ಯಗಳನ್ನೂ ಪರಿಗಣಿಸಬೇಕು; ಸ್ವಯಂ ನಿಯಂತ್ರಣ ಪಾಲಿಸಬೇಕು ಎನ್ನುವ ಒತ್ತಾಯ ಕೇಳಿಬಂದಿದೆ.

ಅಶ್ಲೀಲ ವೆಬ್‌ಸೈಟ್‌ಗಳ ಭರಾಟೆ: ಸಾಮಾಜಿಕ ಜಾಲತಾಣ, ವೆಬ್‌ಸೈಟ್‌ಗಳಲ್ಲಿಯೂ ನೀಲಿ ಚಿತ್ರಗಳು, ಆಕ್ಷೇಪಾರ್ಹ ವಿಡಿಯೊಗಳನ್ನು ಎಗ್ಗಿಲ್ಲದೇ ಪ್ರಸಾರ ಮಾಡಲಾಗುತ್ತಿದೆ. ಅಶ್ಲೀಲ ವಿಡಿಯೊಗಳ ಪ್ರಸಾರಕ್ಕಾಗಿಯೇ ಅನೇಕ ವೆಬ್‌ಸೈಟ್‌ಗಳು ಹುಟ್ಟಿಕೊಂಡಿವೆ. ನೀಲಿ ಚಿತ್ರಗಳ ನಿರ್ಮಾಣ, ಪ್ರದರ್ಶನ, ಹಂಚಿಕೆ ಲಕ್ಷಾಂತರ ರೂಪಾಯಿಯ ವ್ಯವಹಾರವಾಗಿದೆ. ಪೋರ್ನೋಗ್ರಫಿ ಅಪರಾಧವಲ್ಲದಿದ್ದರೂ, ಇವು ಮಕ್ಕಳು ಸೇರಿದಂತೆ ಯುವಜನರ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿದ್ದು, ಸಮಾಜದಲ್ಲಿ ಹಲವು ರೀತಿಯ ಅಪರಾಧಗಳು, ವಿಕೃತಿಗಳಿಗೆ ಕಾರಣವಾಗಿದೆ ಎನ್ನುವ ದೂರುಗಳು ವ್ಯಾಪಕವಾಗಿವೆ. ಇದರ ಜತೆಗೆ, ಮಕ್ಕಳನ್ನು ಬಳಸಿಕೊಂಡು ಪೋರ್ನ್ ವಿಡಿಯೊಗಳನ್ನು ಚಿತ್ರೀಕರಿಸುವುದು, ಅವುಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು, ಹಂಚಿಕೊಳ್ಳುವುದು ನಡೆಯುತ್ತಿದ್ದು, ಇದೊಂದು ಗಂಭೀರ ಸಮಸ್ಯೆಯಾಗಿದೆ.

ದೇಶದ ಜನ, ಸಾಂವಿಧಾನಿಕ ಸಂಸ್ಥೆಗಳು ಮತ್ತು ಸಂಸದರಿಂದ ವ್ಯಾಪಕ ದೂರುಗಳು ಬಂದಿದ್ದರಿಂದ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಅಶ್ಲೀಲತೆಗೆ ಸಂಬಂಧಿಸಿದಂತೆ ಈ ವರ್ಷದ ಫೆ.25ರಂದು ಒಟಿಟಿ ವೇದಿಕೆಗಳಿಗೆ ಎಚ್ಚರಿಕೆ ನೀಡಿತ್ತು. ನಿಷೇಧಿತವಾದ ಯಾವುದೇ ವಿಷಯದ ಬಗ್ಗೆ ಪ್ರಸಾರ ಮಾಡಬಾರದೆಂದು ಸೂಚಿಸಿತ್ತು. ಮಾಹಿತಿ ತಂತ್ರಜ್ಞಾನ (ಮಧ್ಯಸ್ಥ ಸಂಸ್ಥೆಗಳಿಗೆ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳು– 2021ರ ಅನ್ವಯ ಒಟಿಟಿ ವೇದಿಕೆಗಳಲ್ಲಿ ಪ್ರಸಾರ ಮಾಡಲಾಗುವ ವಸ್ತುವನ್ನು ವಯಸ್ಸು ಆಧರಿತವಾಗಿ ವರ್ಗೀಕರಣ ಮಾಡುವುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಹೇಳಿತ್ತು. ನಾಯಕ ಪಾತ್ರ ಮತ್ತು ಇತರ ಪಾತ್ರಗಳ ಮೂಲಕ ಮಾದಕ ವಸ್ತುಗಳ ಬಳಕೆಯನ್ನು ಉತ್ತೇಜಿಸುವ, ವೈಭವೀಕರಿಸುವ ಬಗ್ಗೆಯೂ ಎಚ್ಚರಿಕೆ ನೀಡಿತ್ತು.

ಮೂರು ಹಂತದ ವ್ಯವಸ್ಥೆ: ಒಟಿಟಿ ವೇದಿಕೆಗಳು ಗ್ರಾಹಕರ ದೂರು ಪರಿಹಾರ ವ್ಯವಸ್ಥೆ ರೂಪಿಸಬೇಕು. ಅದು ಮೂರು ಹಂತದ ವ್ಯವಸ್ಥೆಯಾಗಿದ್ದು, ಮೊದಲು ಆಕ್ಷೇಪಾರ್ಹ ಎನ್ನಬಹುದಾದ ವಿಡಿಯೊ/ವಿಷಯಗಳ ಬಗ್ಗೆ ಗ್ರಾಹಕರು ಒಟಿಟಿ ವೇದಿಕೆಯನ್ನು ಸಂಪರ್ಕಿಸಬಹುದು. ನಂತರ ಅದು ಸ್ವಯಂ ನಿಯಂತ್ರಣಾ ವ್ಯವಸ್ಥೆ, ಅದರ ನಂತರ ಕೇಂದ್ರ ಸರ್ಕಾರದ ಅಂತರ್ ಇಲಾಖಾ ಸಮಿತಿಯಲ್ಲಿ ಇತ್ಯರ್ಥವಾಗಬೇಕು ಎಂದು ಮಾಹಿತಿ ತಂತ್ರಜ್ಞಾನ ಕಾಯ್ದೆಯಲ್ಲಿ ಹೇಳಲಾಗಿದೆ. ಆದರೆ, ಹೆಚ್ಚಿನ ವೇದಿಕೆಗಳು ಕಾನೂನು ಪಾಲನೆ ಮಾಡುತ್ತಿಲ್ಲ ಎನ್ನುವ ಆರೋಪಗಳಿವೆ. ಈ ದಿಸೆಯಲ್ಲಿ ಮತ್ತಷ್ಟು ನಿಯಮಗಳನ್ನು ತರುವ ಸಲುವಾಗಿ ಕೇಂದ್ರ ಸರ್ಕಾರವು ಪ್ರಸಾರ ಸೇವೆಗಳು (ನಿಯಂತ್ರಣ) ಮಸೂದೆ ರೂಪಿಸುವ ಪ್ರಯತ್ನದಲ್ಲಿದೆ.

ನಿಯಮ ಹೇಳುವುದೇನು?

'ಮಾಹಿತಿ ತಂತ್ರಜ್ಞಾನ (ಮಧ್ಯಸ್ಥ ಸಂಸ್ಥೆಗಳಿಗೆ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳು– 2021', ಬಳಕೆದಾರರಿಗೆ ಮುಕ್ತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಮತ್ತು ಉತ್ತರದಾಯಿತ್ವದ ಇಂಟರ್‌ನೆಟ್ ಸೌಲಭ್ಯವನ್ನು ಖಾತರಿಪಡಿಸುವ ಉದ್ದೇಶ ಹೊಂದಿವೆ. ಇವುಗಳ ಅಡಿಯಲ್ಲಿ, ಸಾಮಾಜಿಕ ಜಾಲತಾಣಗಳು ಸೇರಿದಂತೆ ಡಿಜಿಟಲ್ ಸೇವಾ ಸಂಸ್ಥೆಗಳು ಕೆಲವು ಮಾರ್ಗಸೂಚಿಗಳನ್ನು ಪಾಲಿಸಲೇಬೇಕು.

- ಅತ್ಯಾಚಾರ, ಲೈಂಗಿಕ ಪ್ರಚೋದನೆ ಮಾಡುವಂತಹ ವಿಷಯ/ವಸ್ತುಗಳು ಅಥವಾ ಮಕ್ಕಳನ್ನು ಲೈಂಗಿಕವಾಗಿ ಶೋಷಿಸುವ ವಿಷಯಗಳ ಬಗೆಗಿನ ಅಪರಾಧಗಳ ಪತ್ತೆ, ತಡೆ, ತನಿಖೆ, ವಿಚಾರಣೆ ಅಥವಾ ಶಿಕ್ಷೆಗೆ ಒಳಪಡಿಸುವುದಕ್ಕಾಗಿ ಆ ವಿಷಯಗಳನ್ನು ಮೊದಲು ಅಪ್‌ಲೋಡ್/ ಹಂಚಿಕೆ ಮಾಡಿದವರನ್ನು ಗುರುತಿಸುವುದಕ್ಕೆ ಸಾಮಾಜಿಕ ಮಾಧ್ಯಮ ಸಂಸ್ಥೆ ನೆರವಾಗಬೇಕು
- ಯಾವುದೇ ವ್ಯಕ್ತಿಯ ಖಾಸಗಿ ಅಂಗಗಳನ್ನು ಪ್ರದರ್ಶಿಸುವ, ಪೂರ್ತಿ ನಗ್ನ ಅಥವಾ ಅರೆನಗ್ನ ಸ್ಥಿತಿಯಲ್ಲಿರುವ ಅಥವಾ ಯಾವುದೇ ಲೈಂಗಿಕ ಚಟುವಟಿಕೆ ಅಥವಾ ನಡವಳಿಕೆಯನ್ನು ತೋರಿಸುವಂತಹ ವಸ್ತು/ವಿಷಯಗಳನ್ನು 24 ಗಂಟೆಗಳ ಒಳಗಾಗಿ ಆನ್‌ಲೈನ್‌ನಿಂದ ತೆಗೆಯಬೇಕು

ಮಕ್ಕಳನ್ನು ಅಶ್ಲೀಲ ಛಾಯಾಚಿತ್ರ/ವಿಡಿಯೊಕ್ಕೆ ಬಳಸಿಕೊಂಡ ಮತ್ತು ಮಕ್ಕಳ ಅಶ್ಲೀಲ ಚಿತ್ರ/ವಿಡಿಯೊ ಸಂಗ್ರಹಿಸಿಟ್ಟ ಪ್ರಕರಣಗಳು

(ಪೋಕ್ಸೊ ಕಾಯ್ದೆ ಸೆಕ್ಷನ್ 14 ಮತ್ತು 15ರ ಅಡಿ ದಾಖಲಾದ ಪ್ರಕರಣಗಳು)





ಕಾನೂನು ಏನು ಹೇಳುತ್ತದೆ?

- **ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 294:** ಡಿಜಿಟಲ್ ರೂಪದಲ್ಲಿರುವ ಅಶ್ಲೀಲ ಚಿತ್ರ/ವಿಡಿಯೊದ (ಪುಸ್ತಕ, ಭಿತ್ತಿಪತ್ರಗಳೂ ಸೇರಿ) ಹಂಚಿಕೆ, ಮಾರಾಟ ಮತ್ತು ಸಾರ್ವಜನಿಕವಾಗಿ ಪ್ರದರ್ಶನ ಅಪರಾಧ ಎಂದು ಇದು ಹೇಳುತ್ತದೆ. ಇಂತಹ ಕೃತ್ಯ ಎಸಗಿದವರ ವಿರುದ್ಧ ದಂಡ ವಿಧಿಸುವುದಕ್ಕೆ ಅವಕಾಶ ಇದೆ
- **ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆ–2000ರ ಸೆಕ್ಷನ್ 67:** ಇದರ ಪ್ರಕಾರ, ಕಾಮಪ್ರಚೋದಕ ಮತ್ತು ಲೈಂಗಿಕ ಆಸಕ್ತಿಯ ವಿಷಯಗಳನ್ನೂ ಸೇರಿದಂತೆ ಯಾವುದೇ ಅಶ್ಲೀಲ ವಿಷಯಗಳನ್ನು (ವಿಡಿಯೊ, ಚಿತ್ರ ಇತ್ಯಾದಿ) ಎಲೆಕ್ಟ್ರಾನಿಕ್ ರೂಪದಲ್ಲಿ ಪ್ರಕಟಿಸುವುದು ಅಥವಾ ಹಂಚಿಕೆ ಮಾಡುವುದು ಅಥವಾ ಅದಕ್ಕೆ ಕಾರಣವಾಗುವುದು ಕ್ರಿಮಿನಲ್ ಅಪರಾಧ. ಮೊದಲ ಬಾರಿ ಆರೋಪ ಸಾಬೀತಾದರೆ ಗರಿಷ್ಠ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವುದಕ್ಕೆ ಅವಕಾಶ ಇದೆ. ಒಂದು ವೇಳೆ ಎರಡನೇ ಬಾರಿ ಅಥವಾ ನಂತರವೂ ಪುನರಾವರ್ತನೆಯಾದರೆ ಗರಿಷ್ಠ 5 ವರ್ಷಗಳವರೆಗೆ ಮತ್ತು ₹10 ಲಕ್ಷದವರೆಗೂ ದಂಡ ವಿಧಿಸುವುದಕ್ಕೆ ಈ ಸೆಕ್ಷನ್ ಅವಕಾಶ ನೀಡುತ್ತದೆ
  - ಇದೇ ಕಾಯ್ದೆಯ ಸೆಕ್ಷನ್ 67ಎಯು ಲೈಂಗಿಕ ಚಟುವಟಿಕೆ ಅಥವಾ ವರ್ತನೆಯನ್ನು ಹೊಂದಿರುವ ವಿಷಯ/ವಸ್ತುಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಪ್ರಕಟಿಸುವುದು, ಹಂಚುವುದು ಅಥವಾ ಪ್ರಕಟಣೆ/ಹಂಚಿಕೆಗೆ ಕಾರಣವಾಗುವುದನ್ನು ನಿಷೇಧಿಸುತ್ತದೆ
  - ಸೆಕ್ಷನ್ 67ಬಿಯು ಮಕ್ಕಳನ್ನೊಳಗೊಂಡ ಅಶ್ಲೀಲ ಚಿತ್ರ/ವಿಡಿಯೊ ಅಥವಾ ಇನ್ನಿತರ ವಿಷಯಗಳನ್ನು ಪ್ರಕಟಿಸುವುದು, ಹಂಚಿಕೆ ಮಾಡುವುದನ್ನು ಕ್ರಿಮಿನಲ್ ಅಪರಾಧ ಎಂದು ಹೇಳುತ್ತದೆ
- **ಮಹಿಳೆಯರ ಅಸಭ್ಯ ಪ್ರದರ್ಶನ (ನಿಷೇಧ) ಕಾಯ್ದೆ–1986:** ಜಾಹೀರಾತು ಅಥವಾ ಪ್ರಕಟಣೆಗಳು, ಲೇಖನಗಳು, ಕಲಾಕೃತಿಗಳು, ಚಿತ್ರಗಳಲ್ಲಿ ಅಥವಾ ಬೇರೆ ಯಾವುದೇ ರೂಪದಲ್ಲಿ ಮಹಿಳೆಯರನ್ನು ಅಸಭ್ಯವಾಗಿ ತೋರಿಸುವುದನ್ನು ಈ ಕಾನೂನು ನಿಷೇಧಿಸುತ್ತದೆ
- **ಪೋಕ್ಸೊ ಕಾಯ್ದೆ–2012:** ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯು ಲೈಂಗಿಕ ಹಲ್ಲೆ, ಲೈಂಗಿಕ ಕಿರುಕುಳಗಳಿಂದ ಮಾತ್ರವಲ್ಲದೆ, ಮಕ್ಕಳನ್ನು ಅಶ್ಲೀಲತೆಯ ಕೃತ್ಯಗಳಿಗೆ ಬಳಸುವುದರಿಂದಲೂ ಮಕ್ಕಳಿಗೆ ರಕ್ಷಣೆ ನೀಡುತ್ತದೆ.
  - ಕಾಯ್ದೆಯ ಸೆಕ್ಷನ್ 13 ಮತ್ತು 14 ಪ್ರಕಾರ, ಅಶ್ಲೀಲತೆಯ ವಿಡಿಯೊ, ಚಿತ್ರ ಹಾಗೂ ಇನ್ನಿತರ ಉದ್ದೇಶಗಳಿಗೆ ಮಕ್ಕಳನ್ನು ಬಳಸಿದರೆ ಐದು ವರ್ಷದವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದು. ಅಪರಾಧ ಪುನರಾವರ್ತನೆಯಾದರೆ ಗರಿಷ್ಠ ಏಳು ವರ್ಷದವರೆಗೆ ಕಾರಾಗೃಹ ಶಿಕ್ಷೆ ಮತ್ತು ದಂಡವನ್ನು ವಿಧಿಸುವುದಕ್ಕೆ ಅವಕಾಶ ಇದೆ
  - ಇದೇ ಕಾಯ್ದೆಯ ಸೆಕ್ಷನ್ 15 (1, 2, 3 ಉಪ ಸೆಕ್ಷನ್‌ಗಳೂ ಇವೆ) ಮಕ್ಕಳನ್ನೊಳಗೊಂಡ ಅಶ್ಲೀಲ ಚಿತ್ರ, ವಿಡಿಯೊ, ಇತರ ವಿಷಯಗಳನ್ನು ಸಂಗ್ರಹಿಸುವುದೂ ಅಪರಾಧ ಎಂದು ಹೇಳುತ್ತದೆ. ಒಂದು ವೇಳೆ ಇಂತಹ ಚಿತ್ರ ವಿಡಿಯೊ ಅಥವಾ ಇತರೆ ವಸ್ತು/ವಿಷಯಗಳನ್ನು ಸಂಗ್ರಹಿಸಿಟ್ಟಿದ್ದರೆ ಮೊದಲ ಬಾರಿ ಕನಿಷ್ಠ 3 ವರ್ಷದಿಂದ ಗರಿಷ್ಠ ಐದು ವರ್ಷದವರೆಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸುವುದಕ್ಕೆ ಅವಕಾಶ ನೀಡುತ್ತದೆ. ಅಪರಾಧ ಪುನರಾವರ್ತನೆಯಾದರೆ ಕನಿಷ್ಠ ಐದು ವರ್ಷಗಳಿಂದ ಗರಿಷ್ಠ ಏಳು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದು

ಆಧಾರ: ಪಿಟಿಐ, ಪಿಐಬಿ ಪ್ರಕಟಣೆ, ಸಂಸತ್ತಿನಲ್ಲಿ ಸಚಿವರ ಉತ್ತರ, ವಿವಿಧ ಕಾಯ್ದೆಗಳು, ಎನ್‌ಸಿಆರ್‌ಬಿ

ರಾಷ್ಟ್ರೀಯ

'ಮೈತ್ರಿಕೂಟಕ್ಕಾಗಿ ನಿಮ್ಮ ಕಾಲು ಹಿಡಿಯಬೇಕೇ?'

ಪ್ರಜಾವಾಣಿ ವಾರ್ತೆ

ಸಲ್ಮಾನ್ ಖುರ್ಷಿದ್

ನವದೆಹಲಿ: 'ಇಂಡಿಯಾ ಮೈತ್ರಿಕೂಟ ರಚನೆಯಾದಾಗ ತನ್ನನ್ನು ಸಂಚಾಲಕನಾಗಿ ನೇಮಕ ಮಾಡಿದ್ದಕ್ಕಾಗಿ ಜೆಡಿಯು ವರಿಷ್ಠ ನಿತೀಶ್‌ಕುಮಾರ್ ಅವರು ಆತಂಕಗೊಂಡವರಂತೆ ಕಂಡುಬಂದರು. ಮೈತ್ರಿಕೂಟ ರಚನೆ ವಿಳಂಬವಾಯಿತು. ದಿನಗಳು ಉರುಳಿದಂತೆ, ಅವರು ಮೈತ್ರಿಕೂಟದಿಂದ ದೂರವಾಗುತ್ತಾ ಬಂದರು. ಕೊನೆಗೆ ಅದರಿಂದ ಹೊರನಡೆದು, ಬಿಜೆಪಿ ನೇತೃತ್ವದ ಎನ್‌ಡಿಎ ಜೊತೆ ಕೈಜೋಡಿಸಿದರು...'

'ಇಂಡಿಯಾ'ವನ್ನು ಬಿಜೆಪಿ ವಿರುದ್ಧದ ಅಸಾಧಾರಣವಾದ ಮೈತ್ರಿಕೂಟ ಎಂದೇ ಭಾವಿಸಲಾಗಿತ್ತು. ಆದರೆ, ಹರಿಯಾಣ, ಮಹಾರಾಷ್ಟ್ರ ಹಾಗೂ ದೆಹಲಿ ವಿಧಾನ ಸಭೆಗಳಿಗೆ ನಡೆದ ಚುನಾವಣೆಗಳು,ಮೈತ್ರಿಕೂಟದ ಕಾರ್ಯತಂತ್ರದ ಅನುಷ್ಠಾನದಲ್ಲಾದ ತಪ್ಪುಗಳನ್ನು ಬಹಿರಂಗಪಡಿಸಿದವು...'

–ಕಾಂಗ್ರೆಸ್‌ನ ಹಿರಿಯ ನಾಯಕ ಸಲ್ಮಾನ್ ಖುರ್ಷಿದ್ ಹಾಗೂ ಪಿಎಚ್.ಡಿ ಸಂಶೋಧನಾ ಅಭ್ಯರ್ಥಿ ಮೃತ್ಯುಂಜಯ ಸಿಂಗ್ ಯಾದವ್ ಅವರ ಹೊಸ ಪುಸ್ತಕ 'ಕಂಟೆಸ್ಟಿಂಗ್ ಡೆಮಾಕ್ರಟಿಕ್ ಡೆಫಿಸಿಟ್: ಆ್ಯನ್ ಇನ್‌ಸೈಡ್ ಸ್ಟೋರಿ ಆಫ್ 2024 ಎಲೆಕ್ಷನ್ಸ್' ನಲ್ಲಿ ಉಲ್ಲೇಖವಾಗಿರುವ ಅಂಶಗಳಿವು.

'ಇಂಡಿಯಾ' ಮೈತ್ರಿಕೂಟ ರಚನೆ ವೇಳೆ, ವಿಪಕ್ಷಗಳ ನಾಯಕರ ನಡುವಿನ ಮಾತುಕತೆ, ಕಳೆದ ವರ್ಷ ನಡೆದ ಚುನಾವಣೆಗಳ ಕುರಿತ ಆಸಕ್ತಿಕರ ಸಂಗತಿಗಳನ್ನು ಖುರ್ಷಿದ್ ಹಾಗೂ ಯಾದವ್ ಈ ಕೃತಿಯಲ್ಲಿ ದಾಖಲಿಸಿದ್ದಾರೆ.

'ಮೈತ್ರಿಕೂಟ ರಚನೆಗೆ ಸಂಬಂಧಿಸಿ ಚರ್ಚಿಸಲು 2023ರ ಏಪ್ರಿಲ್ 12ರಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ವಿರೋಧ ಪಕ್ಷಗಳ ನಾಯಕರು ಸಭೆ ಕರೆಯಲಾಗಿತ್ತು. ಅಂದಿನ ಸಭೆಯಲ್ಲಿ ವಿಸ್ತೃತ ಚರ್ಚೆ ನಂತರ ಮೈತ್ರಿಕೂಟ ರಚನೆಗೆ ಚಾಲನೆ ಸಿಕ್ಕಿತ್ತು' ಎಂದು ಈ ಕೃತಿಯಲ್ಲಿ ವಿವರಿಸಲಾಗಿದೆ.

'ಮೈತ್ರಿಕೂಟ ರಚನೆ ವಿಳಂಬವಾಗುತ್ತಿರುವ ಬಗ್ಗೆ ನಿತೀಶ್ ಹಲವು ಬಾರಿ ಅಸಮಾಧಾನ ವ್ಯಕ್ತಪಡಿಸಿದ್ದರು. ಅಂದಿನ ಸಭೆಯಲ್ಲಿ ಅದೇ ಮಾತು ಹೇಳಿದರು'.

'ಬಿಜೆಪಿ ವಿರುದ್ಧ ರಚನೆಯಾಗುವ ಮೈತ್ರಿಕೂಟ ದಿಂದ ಇತರರಿಗಿಂತ ನಿಮಗೇ ಹೆಚ್ಚು ಪ್ರಯೋಜನವಾಗಲಿದೆ. ಆದರೆ, ಇಂತಹ ಮೈತ್ರಿಕೂಟ ರಚನೆಗೆ ಮುಂದಾಗುವಂತೆ ನಿಮ್ಮ ಮನವೊಲಿಸುವುದಕ್ಕಾಗಿ ನಾನು ನಿಮ್ಮ ಕಾಲು ಹಿಡಿಯಬೇಕೇ ಎಂದು ನಿತೀಶ್ ಕುಮಾರ್ ಖಾರವಾಗಿ ಪ್ರಶ್ನಿಸಿದ್ದರು' ಎಂದೂ ಕೃತಿಯಲ್ಲಿ ವಿವರಿಸಲಾಗಿದೆ.

'ಅವರು ಈ ರೀತಿ ಹೇಳುವಾಗ ವಿಪಕ್ಷಗಳ ಇತರ ನಾಯಕರಲ್ಲದೆ, ನಾನು ಹಾಗೂ ರಾಹುಲ್ ಗಾಂಧಿ ಕೂಡ ಇದ್ದೆವು' ಎಂದು ಖುರ್ಷಿದ್ ಬರೆದಿದ್ದಾರೆ.

'ನಿತೀಶ್ ಅವರ ಮಾತಿನಿಂದಾಗಿ ಸಭೆಯಲ್ಲಿ ಕೆಲ ಕಾಲ ದಟ್ಟ ಮೌನ ಮನೆ ಮಾಡಿತ್ತು. ಆಗ ಕೂಡಲೇ ಮಾತು ಆರಂಭಿಸಿದ ನಿತೀಶ್ ಮತ್ತದೇ ಮಾತುಗಳನ್ನಾಡಿದರು. ಈ ಬಗ್ಗೆ ವಿಸ್ತೃತ ಚರ್ಚೆ ಅಗತ್ಯ ಇದೆ ಎಂದು ರಾಹುಲ್ ಪ್ರತಿಪಾದಿಸಿದರು. ನಂತರ, ಕ್ರಮೇಣ ಪರಿಸ್ಥಿತಿಗಳು ಬೇರೆಯಾದವು' ಎಂದೂ ಮೆಲುಕು ಹಾಕಿದ್ದಾರೆ.

'ನಿತೀಶ್ ಅವಸರ ಮಾಡುತ್ತಿದ್ದರು. ತಾವು ಮಮತಾ ಬ್ಯಾನರ್ಜಿ, ಅಖಿಲೇಶ್ ಹಾಗೂ ಕೇಜ್ರಿವಾಲ್ ಅವರೊಂದಿಗೆ ಮಾತುಕತೆ ನಡೆಸುವುದಾಗಿ ಹೇಳಿದರು. ಶರದ್ ಪವಾರ್ ಹಾಗೂ ಡಿಎಂಕೆ ಜೊತೆ ಕಾಂಗ್ರೆಸ್ ಮಾತನಾಡಬೇಕು ಎಂಬ ಸಲಹೆ ಇತ್ತರು. ಅವರ ಮಾತುಗಳು ನಾವು ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತಿದ್ದೇವೆ ಎಂಬಂತೆ ಕಂಡುಬಂದವು' ಎಂದು ಬರೆದಿದ್ದಾರೆ.

ಗುಜರಾತ್: ಅಕ್ರಮ ಬಾಂಗ್ಲಾದೇಶಿಗರ ಮನೆ ಧ್ವಂಸ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ನಗರದಲ್ಲಿ ಅಕ್ರಮವಾಗಿ ನೆಲಸಿದ್ದ 1,000ಕ್ಕೂ ಅಧಿಕ ಬಾಂಗ್ಲಾದೇಶಿಗರನ್ನು ಬಂಧಿಸಿರುವ ಅಹಮದಾಬಾದ್ ಮಹಾನಗರ ಪಾಲಿಕೆಯು, ಚಾಂದೋಲಾ ಕೆರೆ ಪ್ರದೇಶದಲ್ಲಿ ನಿರ್ಮಿಸಿದ್ದ ಅವರ ಮನೆಗಳನ್ನು ನೆಲಸಮಗೊಳಿಸಿದೆ.

'ದೇಶದೊಳಗೆ ಅಕ್ರಮವಾಗಿ ನುಸುಳಿರುವ ಬಾಂಗ್ಲಾದೇಶ ಪ್ರಜೆಗಳು ನಡೆಸುತ್ತಿರುವ ದೇಶ ವಿರೋಧಿ ಚಟುವಟಿಕೆಗಳನ್ನು ತಡೆಯುವ ಉದ್ದೇಶದಿಂದ ಕೈಗೊಂಡಿರುವ ಐತಿಹಾಸಿಕ ಕ್ರಮ ಇದಾಗಿದೆ' ಎಂದು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹೇಳಿದ್ದಾರೆ.

ಇನ್ನೊಂದೆಡೆ, ಸರ್ಕಾರದ ಕ್ರಮದಿಂದ ಬಾಧಿತರಾದ ಕೆಲವರು, ಮನೆಗಳ ಧ್ವಂಸ ಕಾರ್ಯಾಚರಣೆಗೆ ತಡೆ ನೀಡುವಂತೆ ಕೋರಿ ಗುಜರಾತ್ ಹೈಕೋರ್ಟ್‌ಗೆ ಸೋಮವಾರ ಅರ್ಜಿ ಸಲ್ಲಿಸಿದ್ದು, ತುರ್ತು ವಿಚಾರಣೆ ನಡೆಸುವಂತೆ ಕೋರಿದ್ದಾರೆ.

'ಈ ಪ್ರದೇಶದಲ್ಲಿ ಕಳೆದ 60 ವರ್ಷಗಳಿಂದ ನೆಲಸಿದ್ದೇವೆ. 2010 ಹಾಗೂ 2013ರಲ್ಲಿ ರೂಪಿಸಲಾಗಿರುವ ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ನೀತಿಯಡಿ ನಮಗೆ ಈ ಸೌಲಭ್ಯಗಳನ್ನು ನೀಡಲಾಗಿದೆ' ಎಂದು ಅವರು ಅರ್ಜಿಯಲ್ಲಿ ವಿವರಿಸಿದ್ದಾರೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಏಪ್ರಿಲ್ 30, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ತೃತೀಯ ಗಂ. 14-13 ನಕ್ಷತ್ರ: ರೋಹಿಣಿ ಗಂ. 16-18 ಯೋಗ: ಶೋಭನ ಗಂ. 12-02 ಕರಣ: ಗರ ಗಂ. 14-13, ಮೇಷ ಮಾಸದ 17 ನೇ ದಿನ.

ರಾಹುಕಾಲ : ಮಧ್ಯಾಹ್ನ 12-00 – 01-30

ಸೂರ್ಯೋದಯ : 06-13 ಸೂರ್ಯಾಸ್ತ : 06-42

ಮುಸ್ಲಿಂ ದಿನಾಂಕ : 01 ಜುಲ್ಕಾಯದ್ , ದಿನ ವಿಶೇಷ : ಅಕ್ಷಯ ತೃತೀಯಾ, ಪರಶುರಾಮ ಜಯಂತಿ, ಬಸವ ಜಯಂತಿ, ಕೇದಾರ-ಬದ್ರಿ ಯಾತ್ರೆ, ಅದೃಷ್ಟ ಸಂಖ್ಯೆ : 4, 5

ಮೇಷ: ರೈತರ ಫಸಲಿಗೆ ಅದರಲ್ಲೂ ವಿಶೇಷವಾಗಿ ಎಣ್ಣೆಕಾಳುಗಳನ್ನು ಬೆಳೆದಿರುವವರಿಗೆ ಉತ್ತಮ ಬೆಲೆ ನಿರೀಕ್ಷೆ ಮಾಡಬಹುದು. ಅಭಿವೃದ್ಧಿಯ ವಿಚಾರದಲ್ಲಿ ಸ್ವಪ್ರಯತ್ನದೊಂದಿಗೆ ದೈವಬಲವೂ ಇರುತ್ತದೆ.

ವೃಷಭ: ರಚನಾತ್ಮಕ ಕಾರ್ಯಕ್ರಮಗಳ ಕುರಿತು ಮಾಧ್ಯಮದವರಿಂದ ಮೆಚ್ಚುಗೆಯ ಮಾತು ಕೇಳಲಿದ್ದೀರಿ. ಬಲಗಣ್ಣಿಗೆ ಅಪಾಯವಾಗುವ ಸಾಧ್ಯತೆಗಳಿವೆ. ಸಾಮೂಹಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಮಿಥುನ: ನೂತನ ಮನೆ ಕಟ್ಟಲೇಬೇಕೆಂಬ ಹಲವು ವರ್ಷಗಳ ಆಸೆಯು ಪ್ರಾರಂಭದ ಹಾದಿಯನ್ನು ಕಾಣಲಿದೆ. ದೇಹಾರೋಗ್ಯವನ್ನು ಸ್ವತಃ ಕಾಳಜಿ ವಹಿಸಿ ನೋಡಿಕೊಳ್ಳಬೇಕು. ನಾಯಕತ್ವ ಪ್ರಾಪ್ತಿಯಾಗಲಿದೆ.

ಕರ್ಕಾಟಕ: ಎಲ್ಲಾ ಆಲೋಚನೆಗಳೂ ಸರಿಯೇ ಆಗಿರಬೇಕೆಂಬ ಧೋರಣೆ ಇತರರಿಗೆ ಸರಿ ಎನ್ನಿಸುವುದಿಲ್ಲ. ಅದನ್ನು ವಿರೋಧಿಸುವವರು ಈ ದಿನ ಎದುರಾಗುವರು. ಕೃಷಿಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಸಿಂಹ: ತಾಪಮಾನಕ್ಕೆ ತಕ್ಕ ಹಾಗೆ ಆಹಾರ ಪದ್ಧತಿಗಳನ್ನು ಬದಲಾಯಿಸುವುದು ಉತ್ತಮ. ಭೂಮಿಗೆ ಸಂಬಂಧಿಸಿದಂತೆ ಪ್ರಯತ್ನಪಟ್ಟ ಕೆಲಸ ವಿಫಲವಾಗುವುದು, ಬೇಸರಬೇಡ. ಶಿವನ ಆರಾಧನೆಯಿಂದ ನೆಮ್ಮದಿ ಸಂಪಾದಿಸಿಕೊಳ್ಳಬಹುದು.

ಕನ್ಯಾ: ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲವನ್ನು ಮಾರ್ಗದರ್ಶಕರ ಸೂಚನೆಯಂತೆ ನಿವಾರಿಸಿಕೊಳ್ಳಿರಿ. ತೆಂಗಿನ ಬೆಳೆಗಳು ಹೇರಳವಾಗಿರುವುದು ಜತೆಗೆ ಲಾಭದಾಯಕವಾಗಿಯೂ ಇರುತ್ತವೆ.

ತುಲಾ: ಮೃದುಧೋರಣೆಯ ಸ್ವಭಾವದಿಂದ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಸಂಭವಿಸುವುದು. ಅವಸರದ ಹೆಜ್ಜೆ ಇಡಬೇಡಿ. ಮುಂದಿನ ಯೋಜನೆಗಳಿಗೆ ಅನುಭವಿಗಳಿಂದ ಮಾರ್ಗದರ್ಶನ ಪಡೆಯಿರಿ.

ವೃಶ್ಚಿಕ: ಕೆಲವೊಂದು ಅನಿರೀಕ್ಷಿತ ಬದಲಾವಣೆಗಳು ಸದ್ಯದ ಸಮಸ್ಯೆಗಳನ್ನು ಕಡಿಮೆಮಾಡಲಿವೆ. ಸರಕು ಸಾಗಣೆ ನಡೆಸುವವರಿಗೆ ಅಡ್ಡಿ ಆತಂಕಗಳು ಎದುರಾಗಬಹುದು. ಪಾಲುದಾರರೊಂದಿಗೆ ವ್ಯವಹರಿಸುವಾಗ ಎಚ್ಚರವಿರಲಿ.

ಧನು: ಅಧಿಕ ಒತ್ತಡವಿದ್ದರೂ ಸ್ನೇಹಿತರಿಗಾಗಿ ಸಮಯ ಕೊಡಬೇಕಾಗುವುದು. ಸಣ್ಣ ವಿಷಯಗಳೆಂದು ನಿರ್ಲಕ್ಷಿಸಬೇಡಿ. ಕೆಲ ಸೂಕ್ಷ್ಮ ವಿಚಾರಗಳನ್ನು ಅರ್ಥ ಮಾಡಿಕೊಂಡರೆ ಉತ್ತಮ. ನಿರಂತರ ಕೆಲಸಗಳಿಂದ ವಿಶ್ರಾಂತಿ ಬೇಕೆನಿಸಲಿದೆ.

ಮಕರ: ಮಾಹಿತಿ ತಂತ್ರಜ್ಞಾನದಲ್ಲಿ ಕೆಲಸ ಮಾಡುವವರಿಗೆ ಆದಾಯ ಕಾಣಲಿದೆ. ಯಾವುದೇ ರೀತಿಯ ವ್ಯವಹಾರಿಕ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಡಿ. ಬಣ್ಣ ಮಾರಾಟಗಾರರಿಗೆ ಉತ್ತಮ ವ್ಯಾಪಾರವಿದೆ.

ಕುಂಭ: ಸ್ವತಂತ್ರ ಮನೋಭಾವದಿಂದ ಹೊರಬಂದು ಆತ್ಮೀಯರ ಸಲಹೆಗಳಿಗೆ ಹೊಂದಿಕೊಳ್ಳುವಿರಿ. ಭೂಸಂಬಂಧದ ವ್ಯವಹಾರದಲ್ಲಿ ಅಧಿಕ ಆದಾಯ ಕಂಡುಬರುವುದು. ನವಗ್ರಹ ಪೂಜೆಯಿಂದ ಶುಭ ವಾರ್ತೆ ಪಡೆಯುವಿರಿ.

ಮೀನ: ಶನಿಯು ತಿರುಗಾಟವನ್ನು ಮಾಡಿಸುವುದರಿಂದ ಆರೋಗ್ಯದ ಬಗ್ಗೆ ಗಮನಹರಿಸುವುದು ಅನಿವಾರ್ಯ. ಕೆಲವೊಂದು ಜವಾಬ್ದಾರಿಯುತ ಕಾರ್ಯಗಳು ಮುಂದಾಳತ್ವದಲ್ಲಿ ನಡೆಯಲಿವೆ.

ಇನ್ನೊಬ್ಬರ ಬದುಕಿಗೆ ಹುಣ್ಣಾಗಬಾರದು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

184

ಒಬ್ಬ ಶ್ರೀಮಂತ ಇದ್ದ. ಅವನ ಮನೆಯ ಸುತ್ತ ಭದ್ರವಾದ ಕೋಟೆ ಇತ್ತು. ಮನೆಯ ತಿಜೋರಿಯಲ್ಲಿ ಹಣ, ಆಭರಣ ಎಲ್ಲಾ ಇತ್ತು. ಆ ಮನೆಯಲ್ಲಿ ಒಬ್ಬ ಸೇವಕ ಇದ್ದ. ಬಹಳ ಪ್ರಾಮಾಣಿಕವಾಗಿ ಬದುಕಿದ್ದ. ಒಬ್ಬ ಕಳ್ಳ ಆ ಶ್ರೀಮಂತಿಕೆ ಪತ್ತೆ ಹಚ್ಚಿದ. ಹೇಗಾದರೂ ಮಾಡಿ ಈ ಮನೆಯಲ್ಲಿ ಕಳ್ಳತನ ಮಾಡಬೇಕು ಎಂದು ಹೊಂಚು ಹಾಕಿದ. ಹೇಗೆ ಮಾಡಬೇಕು ಎನ್ನುವುದು ಗೊತ್ತಾಗಲಿಲ್ಲ. ಅದಕ್ಕೆ ಒಂದು ಉಪಾಯ ಮಾಡಿ ಆ ಮನೆಯ ಸೇವಕನ ಸ್ನೇಹ ಸಂಪಾದಿಸಿದ. ಒಂದು ದಿನ ಸೇವಕನಿಗೆ 'ನಿನ್ನ ಶ್ರೀಮಂತ ನಿನಗೆ ಏನು ಕೊಟ್ಟಿದ್ದಾನೆ. ನೀನು ಇಷ್ಟು ದಿನ ದುಡಿದಿದ್ದೀಯ. ತಿಂಗಳಿಗೆ 2,000 ರೂಪಾಯಿ ಕೊಟ್ಟಿರಬಹುದು, ವರ್ಷಕ್ಕೆ ಒಂದು ಜೊತೆ ಬಟ್ಟೆ ಕೊಟ್ಟಿರಬಹುದು. ಆದರೆ ನೀನು ನನ್ನ ಸ್ನೇಹ ಮಾಡಿದರೆ ನಿನಗೆ ಎರಡು ಲಕ್ಷ ರೂಪಾಯಿ ಕೊಡ್ತೀನಿ' ಎಂದ. 'ನಾನು ಏನು ಮಾಡಬೇಕು' ಎಂದು ಕೇಳಿದ ಸೇವಕ. ಅದಕ್ಕೆ ಕಳ್ಳ 'ನಿನ್ನ ಶ್ರೀಮಂತನ ಮನೆಯ ಸುತ್ತಲೂ ಇರುವ ಭದ್ರವಾದ ಕೋಟೆಯ ಹಿಂದಿನ ಬಾಗಿಲ ಅಗುಳಿಯನ್ನು ಸ್ವಲ್ಪ ಸರಿಸಿಬಿಡು. ನಿನಗೆ ಎರಡು ಲಕ್ಷ ಕೊಡ್ತೀನಿ' ಅಂದ. ಸೇವಕನಿಗೂ ಆಸೆ ಆಯಿತು, ಒಪ್ಪಿಕೊಂಡ. ಅದರಂತೆ ಕಳ್ಳ 2 ಲಕ್ಷ ನೀಡಿದ. ಇವ ಹಿಂದಿನ ಬಾಗಿಲ ಚಿಲಕ ಸರಿಸಿದ. ಕಳ್ಳ ಮನೆಯ ಒಳಕ್ಕೆ ಬಂದು ತಿಜೋರಿಯ ಬಾಗಿಲು ತೆಗೆಯಲು ಹೋದ. ಆಗ ಅಲ್ಲಿ ಒಂದು ನಾಯಿ ಇತ್ತು. ಅದು ಕಳ್ಳನನ್ನು ನೋಡಿ ಗುರ್ರ್ ಅಂತು. ಆಗ ಕಳ್ಳ ಒಂದು ಬಿಸ್ಕತ್ ಹಾಕಿದ. ಆದರೂ ನಾಯಿ ಗುರ್ರ್ ಅಂತು. 'ನಿನಗೆ ಬಿಸ್ಕತ್ ಹಾಕಿದ್ದೇನೆ, ಆದರೂ ಯಾಕೆ ಗುರ್ರ್ ಅಂತಿ' ಎಂದು ಕಳ್ಳ ಕೇಳಿದ. ಅದಕ್ಕೆ ನಾಯಿ 'ಹೀಗೆ ಲಂಚ ತೆಗೆದುಕೊಂಡು ಸುಮ್ಮನೆ ಇರಲು ನಾನೇನು ಮನುಷ್ಯನೇ' ಎಂದು ಕೇಳಿತು. ಅವ ಬ್ರೆಡ್ ಒಗೆದ. ಆಗ ನಾಯಿ 'ಮನುಷ್ಯನೇ ತಿಳಕೋ, ಅನ್ನ ಉಂಡ ಮನೆಗೆ ಮನುಷ್ಯರು ಕನ್ನ ಹಾಕುತ್ತಾರೆಯೇ ವಿನಾ ನಾಯಿಗಳಲ್ಲ' ಎಂದಿತು.

ಒಂದು ನಾಯಿ ಹೇಗೆ ಬದುಕುತ್ತದೆ ನೋಡಿ. ಅದಕ್ಕೇ ಮನುಷ್ಯ ಸರಿಯಾಗಿ ಬದುಕುವುದನ್ನು ಕಲಿಯಬೇಕು. ರಾಷ್ಟ್ರೀಯ ಪಕ್ಷಿ ಅಂತ ಇದೆ, ರಾಷ್ಟ್ರೀಯ ಪ್ರಾಣಿ ಅಂತ ಇದೆ. ಒಬ್ಬನನ್ನಾದರೂ ರಾಷ್ಟ್ರೀಯ ಮನುಷ್ಯ ಅಂತ ಮಾಡಿಲ್ಲ ಯಾಕೆ ಅಂತ ಯೋಚನೆ ಮಾಡಬೇಕು. ಈ ಜಗತ್ತಿಗೆ ಬಂದ ಮೇಲೆ ಏನಾದರೂ ಒಳ್ಳೆಯ ಕೆಲಸಗಳನ್ನು ಮಾಡಿ ಹೋಗುವುದನ್ನು ಕಲಿಯಬೇಕು ಮನುಷ್ಯ. ನಾವು ಹಣ್ಣಾಗದಿದ್ದರೂ ಪರವಾಗಿಲ್ಲ. ಇನ್ನೊಬ್ಬರ ಬದುಕಿಗೆ ಹುಣ್ಣಾಗಬಾರದು. ನಮಗೆ ದೀಪ ಹಚ್ಚುವ ಶಕ್ತಿ, ಮನಸ್ಸು ಇಲ್ಲದಿದ್ದರೂ ಹಚ್ಚಿದ ದೀಪ ಆರಿಸಬಾರದು. ನನಗೆ ಇನ್ನೊಬ್ಬರ ತಟ್ಟೆಯಲ್ಲಿ ಅನ್ನ ಹಾಕಲು ಸಾಧ್ಯವಿಲ್ಲದಿದ್ದರೂ ಇನ್ನೊಬ್ಬರ ಅನ್ನದ ತಟ್ಟೆಗೆ ಮಣ್ಣು ಹಾಕಬಾರದು. ನನಗೆ ಇನ್ನೊಬ್ಬರ ಕಣ್ಣೀರು ಒರೆಸಲು ಸಾಧ್ಯವಿಲ್ಲದಿದ್ದರೂ ಇನ್ನೊಬ್ಬರ ಕಣ್ಣಲ್ಲಿ ನೀರು ಬರಿಸುವ ಕೆಲಸ ಮಾಡಬಾರದು. ಹೀಗೆ ಬದುಕುವುದೇ ನಿಜವಾದ ಜೀವನ. ಕಸದೊಳಗೆ ರಸ ತೆಗೆಯಬೇಕು. ಅದರೊಳಗೆ ನಿಜವಾದ ಅರ್ಥ ಇರುತ್ತದೆ.

ಪದಬಂಧ 6027

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಕನ್ನಡಿಗರ ಯೂನಿವರ್ಸಿಟಿ! (6)
3.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ (2)
4.ಈತ ತಿರುಪೆ ಬೇಡುವವನು (3)
5.ಬಿಡದಿ ಹತ್ತಿರವಿರುವ ಪತ್ನಿ (3)
7.ಬರಹದ ಚಿಹ್ನೆ ಅಥವಾ ಅಕ್ಷರ (2)
8.ಜನರ ಬಳಿ ಕಾಣಿಸಿದ ತಂದೆ (3)
10.ಈತ ಗ್ರೀಸ್ ದೇಶದವನು (3)
12.ಶಾರೀರಿಕ ವ್ಯಾಯಾಮ (2)
14.ಬಳ್ಳಿ ಇಲ್ಲಿದೆ (3)
15.ಹುದುಗಿಟ್ಟ ಧನ (3)
17.ಹರಸುವಾಗ ಕಾಡಿಸಿದ ಆಕಳು (2)
18.ಪ್ರಪಂಚದ ನಡುವಳಿಕೆ (6)

ಮೇಲಿಂದ ಕೆಳಕ್ಕೆ

1.ನಿಯಮದಂತೆ ಕನ್ನಡಿಗನು ಮಾಡಿದ ಎಕ್ಸ್ ಚೇಂಜ್! (4)
2.ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡವನು (2)
3.ನೂಲನ್ನು ತೆಗೆಯುವ ಉಪಕರಣ (3)
6.ಎಲ್ಲಾ ದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು (4)
8.ಜನರ ನಡುವಿರುವ ಆಳು (3)
9.ಮಧುರವಾದ ಧ್ವನಿ (4)
11.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವುದು (4)
13.ಮುನಿಗೆ ಬಂದಿರುವ ಕೋಪ! (3)
16.ಲೋಲುಪನು ತಿರುಗಿದಾಗ ಕುಂದು ಕಾಣುವುದೇ? (2)



6026ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಸುಮಾತು
4.ವಾದಕ 5.ರಭಸ
6.ನೆಗಡಿ 8.ಮರವೆ
9.ವಸತಿ 12.ಲಿಕನ
15.ವಿನೋದ 16.ಬರಲು
17.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಬಲಿದಾನ 2.ಸುಮನೋಹರ
3.ತುರಗ 4.ವಾಸನೆ
7.ಗರತಿ 8.ಮರುಕ
10.ಸಮುದ್ರಯಾನ
11.ಅನುಬಂಧ 13.ನವಿಲು
14.ಪದವಿ

ಸುಡೊಕು 6412

	4		1		3	5		
7		6	4				3	1
	3				7	4		
6	1				4			
						6		4
8	2						1	
		3		2		9		8
9			3		6		7	5
		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6411 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ಅಸ್ಸಾಂ: ಮೂವರು ಬಂಡುಕೋರರ ಹತ್ಯೆ

ಗುವಾಹಟಿ: ನಾಗಾ ಬಂಡುಕೋರ ಸಂಘಟನೆಯ ಭಾಗವಾದ ಎನ್‌ಎಸ್‌ಸಿಎನ್‌ಗೆ ಸೇರಿದ ಮೂವರನ್ನು ಭದ್ರತಾ ಪಡೆಗಳು ಮಂಗಳವಾರ ಅಸ್ಸಾಂನ ದಿಮ ಹಸಾವೊ ಜಿಲ್ಲೆಯಲ್ಲಿ ಹತ್ಯೆ ಮಾಡಿವೆ.

ಅಸ್ಸಾಂ ಪೊಲೀಸರು ಮತ್ತು ಅಸ್ಸಾಂ ರೈಫಲ್ಸ್‌ನ ಜಂಟಿ ತಂಡ ಹಾಗೂ ಬಂಡುಕೋರರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಬಂಡುಕೋರರು ಮೃತಪಟ್ಟಿದ್ದಾರೆ.

2 ಎ.ಕೆ ರೈಫಲ್‌ಗಳು ಮತ್ತು ಒಂದು ಪಿಸ್ತೂಲನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ, ಧಾರವಾಡ
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಜಲಮಂಡಳಿ ಆವರಣ, ಧಾರವಾಡ-580001.
ದೂರವಾಣಿ: 0836-2447090 ಇ-ಮೇಲ್: kwbcen@ gmail.com

ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ದತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:225 **ದಿನಾಂಕ: 28-04-2025.** ಕಾಮಗಾರಿಯ ಹೆಸರು: ವಿಜಯಪುರ ಜಿಲ್ಲೆಯ ವಿಜಯಪುರ ನಗರಕ್ಕೆ ಸಗಟು ನೀರು ಸರಬರಾಜು ಮಾಡುವ ಆಲಮಟ್ಟಿ ಹಿನ್ನೀರಿನ (ಕೊಲ್ಹಾರದಿಂದ ವಿಜಯಪುರ ನಗರಕ್ಕೆ) ಪಿ.ಎಸ್.ಸಿ. ಕೊಳವೆ ಮಾರ್ಗವನ್ನು ಬದಲಾಯಿಸಿ ಎಮ್.ಎಸ್. ಪೈಪ್ ಅಳವಡಿಸುವ ಕಾಮಗಾರಿ (ಇಡುಗಂಟು ಟೆಂಡರ್). **INDENT NO. KUWSDB/2025-26/WS/WORK_INDENT341.** ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ **ಮುಖ್ಯ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು** ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.

ವಾ.ಸಾ.ಇ./ಧಾ/107/2025-26/ದೇಶಪಾಂಡೆಪಬ್ಲಿಸಿಟಿ

ನಗರಸಭಾ ಕಾರ್ಯಾಲಯ, ಚಿತ್ರದುರ್ಗ.

ಸಂ:ನಸಚಿ:ಮಿಸ್:ಸಿಆರ್:01:2025-26 ದಿನಾಂಕ: 28-04-2025

ಸಾರ್ವಜನಿಕ ಬಹಿರಂಗ ಹರಾಜ್ ಪ್ರಕಟಣೆ

ಈ ಮೂಲಕ ಚಿತ್ರದುರ್ಗ ನಗರದ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ಚಿತ್ರದುರ್ಗ ನಗರದ ವ್ಯಾಪ್ತಿಯಲ್ಲಿ ಬರುವ ನಗರಸಭೆಯ ವಾಣಿಜ್ಯ ಮಳಿಗೆಗಳು ಈ ಹಿಂದೆ ಸರ್ಕಾರದ ಸುತ್ತೋಲೆಯನ್ವಯ ದಿನಾಂಕ:19-07-2019 ರಂದು 12 ವರ್ಷಗಳ ಠೇವಣಿ ಮೊತ್ತ ಹಾಗೂ ಬಾಡಿಗೆ ಆಧಾರದ ಮೇಲೆ ಗುತ್ತಿಗೆ ಅವಧಿಯನ್ನು ನೀಡಿದ್ದು, ಸದರಿ ಗುತ್ತಿಗೆ ಅವಧಿಯು ಈ ಕೆಳಕಂಡ ಕೋಷ್ಟಕದಲ್ಲಿ ನಮೂಧಿಸಿರುವಂತೆ ದಿನಾಂಕ: 24-07-2024ಕ್ಕೆ ಲೀಜ್ ಅವಧಿಯು ಮುಗಿದಿದ್ದು, 12 ವರ್ಷಕ್ಕೆ ಮುಗಿಯಲಿರುವ ಮಳಿಗೆಗಳ ದಿನಾಂಕ:**20-05-2025** ರಂದು ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ನಗರಸಭೆ ಕಚೇರಿಯಲ್ಲಿ ಸಾರ್ವಜನಿಕ ಬಹಿರಂಗ ಹರಾಜ್ ಮೂಲಕ ವಿಲೇಪಡಿಸಲಾಗುವುದು. ಇಚ್ಚೆಯುಳ್ಳವರು ಸಕಾಲಕ್ಕೆ ಹರಾಜ್‌ನಲ್ಲಿ ಭಾಗವಹಿಸಿ ಷರತ್ತಿಗೊಳಪಟ್ಟು ಛಡಾ ಸವಾಲ್ ಮೂಲಕ ಪಡೆಯಬಹುದಾಗಿರುತ್ತದೆ. ದಿನಾಂಕ: **20-05-2025** ರಂದು ಹರಾಜ್ ಭಾಗವಹಿಸುವವರು ತಾತ್ಕಾಲಿಕ ಠೇವಣಿ ಹಣಕ್ಕೆ ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ ಇವರ ಹೆಸರಿಗೆ ದಿನಾಂಕ: **19-05-2025** ರ ಸಂಜೆ 5.00 ಗಂಟೆಗೆ ಒಳಗಾಗಿ ಡಿ.ಡಿ.ಯನ್ನು ನಗರಸಭೆ ಕಚೇರಿಗೆ ಸಲ್ಲಿಸಿ ಟೋಕನ್ ಪಡೆಯತಕ್ಕದ್ದು. ಹರಾಜ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ನಗರಸಭೆಯ Website: www.chitradurgacity.gov.in ನಲ್ಲಿ ಅಥವಾ ಕಚೇರಿ ವೇಳೆಯಲ್ಲಿ ಕಂದಾಯ ಶಾಖೆ ಮಿಸಲೇನಿಯಸ್ ವಿಭಾಗದಲ್ಲಿ ಪಡೆದು ಕೊಳ್ಳಬಹುದಾಗಿದೆ.

ಸಹಿ/-ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ

DIPR/CTA/KSMCA/37/2025-26

ಪೆಗಾಸಸ್ ವಿವಾದ: ಸುಪ್ರೀಂ ಕೋರ್ಟ್ ಪ್ರಶ್ನೆ

ಭಯೋತ್ಪಾದಕರ ವಿರುದ್ಧ ಸ್ಪೈವೇರ್ ಬಳಸಿದರೆ ತಪ್ಪೇನು?

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಭಯೋತ್ಪಾದಕರ ವಿರುದ್ಧ ಗೂಢಚರ್ಯೆ ತಂತ್ರಾಂಶ (ಸ್ಪೈವೇರ್) ಬಳಸುವುದರಲ್ಲಿ ತಪ್ಪೇನಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಪ್ರಶ್ನಿಸಿದ್ದು, ದೇಶದ 'ಭದ್ರತೆ ಮತ್ತು ಸಾರ್ವಭೌಮತ್ವ'ಕ್ಕೆ ಸಂಬಂಧಿಸಿದ ಯಾವುದೇ ವರದಿಯನ್ನು ಬಹಿರಂಗ-ಪಡಿಸುವುದಿಲ್ಲ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು, ಖಾಸಗಿತನದ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿ ದಂತೆ ವೈಯಕ್ತಿಕವಾಗಿ ಯಾರಿಗಾದರೂ ಆತಂಕ ಇದ್ದರೆ ಅದನ್ನು ಬಗೆಹರಿಸಬಹುದು ಎಂದು ಹೇಳಿತು. ಆದರೆ, ಭದ್ರತೆಗೆ ಸಂಬಂಧಿಸಿದ ವರದಿಯನ್ನು ಬೀದಿಗಳಲ್ಲಿ ಚರ್ಚಿಸುವಂತಿಲ್ಲ ಎಂದು ಸ್ಪಷ್ಟಪಡಿಸಿತು.

'ದೇಶದ ಭದ್ರತೆಗೆ ಸಂಬಂಧಿಸಿದ ಯಾವುದೇ ವರದಿಯನ್ನು ಪರಿಶೀಲನೆಗೆ ಒಳಪಡಿಸುವುದಿಲ್ಲ. ಆದರೆ ಆ ವರದಿಯಲ್ಲಿ ತಮ್ಮ ಕುರಿತಾದ ಏನಾದರೂ ಅಂಶಗಳು ಇವೆಯೇ ಎಂದು ತಿಳಿಯಲು ಬಯಸುವ ವ್ಯಕ್ತಿಗಳಿಗೆ ಆ ಬಗ್ಗೆ ಮಾಹಿತಿ ನೀಡಬಹುದು' ಎಂದು ಹೇಳಿತು.

ಪೆಗಾಸಸ್ ಗೂಢಚರ್ಯೆ ವಿವಾದಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಇಸ್ರೇಲ್‌ನ ಪೆಗಾಸಸ್ ಸ್ಪೈವೇರ್ ಬಳಸಿ ಹಲವು ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರ ಮೇಲೆ ಕಾನೂನು ಬಾಹಿರವಾಗಿ ಕಣ್ಗಾವಲು ಇರಿಸಲಾಗಿತ್ತು ಎಂಬ ಆರೋಪವು 2021ರಲ್ಲಿ ಬಂದಿತ್ತು.

ಈ ಆರೋಪಗಳ ಬಗ್ಗೆ ತನಿಖೆ ನಡೆಸಲು ಕೋರ್ಟ್ ನೇಮಕ ಮಾಡಿದ್ದ ಸಮಿತಿಯೊಂದು, ವರದಿ ಸಲ್ಲಿಸಿತ್ತು. ತಾಂತ್ರಿಕ ಸಮಿತಿಯ ವರದಿಯನ್ನು ಎಷ್ಟರ ಮಟ್ಟಿಗೆ ಸಾರ್ವಜನಿಕವಾಗಿ ಹಂಚಿಕೊಳ್ಳಬಹುದು ಎಂಬುದನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ವಕೀಲ ದಿನೇಶ್ ದ್ವಿವೇದಿ, 'ಸರ್ಕಾರದ ಬಳಿ ಸ್ಪೈವೇರ್ ಇದೆಯೇ ಮತ್ತು ಅದನ್ನು ಬಳಸಲಾಗಿದೆಯೇ ಎಂಬ ಪ್ರಶ್ನೆ ಎದುರಾಗಿದೆ. ಸರ್ಕಾರದ ಬಳಿ ಸ್ಪೈವೇರ್ ಇದ್ದರೆ, ಅದನ್ನು ಈಗಲೂ ಬಳಸುತ್ತಿರ ಬಹುದು' ಎಂದು ತಿಳಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಪೀಠ, 'ನಿರ್ದಿಷ್ಟ ವ್ಯಕ್ತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿ ಸುವುದರ ಬಗ್ಗೆ ಮಾತ್ರ ಮನವಿ ಮಾಡಿ. ಈ ವಿಚಾರದಲ್ಲಿ ನಾವು ಸ್ವಲ್ಪ ಜವಾಬ್ದಾರಿಯಿಂದ ಇರೋಣ. ವರದಿಯನ್ನು ಎಷ್ಟು ಪ್ರಮಾಣದಲ್ಲಿ ಹಂಚಿಕೊಳ್ಳಬಹುದು ಎಂಬುದನ್ನು ನಿರ್ಧರಿಸುತ್ತೇವೆ' ಎಂದಿತು.

'ಸರ್ಕಾರವು ಭಯೋತ್ಪಾದಕರ ವಿರುದ್ಧ ಸ್ಪೈವೇರ್ ಬಳಸಿದರೆ ತಪ್ಪೇನು? ಸ್ಪೈವೇರ್ ಹೊಂದಿರುವುದು ತಪ್ಪಲ್ಲ, ನೀವು ಅದನ್ನು ಯಾರ ವಿರುದ್ಧ ಬಳಸುವಿರಿ ಎಂಬುದು ಇಲ್ಲಿರುವ ಪ್ರಶ್ನೆ. ದೇಶದ ಭದ್ರತೆಯ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಜನರ ಖಾಸಗಿತನದ ಹಕ್ಕುಗಳಿಗೆ ಸಂವಿಧಾನದ ಅಡಿ ರಕ್ಷಣೆ ನೀಡಲಾಗುತ್ತದೆ' ಎಂದು ಹೇಳಿದ ಪೀಠ ಮುಂದಿನ ವಿಚಾರಣೆಯನ್ನು ಜುಲೈ 30ಕ್ಕೆ ನಿಗದಿಪಡಿಸಿತು.

ಅಫ್ಜಲ್ ಗುರು ಹೊಗಳಿಕೆ: ಎಫ್‌ಐಆರ್ ರದ್ದತಿಗೆ ನಕಾರ

ನವದೆಹಲಿ (ಪಿಟಿಐ): ಸಂಸತ್ ಭವನದ ಮೇಲಿನ ದಾಳಿ ಪ್ರಕರಣದ ಅಪರಾಧಿ ಅಫ್ಜಲ್ ಗುರು ಬಗ್ಗೆ ಪ್ರಶಂಸೆಯ ಮಾತು ಆಡಿದ ಆರೋಪ ಎದುರಿಸುತ್ತಿರುವ ತಮಿಳುನಾಡು ತೌಹೀದ್ ಜಮಾತ್ ಸಂಘಟನೆಯ ಇಬ್ಬರು ಸದಸ್ಯರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ರೆಹಮತುಲ್ಲಾ ಮತ್ತು ಜಮಾಲ್ ಮೊಹಮ್ಮದ್ ಎನ್ನುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಇವರು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಅಸಂಸದೀಯವಾಗಿ ಮಾತನಾಡಿದ್ದಾರೆ ಎಂಬ ಆರೋಪವೂ ಇದೆ.

ಇವರಿಬ್ಬರ ವಿರುದ್ಧ ಕರ್ನಾಟಕ ಮತ್ತು ತಮಿಳು ನಾಡಿನಲ್ಲಿ ದಾಖಲಾದ ಮೂರು ಎಫ್‌ಐಆರ್‌ಗಳನ್ನು ಒಂದುಮಾಡಿ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು ಏಪ್ರಿಲ್ 22ರಂದು ತೀರ್ಪು ಪ್ರಕಟಿಸಿತ್ತು. ಇವರು ಬಹಳ ಆಕ್ಷೇಪಾರ್ಹವಾದ ದ್ವೇಷ ಭಾಷಣವನ್ನು ಮದುರೈನಲ್ಲಿ ಮಾಡಿದ್ದರು ಎಂದು ಹೇಳಿತ್ತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತ್ ನಗರ, ಕೋಣನಕುಂಟೆ ಮುಖ್ಯರಸ್ತೆ, ಸೌಧಾಮಿನಿ ಲೇಔಟ್, ಬೆಂಗಳೂರು-560062.

ಟೆಂಡರ್ ನಂ.: ಬಿಬಿಎಂಪಿ/ಕಾಅ/ಬೆಂದವಿ/ಟೆಂಡರ್/03/2025-26 ದಿನಾಂಕ : 29.04.2025

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ
(ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಬೆಂಗಳೂರು ದಕ್ಷಿಣ ವಿಭಾಗ), ಬಿಬಿಎಂಪಿ, ಬೆಂಗಳೂರು-62 ರವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ವಾಣಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಅಥವಾ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಸುಬ್ರಹ್ಮಣ್ಯಪುರದ ವಾರ್ಡ್ ನಂ. 203, ಬಿಎಸ್‌ಕೆ 5ನೇ ಹಂತ ಮತ್ತು ಸುತ್ತಮುತ್ತಲಿನ ಪ್ರದೇಶದ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ. ಅಂದಾಜು ವೆಚ್ಚ : ರೂ.150.00 ಲಕ್ಷಗಳು, ಇಎಂಡಿ ಮೊತ್ತ ರೂ. 2,25,000.00
2.	ಸುಬ್ರಹ್ಮಣ್ಯಪುರದಲ್ಲಿರುವ ವಾರ್ಡ್ ನಂ. 203, ಪಿಪಿ ಲೇಔಟ್, ಎಜಿಎಸ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶದ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ. ಅಂದಾಜು ವೆಚ್ಚ : ರೂ.150.00 ಲಕ್ಷಗಳು, ಇಎಂಡಿ ಮೊತ್ತ ರೂ. 2,25,000.00

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ : **ದಿನಾಂಕ 12.05.2025 ರಂದು ಸಂಜೆ 4:00 ಗಂಟೆಯೊಳಗೆ ಅಥವಾ ಅದಕ್ಕೂ ಮೊದಲು.** (2) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **12.05.2025 ರಂದು ಸಂಜೆ 04.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **14.05.2025 ರಂದು ಸಂಜೆ 04.30 ಕ್ಕೆ.**

ಸಹಿ/- ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-01.
ದೂರವಾಣಿ ಸಂಖ್ಯೆ: 080-22133370 Email ID: eepwdbngdn@yahoo.com
E-Portal : https://kppp.karnataka.gov.in/#/portal/portal-home

ಟೆಂಡರ್ ಪ್ರಕಟಣೆ ಸಂಖ್ಯೆ: 04/2025-26 ದಿನಾಂಕ: 28.04.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.1 ದಕ್ಷಿಣ & ಆನೇಕಲ್ ಉಪವಿಭಾಗಕ್ಕೆ ಸಂಬಂಧಿಸಿದಂತೆ 02 ಸಂಖ್ಯೆಯ (ರೂ. 100.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್‌ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 12.05.2025 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 13.05.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/422/Zen/2025-26

ಸಿಜೆಐ ಆಗಿ ಬಿ.ಆರ್. ಗವಾಯಿ ನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರನ್ನು ಮೇ 14ರಿಂದ ಅನ್ವಯವಾಗುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ನೇಮಕ ಮಾಡಿದ್ದಾರೆ.

ಈ ವಿಚಾರವನ್ನು ಕೇಂದ್ರ ಕಾನೂನು ಮತ್ತು ನ್ಯಾಯ ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

ಗವಾಯಿ ಅವರು ಮೇ 14ರಂದು ಸಿಜೆಐ ಆಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅವರು ನವೆಂಬರ್ 23ರಂದು ನಿವೃತ್ತರಾಗಲಿದ್ದಾರೆ. ಗವಾಯಿ ಅವರು ಕೆ.ಜಿ. ಬಾಲಕೃಷ್ಣನ್ ಅವರ ನಂತರ ಸಿಜೆಐ ಸ್ಥಾನ ಅಲಂಕರಿಸುತ್ತಿರುವ ದಲಿತ ಸಮುದಾಯದ ವ್ಯಕ್ತಿಯಾಗಿದ್ದಾರೆ.

ನ್ಯಾಯಮೂರ್ತಿ ಗವಾಯಿ ಅವರು ಆರ್.ಎಸ್. ಗವಾಯಿ ಅವರ ಪುತ್ರ. ಆರ್.ಎಸ್. ಗವಾಯಿ ಅವರು ಬೇರೆ ಬೇರೆ ರಾಜ್ಯಗಳ ರಾಜ್ಯಪಾಲರಾಗಿ ಕರ್ತವ್ಯ ನಿರ್ವಹಿಸಿದ್ದರು. 1960ರ ನವೆಂಬರ್ 24ರಂದು ಜನಿಸಿದ ಬಿ.ಆರ್. ಗವಾಯಿ, 1985ರ ಮಾರ್ಚ್‌ನಲ್ಲಿ ವಕೀಲ ವೃತ್ತಿ ಆರಂಭಿಸಿದರು. 1987ರಿಂದ 1990ರವರೆಗೆ ಬಾಂಬೆ ಹೈಕೋರ್ಟ್‌ನಲ್ಲಿ ಸ್ವತಂತ್ರವಾಗಿ ವಕೀಲಿಕೆ ನಡೆಸಿದರು. 1990ರ ನಂತರದಲ್ಲಿ ಅವರು ನಾಗ್ಪುರ ಪೀಠದಲ್ಲಿ ವಕೀಲ ವೃತ್ತಿ ನಡೆಸಿದರು.

2003ರ ನವೆಂಬರ್‌ನಲ್ಲಿ ಅವರು ಬಾಂಬೆ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕ ಆದರು. 2005ರಲ್ಲಿ ಕಾಯಂ ನ್ಯಾಯಮೂರ್ತಿ ಆದರು. 2019ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಯಾಗಿ ಪದೋನ್ನತಿ ಪಡೆದರು.

ಗವಾಯಿ ಅವರಿದ್ದ ಪೀಠದ ಪ್ರಮುಖ ತೀರ್ಪುಗಳು

ಮಹತ್ವದ ತೀರ್ಪುಗಳನ್ನು ಪ್ರಕಟಿಸಿದ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದ ಭಾಗವಾಗಿ ನ್ಯಾಯ ಮೂರ್ತಿ ಗವಾಯಿ ಅವರು ಕರ್ತವ್ಯ ನಿರ್ವಹಿಸಿದ್ದಾರೆ. ಕೆಲವು ಪ್ರಮುಖ ತೀರ್ಪುಗಳು ಇಲ್ಲಿವೆ:

- ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಕೇಂದ್ರದ ತೀರ್ಮಾನ ವನ್ನು ಎತ್ತಿಹಿಡಿದ ಐವರು ನ್ಯಾಯಮೂರ್ತಿಗಳ ಪೀಠದ ಭಾಗವಾಗಿದ್ದರು.
- ಚುನಾವಣಾ ಬಾಂಡ್ ಯೋಜನೆಯನ್ನು ರದ್ದುಪಡಿಸಿದ ಸಂವಿಧಾನ ಪೀಠದಲ್ಲಿ ನ್ಯಾಯಮೂರ್ತಿ ಗವಾಯಿ ಇದ್ದರು.
- ನೋಟು ರದ್ದತಿ ತೀರ್ಮಾನವನ್ನು ಬಹುಮತದ ಮೂಲಕ ಎತ್ತಿಹಿಡಿದ ಸಂವಿಧಾನ ಪೀಠದಲ್ಲಿಯೂ ಅವರು ಇದ್ದರು.
- ಮೀಸಲಾತಿಗಾಗಿ ಪರಿಶಿಷ್ಟ ಜಾತಿಗಳ ಒಳ ವರ್ಗೀಕರಣದ ಸಾಂವಿಧಾನಿಕ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ ಎಂದು ಬಹುಮತದ ಆಧಾರದಲ್ಲಿ ತೀರ್ಪು ನೀಡಿದ 7 ನ್ಯಾಯಮೂರ್ತಿ ಗಳ ಪೀಠದಲ್ಲಿ ಅವರು ಒಬ್ಬರಾಗಿದ್ದರು.
- ಗವಾಯಿ ನೇತೃತ್ವದ ನ್ಯಾಯಪೀಠವು ಇಡೀ ದೇಶಕ್ಕೆ ಅನ್ವಯವಾಗುವ ಮಾರ್ಗಸೂಚಿ ಯೊಂದನ್ನು ಹೊರಡಿಸಿ, ಕಾರಣ ಕೇಳಿ ನೋಟಿಸ್ ಕೊಡದೆ ಯಾವ ಆಸ್ತಿಯನ್ನೂ ಧ್ವಂಸಗೊಳಿಸು ವಂತೆ ಇಲ್ಲ ಎಂದು ಹೇಳಿತು. ಸಂಬಂಧಪಟ್ಟ ವ್ಯಕ್ತಿಗೆ ನೋಟಿಸ್‌ಗೆ ಪ್ರತಿಕ್ರಿಯೆ ನೀಡಲು 15 ದಿನ ಕಾಲಾವಕಾಶ ಕೊಡಬೇಕು ಎಂದು ಹೇಳಿತ್ತು.

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುಮು:ಸ ಇಂ-1:ಟೆಂಡರ್04/2025-26
ದಿನಾಂಕ : 28.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.04/2025-26 ದಿನಾಂಕ: 28.04.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 04/20225-06 ದಿನಾಂಕ 28-04-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054-ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಮತ್ತು 8443 ಠೇವಣಿ ವಂತಿಕೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಟ ಮೊತ್ತ ರೂ: 412.85 ಲಕ್ಷಗಳು ಮತ್ತು ಟೆಂಡರಿಗಿಟ್ಟ ಕನಿಷ್ಟ ರೂ:10.15 ಮೊತ್ತ ರೂ:, ಇ.ಎಂ.ಡಿ ಗರಿಷ್ಟ ಮೊತ್ತ ರೂ.619277/- ಮತ್ತು ಇ.ಎಂ.ಡಿ ಕನಿಷ್ಟ ಮೊತ್ತ ರೂ.25381/-, ಅರ್ಹ ಗುತ್ತಿಗೆದಾರರು 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 06 ರಿಂದ 09 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 14-05-2025 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 29-04-2025 ರಿಂದ 15-05-2025 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 15-05-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 16-05-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 17-05-2025 ರ 16-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/40/KSMCA/2025-26

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2025-26/438 ದಿನಾಂಕ: 28/04/2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024-25 ನೇ ಸಾಲಿನ ಲೆಕ್ಕ ಶಿರ್ಷಿಕೆ 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 2 ಕಾಮಗಾರಿಗಳು ಹಾಗೂ 5054-ರಾಜ್ಯ ಹೆದ್ದಾರಿ ಸುಧಾರಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 3 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಟ ಮೊತ್ತ ರೂ. 240.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 720.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:09-05-2025 ರಂದು (11.00 ಗಂಟೆಗೆ), 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:12-05-2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 14-05-2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 16-05-2025 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-153/KSMCA/2025-26

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಹೊಸನಗರ ಅರಣ್ಯ ವಿಭಾಗ, ಹೊಸನಗರ

ಜಿಲ್ಲೆ: ಶಿವಮೊಗ್ಗ. ಇ.ಮೇಲ್ ಸಂದೇಶ ಐಡಿನಂ.acfhnr@gmail.com
ಸಂಖ್ಯೆ:ACF/HNR/DDF/CAMPA/KFDF/TENDER/CR/07/2025-26
ದಿನಾಂಕ: 25.04.2025

ಇ-ಮರು ಟೆಂಡರ್ ಪ್ರಕಟಣೆ Call-02
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025-26ನೇ ಸಾಲಿನಲ್ಲಿ ಸಾಗರ ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಿವಿಧ ವಲಯಗಳಲ್ಲಿ DDF & DDF ROOTSTOCK-12 ಕಾಮಗಾರಿಗಳಿಗೆ 79.03 ಲಕ್ಷ ರೂಗಳಿಗೆ, CAMPA& CAMPA CA-57 ಕಾಮಗಾರಿಗಳಿಗೆ 229 ಲಕ್ಷ ರೂಗಳಿಗೆ ಹಾಗೂ KFDF FLEXI -83 ಕಾಮಗಾರಿಗಳಿಗೆ 242.72 ಲಕ್ಷ ರೂ ಗಳಿಗೆ ಕನಿಷ್ಠ 05 (ಐದು) ವರ್ಷಗಳ ಅನುಭವ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಯೂನಿಟ್‌ವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:02.05.2025ರ ಸಂಜೆ 4-55 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳು ಮತ್ತು ಸ್ಥಳಗಳ ಸಂಪೂರ್ಣ ವಿವರಗಳನ್ನು ಇ- ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ವಿವರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/143/04/151

ಅಮೆರಿಕ ಜತೆ ವ್ಯಾಪಾರ ಒಪ್ಪಂದ ಅನುಕೂಲಕರ ಅಂಶ ಸೇರಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ತ್ವರಿತಗತಿಯಲ್ಲಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಭಾರತವು, ಒಪ್ಪಂದದಲ್ಲಿ ಉಭಯ ರಾಷ್ಟ್ರಗಳಿಗೂ ಅನುಕೂಲಕರ ಅಂಶಗಳನ್ನು ಸೇರಿಸಲು ಮುಂದಾಗಿದೆ.

ಭವಿಷ್ಯದಲ್ಲಿ ವ್ಯಾಪಾರಕ್ಕೆ ಯಾವುದೇ ಅಡೆತಡೆ ಎದುರಾಗದಂತೆ ಮತ್ತು ಯಾರೊಬ್ಬರ ಕೈ ಮೇಲಾಗದಂತೆ ಖಾತ್ರಿಪಡಿಸಿಕೊಳ್ಳಲು ಈ ಹೆಜ್ಜೆ ಇರಿಸಿದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, ಅಮೆರಿಕಕ್ಕೆ 'ಅತ್ಯಂತ ನೆಚ್ಚಿನ ರಾಷ್ಟ್ರ' ಸ್ಥಾನ ನೀಡಲು ಭಾರತ ನಿರ್ಧರಿಸಿದೆ. ಈ ವ್ಯಾಪಾರ ಒಪ್ಪಂದದಲ್ಲಿ ಭಾರತದ ಉದ್ದೇಶಿತ ಅಂಶಗಳು ಸೇರಿಸುವ ಷರತ್ತು ಈಡೇರಿದರೆ, ಅತ್ಯಂತ ನೆಚ್ಚಿನ ರಾಷ್ಟ್ರ ಸ್ಥಾನಮಾನವು ಅಮೆರಿಕಕ್ಕೂ ಅನ್ವಯಿಸಲಿದೆ ಎಂದು ಇಬ್ಬರು ಅಧಿಕಾರಿಗಳು 'ರಾಯಿಟರ್ಸ್' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅತಿ ಹೆಚ್ಚಿನ ಪ್ರತಿಸುಂಕದಿಂದಾಗಿ ಚೀನಾ ಹೊರಬಿದ್ದಿರುವ ಕ್ಷೇತ್ರಗಳಲ್ಲಿ ಅಮೆರಿಕಕ್ಕೆ ಪ್ರಮುಖ ಪೂರೈಕೆದಾರ ಆಗಲು ಭಾರತ ಬಯಸುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಸ್ತಾಪಿತ ಶೇ 26 ಪ್ರತಿ ಸುಂಕ ಮತ್ತು ಭಾರತದ ಮೇಲಿನ ಇತರ ನಿರ್ಬಂಧ-ಗಳನ್ನು ತಪ್ಪಿಸಲು ಅಥವಾ ತಗ್ಗಿಸಲು ಭಾರತ ಉತ್ಸುಕವಾಗಿದೆ ಎಂದು ದೆಹಲಿ ಮೂಲದ ವ್ಯಾಪಾರ ನೀತಿಯ ಚಿಂತಕರ ಚಾವಡಿ ಎನಿಸಿರುವ ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಶಿಯೇಟಿವ್‌ನ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಗುಂಡಿಕ್ಕಿಕೊಂಡು ಉದ್ಯಮಿ ಆತ್ಮಹತ್ಯೆ

ಉಡುಪಿ: ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದ ದೂಪದಕಟ್ಟೆ ರಾಜ್ಯ ಹೆದ್ದಾರಿ ಸಮೀಪ ಉದ್ಯಮಿ ದಿಲೀಪ್ ಎನ್.ಆರ್. (56), ಮಂಗಳವಾರ ನಸುಕಿನಲ್ಲಿ ಕಾರಿನಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ದಿಲೀಪ್

ಕಾರ್ಕಳ ನಿವಾಸಿಯಾದ ಅವರು ಮಂಗಳೂರಿನಲ್ಲಿ ಉದ್ಯಮ ನಡೆಸುತ್ತಿದ್ದರು.

'ದಿಲೀಪ್ ಅವರು ಉದ್ಯಮದಲ್ಲಿ ನಷ್ಟ ಅನುಭವಿಸಿದ್ದರು. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದರು. ಸೋಮವಾರ ರಾತ್ರಿ ಸ್ನೇಹಿತರೊಂದಿಗೆ ಹೊರಗೆ ಹೋಗುತ್ತೇನೆ ಎಂದು ಹೆಂಡತಿಗೆ ತಿಳಿಸಿ ತೆರಳಿದ್ದರು. ರಾತ್ರಿ 1 ಗಂಟೆಯ ಸುಮಾರಿಗೆ ಕೆಲ ಸ್ನೇಹಿತರು ಮತ್ತು ಸಂಬಂಧಿಕರಿಗೆ 'ನಾನು ನಿಮ್ಮನ್ನು ಬಿಟ್ಟು ಹೋಗುತ್ತಿದ್ದೇನೆ. ನನ್ನ ಕುಂಟುಬಕ್ಕೆ ಸಹಾಯ ಮಾಡಿ' ಎಂದು ವಾಟ್ಸ್‌ಆ್ಯಪ್‌ನಲ್ಲಿ ಆಡಿಯೊ ಸಂದೇಶ ಕಳುಹಿಸಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

'ಕುಟುಂಬದವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಹುಡುಕಿದಾಗ ಬೆಳಗಿನ ಜಾವ ರಸ್ತೆ ಬದಿಯಲ್ಲಿ ಕಾರು ಪತ್ತೆಯಾಗಿತ್ತು. ಅದರಲ್ಲಿ ವಿಷದ ಬಾಟಲಿಯೂ ಇತ್ತು. ದಿಲೀಪ್ ಅವರು ವಿಷಸೇವಿಸಿ ಬಳಿಕ, ಪರವಾನಗಿ ಇರುವ ರಿವಾಲ್ವರಿನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದೂ ಹೇಳಿದ್ದಾರೆ.

ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ-ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) **(as is where is and whatever there is basis')** ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ **(EMD)** ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ-ಪೋರ್ಟಲ್‌ನಲ್ಲಿ ಮಾತ್ರ)

Short Description of the Immovable Property

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 692/2019)	Minimum Bid Price (Rs)	EMD (Rs)	Bid Increase Value (Rs)
1.	No. 2/3, PID No.78--8, Spencer Road, Frazer Town, Bangalore-05, measuring East to West 52.6 ft and North to South 38 ft aggregating 1998.8 Sq.ft, (Ground + 4 Floors) Location: https://maps.app.goo.gl/G9RA8LCtotsY6jpdA			
(a)	Ground Floor, Flat No.GF-01, UDS-399.67, SBA- 1602 Sq.ft	1,70,00,000/-	17,00,000/-	1,70,000/-
(b)	1st Floor, Flat No. FF-01, UDS-399.76, SBA-1602.50 Sq.ft	1,72,00,000/-	17,20,000/-	1,72,000/-
(c)	2nd Floor, Flat No. SF-01, UDS-399.76 , SBA-1602.50 Sq.ft	1,74,00,000/-	17,40,000/-	1,74,000/-
(d)	3rd Floor, Flat No.TF-01, UDS-399.76 , SBA-1602.50 Sq.ft	1,71,00,000/-	17,10,000/-	1,71,000/-
(e)	4th Floor, Flat No.FRF-01, UDS-399.76 , SBA-1602.50 Sq.ft	1,71,00,000/-	17,10,000/-	1,71,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ-ಹರಾಜಿನ ದಿನಾಂಕ ಮತ್ತು ಸಮಯ
2ನೇ ಜೂನ್ 2025 ಮಧ್ಯಾಹ್ನ 3 ರಿಂದ 4 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು-01	3ನೇ ಜೂನ್ 2025 ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ	5ನೇ ಜೂನ್ 2025 ಸಂಜೆ 5 ಗಂಟೆಯವರೆಗೆ	6ನೇ ಜೂನ್ 2025 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080-46010000, 080-68948777) ಮತ್ತು ಇ-ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರನ್ನು ಸಂಪರ್ಕಿಸಬಹುದು. ಇ-ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 6364403715 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 22.04.2025

ಸಹಿ/- ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

DIPR/CP/418/Zen/2025-26

ಕರ್ನಾಟಕ ಸರಕಾರ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No: 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ-4:ವಿವಿಧ/2025-26/384 ದಿನಾಂಕ:29/04/2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **60.40** ಲಕ್ಷ ಮೊತ್ತದಲ್ಲಿ ಒಟ್ಟು 03 ಕಾಮಗಾರಿಗೆ (ಕನಿಷ್ಟ ಮೊತ್ತ ರೂ: **5.20** ಲಕ್ಷ ಹಾಗೂ ಗರಿಷ್ಟ ಮೊತ್ತ ರೂ: **50** ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ- 1, ಹಾಗೂ 2, ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No : 20166-ST and 19395 Category-2a

Part-1)

ಮೇಲಿನ ಕಾಮಗಾರಿಗಳ ವರ್ಕ ಇಂಡೆಂಟ್ ವ ಇ 20166-ಎಸ್‌ಟಿ ಹಾಗೂ 19395-ಕೆಟಗರಿ-2ಎ ಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **09-05-2025** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13-05-2025** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ /ಆರ್ಥಿಕ ಬಿಡ್ ತೆರೆಯುವ ದಿನಾಂಕ : **14-05-2025**

Work Indent No : W.I 19844

Part-2)

ಮೇಲಿನ ಕಾಮಗಾರಿಯ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **05-05-2025** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **06-05-2025** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : **07-05-2025**

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/40/2025-26

ಡಿಜಿಪಿ ಸೇವಾವಧಿ ಮೇ 21ರವರೆಗೆ ವಿಸ್ತರಣೆ

ಒಂದನೇ ಪುಟದಿಂದ...

ಅಲೋಕ್ ಅವರು ಮಂಗಳವಾರ ವಯೋನಿವೃತ್ತಿ ಹೊಂದಬೇಕಿತ್ತು.

2023ರ ಮೇ 22ರಂದು ಅಲೋಕ್ ಅವರು ಪ್ರವೀಣ್ ಸೂದ್ ಅವರಿಂದ ಅಧಿ ಕಾರ ಸ್ವೀಕರಿಸಿದ್ದರು. ಆರಂಭದ ಮೂರು ತಿಂಗಳು ಪ್ರಭಾರ ಡಿಜಿಪಿಯಾಗಿದ್ದು, ಬಳಿಕ ಅವರನ್ನು ಪೂರ್ಣ ಪ್ರಮಾಣದ ಡಿಜಿಪಿಯಾಗಿ ಸರ್ಕಾರ ನೇಮಿಸಿತ್ತು

ಪ್ರಸ್ತುತ ಸೇವಾ ಹಿರಿತನದಲ್ಲಿ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ಸಿಐಡಿ ಡಿಜಿಪಿ ಡಾ.ಎ.ಎಂ. ಸಲೀಂ ಮತ್ತು ಕೆ.ರಾಮಚಂದ್ರ ರಾವ್ ಹೆಸರು ಪಟ್ಟಿಯಲ್ಲಿದೆ. ಇದರಲ್ಲಿ ರನ್ಯಾ ರಾವ್ ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ರಾಮಚಂದ್ರ ರಾವ್‌ಗೆ ಸರ್ಕಾರ ಕಡ್ಡಾಯ ರಜೆ ಮೇಲೆ ಕಳುಹಿಸಿದೆ. ಆದ್ದರಿಂದ ಪ್ರಶಾಂತ್ ಕುಮಾರ್ ಠಾಕೂರ್ ಹಾಗೂ ಸಲೀಂ ಹೆಸರು ಮುಂಚೂಣಿಯಲ್ಲಿವೆ.

ಬಿಹಾರ ರಾಜ್ಯದವರಾದ ಪ್ರಶಾಂತ್ ಕುಮಾರ್ ಠಾಕೂರ್, 1992ನೇ ಸಾಲಿನ ಕರ್ನಾಟಕ ಕೇಡರ್ ಅಧಿಕಾರಿ. ಬೆಂಗಳೂರಿನ ಚಿಕ್ಕಬಾಣಾವರದ ಕನ್ನಡಿಗ ಎ.ಎಂ. ಸಲೀಂ ಅವರು 1993ನೇ ಸಾಲಿನ ಕರ್ನಾಟಕ ಕೇಡರ್ ಅಧಿಕಾರಿ.

ರಾಜ್ಯದಲ್ಲಿ ಡಿಜಿ-ಐಜಿಪಿಯ ಕನಿಷ್ಠ ಅಧಿಕಾರದ ಅವಧಿ ಎರಡು ವರ್ಷ ಇರಬೇಕು ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ಈ ಆದೇಶದಂತೆ ಅಲೋಕ್ ಮೋಹನ್ ಅವರನ್ನು ಮೂರು ತಿಂಗಳು ಡಿಜಿಪಿ ಹುದ್ದೆಯಲ್ಲಿ ಮುಂದುವರಿಸು ವಂತೆ ಕೋರಿ ಕೇಂದ್ರ ಗೃಹ ಇಲಾಖೆಗೆ ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವಕ್ಕೆ ಇನ್ನೂ ಒಪ್ಪಿಗೆ ದೊರೆತಿಲ್ಲ. ಪ್ರಶಾಂತ್ ಕುಮಾರ್ ಠಾಕೂರ್ ಅವರು ಸಲೀಂ ಅವರಿಗಿಂತ ಒಂದು ವರ್ಷ ಸೇವಾ ಹಿರಿತನ ಹೊಂದಿದ್ದಾರೆ.

ಪ್ರಭಾಸ್

ಬಾಹುಬಲಿ–2 ಮರು ಬಿಡುಗಡೆ

ರಾಜಮೌಳಿ ನಿರ್ದೇಶಿಸಿ ಪ್ರಭಾಸ್, ಅನುಷ್ಕಾ ಶೆಟ್ಟಿ ನಟಿಸಿರುವ 'ಬಾಹುಬಲಿ–2' ಚಿತ್ರ ಬಾಕ್ಸಾಫೀಸ್‌ನಲ್ಲಿ ಮೋಡಿ ಮಾಡಿತ್ತು. ಚಿತ್ರ ಬಿಡುಗಡೆಗೊಂಡು ಎಂಟು ವರ್ಷಗಳು ಕಳೆದಿವೆ. 'ಇದೇ ಖುಷಿಯಲ್ಲಿ ನಾವು ಈ ಚಿತ್ರವನ್ನು ಈ ವರ್ಷ ಅಕ್ಟೋಬರ್‌ನಲ್ಲಿ ಮರು ಬಿಡುಗಡೆ ಮಾಡುತ್ತೇವೆ' ಎಂದು ಚಿತ್ರದ ನಿರ್ಮಾಪಕ, ಅರ್ಕಾ ಮೀಡಿಯಾದ ಶೋಭು ಯರ್ಲಗಡ್ಡ ತಮ್ಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಚಾರ್ಮಿ ಕೌರ್, ದುನಿಯಾ ವಿಜಯ್, ಪುರಿ ಜಗನ್ನಾಥ್

ಮಾಸ್ ಸಿನಿಮಾಗಳಿಗೆ ಹೆಸರಾದ ಪುರಿ ಜಗನ್ನಾಥ್, ಉತ್ತಮ ಕಂಟೆಂಟ್ ಸಿನಿಮಾಗಳನ್ನು ಮಾಡುವ ವಿಜಯ್ ಸೇತುಪತಿ ಜತೆ ಕೈಜೋಡಿಸಿದಾಗಲೇ ನಿರೀಕ್ಷೆ ಹೆಚ್ಚಾಗಿತ್ತು. ಇದೀಗ ವಿವಿಧ ಚಿತ್ರರಂಗಗಳ ಭಿನ್ನ ಅಭಿರುಚಿಯ ಕಲಾವಿದರು ಈ ತಂಡ ಸೇರಿಕೊಳ್ಳುತ್ತಿದ್ದಾರೆ. ಸ್ಯಾಂಡಲ್‌ವುಡ್‌ನ ದುನಿಯಾ ವಿಜಯ್ ಕೂಡ ತಂಡದ ಭಾಗವಾಗಿದ್ದಾರೆ.

ವಿಜಯ್ ಸೇತುಪತಿ ಜತೆ ದುನಿಯಾ ವಿಜಯ್

ಪುರಿ ಜಗನ್ನಾಥ್, ವಿಜಯ್ ಸೇತುಪತಿಗೆ ಸಿನಿಮಾ ಮಾಡುತ್ತಿರುವುದು ಗೊತ್ತೇ ಇದೆ. ಈ ಸಿನಿಮಾದ ಚಿತ್ರೀಕರಣ ಜೂನ್‌ನಿಂದ ಆರಂಭ ಆಗಲಿದೆ. ಇದೊಂದು ಮಲ್ಟಿಸ್ಟಾರರ್ ಸಿನಿಮಾ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಪುರಿ ಜಗನ್ನಾಥ್ ಮಾಸ್ ಸಿನಿಮಾಗಳಿಗೆ ಜನಪ್ರಿಯ. ಕನ್ನಡದಲ್ಲಿ ಪುನೀತ್ ರಾಜ್‌ಕುಮಾರ್ ಅವರನ್ನು ಚಿತ್ರೋದ್ಯಮಕ್ಕೆ ಪರಿಚಯಿಸಿದ 'ಅಪ್ಪು' ಸಿನಿಮಾವನ್ನು ನಿರ್ದೇಶಿಸಿದ್ದರು. ಶಿವಣ್ಣ ಅಭಿನಯದ 'ಯುವರಾಜ' ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಿದ್ದರು. ಟಾಲಿವುಡ್‌ನಲ್ಲಿ ಹಲವು ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಆದಾಗ್ಯೂ ಅವರ ಇತ್ತೀಚಿನ 'ಲೈಗರ್' ಮತ್ತು 'ಡಬಲ್ ಇಸ್ಮಾರ್ಟ್' ಚಿತ್ರಗಳು ನಿರೀಕ್ಷಿತ ಯಶಸ್ಸು ಕಂಡಿಲ್ಲ.

ಇನ್ನೂ ವಿಜಯ್ ಸೇತುಪತಿ ಸದಾ ವಿಭಿನ್ನ ಕಥಾವಸ್ತು ಹೊಂದಿರುವ ಸಿನಿಮಾಗಳನ್ನು ಆಯ್ದುಕೊಳ್ಳುವವರು. ಈ ವರ್ಷ ತೆರೆಕಂಡ ಅವರ 'ಮಹಾರಾಜ' ಚಿತ್ರ ಭರ್ಜರಿ ಯಶಸ್ಸು ಗಳಿಸಿತ್ತು. 'ಏಸ್', 'ಟ್ರೈನ್' ಚಿತ್ರಗಳು ಚಿತ್ರೀಕರಣದ ಹಂತದಲ್ಲಿವೆ. ಸೇತುಪತಿ–ಪುರಿ ಜಗನ್ನಾಥ್ ಕಾಂಬಿನೇಷನ್ ಸಿನಿಮಾ ಯಾವ ಜಾನರ್‌ನದ್ದಾಗಿರಬಹುದೆಂಬ ಕುತೂಹಲವಿದೆ.

ಬಹುಭಾಷೆಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಚಿತ್ರಕ್ಕೆ ವಿಜಯ್ ಸೇರ್ಪಡೆ ನಿರೀಕ್ಷೆಯನ್ನು ಇನ್ನಷ್ಟು ಹೆಚ್ಚಿಸಿದೆ. 'ಭೀಮ' ಸಿನಿಮಾದ ಗೆಲುವಿನ ಖುಷಿಯಲ್ಲಿರುವ ವಿಜಯ್ ಬಳಿ ಸಾಲು ಸಾಲು ಸಿನಿಮಾಗಳಿವೆ. ಜಡೇಶ್ ಹಂಪಿ ನಿರ್ದೇಶನದ 'ಲ್ಯಾಂಡ್ ಲಾರ್ಡ್' ಚಿತ್ರ ಬಹುತೇಕ ಪೂರ್ಣಗೊಂಡಿದೆ. ತಮ್ಮ ಮತ್ತೋರ್ವ ಪುತ್ರಿ ಮೋನಿಷಾ ವಿಜಯ್ ಮತ್ತು ವಿನಯ್ ರಾಜ್‌ಕುಮಾರ್ ಕಾಂಬಿನೇಷನ್‌ನ 'ಸಿಟಿ ಲೈಟ್ಸ್' ಚಿತ್ರವನ್ನು ವಿಜಯ್ ನಿರ್ದೇಶಿಸುತ್ತಿದ್ದು, ಚಿತ್ರೀಕರಣ ಪ್ರಗತಿಯಲ್ಲಿದೆ. ತಮಿಳಿನ 'ಮೂಕುತಿ ಅಮ್ಮನ್ 2' ಸಿನಿಮಾದಲ್ಲೂ ವಿಜಯ್ ಕಾಣಿಸಿಕೊಳ್ಳಲಿದ್ದಾರೆ. ಈ ಮೊದಲು ಇವರು 'ವೀರ ಸಿಂಹ ರೆಡ್ಡಿ' ಸಿನಿಮಾ ಮೂಲಕ ತೆಲುಗು ಚಿತ್ರರಂಗಕ್ಕೆ ಕಾಲಿಟ್ಟಿದ್ದರು.

ಸೇತುಪತಿ ಜತೆಗಿನ ಪ್ಯಾನ್ ಇಂಡಿಯಾ ಸಿನಿಮಾಗೆ ಪುರಿ ಜಗನ್ನಾಥ್ ಮತ್ತು ಚಾರ್ಮಿ ಕೌರ್ ಅವರು ಬಂಡವಾಳ ಹೂಡುತ್ತಿದ್ದಾರೆ. ಬಾಲಿವುಡ್ ನಟಿ ಟಬು ಕೂಡ ಈ ಚಿತ್ರತಂಡ ಸೇರಿ ಕೊಂಡಿದ್ದಾರೆ.

ದುನಿಯಾ ವಿಜಯ್

ಮುಂದಿನ ವರ್ಷ 'ಭೈರವನ ಕೊನೆ ಪಾಠ'


ಶಿವರಾಜ್‌ಕುಮಾರ್

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ನಿರ್ದೇಶಕ ಹೇಮಂತ್ ಎಂ.ರಾವ್ ಶಿವರಾಜ್‌ಕುಮಾರ್ ಅವರಿಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿ 'ಭೈರವನ ಕೊನೆ ಪಾಠ' ಸಿನಿಮಾ ಕೈಗೆತ್ತಿಕೊಂಡಿದ್ದರು. ಸದ್ಯಕ್ಕೆ ಈ ಪ್ರಾಜೆಕ್ಟ್ ಅನ್ನು ಮುಂದೂಡಿರುವ ಹೇಮಂತ್ ಮತ್ತೊಂದು ಸಿನಿಮಾವನ್ನು ಇದೇ ವರ್ಷದಲ್ಲಿ ತೆರೆಗೆ ತರುವ ಸಿದ್ಧತೆಯಲ್ಲಿದ್ದಾರೆ.

'ಶಿವರಾಜ್‌ಕುಮಾರ್ ಅವರ ಅನಾರೋಗ್ಯದ ಸುದ್ದಿ ತಿಳಿದ ಸಂದರ್ಭದಲ್ಲಿ 'ಭೈರವನ ಕೊನೆ ಪಾಠ' ಸಿನಿಮಾಗೆ ಸೆಟ್ ಸಿದ್ಧವಾಗುತ್ತಿತ್ತು. ಈ ಸಿನಿಮಾ ಕಥೆ 12ನೇ ಶತಮಾನದಲ್ಲಿ ನಡೆಯುವಂತಹದ್ದು. ಇದು ಪೂರ್ಣವಾದ ಕಾಲ್ಪನಿಕ ಕಥೆ. ಆದರೆ ಫ್ಯಾಂಟಸಿ ಕಥೆಯಲ್ಲ. ನಮ್ಮ ನಾಡಿನಲ್ಲಿ ಆಳಿದ ನೂರಾರು ರಾಜರ ಪೈಕಿ ಕೆಲವರ ಕಥೆಯಷ್ಟೇ ನಮಗೆ ತಿಳಿದಿದೆ. 'ಭೈರವನ ಕೊನೆ ಪಾಠ' ಒಂದು ಸಾಮ್ರಾಜ್ಯದ ಕಥೆ. ಇದು ದೊಡ್ಡ ಸ್ಕೇಲ್‌ನ ಪ್ರಾಜೆಕ್ಟ್. ಈ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಅವರ ಪಾತ್ರಕ್ಕೆ ಹೆಚ್ಚಿನ ದೈಹಿಕ ಶ್ರಮದ ಅಗತ್ಯವಿತ್ತು. ಇದರಲ್ಲಿ ಕುದುರೆ ಓಡಿಸಬೇಕು, ತೂಕವುಳ್ಳ ವಸ್ತ್ರಗಳನ್ನು ಧರಿಸಬೇಕು. ಹೀಗಾಗಿ ಅವರು ಈ ಪಾತ್ರಕ್ಕೆ ದೈಹಿಕವಾಗಿ ಸಂಪೂರ್ಣ ಸಿದ್ಧರಿರುವವರೆಗೂ ಚಿತ್ರೀಕರಣ ಮುಂದೂಡಲು ನಾವೇ ನಿರ್ಧರಿಸಿದೆವು. ಅವರಿಗೂ ಡ್ಯೂಪ್ ಬಳಸುವುದು ಇಷ್ಟವಿರಲಿಲ್ಲ. ತಾವೇ ಆ ಪಾತ್ರವನ್ನು ಸಂಪೂರ್ಣವಾಗಿ ನಿಭಾಯಿಸಬೇಕು ಎಂದಿದ್ದರು. ಶಿವರಾಜ್‌ಕುಮಾರ್ ಅವರನ್ನು ಹೊಸದೊಂದು ಪಾತ್ರದಲ್ಲಿ ತೋರಿಸುವುದು ನಮ್ಮ ಉದ್ದೇಶ. ಹೀಗಾಗಿ ಇದೇ ವರ್ಷಾಂತ್ಯದಲ್ಲಿ ಅಥವಾ ಮುಂದಿನ ವರ್ಷದ ಆರಂಭದಲ್ಲಿ ಈ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ' ಎಂದರು ಹೇಮಂತ್.

ಹೇಮಂತ್

'ಈ ನಡುವೆ ಹೊಸದೊಂದು ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದೇನೆ. ಇದು ಪ್ರಿ ಪ್ರೊಡಕ್ಷನ್ ಹಂತದಲ್ಲಿದೆ. ನಟ ಧನಂಜಯ ಸೇರಿದಂತೆ ಕಲಾವಿದರ ಜೊತೆ ಮಾತುಕತೆ ನಡೆಯುತ್ತಿದೆ. ಯಾವುದೂ ಅಂತಿಮಗೊಂಡಿಲ್ಲ. ಅಧಿಕೃತವಾಗಿ ಘೋಷಣೆಯಾಗಿಲ್ಲ. ಈ ಸಿನಿಮಾವನ್ನು ಇದೇ ವರ್ಷ ಪೂರ್ಣಗೊಳಿಸಿ, ತೆರೆಗೆ ತರುವ ಆಲೋಚನೆ ಇದೆ' ಎಂದಿದ್ದಾರೆ.

ದಾಕ್ಷಾಯಣಿ ಟಾಕೀಸ್ ಮೂಲಕ ನಿರ್ಮಾಪಕರಾಗಿ ಗುರುತಿಸಿಕೊಂಡಿರುವ ಹೇಮಂತ್, ಇತ್ತೀಚೆಗೆ 'ಅಜ್ಞಾತವಾಸಿ' ತೆರೆಗೆ ತಂದಿದ್ದರು. 'ಹಲವು ಕಥೆಗಳನ್ನು ಕೇಳಿದ್ದು, ಮೂರ್ನಾಲ್ಕು ಕಥೆಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಇವುಗಳ ನಿರ್ಮಾಣ ಮಾಡಲಿದ್ದೇನೆ. ನನ್ನ ನಿರ್ಮಾಣ ಸಂಸ್ಥೆಯಡಿ ನನ್ನ ಸಿನಿಮಾಗಳೂ ಸೇರಿದಂತೆ ಇತರರ ಸಿನಿಮಾಗಳೂ ನಿರ್ಮಾಣವಾಗಲಿದೆ' ಎಂದರು ಹೇಮಂತ್. ❖

ಪ್ರಶಾಂತ್ ನೀಲ್

2026 ಜೂನ್ 25ಕ್ಕೆ #ಎನ್‌ಟಿಆರ್‌-ನೀಲ್

ತೆಲುಗಿನ ಖ್ಯಾತ ನಟ ಜೂನಿಯರ್ ಎನ್‌ಟಿಆರ್ ಹಾಗೂ ನಿರ್ದೇಶಕ ಪ್ರಶಾಂತ್ ನೀಲ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಸಿನಿಮಾ 2026ರ ಜೂನ್ 25ಕ್ಕೆ ಬಿಡುಗಡೆಯಾಗಲಿದೆ.

'ಪುಷ್ಪ', 'ರಂಗಸ್ಥಳಂ' ಮುಂತಾದ ಸಿನಿಮಾಗಳನ್ನು ನಿರ್ಮಾಣ ಮಾಡಿದ ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದು, ಕಳೆದ ಫೆ.20ರಂದು ಶೂಟಿಂಗ್ ಆರಂಭವಾಗಿತ್ತು. ಇನ್ನಷ್ಟೇ ಶೀರ್ಷಿಕೆ ಇಡಬೇಕಾದ ಈ ಸಿನಿಮಾ ಬಿಗ್‌ಬಜೆಟ್‌ನಲ್ಲಿ ತಯಾರಾಗುತ್ತಿದೆ. ತಮ್ಮ ಆ್ಯಕ್ಷನ್ ಸಿನಿಮಾಗಳ ಮೂಲಕವೇ ಸದ್ದು ಮಾಡಿರುವ ನೀಲ್, ಕನ್ನಡದಲ್ಲಿ ಕೆ.ಜಿ.ಎಫ್. ಸಿನಿಮಾ ಸರಣಿ ಬಳಿಕ, 'ಸಲಾರ್' ಸಿನಿಮಾದಲ್ಲಿ ಪ್ರಭಾಸ್‌ಗೆ ಆ್ಯಕ್ಷನ್ ಕಟ್ ಹೇಳಿದ್ದರು. ಇದೀಗ 'ಆರ್.ಆರ್.ಆರ್' ಖ್ಯಾತಿಯ ಜೂನಿಯರ್ ಎನ್‌ಟಿಆರ್ ಜೊತೆ ಸಿನಿಮಾ ಮಾಡುತ್ತಿದ್ದಾರೆ.

ಮೂಲ ತೆಲುಗು ಜೊತೆಗೆ, ತಮಿಳು, ಹಿಂದಿ, ಕನ್ನಡ ಮತ್ತು ಮಲಯಾಳದಲ್ಲಿ ಈ ಸಿನಿಮಾ ತೆರೆಕಾಣಲಿದೆ. ಈ ಆ್ಯಕ್ಷನ್ ಪ್ಯಾಕ್ಡ್ ಚಿತ್ರಕ್ಕೆ ನೀಲ್ ಅವರೇ ಚಿತ್ರಕಥೆ ಬರೆದಿದ್ದಾರೆ.

ಚಿತ್ರವನ್ನು ಕಲ್ಯಾಣ್ ರಾಮ್ ನಂದಮೂರಿ, ನವೀನ್ ಯೆರ್ನೇನಿ, ರವಿಶಂಕರ್ ಯಲಮಂಚಿಲಿ ಮತ್ತು ಹರಿಕೃಷ್ಣ ಕೊಸರಾಜು ಅವರು ಮೈತ್ರಿ ಮೂವೀ ಮೇಕರ್ಸ್ ಮತ್ತು ಎನ್‌ಟಿಆರ್ ಆರ್ಟ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸುತ್ತಿದ್ದಾರೆ. 'ಕೆ.ಜಿ.ಎಫ್', 'ಸಲಾರ್' ಖ್ಯಾತಿಯ ಭುವನ್ ಗೌಡ ಈ ಚಿತ್ರಕ್ಕೆ ಛಾಯಾಚಿತ್ರಗ್ರಹಣ ಮಾಡಲಿದ್ದು, 'ಕೆ.ಜಿ.ಎಫ್.' ಖ್ಯಾತಿಯ ರವಿ ಬಸ್ರೂರ್ ಸಂಗೀತ ಸಂಯೋಜಿಸಲಿದ್ದಾರೆ. ❖

ಜೂನಿಯರ್ ಎನ್‌ಟಿಆರ್

ಶೈಕ್ಷಣಿಕ ವಿಚಾರದಲ್ಲಿ ಹಸ್ತಕ್ಷೇಪ ಬಿಸಿಐ ನಡೆಗೆ ಕೋರ್ಟ್ ಅತೃಪ್ತಿ

ನವದೆಹಲಿ (ಪಿಟಿಐ): 'ಕಾನೂನು ಕಾಲೇಜುಗಳ ಶೈಕ್ಷಣಿಕ ವಿಚಾರಗಳಲ್ಲಿ ಹಸ್ತಕ್ಷೇಪ ನಡೆಸಿದ್ದಕ್ಕಾಗಿ' ಭಾರತೀಯ ವಕೀಲರ ಪರಿಷತ್ತನ್ನು (ಬಿಸಿಐ) ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿದೆ. ಶೈಕ್ಷಣಿಕ ವಿಚಾರಗಳನ್ನು ಶಿಕ್ಷಣ ತಜ್ಞರಿಗೆ ಬಿಟ್ಟುಬಿಡಬೇಕು ಎಂದು ಹೇಳಿದೆ.

ಒಂದು ವರ್ಷದ ಎಲ್‌ಎಲ್‌ಎಂ ಕೋರ್ಸ್ ರದ್ದುಪಡಿಸಲು ಹಾಗೂ ವಿದೇಶಿ ಎಲ್‌ಎಲ್‌ಎಂಗಳ ಮಾನ್ಯತೆಯನ್ನು ಹಿಂಪಡೆಯಲು ಪರಿಷತ್ತು 2021ರಲ್ಲಿ ಕೈಗೊಂಡ ತೀರ್ಮಾನವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ನಡೆಸುತ್ತಿದೆ.

'ನೀವು ಶೈಕ್ಷಣಿಕ ವಿಷಯಗಳಲ್ಲಿ ಏಕೆ ಮಧ್ಯಪ್ರವೇಶ ಮಾಡುತ್ತಿದ್ದೀರಿ? ಕಾನೂನು ಕಾಲೇಜುಗಳ ಪಠ್ಯಕ್ರಮ ಮತ್ತಿತರ ಸಂಗತಿಗಳನ್ನು ಪರಿಷತ್ತು ಏಕೆ ತೀರ್ಮಾನಿಸಬೇಕು? ಇವನ್ನು ಶಿಕ್ಷಣ ತಜ್ಞರು ಪರಿಶೀಲಿಸಬೇಕು. ಈ ದೇಶದಲ್ಲಿ ವಕೀಲರ ಬಹುದೊಡ್ಡ ವರ್ಗವಿದೆ. ಅವರ ಜ್ಞಾನವನ್ನು ಹೆಚ್ಚಿಸುವ, ಅವರಿಗೆ ತರಬೇತಿ ಕಾರ್ಯಕ್ರಮ ಆಯೋಜಿಸುವ ಶಾಸನಬದ್ಧವಾದ ಹೊಣೆಗಾರಿಕೆ ನಿಮ್ಮ ಮೇಲಿದೆ' ಎಂದು ಪೀಠವು ಹೇಳಿತು.

ಈಗಿನ ಕಾನೂನು ಶಿಕ್ಷಣ ವ್ಯವಸ್ಥೆಯಲ್ಲಿ ತಳಮಟ್ಟದಲ್ಲಿ ಉದ್ಯೋಗ ಪಡೆದುಕೊಳ್ಳುತ್ತಿರುವ ನ್ಯಾಯಾಂಗ ಅಧಿಕಾರಿಗಳ ಗುಣಮಟ್ಟದ ಬಗ್ಗೆಯೂ ಪೀಠವು ಅಸಮಾಧಾನ ವ್ಯಕ್ತಪಡಿಸಿತು.

'ಕಾನೂನು ಶಿಕ್ಷಣ ವ್ಯವಸ್ಥೆಯಲ್ಲಿ ನ್ಯಾಯಾಂಗವು ಪ್ರಾಥಮಿಕ ಪಾಲುದಾರ... ನಮಗೆ ಎಂತಹ ಅಧಿಕಾರಿಗಳು ಸಿಗುತ್ತಿದ್ದಾರೆ? ಅವರನ್ನು ಸರಿಯಾಗಿ ಸಜ್ಜುಗೊಳಿಸಲಾಗುತ್ತಿದೆಯೇ? ಅವರಿಗೆ ಅನುಕಂಪ ಇದೆಯೇ? ಅವರಿಗೆ ತಳಮಟ್ಟದಲ್ಲಿನ ವಾಸ್ತವ ಅರ್ಥವಾಗುತ್ತದೆಯೇ ಅಥವಾ ಅವರು ಯಾಂತ್ರಿಕವಾಗಿ ಆದೇಶ ನೀಡುತ್ತಾರೆಯೇ' ಎಂದು ಪ್ರಶ್ನಿಸಿತು. ಈ ವಿಚಾರಗಳನ್ನು ಶಿಕ್ಷಣ ತಜ್ಞರು ಪರಿಶೀಲಿಸಬಹುದು ಎಂದು ಹೇಳಿತು.

'ನೀವು (ಭಾರತೀಯ ವಕೀಲರ ಪರಿಷತ್ತು) ನಿಮ್ಮ ಜವಾಬ್ದಾರಿ ಬಗ್ಗೆ ಗಮನ ಕೊಡಿ. ದೇಶದಲ್ಲಿ ಸರಿಸುಮಾರು 10 ಲಕ್ಷ ವಕೀಲರು ಇದ್ದಾರೆ. ನೀವು ಕಾನೂನು ಕಾಲೇಜುಗಳ ಪರಿಶೀಲನೆ ನಡೆಸುವ ಬದಲು ವಕೀಲರಿಗೆ ತರಬೇತಿ ನೀಡುವ ಬಗ್ಗೆ ಗಮನ ಕೊಡಿ' ಎಂದು ಪೀಠ ಹೇಳಿತು. ವಿಚಾರಣೆಯನ್ನು ಜುಲೈಗೆ ಮುಂದೂಡಲಾಗಿದೆ.

ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಜಾಮೀನು ಅರ್ಜಿ ತಿರಸ್ಕೃತ

ನವದೆಹಲಿ(ಪಿಟಿಐ): 1990ರಲ್ಲಿ ಪೊಲೀಸ್ ವಶದಲ್ಲಿ ಇದ್ದಾಗಲೇ ವ್ಯಕ್ತಿಯೊಬ್ಬ ಮೃತಪಟ್ಟ ಪ್ರಕರಣದಲ್ಲಿ ದೋಷಿಯಾಗಿರುವ ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಅವರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ. ಈ ಪ್ರಕರಣದಲ್ಲಿ ಭಟ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.


ಸಂಜೀವ್ ಭಟ್

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನು ಒಳಗೊಂಡ ನ್ಯಾಯಪೀಠವು, ಪ್ರಕರಣದಲ್ಲಿ ಜಾಮೀನು ನೀಡಬೇಕು ಅಥವಾ ವಿಧಿಸಿರುವ ಶಿಕ್ಷೆಯನ್ನು ಅಮಾನತು ಮಾಡಬೇಕು ಎನ್ನುವುದರಲ್ಲಿ ಯಾವುದೇ ಹುರುಳಿಲ್ಲ ಎಂದು ತಿಳಿಸಿತು.

ಭಟ್ ಅವರು, ದೋಷಾರೋಪಣೆ ಮತ್ತು ಶಿಕ್ಷೆ ವಿಧಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರಣೆಯೂ ಬಾಕಿ ಇದೆ.

ಪ್ರಕರಣವೇನು: ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿ ಅವರ ರಥಯಾತ್ರೆಯ ಸಂದರ್ಭದಲ್ಲಿ ಕರೆ ನೀಡಿದ್ದ ಬಂದ್ ವೇಳೆ ನಡೆದ ಕೋಮುಗಲಭೆಗೆ ಸಂಬಂಧಿಸಿ 1990ರ ಅ. 30ರಂದು ಸುಮಾರು 150 ಜನರನ್ನು ಅಂದಿನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಭಟ್ ಬಂಧಿಸಿದ್ದರು. ಬಂಧಿತರ ಪೈಕಿ ಪ್ರಭುದಾಸ ವೈಷ್ಣಾನಿ ಸಹ ಒಬ್ಬರಾಗಿದ್ದರು. ಬಿಡುಗಡೆಯಾದ ನಂತರ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಜೈಲಿನಲ್ಲಿದ್ದಾಗ ಅವರಿಗೆ ಚಿತ್ರಹಿಂಸೆ ನೀಡಲಾಗಿತ್ತು ಎಂದು ವೈಷ್ಣಾನಿ ಅವರ ಸಹೋದರ ಆರೋಪಿಸಿದ್ದರು.

ಡಿಎಂಕೆಗೆ ಮತ್ತೆ ಅಧಿಕಾರ: ಸ್ಟಾಲಿನ್

ಚೆನ್ನೈ (ಪಿಟಿಐ): 'ಮುಂದಿನ ವರ್ಷ ನಡೆಯುವ ಚುನಾವಣೆಯಲ್ಲಿ ಡಿಎಂಕೆ ಮತ್ತೆ ಅಧಿಕಾರ ಹಿಡಿಯಲಿದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ವಿಶ್ವಾಸ ವ್ಯಕ್ತಪಡಿಸಿದರು.

ಅಧಿವೇಶನದಲ್ಲಿ ಗೃಹ ಇಲಾಖೆ ಮೇಲಿನ ಚರ್ಚೆ ವೇಳೆ ಮಾತನಾಡಿದ ಅವರು, 'ಕಳೆದ 4 ವರ್ಷಗಳ ಡಿಎಂಕೆ ಆಡಳಿತದಲ್ಲಿ ರಾಜ್ಯ ಹಲವು ಕ್ಷೇತ್ರಗಳಲ್ಲಿ ಮೇಲುಗೈ ಸಾಧಿಸಿದೆ' ಎಂದು ತಿಳಿಸಿದರು.

'ಡಿಎಂಕೆ ಸರ್ಕಾರವು ಜಾರಿಗೊಳಿಸಿದ ಹಲವು ಕಲ್ಯಾಣ ಯೋಜನೆಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರು ಮೆಚ್ಚಿಕೊಂಡಿದ್ದು, ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರ ಹಿಡಿಯಲು ಜನರು ಆಶೀರ್ವದಿಸಲಿದ್ದಾರೆ. ದ್ರಾವಿಡ ಮಾದರಿ ಸರ್ಕಾರದ 2026ರ 2ನೇ ಅವಧಿಗೂ ಸಿದ್ಧವಾಗುತ್ತಿದ್ದೇವೆ' ಎಂದರು.

ಒಂದು ಭಾಷಣಕ್ಕೆ ಬೇರೆ ಬೇರೆ ರಾಜ್ಯಗಳಲ್ಲಿ ಕ್ರಮ ಜರುಗಿಸಬಹುದೇ: 'ಸುಪ್ರೀಂ' ಪ್ರಶ್ನೆ

ನವದೆಹಲಿ (ಪಿಟಿಐ): ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದ ಶಾರ್ಜೀಲ್ ಇಮಾಮ್ ಅವರನ್ನು ಒಂದು ಭಾಷಣಕ್ಕಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಕಾನೂನು ಕ್ರಮಕ್ಕೆ ಗುರಿಪಡಿಸಬಹುದೇ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಪ್ರಶ್ನಿಸಿದೆ.

ತಮ್ಮ ವಿರುದ್ಧ ನಾಲ್ಕು ರಾಜ್ಯಗಳಲ್ಲಿ (ಉತ್ತರಪ್ರದೇಶ, ಅಸ್ಸಾಂ, ಮಣಿಪುರ ಮತ್ತು ಅರುಣಾಲ ಪ್ರದೇಶ) ದಾಖಲಾಗಿರುವ ಬೇರೆ ಬೇರೆ ಎಫ್‌ಐಆರ್‌ಗಳನ್ನು ಒಗ್ಗೂಡಿಸಬೇಕು ಎಂದು ಇಮಾಮ್ ಅವರು 2020ರಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ನಡೆಸುತ್ತಿದೆ.

ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ವಿರೋಧಿಸಿ ನಡೆಸಿದ ಪ್ರತಿಭಟನೆಗಳ ಸಂದರ್ಭದಲ್ಲಿ ಇಮಾಮ್ ಅವರು ಪ್ರಚೋದನಕಾರಿಯಾಗಿ ಭಾಷಣ ಮಾಡಿದ್ದಾರೆ ಎಂದು ದೂರು ದಾಖಲು ಮಾಡಲಾಗಿದೆ.

ಒಂದು ಭಾಷಣಕ್ಕಾಗಿ ಇಮಾಮ್ ಅವರನ್ನು ಬೇರೆ ಬೇರೆ ರಾಜ್ಯಗಳಲ್ಲಿ ವಿಚಾರಣೆಗೆ ಒಳಪಡಿಸಲು ಅವಕಾಶ ಇಲ್ಲ ಎಂದು ಅವರ ವಕೀಲರು ವಾದಿಸಿದರು. 'ಇಮಾಮ್ ಅವರು ಬಿಹಾರದಲ್ಲಿ, ಉತ್ತರ ಪ್ರದೇಶದಲ್ಲಿ, ದೆಹಲಿಯಲ್ಲಿ ಗುಂಪುಗಳನ್ನು ಪ್ರಚೋದಿಸುವ ಕೆಲಸ ಮಾಡಿದ್ದಾರೆ. ಅಪರಾಧ ಕೃತ್ಯಗಳು ಬೇರೆಬೇರೆ ಇವೆ' ಎಂದು ದೆಹಲಿ ಪೊಲೀಸರ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಪ್ರತಿವಾದ ಮಂಡಿಸಿದರು.

'ಭಾಷಣ ಒಂದೇ ಆಗಿದೆ. ಭಾಷಣವು ಯೂಟ್ಯೂಬ್‌ನಲ್ಲಿ ಇದೆ ಎಂದಾದರೆ, ಅದನ್ನು ಭಾರತದಾದ್ಯಂತ ಆಲಿಸಬಹುದು. ಅದರ ಪರಿಣಾಮ ಒಂದೇ ಆಗಿರುತ್ತದೆ. ಇಮಾಮ್ ವಿರುದ್ಧದ ಪ್ರಕರಣವನ್ನು ದೆಹಲಿಗೆ ವರ್ಗಾಯಿಸಬೇಕು' ಎಂದು ಸಿಜೆಐ ಹೇಳಿದರು. ವಿಚಾರಣೆಯನ್ನು ಮುಂದೂಡಲಾಗಿದೆ.

ಶಿಕ್ಷಣದ ಆಧುನೀಕರಣಕ್ಕೆ ಸರ್ಕಾರ ಕಾರ್ಯತತ್ಪರ: ಮೋದಿ

ನವದೆಹಲಿ (ಪಿಟಿಐ): ದೇಶದ ಭವಿಷ್ಯಕ್ಕಾಗಿ ಯುವಜನರನ್ನು ರೂಪುಗೊಳಿಸುವಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ. ಶಿಕ್ಷಣದ ಆಧುನೀಕರಣಕ್ಕಾಗಿ ಸರ್ಕಾರವು ಕಾರ್ಯತತ್ಪರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಭಾರತ ಮಂಟಪದಲ್ಲಿ ನಡೆದ ವೈಯುಜಿಎಂ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, 'ಕೃತಕ ಬುದ್ಧಿಮತ್ತೆ, ಕ್ವಾಂಟಂ ಕಂಪ್ಯೂಟಿಂಗ್, ಬಾಹ್ಯಾಕಾಶ ತಂತ್ರಜ್ಞಾನ, ಆರೋಗ್ಯ ತಂತ್ರಜ್ಞಾನಕ್ಕೆ ಒತ್ತು ನೀಡಬೇಕಾದ ಅಗತ್ಯವಿದೆ' ಎಂದರು.

'ಭವಿಷ್ಯದ ತಂತ್ರಜ್ಞಾನ ಕ್ಷೇತ್ರದಲ್ಲಿ ಇಡೀ ಜಗತ್ತಿನಲ್ಲೇ ಭಾರತ ಮುಂಚೂಣಿಯಲ್ಲಿರುವಂತೆ ಕೆಲಸ ಮಾಡಬೇಕು. 21ನೇ ಶತಮಾನದ ಅಗತ್ಯಗಳನ್ನು ಪೂರೈಸಲು ದೇಶದ ಶಿಕ್ಷಣ ವ್ಯವಸ್ಥೆಗೆ ಆಧುನಿಕ ಸ್ಪರ್ಶ ನೀಡುವ ಅಗತ್ಯವಿದೆ' ಎಂದರು.

ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ ಎಂ.ಸಿ ರೋಡ್ ಮಂಡ್ಯ–571401

MUM/2024-25/IND0007/Call-2 Date:25.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ – (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮಂಡ್ಯ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪ್ರಯೋಗಾಲಯಕ್ಕೆ ಅವಶ್ಯಕವಿರುವ CHEMICALS/EQUIPMENTS/CONSUBABLES AND GLASSWARS ಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್‌ನ್ನು ಕೆ.ಟಿ.ಪಿ.ಪಿ ನಿಯಾಮಾವಳಿಯನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ https://kppp.karnatka.gov.in online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೀಕ್ಷಿಸಬಹುದು.

ಟೆಂಡರ್ ವೇಳಾಪಟ್ಟಿ

ಕ್ರ.ಸಂ	ಟೆಂಡರ್ ವಿವರ	ದಿನಾಂಕ	ಸಮಯ
01	Last date and time for tender queries/Clarifications	As Mentioned in the e-procurement Portal	
02	Last date and time of receipt of tenders		
03	Date of technical Bid opening		
04	Date and time of Financial Bid opening		

ಸೂಚನೆ: ಟೆಂಡರ್ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ ಮಾರ್ಪಾಡು ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ನವೀಕರಿಸಲಾಗುವುದು ಗುತ್ತಿಗೆದಾರರು ಗಮನಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9739565516.
ಇ–ಮೇಲ್ : registrar.mum@karnataka.gov.in

ಸಹಿ/–ಕುಲಸಚಿವರು, ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/57/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/AE-3/2025–26/269 ದಿ:–25.04.2025

ಅಲ್ಪಾವಧಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ.ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	THESE WORK ARE RESERVED FOR SC CATOGERY	
1	PWD/2024-25/EL/WORK_INDENT20751/Call-2	100.00
2	PWD/2024-25/EL/WORK_INDENT20760/Call-2	40.95
	THIS WORK IS RESERVED FOR ST CATOGERY	
3	PWD/2024-25/EL/WORK_INDENT20260/Call-2	17.77
	THIS WORK IS RESERVED FOR CATOGERY I	
4	PWD/2024-25/EL/WORK_INDENT20808/Call-2	53.24
	THIS WORK IS RESERVED FOR CATOGERY 2A	
5	PWD/2024-25/RD/WORK_INDENT18825 /Call-2	100.00
	General Works	
6	PWD/2024-25/EL/WORK_INDENT21330	50.00

1 ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2 ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **08.05.2025 (16.00 ಗಂಟೆಗೆ)**. 3 ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **09.05.2025 (16.30 ಗಂಟೆಗೆ)**. 4 ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಅರ್ಥಿಕ ಬಿಡ್ ತೆರೆಯುವ ದಿನಾಂಕ: **KPP Portal** ನಲ್ಲಿ ಇರುವಂತೆ
NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು **kppp Portal** ನಲ್ಲಿ ನೊಡಿಕೊಳ್ಳಬಹುದು

ವಾ.ಸಾ.ಸಂ.ಇ/ವಿಜಯನಗರ/2025–26/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/34
ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ದಾವಣಗೆರೆ ವಿಭಾಗ: ದಾವಣಗೆರೆ

ಸಂ: ಕರಾಸಾ:ದಾವಿ:ಸಂ:ವಾ:314:2025–26 ದಿನಾಂಕ: 29.04.2025

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 15/2025–26 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ನೂತನವಾಗಿ ಪ್ರಾರಂಭಗೊಂಡಿರುವ ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದಲ್ಲಿರುವ ತಳ ಅಂತಸ್ತು (ಪಾರ್ಕಿಂಗ್ ಸ್ಥಳ), ನೆಲ ಅಂತಸ್ತು, ಮೊದಲ ಅಂತಸ್ತು, ಎರಡನೇ ಅಂತಸ್ತು ಮತ್ತು ಮೂರನೇ ಅಂತಸ್ತು ಒಟ್ಟು ಸೇರಿ ಒಂದೇ ಪರವಾನಿಗೆ ನೀಡುವ ಸಲುವಾಗಿ "As is where is basis" ಆಧಾರದಲ್ಲಿ ಏಕೈಕ ಪರವಾನಿಗೆಗೆ **06** ವರ್ಷದ ಅವಧಿಗೆ (ಪ್ರತೀ ವರ್ಷ ಶೇ 05 ರಷ್ಟು ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಪರವಾನಿಗೆ ನೀಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಿಂದ ದಿನಾಂಕ: **29.04.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **19.05.2025, 5:00 ಗಂಟೆವರೆಗೆ.**
ತಳ ಅಂತಸ್ತು, ನೆಲ ಅಂತಸ್ತು, ಮೊದಲ ಅಂತಸ್ತು, ಎರಡನೇ ಅಂತಸ್ತು ಮತ್ತು ಮೂರನೇ ಅಂತಸ್ತಿನಲ್ಲಿರುವ ವಾಣಿಜ್ಯ ಸ್ಥಳದ ವಿವರ ಕೆಳಕಂಡಂತಿದೆ. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017, 794/2018 ಮತ್ತು 809/2021 ಹಾಗೂ ಅದರ ತಿದ್ದುಪಡಿ ಆದೇಶದಂತೆ ಇ–ಟೆಂಡರ್ ವಿವರ:

ಕ್ರ.ಸಂ.	ಬಸ್ ನಿಲ್ದಾಣದ ಹೆಸರು	ಮಳಿಗೆಯ ವಿವರ	ವಿಸ್ತೀರ್ಣ (ಚ.ಅ)	ಪರವಾನಿಗೆ ಅವಧಿ	ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ (ಜಿಎಸ್‌ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ (ರೂ.ಗಳಲ್ಲಿ)	ಡಿ.ಡಿ. ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಕೆಪಿಪಿ ಪೋರ್ಟಲ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಡಿಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿಎಸ್‌ಟಿ (ರೂ.ಗಳಲ್ಲಿ)
01	ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣ	ಶಾಪಿಂಗ್ ಮಾಲ್ ಏರಿಯಾ	130862.37	06 ವರ್ಷ	41,15,250/–	1,23,45,250/–	500/–	3540/–

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ–577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ –7760990452, ಸಹಾಯಕ ಸಂಚಾರ ಅಧೀಕ್ಷಕರು–7022030183.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ

ವಾಸಾಸಂಇ/ವಾ.ಪ್ರ/438/ಎಂಎಎ/25–26

ಕರ್ನಾಟಕ ಸರ್ಕಾರ (ಸ್ವಾಯತ್ತ ಸಂಸ್ಥೆ)
ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ

ಸಂ: ಕ್ರಿಮ್ಸ್/ಇ–ಟೆಂಡರ್/2025–26 ದಿನಾಂಕ: 29.04.2025

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕ್ರ.ಸಂ.1: ಟೆಂಡರ್ ಸಂಖ್ಯೆ: ಕ್ರಿಮ್ಸ್/ಮರು–ಟೆಂಡರ್/170/2025–26, ದಿನಾಂಕ: 29.04.2025
ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರದ 450 ಹಾಸಿಗೆಯ ಆಸ್ಪತ್ರೆಗೆ "OT Ceiling Lights" ಗಳ ಅಳವಡಿಕೆ ಮತ್ತು ಪೂರೈಕೆಗಾಗಿ ಮರು–ಟೆಂಡರ್ (2 ನೇ ಕರೆ) ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 29.04.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 07.05.2025 ರಂದು ಸಂಜೆ 5.00 ರ ಒಳಗೆ
ಕ್ರ.ಸಂ.2: ಟೆಂಡರ್ ಸಂಖ್ಯೆ: ಕ್ರಿಮ್ಸ್/ಮರು–ಟೆಂಡರ್/177/2025–26, ದಿನಾಂಕ: 29.04.2025
ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ Supply of Medical Oxygen and Nitrous Oxide Gases and Refilling of 6 KL Liquid Medical Oxygen Tank for One Year ಪೂರೈಕೆಗೆ ಮರು–ಟೆಂಡರ್ (2 ನೇ ಕರೆ) ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 29.04.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 07.05.2025 ರಂದು ಸಂಜೆ 5.00 ರ ಒಳಗೆ
ಕ್ರ.ಸಂ.3: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ–ಟೆಂಡರ್/181/2025–26, ದಿನಾಂಕ: 29.04.2025
ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ "Operation and Maintenance Services of STP (Sewage Treatment Plant) and ETP (Effluent Treatment Plant)" ಗಾಗಿ ಇ–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 29.04.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14.05.2025 ರಂದು ಸಂಜೆ 5.00 ರ ಒಳಗೆ
ಕ್ರ.ಸಂ.4: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ–ಟೆಂಡರ್/182/2025–26, ದಿನಾಂಕ: 29.04.2025
ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ವಿವಿಧ ಉಪಕರಣಗಳ ಪೂರೈಕೆಗಾಗಿ ಇ–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 02.05.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 16.05.2025 ರಂದು ಸಂಜೆ 5.00 ರ ಒಳಗೆ
ಕ್ರ.ಸಂ.5: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ–ಟೆಂಡರ್/183/2025–26, ದಿನಾಂಕ: 29.04.2025
ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ "Various Hospital Necessities Items and Instruments" ಗಳ ಪೂರೈಕೆಗೆ ಇ–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 03.05.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 17.05.2025 ರಂದು ಸಂಜೆ 5.00 ರ ಒಳಗೆ
ಕ್ರ.ಸಂ.6: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ–ಟೆಂಡರ್/184/2025–26, ದಿನಾಂಕ: 29.04.2025
ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ 2 ton Split Air Conditioner ಗಳ ಪೂರೈಕೆ ಮತ್ತು ಅಳವಡಿಕೆಗಾಗಿ ಇ–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 03.05.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 17.05.2025 ರಂದು ಸಂಜೆ 5.00 ರ ಒಳಗೆ
ಈ ಮೇಲ್ಕಂಡ ಟೆಂಡರ್‌ಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

ಸಹಿ/– ನಿರ್ದೇಶಕರು

DIPR/KWR/KSMCA/66/25-26 dt. 29.04.2025

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

HIRING EXPERIENCED Maths, computer teacher for high school and Pre-primary coordinator. Location: Amruthahalli North-Bangalore. Call- 9448711695

R E S POLYTECHNIC (Estd: 1986)
5, Sunkadakatte, Magadi Main Road, Hegganahalli Cross, Bengaluru-91 Phone: 080-23484814
REQUIRE PRINCIPAL / VICE PRINCIPAL
FULLTIME/PARTTIME-LECTURERS
LAB INSTRUCTORS / ASSISTANTS
For polytechnic courses
CS / EC / CIVIL / MECH / EE / FASHION / COMMERCE / AUTO
Note: Send your resume to: respt450@gmail.com
WITH stating branch of your specialization in SUBJECT line
Apply to CHAIRMAN within 5 days
RES-25602

ST.GEORGE HIGH SCHOOL
Anagalapura, Dodda Gubbi P.O
Bengululu- 560077
Wanted Qualified & Experienced Teachers for the following posts.
ENGLISH, SOCIAL SCIENCE (High School), KINDERGARTEN
For More Details
7625038881,7625058881
Email : sghsbangalore@gmail.com

WANTED TEACHERS, H.M'S, CLERK, OFFICE ASSISTANT for Radha Krishna English Medium Nursery, Primary & High School. Food and accommodation provided for needy people. Widows, orphans, retired people can apply. 9449819999/ 7090398888

GAAYATHRI VIDYANIKETAN Kottigepalya, Off Magadi Main Road, Bengaluru-91. (CBSE Curriculum) Requires Teaching Faculty BA/ MA/ BCom. BEd for English and Social Studies. Contact 9900035670. Send photo with CV E-Mail: gvidyaniketan@gmail.com

SRI KK EDUCATION CENTRE
(Affiliated to CBSE, Aff. No. 830256)
Kadabagere, Bangalore
STAFF REQUIRED
KINDERGARTEN TEACHERS
Degree / Diploma in Early Childhood care education / NTT.
PRIMARY & MIDDLE SCHOOL
English, Mathematics, Science, Social Science, Computer Science, Hindi
HIGH SCHOOL
English, Mathematics, Social Science & Computer Science
Remuneration will not be a constraint for experienced & competent candidates.
Call: 9886535292
Write us: srikkec@gmail.com

MODERN ENGLISH SCHOOL are Hiring TEACHERS- Primary, High`School- Maths/ Science/Computer Teachers Qualification MSc,B.Ed, Contact- 08048144415/ 9480580502 Email- modernschoolsarakkijpnagar@gmail.com

GURUKULA INTERNATIONAL School Requires Nursery Teachers, Maths, Science Teachers for High School, 9th cross, Near Magadi Road, Metro Station, Bangalore-23. 7829338292 7795417999

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9886213331
080- 45557163/164

WANTED ACADEMIC HEAD, P.T.T, Clerk, English, Maths, Science, EVS, Teachers, Primary/ High School, J.P.Nagar. 9845042249/ 26590773.

SRI LAL BAHADUR SHASTRY MEMORIAL HIGH SCHOOL
No.19/01, 1st Cross, Cholurpalya, Magadi Road Post Bengaluru – 560023.
WANTED
To teach Primary Hindi Subject and High School Science Subject Teacher (CBZ).
Call between : 10-00 a.m. to 04-00 p.m.
Contact: 9482394537

Part-Time Jobs

EMPLOYMENT OPPORTUNITY for Retired/ VRS/ Defense/ Housewives Age 35 To 65 Years. Top Company: 6362220162

Drivers

DRIVERS ಬೇಕಾಗಿದ್ದಾರೆ
ಬೆಂಗಳೂರು ನಗರದೊಳಗೆ ಚಲಾಯಿಸಲು.
TATA ACE ಕಮರ್ಷಿಯಲ್ ಗಾಡಿಗಳಿಗೆ
ಕೆಲಸದ ಸಮಯ: ಸೋಮ–ಶನಿವಾರ ಬೆಳಗ್ಗೆ 10 – 6.30 ತನಕ
FORTUNER AUTOMATIC GEAR FOR PERSONAL DRIVING
ಕೆಲಸದ ಸಮಯ: ಸೋಮ–ಶನಿವಾರ ಬೆಳಗ್ಗೆ 9 – 6.30 ತನಕ
ಸಂದರ್ಶನಕ್ಕೆ ಆಧಾರ್, ಡಿ.ಎಲ್ ಮತ್ತು ಫೋಟೋ ಸಮೇತ ಬನ್ನಿ:
ಪ್ಯಾನ್ ಆಫೀಸ್ ಸಿಸ್ಟಮ್ಸ್ ಪ್ರೈ.ಲಿ.
ನಂ. 5, ಒಂದನೇ "ಅ" ಕ್ರಾಸ್, ಬಿಸ್ಮಿಲ್ಲಾನಗರ್, ಬನ್ನೇರುಘಟ್ಟ ರಸ್ತೆ ಕ್ರಾಸ್, ಬೆಂಗಳೂರು–29.
Ph: 9341221125
ಬೆಂಗಳೂರಿನ ಹೊರಗೆ ವಾಸಿಸುವರು, ದಯವಿಟ್ಟು ಕರೆ ಮಾಡಬೇಡಿ

Manager

SALES SUPERVISOR Male/ Female for Plywood Shop Lalbagh Road. Age 50 + years. Working time 10 to 6. Starting Salary 15000/-. Apply through whatsapp:- 9243120231.

Security & Detectives

WANTED FIELD Officer, Security Supervisor/ Guards, Receptionist for HBR layout, Yelahanka Contact 9972214845

CONNECT

Wanted

WANTED CANDIDATES With Experience For a Ltd Company, Electronic City, Tool Room Engineer- Design & Development of Moulds, CNC EDM Sparking Operator, CNC Engraving Operator, Plastic Injection Moulding Operators, Pressure Die-Casting Operators, Accounts Executive & Manager (Electronic City & Rajajinagar) Ph: 9448376584/ 9448481947

RENTAL PROPERTIES

Accommodation Available

Commercial

LINK ROAD Malleswaram- 850 sq.ft. commercial/ office space available for rent in 2nd & 3rd Floor with lift. Contact: 9845545357.

Industrial And Factory

KUMBALGODU INDUSTRIAL Area Phase 1, 6900 sq.ft. Industrial/ Commercial space available for rent in 2nd Floor with RCC roof and goods-lift. Contact: 9620211203.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

Kanakapura Road

NEW FLATS Kanakapura Road near Forum Mall, Konanakunte Metro. Swimming Pool, Club house. 2 BHK/ 3 BHK. Good Construction. Anika Maverick Projects:- Sowmya:- 9342247637.

House

Kumaraswamy Layout

***DUPLEX HOUSE** for SaleKumaraswamy LayoutPrime location.Near Vasavi HospitalBDA20x30 ft with 1100 sqft. Built up area.Genuine buyersContact owner 9845012529Brokers excuse.

FOR RENT
5 BHK Duplex Apartment at Century Horizon.
Just opposite Jakkur Flying Club and 150 meters from Mall of Asia.
The property is located on the International Airport Road.
Available for rent only to Corporate Companies.
For enquiries, please reach out to:
Ajith: 99169 00900

Sites

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

BUSINESS

Business Offers

Finance

URGENT LOAN AVAIL @ 3.5% per annum Personal, Business, Housing take over all types loan. Shivganga Finance. Phone: 8826494700.

PUBLIC NOTICE

PUBLIC NOTICE
My clients intend to purchase the schedule property mentioned herein from **Sri. C.N. Somashekara Gurudutt,** S/o Late C.V. Narasimha Murthy, aged 65 years, Aadhaar No. 8317-1485-5811, residing # 456 /7, 'Gurushree' 9th Cross, Girinagar, 2nd Phase, Bengaluru-560 085, representing that he is the true and lawful owner and having a good, valid marketable, right title and interest, free from prior charges lien etc., and that he has an unfettered, indefeasible right to alienate.
However, it is notified to the general public at large that in the event of any claim, charge, lien etc., the same should be brought known to the undersigned along with the documentary evidence ***within a period of 15 days*** and in the event of failure, my client will proceed to purchase in accordance with law. Any claim lodged thereafter, shall be at their peril.
SCHEDULE PROPERTY
All that piece and parcel of portion of land bearing Sy. No.192/3 (earlier sy.no.192/2) old Sy. No.86, **situated at Kumbalagodu Village, Kengeri Hobli, Bengaluru South Taluk, East to West 199 Feet** and **North to South (124 + 124.10)/ 2 feet totally (24,750 sft)** or 22.72 guntas out of 1 acre and bounded on:
East by: Remaining property of Sy. No. 192/3(earlier Sy. No.192/2); **West by:** Remaining property of Sy. No. 192/2; **North by:** Road; **South by:** Sy. No. 86.
Address for Service
Rajendra. S.Angadi, Advocate
Angadi Associates
No.24, Pipeline Main Road, Next to 7th B Cross, Malleshwaram, Bengaluru-560 003.
Mob: 98452 92045, Ph: 080-23314922
E-mail: rsangadi@gmail.com

OTHERS

Kennel & Pets

VETERINARIANS WANTED FOR proposed chain of Dog hospitals. Experience in dog treatment must. Anika Dog Hospitals. Also wanted suitable places on Rent/ JV. Contact:- Dr. Swamy Naidu- 9342247637.

PERSONAL

Change of Name

CHANGE OF NAME
I, **Manjunatha M,** Residing at No. 85, 3rd Ward, Muthasandra, Doddaballapura Taluk, Bengaluru Rural - 561203, have changed my minor daughter's name from **ABIGAIL M** to **ABHINAYA M** vide affidavit dated 25-04-2025 before notary M Radhamma, Doddaballapur.

CHANGE OF NAME
I, Lieyakath Ali S/o Abdul Razak, Aged 66 Years, Kolar District, Mulabagilu Taluk, Town #2059, Near Govt. High School, Muthyalapete, Mulabagilu-563131 have changed my name from (Lia Yakat Ali Abdul Razack S/o Abdul Razack) to Lieyakath Ali S/o Abdul Razak for all future purposes before notary K S Munikrishna Advocate & Notary, Mulabagilu-563131

WE, AMITH LOKANATH & MANISHA AMITH R/a.B1, 63, 7th B Main Opposite B Sector Park Yelahanka New Town Bengaluru- 560064, have`changed minor Son name RICHI AMIT (NEW NAME) and (OLD_Name) PARICHIT_AMITH vide`affidavit 29.4.2025 before`Notary Mohammed Hussain, Bangalore.

I, K.P.GIRISH S/o. Late. Papanna.D. R/a #40F, 15th Cross, Near Andhra Bank, D-Group Layout, Lingadheeranahalli, Andrahalli Main Road, Bengaluru North, Bengaluru-560091 have changed my minor Son's Name from MAYANK.G to MOHAK.G. Vide affidavit dated 29.4.2025 sworn before Notary H.S.Sakalesh Aradhya, Bangalore.

CHANGE OF NAME
I, **BSG SIVA KUMARI** W/o No-2602820P HAV Chandrashekar P (Army Retd.) residing at #121, Mathru Layout, Yelahanka New Town, Bengaluru - 560064, have changed my name to **SG SIVAKUMARI BANISETTY** vide affidavit dated 29.04.2025 before Notary R. Basavaraja, Bengaluru.

I PUSPA RAI D/O Sarvadev Narayan Rai & W/O AJAY KUMAR residing at No. 22, Pushp, 4th Cross, Golden Retreat Enclave, Ashwath Nagar, Thanisandra, Bengaluru-560077, Karnataka have changed my name as 'PUSHPA KUMAR' sworn before notary D Rajanna, Bangalore vide affidavit dated 25.04.2025. Hereafter I shall be called PUSHPA KUMAR only.

I, SANDHYA B, have changed my name to SANDHYA SANJANA B ACHAR, Vide Affidavit dated 29.04.2025 sworn before advocate and notary M.Rajendra, Bangalore

I, JAWARI LAL, have changed my name to JAVARI LAL, Vide Affidavit dated 29.04.2025 sworn before advocate and notary M.Rajendra, Bangalore

‘ಆರ್‌.ಸಿ, ಕಲಾ ಕಾಲೇಜುಗಳ ಉಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ಆರ್‌.ಸಿ ಕಾಲೇಜು ಮತ್ತು ಸರ್ಕಾರಿ ಕಲಾ ಕಾಲೇಜ ಅನ್ನು ಪರಿವರ್ತಿಸುವ ಸರ್ಕಾರದ ನಿರ್ಧಾರವನ್ನು ಖಂಡಿಸಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆಯ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಘಟಕ ಕಾಲೇಜುಗಳಾದರೆ, ಶುಲ್ಕ ಹೆಚ್ಚಳವಾಗುತ್ತದೆ. ಬಡ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆ ಆಗಲಿದೆ. ಈಗಾಗಲೇ ಮಹಾರಾಣಿ ಪದವಿ ಕಾಲೇಜು, ಕ್ಲಸ್ಟರ್ ವಿಶ್ವವಿದ್ಯಾಲಯವಾದ ಕಾರಣ, ಕಾಲೇಜಿನ ಶುಲ್ಕ ಏರಿಕೆಯಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗುತ್ತಿದೆ’ ಎಂದು ಪ್ರತಿಭಟನಕಾರರು ಆರೋಪಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು

ಎಐಡಿಎಸ್‌ಒ ಖಜಾಂಚಿ ಬಿ.ಜೆ. ಸುಭಾಷ್ ಮಾತನಾಡಿ, ‘ಘಟಕ ಕಾಲೇಜುಗಳಾದರೆ ಸರ್ಕಾರದ ಅನುದಾನ ಸ್ಥಗಿತಗೊಳ್ಳಲಿದೆ. ಶಿಕ್ಷಣವನ್ನು ಮತ್ತಷ್ಟು ವ್ಯಾಪಾರೀಕರಣ ಮಾಡಬೇಡಿ’ ಎಂದರು.

ರಾಜ್ಯ ಘಟಕದ ಉಪಾಧ್ಯಕ್ಷ ಅಭಯ ದಿವಾಕರ್ ಮಾತನಾಡಿ, ‘ಕಾಲೇಜು ಉಳಿಸಿಕೊಳ್ಳುವ ಸಲುವಾಗಿ ಹೋರಾಟ ಸಮಿತಿ ರಚಿಸಿ, ಹೋರಾಟ ಮುಂದುವರೆಸಬೇಕು ಎಂದರು. ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್, ಅಧ್ಯಕ್ಷೆ ಅಪೂರ್ವ, ನವಾಜ್, ಕಿರಣ್, ರೋಹಿತ್, ಹಂಸ, ಪ್ರಕೃತಿ, ಯಶವಂತ್ ಭಾಗವಹಿಸಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-444/2024–25/342/2025–26 ದಿನಾಂಕ: 29–04–2025

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ – 2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಆಸೇ 2004, ದಿನಾಂಕ: 22–06–2007 ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರ ಅಡಿಯಲ್ಲಿ ಪ್ರಶ್ನಿತ ಜಮೀನು ಸಾರಿಗೆ–ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69 (4) ರನ್ವಯ ಈ ಕೆಳಕಂಡ ಜಮೀನನ್ನು ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ / ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಸಂತೋಷ ಥಂಪಿ	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಣ್ಣೂರು	226/2 (ಹಳೆ ಸ.ನಂ.16)	0–32 ರ ಪೈಕಿ 0–25	ಸಾರಿಗೆ–ಸಂಪರ್ಕ	ವಾಣಿಜ್ಯ

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಸಾರ್ವಜನಿಕ ನೋಟೀಸು – ಇ–ಹರಾಜು
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation)
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಟ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ–ಹರಾಜು
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಟ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ
ಇ–ಹರಾಜಿನ ದಿನಗಳು: 26.05.2025 ಮತ್ತು 27.05.2025

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016 ಮತ್ತು ನಿಬಂಧನೆ 32(e) ಹಾಗು 32A ಸಮಾಪನ ಪ್ರಕ್ರಿಯೆ ನಿಬಂಧನೆಗಳು, 2016 ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಸಕ್ರಿಯ ಸಂಸ್ಥೆಯಂತೆ ಇಡಿಯಾಗಿ ಅಥವಾ ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು ‘ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ’ ಮತ್ತು ಮರು ಪಡೆಯುವಿಕೆ ಇಲ್ಲದೆ **("AS IS WHERE IS ", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ–ಹರಾಜು ವೇದಿಕೆಯ ಮೂಲಕ https://ibbi.baanknet.com/eauction-ibbi/home ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
	‘ಎ’ ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ಇ–ಹರಾಜಿನ ದಿನ ಮತ್ತು ಸಮಯ: 26.05.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 1	ಪ್ರಧಾನವಲ್ಲದ (non-core) ಆಸ್ತಿಗಳು ಸೇರಿದಂತೆ, ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದು ಮತ್ತು ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು iii. ಒತ್ತೆಯ ಸಾಲದಾತರು ತಮ್ಮ ಭದ್ರತಾ ಹಕ್ಕನ್ನು ಬಿಟ್ಟು ಕೊಟ್ಟಿಲ್ಲದ ಆಸ್ತಿಗಳು	10.50 ಕೋಟಿ	1.050 ಕೋಟಿ
	‘ಬಿ’ ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ (‘ಎ’ ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 26.05.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 2	ಪ್ರಧಾನವಲ್ಲದ (non-core) ಆಸ್ತಿಗಳನ್ನು ಹೊರತುಪಡಿಸಿ ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ ‘ಸಿ’ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು iv. ಒತ್ತೆಯ ಸಾಲದಾತರು ತಮ್ಮ ಭದ್ರತಾ ಹಕ್ಕನ್ನು ಬಿಟ್ಟು ಕೊಟ್ಟಿಲ್ಲದ ಆಸ್ತಿಗಳು	7.80 ಕೋಟಿ	0.780 ಕೋಟಿ
	‘ಸಿ’ ವರ್ಗ: ಪ್ರಧಾನವಲ್ಲದ ಆಸ್ತಿಗಳ ಮಾರಾಟ (ಕೇವಲ ನಿವೇಶನಗಳು) ಮಾರಾಟ (‘ಎ’ ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 26.05.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 3	ಮಂಗಳೂರು ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೋರೇಷನ್ನಿಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೇ ನಂ. 37–1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	1.30 ಕೋಟಿ	0.130 ಕೋಟಿ
ಆಸ್ತಿ ಪಟ್ಟಿ 4	ಕಾರ್ಕಳ ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದಲ್ಲಿ ಸರ್ವೇ ನಂ. 792–1ರಲ್ಲಿರುವ 3.89 ಎಕರೆ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	1.03 ಕೋಟಿ	0.103 ಕೋಟಿ
	‘ಡಿ’ ವರ್ಗ: ಲೀಸ್ ಆವರಣಗಳಲ್ಲಿ ಇರುವ ಚರಾಸ್ತಿಗಳ ಮಾರಾಟ (‘ಎ’ ಅಥವಾ ‘ಬಿ’ ವರ್ಗದ ಆಸ್ತಿಗಳಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 26.05.2025ರಂದು ಮಧ್ಯಾಹ್ನ 05.00ರಿಂದ 06.00 ಗಂಟೆಯವರೆಗೆ		
ಆಸ್ತಿ ಪಟ್ಟಿ 5	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	80.00 ಲಕ್ಷ	8.00 ಲಕ್ಷ
ಆಸ್ತಿ ಪಟ್ಟಿ 6	ಸರ್ವೇ ನಂ. 209/1ರಲ್ಲಿ ಡಿ. ನಂ. 50/4ಎ ಮತ್ತು 4ಬಿ, ಜಿಂಜೀ ರಸ್ತೆ, ತಿರುವಮತೂರು ಗ್ರಾಮ, ವಿಕ್ರವಂಡಿ ತಾಲ್ಲೂಕು, ವಿಲ್ಲುಪುರಮ್, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು	0.91 ಕೋಟಿ	0.091 ಕೋಟಿ
ಆಸ್ತಿ ಪಟ್ಟಿ 7	ಸರ್ವೇ ನಂ. 261/6 ಮತ್ತು 267/2, ಕಟ್ಟಂಡಿಕುಪ್ಪಮ್, ಪನ್‌ರುಟಿ, ಕಡಲೂರು ಜಿಲ್ಲೆ, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳು	44.00 ಲಕ್ಷ	4.40 ಲಕ್ಷ
	‘ಇ’ ವರ್ಗ: ಪ್ರತ್ಯೇಕ ಆಸ್ತಿಗಳ ಬಿಡಿ ಬಿಡಿ ಮಾರಾಟ (ಚರಾಸ್ತಿಗಳು ಮತ್ತು ಸ್ಥಿರಾಸ್ತಿಗಳು) (‘ಎ’ ಅಥವಾ ‘ಬಿ’ ವರ್ಗದ ಆಸ್ತಿಗಳಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 27.05.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 8	**ಕೈಗಾರಿಕಾ ಸ್ವತ್ತು** (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	2.97 ಕೋಟಿ	0.297 ಕೋಟಿ
	‘ಎಫ್’ ವರ್ಗ: ಚರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 8ಕ್ಕೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ) ಇ–ಹರಾಜಿನ ದಿನ ಮತ್ತು ಸಮಯ: 27.05.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 9	**ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	50.00 ಲಕ್ಷ	5.00 ಲಕ್ಷ
	‘ಜಿ’ ವರ್ಗ: ಸ್ಥಿರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 9ಕ್ಕೆ ಬಿಡ್‌ಗಳು ದೊರೆತು ಹರಾಜು ಯಶಸ್ವಿಯಾದಲ್ಲಿ ಮಾತ್ರ ಇ–ಹರಾಜು ನಡೆಯುತ್ತದೆ) ಇ–ಹರಾಜಿನ ದಿನ ಮತ್ತು ಸಮಯ: 27.05.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 10	**ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ)** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	2.48 ಕೋಟಿ	0.248 ಕೋಟಿ

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ–ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ ‘ಇ–ಹರಾಜು ಪ್ರಕ್ರಿಯೆಯ ಮಾಹಿತಿ’ (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ibbi.baanknet.com/eauction-ibbi/home ನಲ್ಲಿ ದೊರೆಯುತ್ತದೆ, ಅಥವಾ ಹೆಚ್ಚಿನ ವಿವರಗಳಿಗೆ ಲಿಕ್ವಿಡೇಟರ್‌ರನ್ನು ಸಂಪರ್ಕಿಸಬಹುದು.
2. ದಯವಿಟ್ಟು ಗಮನಿಸಿ: **‘ಎ’ ಅಥವಾ ‘ಬಿ’ ಆಸ್ತಿ ವರ್ಗಕ್ಕೆ** ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರುಗಳು ಪಾಲುಗೊಳ್ಳದೆ ಯಶಸ್ವಿಯಾಗದೆ ಇದ್ದಲ್ಲಿ ಸದರಿ ಆಸ್ತಿಗಳನ್ನು ಮೇಲಿನ ಕೋಷ್ಟಕದ ಅನುಸಾರ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವುದು. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ವರ್ಗದ(ಗಳ) ಅಡಿಯಲ್ಲಿ ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಇ–ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಲಿಕ್ವಿಡೇಟರ್ ಉಳಿಸಿಕೊಂಡಿರುತ್ತಾರೆ.
3. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳು ಮತ್ತು ಇಎಂಡಿ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **23.05.2025**ರಂದು ಇಲ್ಲವೆ ಅದಕ್ಕೆ ಮುನ್ನ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು.
4. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಯಾವುದೇ ಮಾಹಿತಿಯು ಇ–ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
5. ಸಂಭಾವ್ಯ ಬಿಡ್ಡುದಾರರು ಮುಂಗಡ ಹಣ ಪಾವತಿಯನ್ನು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮಾತ್ರ ಮಾಡಬೇಕು. ಬಿಡ್ಡುದಾರರು ಅನರ್ಹರೆಂದು ಕಂಡುಬಂದರೆ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ದಿನಾಂಕ: 29.04.2025
ಸ್ಥಳ: ಬೆಂಗಳೂರು

ಸಹಿ/–
ರವೀಂದ್ರ ಬೆಳೆಯೂರ್
ಲಿಕ್ವಿಡೇಟರ್
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್,
428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11
ಈಮೇಲ್: Reliable_Cashew_CIRP@beleyur.com
ಫೋನ್: 080 26540193 ಮೊಬೈಲ್: +91 94481 46963

ಕೀರ್ತನಾ ಚಿಕಿತ್ಸೆಗೆ ಸಚಿವ ಜಮೀರ್ ದೇಣಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರಳ ಅನುವಂಶೀಯ ಕಾಯಿಲೆಯಿಂದ ಬಳಲುತ್ತಿರುವ ಬಾಲಕಿ ಕೀರ್ತನಾಳ ಚಿಕಿತ್ಸೆಗೆ ಅಗತ್ಯವಿರುವ ₹16 ಕೋಟಿಯನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಅಡಿ ಸಂಗ್ರಹಿಸಲು ವಸತಿ ಸಚಿವ ಬಿ.ಝಡ್.ಜಮೀರ್ ಅಹಮದ್ ಖಾನ್ ಮುಂದಾಗಿದ್ದಾರೆ.

ಮೈಸೂರಿನ ನಾಗಶ್ರೀ ಮತ್ತು ಕಿಶೋರ್ ದಂಪತಿಯು ಈಚೆಗೆ ಸಚಿವರನ್ನು ಭೇಟಿ ಮಾಡಿ, ತಮ್ಮ ಮಗಳಿಗೆ ಇರುವ ಕಾಯಿಲೆ ಹಾಗೂ ಅದಕ್ಕೆ ಅಗತ್ಯವಿರುವ ಚಿಕಿತ್ಸೆಯ ವೆಚ್ಚದ ಬಗ್ಗೆ ವಿವರಿಸಿದ್ದರು. ಅದಕ್ಕೆ ಸ್ಪಂದಿಸಿದ್ದ ಜಮೀರ್ ಅವರು ₹25 ಲಕ್ಷದ ಚೆಕ್ ಅನ್ನು ಬಾಲಕಿಗೆ ಹಸ್ತಾಂತರಿಸಿದ್ದರು. ಚಿಕಿತ್ಸೆಗೆ ಅಗತ್ಯವಿರುವ ಉಳಿದ ಮೊತ್ತ ಸಂಗ್ರಹಕ್ಕಾಗಿ ಕಾರ್ಪೊರೇಟ್ ಉದ್ಯಮಿಗಳನ್ನು ತಾವೇ ಸ್ವತಃ ಭೇಟಿ ಮಾಡಿ, ಮನವಿ ಸಲ್ಲಿಸಲು ನಿರ್ಧರಿಸಿದ್ದಾರೆ.

ಇಂಡಿಯಾ ಬಿಲ್ಡರ್ಸ್‌ನ ಮಾಲೀಕ ಜಿಯಾವುಲ್ಲಾ ಷರೀಫ್ ಅವರನ್ನು ಮಂಗಳವಾರ ಭೇಟಿ ಮಾಡಿದ ಜಮೀರ್ ಅವರು, ‘ಮಗುವಿನ ಚಿಕಿತ್ಸೆಗೆ ವಾರ್ಷಿಕ ₹50 ಲಕ್ಷ ವೆಚ್ಚವಾಗುತ್ತದೆ. ಚಿಕಿತ್ಸೆಯಲ್ಲಿ ಬಳಸುವ ಔಷಧ ಭಾರತದಲ್ಲಿ ತಯಾರಾಗುವುದಿಲ್ಲ.

ವಿದೇಶದಿಂದ ಆಮದು ಮಾಡಿಕೊಳ್ಳಬೇಕಿರುವ ಔಷಧಿಯು ದುಬಾರಿ ಮೊತ್ತದ್ದಾಗಿದೆ. ಬಾಲಕಿಯ ಚಿಕಿತ್ಸೆಗೆ ನೆರವಾಗಿ’ ಎಂದು ಜಿಯಾವುಲ್ಲಾ ಅವರಿಗೆ ಲಿಖಿತ ಮನವಿ ನೀಡಿದ್ದಾರೆ.

‘ಮನವಿಗೆ ಸ್ಪಂದಿಸಿರುವ ಜಿಯಾವುಲ್ಲಾ ಅವರು, ಅಗತ್ಯ ನೆರವನ್ನು ಒದಗಿಸುವುದಾಗಿ ತಿಳಿಸಿದ್ದಾರೆ’ ಎಂದು ಸಚಿವರ ಕಚೇರಿ ಪ್ರಕಟಣೆ ತಿಳಿಸಿದೆ.

ಬೆಳಗಾವಿಗೆ ವಂದೇ ಭಾರತ್ ರೈಲು ಶೀಘ್ರ

ನವದೆಹಲಿ: ಬೆಂಗಳೂರು–ಬೆಳಗಾವಿ ನಡುವೆ ಹೊಸದಾಗಿ ವಂದೇ ಭಾರತ್ ರೈಲು ಸೇವೆ ಆರಂಭಿಸಲು ಯೋಜಿಸಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಆಹಾರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಪತ್ರ ಬರೆದಿದ್ದಾರೆ.

ಬೆಂಗಳೂರು–ಧಾರವಾಡ ನಡುವಿನ ವಂದೇ ಭಾರತ್ ರೈಲನ್ನು ಬೆಳಗಾವಿವರೆಗೆ ವಿಸ್ತರಿಸಬೇಕು ಎಂದು ಒತ್ತಾಯಿಸಿ ಜೋಶಿ ಅವರು ವೈಷ್ಣವ್ ಅವರಿಗೆ ಫೆಬ್ರುವರಿಯಲ್ಲಿ ಪತ್ರ ಬರೆದಿದ್ದರು. ‘ಈ ರೈಲು ಬೆಳಗಾವಿಯಿಂದ ಬೆಳಿಗ್ಗೆ ಹೊರಡಲಿದೆ’ ಎಂದು ವೈಷ್ಣವ್ ತಿಳಿಸಿದ್ದಾರೆ.

‘ನನ್ನ ಕೋರಿಕೆಯ ಮೇರೆಗೆ ಬೆಂಗಳೂರು - ಬೆಳಗಾವಿ ವಂದೇ ಭಾರತ್ ರೈಲಿಗೆ ಸಚಿವರು ಅನುಮೋದನೆ ನೀಡಿದ್ದಾರೆ. ಈ ರೈಲು ಸಂಪರ್ಕದಿಂದ ಉತ್ತರ ಕರ್ನಾಟಕದ ಅಭಿವೃದ್ಧಿಗೆ ದೊಡ್ಡ ಉತ್ತೇಜನ ಸಿಗಲಿದೆ’ ಎಂದು ಜೋಶಿ ತಿಳಿಸಿದ್ದಾರೆ.

ವಿದ್ಯುತ್ ಅವಘಡ ಇಬ್ಬರು ಸಾವು

ತುಮಕೂರು: ಜಿಲ್ಲೆಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ವಿದ್ಯುತ್ ಅವಘಡದಲ್ಲಿ ಬಾಲಕ ಸೇರಿ ಇಬ್ಬರು ಸಾವಿಗೀಡಾಗಿದ್ದಾರೆ..

ತಿಪಟೂರು ತಾಲ್ಲೂಕಿನ ಕಲ್ಲಯ್ಯನಪಾಳ್ಯದಲ್ಲಿ ಮಂಗಳವಾರ ಬೆಳಿಗ್ಗೆ ವಿದ್ಯುತ್ ತಂತಿ ಸ್ಪರ್ಶಿಸಿ ವ್ಯಕ್ತಿ ಹಾಗೂ ಎರಡು ಸೀಮೆ ಹಸುಗಳು ಮೃತಪಟ್ಟಿವೆ.

ಕಲ್ಲಯ್ಯನಪಾಳ್ಯದ ನಿವಾಸಿ ಯೋಗೀಶ್ (50) ಮೃತರು. ಎಂದಿನಂತೆ ತಮ್ಮ ರಾಸುಗಳನ್ನು ಮನೆಯ ಸಮೀಪದ ತೋಟದಲ್ಲಿ ಮೇಯಿಸಲು ಹೋದಾಗ ಅವಘಡ ಸಂಭವಿಸಿದೆ. ಯೋಗೀಶ್ ಹೈನುಗಾರಿಕೆಯಿಂದ ಜೀವನ ನಡೆಸುತ್ತಿದ್ದರು. ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ನಾಗರಾಜು, ನೊಣವಿನಕೆರೆ ಪಿಎಸ್‌ಐ ಬಸವರಾಜು, ಬೆಸ್ಕಾಂ ಎಂಜಿನಿಯರ್ ಮನೋಹರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಾಲಕ ಸಾವು: ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿ ಸೋಮನಹಳ್ಳಿಯಲ್ಲಿ ವಿದ್ಯುತ್ ಸ್ಪರ್ಶಿಸಿ ಬಾಲಕನೊಬ್ಬ ಸಾವನ್ನಪ್ಪಿದ್ದಾನೆ.

ಸೋಮವಾರ ಸಂಜೆ ಪೋಷಕರ ಜತೆಗೆ ಜಮೀನಿಗೆ ಹೋದಾಗ ವಿದ್ಯುತ್ ತಂತಿ ತುಂಡಾಗಿ ಬಿದ್ದಿರುವುದನ್ನು ಗಮನಿಸದೆ ತುಳಿದ ಪರಿಣಾಮ ಬಾಲಕ ಕುಶಾಲ್ (9) ಸಾವನ್ನಪ್ಪಿದ್ದಾನೆ.

ಹಳೆಯ ವಿದ್ಯುತ್ ತಂತಿ ಬದಲಾಯಿಸದ ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಸಾರ್ವಜನಿಕರು ಆಕ್ರೋಶಪಡಿಸಿದ್ದಾರೆ.

ವೈಜ್ಞಾನಿಕವಾಗಿ ತ್ಯಾಜ್ಯ ವಿಂಗಡಣೆ ಮಾಡುವಂತೆ ಬಿಬಿಎಂಪಿಗೆ ಸೂಚನೆ

ಕಸ ವಿಲೇವಾರಿಗೆ ಲೋಕಾಯುಕ್ತ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಸ ನಿರ್ವಹಣೆಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಿ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಬಿಬಿಎಂಪಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆಯಲ್ಲಿ ಆಗುತ್ತಿರುವ ಲೋಪಗಳ ಸಂಬಂಧ ಸಲ್ಲಿಕೆಯಾಗಿದ್ದ ದೂರುಗಳ ಆಧಾರದಲ್ಲಿ ಲೋಕಾಯುಕ್ತವು ಪ್ರಕರಣ ದಾಖಲಿಸಿಕೊಂಡು ಪರಿಶೀಲನೆ ನಡೆಸಿತ್ತು.

ಲೋಕಾಯುಕ್ತ ಪೊಲೀಸರು ನಗರದ ವಿವಿಧೆಡೆ ದಿಢೀರ್ ಭೇಟಿ ನೀಡಿ, ರಸ್ತೆಯಲ್ಲಿ, ರೈಲು ಹಳಿಗಳ ಪಕ್ಕ, ಕೆರೆಗಳ ವ್ಯಾಪ್ತಿಯಲ್ಲಿ ಕಸ ಎಸೆದಿರುವ ಬಗ್ಗೆ ಲೋಕಾಯುಕ್ತರಿಗೆ ವರದಿ ನೀಡಿದ್ದರು.

ಈ ಸಂಬಂಧ ಬಿಬಿಎಂಪಿಯ ಪೂರ್ವ, ಪಶ್ಚಿಮ, ರಾಜರಾಜೇಶ್ವರಿ ನಗರ ಮತ್ತು ದಾಸರಹಳ್ಳಿ ವಲಯದ ಅಧಿಕಾರಿಗಳನ್ನು ಲೋಕಾಯುಕ್ತರು ಮಂಗಳವಾರ ವಿಚಾರಣೆಗೆ ಕರೆದಿದ್ದರು. ಕಸ ನಿರ್ವಹಣೆಯಲ್ಲಿ ಆಗಿರುವ ಲೋಪಗಳ ಬಗ್ಗೆ ಅಧಿಕಾರಿಗಳಿಂದ ವಿವರಣೆ ಪಡೆದರು.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ನಡೆಸಿದ ವಿಚಾರಣೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಭಾಗಿಯಾಗಿದ್ದರು

‘ಕಸ ನಿರ್ವಹಣೆಗಾಗಿ ಪ್ರತ್ಯೇಕ ಶುಲ್ಕ ಪಡೆಯುತ್ತೀರಿ. ಆದರೆ ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಏಕೆ ಮಾಡುತ್ತಿಲ್ಲ? ನಿಮ್ಮ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪದ ಕಾರಣಕ್ಕೆ ಸಾರ್ವಜನಿಕರು ಆರೋಗ್ಯದ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಲೋಪಗಳನ್ನು ಸರಿಪಡಿಸದೇ ಇದ್ದರೆ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ’ ಎಂದು ಲೋಕಾಯುಕ್ತರು ಎಚ್ಚರಿಕೆ ನೀಡಿದರು.

ಬಿಬಿಎಂಪಿಯ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಒಒ) ರಮಾಮಣಿ, ‘ಕಸ ನಿರ್ವಹಣೆ ವಿಭಾಗದಲ್ಲಿ ಎಂಜಿನಿಯರ್‌ಗಳ ಸಂಖ್ಯೆ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಕಸ ಸಾಗಣೆ ವಾಹನಗಳ ಖರೀದಿಗೆ ಟೆಂಡರ್ ಕರೆಯಲಾಗಿದೆ. ಈ ಪ್ರಕ್ರಿಯೆಗಳು ಮುಗಿದು, ಸಮಸ್ಯೆ ಬಗೆಹರಿಸಲು ನಾಲ್ಕು ತಿಂಗಳ ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಅದನ್ನು ಮಾನ್ಯ ಮಾಡಿದ ಲೋಕಾಯುಕ್ತರು, ಕಸ ನಿರ್ವಹಣೆಗೆ ಸಂಬಂಧಿಸಿದಂತೆ ಬಿಬಿಎಂಪಿಗೆ ಕೆಲ ನಿರ್ದೇಶನಗಳನ್ನು ನೀಡಿದರು. ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದರು.

ನಿರ್ದೇಶನಗಳು

- ಕಸವನ್ನು ಬಿಸಾಡುತ್ತಿರುವ ‘ಬ್ಲ್ಯಾಕ್ ಸ್ಪಾಟ್’ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ. ಕಸ ಎಸೆಯುವವರನ್ನು ಪತ್ತೆ ಮಾಡಿ, ಕ್ರಮ ತೆಗೆದುಕೊಳ್ಳಿ
- ಬಿಬಿಎಂಪಿ ವ್ಯಾಪ್ತಿಯಲ್ಲಿ ಹಾದುಹೋಗುವ ರೈಲು ಮಾರ್ಗಗಳ ಇಕ್ಕೆಲದಲ್ಲಿ ಸಂಗ್ರಹವಾಗಿರುವ ಕಸವನ್ನು ತಕ್ಷಣವೇ ವಿಲೇವಾರಿ ಮಾಡಿ
- ನಗರದಲ್ಲಿ ಸಂಚಾರ ದಟ್ಟಣೆ ಅವಧಿಯಲ್ಲಿ ಕಸ ಸಾಗಣೆ ವಾಹನಗಳು ಸಂಚರಿಸುತ್ತಿರುವ ಕಾರಣ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಸಂಚಾರ ದಟ್ಟಣೆ ಅವಧಿಯಲ್ಲಿ ಈ ವಾಹನಗಳ ಓಡಾಟವನ್ನು ನಿಲ್ಲಿಸಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಿ

ಅರಣ್ಯ ನೌಕರರ ಬಡಾವಣೆ ರಸ್ತೆಯಲ್ಲಿ ದುಷ್ಕೃತ್ಯ

ಮರಗಳ ಬುಡಕ್ಕೆ ಬೆಂಕಿ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಜ್ಞಾನಭಾರತಿ ವಾರ್ಡ್‌ನಲ್ಲಿ ಅರಣ್ಯ ನೌಕರರ ಬಡಾವಣೆಗೆ ಹಾದು-ಹೋಗುವ ರಸ್ತೆಯ ಎಡಭಾಗದಲ್ಲಿರುವ ಮರಗಳ ಬುಡಗಳಿಗೆ ಯಾರೋ ದುಷ್ಕರ್ಮಿಗಳು ಕಸ ಸುರಿದು ಬೆಂಕಿ ಹಚ್ಚುತ್ತಿದ್ದಾರೆ. ಇದರಿಂದ ಮರಗಳ ಬುಡಗಳಿಗೆ ಹಾನಿಯಾಗುತ್ತಿದೆ.

ಕೆಲವು ದಿನಗಳ ಹಿಂದೆ ರಸ್ತೆಯ ಬಲಭಾಗದಲ್ಲಿಯೂ ಇದೇ ರೀತಿ ತ್ಯಾಜ್ಯವನ್ನು ಸುರಿದು ಬೆಂಕಿ ಹಚ್ಚಲಾಗಿತ್ತು. ಇದರಿಂದ ಕೆಲವು ಮರಗಳು ಸುಟ್ಟುಹೋಗಿದ್ದವು. ಆದರೂ ಬಿಬಿಎಂಪಿಯ ಅರಣ್ಯ ವಿಭಾಗದವರು ಇತ್ತ ಕಡೆ ಗಮನ ಹರಿಸಲಿಲ್ಲ ಎಂದು ಅರಣ್ಯ ನೌಕರರ ಬಡಾವಣೆ, ಭೈರವನಗರ ದುಬಾಸಿಪಾಳ್ಯ, ಉಪಾಧ್ಯಾಯ ಬಡಾವಣೆಗಳ ನಿವಾಸಿಗಳು ದೂರಿದರು.

ರಸ್ತೆಯ ಎಡಭಾಗದಲ್ಲಿ ರೈಲ್ವೆ ಹಳಿ ಹಾದು ಹೋಗಿದೆ. ಇದಕ್ಕೆ ಹೊಂದಿಕೊಂಡಂತೆ ಎತ್ತರಕ್ಕೆ ಬೆಳೆದಿರುವ ನೂರಾರು ಮರಗಳಿವೆ. ಈ ಮರಗಳ ಬುಡಕ್ಕೂ ತ್ಯಾಜ್ಯವನ್ನು ಸುರಿದು ಬೆಂಕಿ ಹಾಕುತ್ತಿದ್ದಾರೆ. ಬಿಬಿಎಂಪಿಯಾಗಲಿ, ರೈಲ್ವೆ ಇಲಾಖೆಯವರಾಗಲಿ ಮರಗಳ ರಕ್ಷಣೆ ಮಾಡುತ್ತಿಲ್ಲ ಎಂದು ಸ್ಥಳಿಯರು ಬೇಸರ ವ್ಯಕ್ತಪಡಿಸಿದರು. ‘ಬೆಂಗಳೂರನ್ನು ಹಸಿರು ನಗರ, ಬ್ರ್ಯಾಂಡ್ ಬೆಂಗಳೂರು ಮಾಡುತ್ತೇವೆ ಎಂದು ಸಚಿವರು, ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ. ಆದರೆ, ಮರಗಳ ರಕ್ಷಣೆಗೆ ಮುಂದಾಗುತ್ತಿಲ್ಲ’ ಎಂದು ದೂರಿದರು.

ಮರಗಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಬಿಬಿಎಂಪಿಯಲ್ಲಿ ಪ್ರತ್ಯೇಕ ಅರಣ್ಯವಿಭಾಗವಿದೆ. ಮನೆ ನಿರ್ಮಾಣ, ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುತ್ತಿರುವ ಮಾಲೀಕರು ಅಗತ್ಯವಿಲ್ಲದಿದ್ದರೂ ಮರಗಳನ್ನು ಕಡಿಯುತ್ತಿದ್ದಾರೆ. ಇಷ್ಟಾದರೂ ಬಿಬಿಎಂಪಿ ಕ್ರಮ-ಕೈಗೊಳ್ಳುತ್ತಿಲ್ಲ ಎಂದು ಸ್ಥಳೀಯರಾದ ಕೃಷ್ಣಪ್ಪ, ಸತೀಶ್ ಅವರು ಬೇಸರದಿಂದ ಹೇಳಿದರು.

ಮರಗಳ ಬುಡಕ್ಕೆ ಬೆಂಕಿ ಹಚ್ಚಿರುವ ದೃಶ್ಯ

ಬಿಡಿಎ, ಬಿಬಿಎಂಪಿ, ಖಾಸಗಿ ಬಡಾವಣೆ ನಿರ್ಮಾಣ ಸಮಯದಲ್ಲಿ ಸಸಿಗಳನ್ನು ನೆಟ್ಟು ಬೆಳೆಸಿದ್ದಾರೆ. ಆದರೆ, ಈ ಬಡಾವಣೆಗಳಲ್ಲಿ ಮನೆ, ಕಟ್ಟಡ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುವವರು ಮರಗಳನ್ನು ನೆಲಸಮಮಾಡುತ್ತಿದ್ದಾರೆ. ಅವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

ಉಗ್ರರ ದಾಳಿ: ಆರ್‌ಪಿಐ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿ ಖಂಡಿಸಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ನೇತೃತ್ವದಲ್ಲಿ ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ನೆಲೆಸಿ, ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಸಂದರ್ಭದಲ್ಲಿಯೇ ಭಯೋತ್ಪಾದಕರು ದಾಳಿ ನಡೆಸಿ, ಅಮಾಯಕರನ್ನು ಕೊಲೆ ಮಾಡಿದ್ದಾರೆ. ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಬೇಕು ಎಂದು ಪ್ರತಿಭಟನಕಾರರು ಸರ್ಕಾರವನ್ನು ಆಗ್ರಹಿಸಿದರು.

ಉಗ್ರರ ದಾಳಿಯಲ್ಲಿ ಮೃತಪಟ್ಟ ರಾಜ್ಯದ ಭರತ್ ಭೂಷಣ್ ಹಾಗೂ ಮಂಜುನಾಥ್ ರಾವ್ ಕುಟುಂಬಳಿಗೆ ತಲಾ ₹ 1 ಕೋಟಿ ಪರಿಹಾರವನ್ನು ಸರ್ಕಾರ ನೀಡಬೇಕು ಎಂದು ಒತ್ತಾಯಿಸಿದರು. ಆರ್‌ಪಿಐ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ, ಮುಖಂಡರಾದ ಭರತ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೇ 5ರಿಂದ ಪಟಾಲಮ್ಮ ದೇವಿ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪಾಳ್ಯ, ಸಿದ್ದಾಪುರ, ಭೈರಸಂದ್ರ, ಯಡಿಯೂರು ಹಾಗೂ ನಾಗಸಂದ್ರ ಗ್ರಾಮಗಳ ಅಧಿದೇವತೆ ಪಟಾಲಮ್ಮ ದೇವಿ ಮಹೋತ್ಸವ ಮೇ 5ರಿಂದ 7ರವರೆಗೆ ನಡೆಯಲಿದೆ.

ಶ್ರೀ ಪಟಾಲಮ್ಮ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಕೆ.ಎಂ. ನಾಗರಾಜ್ ನೇತೃತ್ವದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಮಹೋತ್ಸವ ನಡೆಯುತ್ತದೆ.

ಕನಕಪಾಳ್ಯ ಗ್ರಾಮದಲ್ಲಿ ಮೇ 5ರ ಸಂಜೆಯಿಂದ ಆಂಜನೇಯ ಸ್ವಾಮಿಗೆ ಬೆಲ್ಲದ ಆರತಿಯಿಂದ ಊರಹಬ್ಬ ಆರಂಭವಾಗಿ, ಕನಕೇಶ್ವರಸ್ವಾಮಿಗೆ ಬೆಲ್ಲದ ಆರತಿಗಳು ನಡೆಯಲಿವೆ. ಮೇ 6ರಂದು ಯಲ್ಲಮ್ಮದೇವಿ, ಜೆರಸಲಮ್ಮ, ಕುನ್ನಾಲಘಟ್ಟಮ್ಮ, ನಾಡಮ್ಮ, ಮಿಟ್ಲಮರದ ಮುನೇಶ್ವರ, ಚಪಲಮ್ಮ, ಪ್ಲೇಗಮ್ಮ, ಗೋಣಿಮರದ ಮುನೇಶ್ವರ ಸ್ವಾಮಿಗೆ ಆರತಿ, ಪೂಜೆಯನ್ನು ಗ್ರಾಮಸ್ಥರು ನೆರವೇರಿಸುತ್ತಾರೆ.

ಲಾಲ್‌ಬಾಗ್ ಸಿದ್ದಾಪುರ ಗ್ರಾಮದ ಕಲ್ಯಾಣಿ ಮಹಾಗಣಪತಿಯ ಪೂಜೆಯೊಂದಿಗೆ ಮೇ 5ರಂದು ಊರಹಬ್ಬ ಆರಂಭವಾಗಿ ಸೋಮೇಶ್ವರ ಸ್ವಾಮಿ, ರಾಮದೇವರಿಗೆ ಬೆಲ್ಲದ ಆರತಿ ನಡೆಯಲಿವೆ. ಮೇ 6ರಂದು ಗ್ರಾಮದೇವತೆ ಪೂಜಮ್ಮ, ಯಲ್ಲಮ್ಮ, ಪಿಳ್ಳೆಕಮ್ಮ ದೇವರಿಗೆ ಆರತಿ, ಕೊಂಡ ತುಳಿಯುವ ಕಾರ್ಯಕ್ರಮ ಇರಲಿದೆ.

ಭೈರಸಂದ್ರ ಗ್ರಾಮದಲ್ಲಿರುವ ಎಲ್ಲ ದೇವಾಲಯಗಳಲ್ಲಿ ಮೇ 5ರಂದು ಅಭಿಷೇಕ ಮತ್ತು ವಿಶೇಷ ಹೂವಿನ ಅಲಂಕಾರ ನಡೆಯಲಿದ್ದು, ವಿನಾಯಕ, ಆಂಜನೇಯ, ಈಶ್ವರ ಸ್ವಾಮಿಗೆ ಬೆಲ್ಲದ ಆರತಿ ನಡೆಯಲಿದೆ. ಮೇ 6ರಂದು ಕಾಟುಮರಾಯ ದೇವರಿಗೆ ಬೆಲ್ಲದ ಆರತಿ ಏರ್ಪಡಿಸಲಾಗಿದೆ.

ಯಡಿಯೂರು ಗ್ರಾಮದಲ್ಲಿ ಮೇ 5ರಂದು ಪ್ರಸನ್ನ ಆಂಜನೇಯ ಸ್ವಾಮಿ ಹಾಗೂ ಬಸವಣ್ಣ ದೇವರಿಗೆ ಬೆಲ್ಲದ ಆರತಿ ನಡೆಯಲಿದೆ. ಮೇ 6ರಂದು ಮದ್ದೂರಮ್ಮ, ಪಿಳೇಕಮ್ಮ, ಚಪ್ಪಲಮ್ಮ, ಸಲ್ಲಾಪುರದಮ್ಮ ದೇವಿಗೆ ಆರತಿ, ಅಗ್ನಿಕೊಂಡ ಹಾಯುವ ಕಾರ್ಯಕ್ರಮ-ವಿದೆ. ಮೇ 7ರಂದು ಗಾಂಧಮ್ಮ ದೇವಿಗೆ ಆರತಿ ನಡೆಯಲಿದೆ.

ನಾಗಸಂದ್ರ ಗ್ರಾಮದ ಆಂಜನೇಯ ಸ್ವಾಮಿ, ಉಪ್ಪಮ್ಮ ದೇವಿಗೆ ಮೇ 5ರಂದು ಬೆಲ್ಲದ ಆರತಿ ನಡೆಯಲಿದೆ. ಮೇ 6ರಂದು ಮುನೇಶ್ವರ ಸ್ವಾಮಿ, ಪ್ಲೇಗಮ್ಮ, ದಾಳಮ್ಮ, ಗಂಗಮ್ಮ, ಸಪಲಮ್ಮ, ಚಪ್ಪರದಮ್ಮ ದೇವರಿಗೆ ತಂಬಿಟ್ಟಿನ ಆರತಿ ಹಾಗೂ ಪೂಜಾ ಕಾರ್ಯಕ್ರಮ ನೆರವೇರಲಿದೆ.

ನಗರದ ಸೌತ್ ಎಂಡ್ ವೃತ್ತ-ದಲ್ಲಿರುವ ಪಟಾಲಮ್ಮ ದೇವಿಯ ಉತ್ಸವ ಮೇ 7ರಂದು ನಡೆಯಲಿದೆ. ಕನಕನಪಾಳ್ಯದ ದೇವಸ್ಥಾನಗಳ ಸಮುಚ್ಚಯದಿಂದ ಉತ್ಸವ ಪ್ರಾರಂಭ-ವಾಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ನಾನಾ ಭಾಗಗಳ 35ಕ್ಕೂ ಹೆಚ್ಚು ಸಾಂಸ್ಕೃತಿಕ ಹಾಗೂ ಜಾನಪದ ತಂಡಗಳ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

ಪಟಾಲಮ್ಮ ದೇವಿಯ ಮಹೋತ್ಸವ ಮೂರು ದಿನ ನಡೆಯಲಿದ್ದು, ಆಯಾ ಊರಿನ ಏಳು ದೇವತೆಗಳಿಗೆ ಮೊದಲೆರಡು ದಿನ ಅಲಂಕೃತ ಬೆಲ್ಲದ ಆರತಿ ನೆರವೇರಿಸಿ, ಮಾರನೆ ದಿನ ಪಟಾಲಮ್ಮ ದೇವಿಗೆ ಎಲ್ಲ ಊರುಗಳಿಂದ ಮುತ್ತೈದೆಯರು, ಬಾಲಕಿಯರು ಮೆರ-ವಣಿಗೆಯಲ್ಲಿ ಆರತಿಗಳನ್ನು ತಂದು, ದೇವಸ್ಥಾನದ ಬೆಂಕಿ ಕೊಂಡದಲ್ಲಿ ನಡೆದು ಹೋಗುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ವಿಟಿಯು-ಬಿಐಐಎಸ್‌ಎಂ ಒಪ್ಪಂದ

ಭಾರತ್ ಇಂಡಸ್ಟ್ರಿಯಲ್ ಸೇಫ್ಟಿ ಮ್ಯಾನೇಜ್‌ಮೆಂಟ್ ಸಂಸ್ಥೆ (ಬಿಐಐಎಸ್‌ಎಂ) ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಒಪ್ಪಂದ ಮಾಡಿಕೊಂಡಿವೆ. ಉಚಿತ್ ಆರ್. ರಂಗಸ್ವಾಮಿ, ರಜತ್, ಕೆ.ಎಸ್. ಮುರುಳೀಧರ್ ಇದ್ದಾರೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಭಾರತ್ ಇಂಡಸ್ಟ್ರಿಯಲ್ ಸೇಫ್ಟಿ ಮ್ಯಾನೇಜ್‌ಮೆಂಟ್ ಸಂಸ್ಥೆ (ಬಿಐಐಎಸ್‌ಎಂ) ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಒಂದು ವರ್ಷದ ಇಂಡಸ್ಟ್ರೀಯಲ್ ಸೇಫ್ಟಿ ಮ್ಯಾನೇಜ್‌ಮೆಂಟ್ ಕೋರ್ಸ್ ಕುರಿತು ಒಪ್ಪಂದ ಮಾಡಿಕೊಂಡಿವೆ.

ಸಂಸ್ಥೆಯು ಪ್ರಾಯೋಗಿಕ ತರಬೇತಿ ಹಾಗೂ ಉದ್ಯೋಗಾವಕಾಶಗಳ ಒದಗಿಸುವ ಕುರಿತು ಹೆಚ್ಚಿನ ಒತ್ತು ನೀಡುತ್ತಿದೆ.

ಸಂಸ್ಥೆಯ ಅಧ್ಯಕ್ಷ ಉಚಿತ್ ಆರ್. ರಂಗಸ್ವಾಮಿ ಮಾತನಾಡಿ, ‘ಕೈಗಾರಿಕಾ ಕ್ಷೇತ್ರಕ್ಕೆ ತಕ್ಕ ಪರಿಣತಿ ಹೊಂದಿದ ವೃತ್ತಿಪರರನ್ನು ರೂಪಿಸುವುದು ಮುಖ್ಯ ಉದ್ದೇಶ. ಭಾರತ್ ಸಂಸ್ಥೆಯಲ್ಲಿ ಸೈದ್ಧಾಂತಿಕ ಜ್ಞಾನ ಮಾತ್ರವಲ್ಲದೆ, ಕೈಗಾರಿಕೆಯಲ್ಲಿ ಕೆಲಸ ಮಾಡಲು ಅಗತ್ಯವಿರುವ ಕೌಶಲಗಳ ಬಗ್ಗೆ ಹೇಳಿಕೊಡಲಾಗುತ್ತದೆ ’ ಎಂದು ಹೇಳಿದರು.

ನಿರ್ದೇಶಕ ರಜತ್ ಮಾತನಾಡಿ, ‘ಕೈಗಾರಿಕಾ ಸಂಸ್ಥೆಗಳ ಜೊತೆಗೆ ಉತ್ತಮ ಸಹಕಾರ ಬೆಳೆಸುವುದರ ಮೂಲಕ ಇಂಟರ್ನ್‌ಶಿಪ್, ಪ್ರಾಯೋಗಿಕ ಅನುಭವ ಮತ್ತು ಖಚಿತ ಉದ್ಯೋ-ಗಾವಕಾಶಗಳನ್ನು ಕಲ್ಪಿಸಲಾಗುತ್ತಿದೆ ಎಂದರು. ಸಂಸ್ಥೆಯ ಪ್ರಾಚಾರ್ಯ ಕೆ.ಎಸ್. ಮುರುಳೀಧರ್ ಮಾತನಾಡಿ, ‘ಜ್ಞಾನ ಮತ್ತು ಉದ್ಯೋಗಾ-ವಕಾಶಗಳ ಸಮನ್ವಯದ ಮೂಲಕ ಭಾರತ್ ಇಂಡಸ್ಟ್ರಿಯಲ್ ಸೇಫ್ಟಿ ಮ್ಯಾನೇಜ್‌ಮೆಂಟ್ ಸಂಸ್ಥೆಯು ವೃತ್ತಿಪರ ಶಿಕ್ಷಣದಲ್ಲಿ ಹೊಸ ಮಾದರಿಯನ್ನೇ ಸ್ಥಾಪಿಸಲು ಮುಂದಾಗಿದೆ’ ಎಂದು ತಿಳಿಸಿದರು.

ಚಿತ್ರದುರ್ಗ ಸರ್ಕಾರಿ ವೈದ್ಯಕೀಯ ಕಾಲೇಜು – ಸಂಶೋಧನಾ ಸಂಸ್ಥೆ

ನಿಯಮಾನುಸಾರ ನೇಮಕಾತಿ: ನಿರ್ದೇಶಕರ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಗರದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಬೋಧಕ ಸಿಬ್ಬಂದಿ ನೇಮಕ ಪ್ರಕ್ರಿಯೆ ನಿಯಮಾನುಸಾರ ನಡೆದಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ.ಯುವರಾಜ್ ಸ್ಪಷ್ಟನೆ ನೀಡಿದ್ದಾರೆ.

2023ರಲ್ಲಿ ಕಾಲೇಜು ಆರಂಭಗೊಂಡಿದ್ದು, 150 ವಿದ್ಯಾರ್ಥಿ-ಗಳಿಗೆ ಪ್ರವೇಶಾತಿ ನೀಡಲಾಗುತ್ತಿದೆ. ಬೋಧನೆಗೆ ಕಟ್ಟಡ, ಸಾಧನ ಸಲಕರಣೆ, ವಿದ್ಯಾರ್ಥಿಗಳಿಗೆ ಆಸನದ ವ್ಯವಸ್ಥೆ ಇಲ್ಲದ ಕಾರಣ ದಾವಣಗೆರೆ ವಿಶ್ವವಿದ್ಯಾಲ-ಯದ ಜ್ಞಾನಗಂಗೋತ್ರಿ ಕಟ್ಟಡವನ್ನು ತಾತ್ಕಾಲಿಕವಾಗಿ ಎಂಒಯು ಮೂಲಕ ಪಡೆದುಕೊಳ್ಳಲಾಗಿದೆ. ಕೇವಲ ಐವರು ಬೋಧಕರಿದ್ದು, ಇವರಿಂದ ಬೋಧನೆ ಮಾಡಿಸಲು ಕಷ್ಟವಾಗುತ್ತಿದೆ ಎಂದು ತಿಳಿಸಿದ್ದಾರೆ.

ಸರ್ಕಾರದಿಂದ ಬಿಡುಗಡೆಯಾದ ಅನುದಾನದಿಂದ ಪೀಠೋಪಕರಣ, ಪ್ರಯೋಗಾಲಯದ ಸಾಮಗ್ರಿಗಳನ್ನು ಅಳವಡಿಸಲಾಗಿದೆ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ತರಗತಿಗಳನ್ನು ನಡೆಸಲಾಗುತ್ತಿದೆ. ಸರ್ಕಾರದ ಆದೇಶದಂತೆ ಹಾಗೂ ಮೀಸಲಾತಿ ಕೋಷ್ಟಕದ ಅನುಸಾರ ಮಂಜೂರಾದ ಹುದ್ದೆಗಳಿಗೆ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರನ್ನು ನೇಮಕಾತಿ ಮಾಡಿ-ಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ನಗರದಲ್ಲಿ ಸ್ಥಳದ ಕೊರತೆ, ಮಾನವ ಸಂಪನ್ಮೂಲದ ಕೊರತೆ ಇದ್ದ ಕಾರಣ ದಾಖಲೆಗಳ ಪರಿಶೀಲನೆ, ಸಂದರ್ಶನ ಪ್ರಕ್ರಿಯೆಯನ್ನು ಬಿಎಂಸಿಆರ್ ಆವರಣದಲ್ಲಿ ನಡೆಸಲಾಗಿದೆ.

ತಾತ್ಕಾಲಿಕ ಪಟ್ಟಿ ಪ್ರಕಟಿಸಿದ ನಂತರ ಕೆಲವರು ಆಕ್ಷೇಪಣೆ ಸಲ್ಲಿಸಿದ್ದು, ಸರ್ಕಾರದ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆ. ವೈದ್ಯಕೀಯ ಶಿಕ್ಷಣ ಸಚಿವರು, ಕೌಶಲಾಭಿವೃದ್ಧಿ ಹಾಗೂ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನಕ್ಕೆ ತಂದ ನಂತರ ನೇಮಕಾತಿ ಪ್ರಕ್ರಿಯೆ ನಡೆಸಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆ, ಸರ್ಕಾರದ ಪ್ರಧಾನ ಕಾಯದರ್ಶಿಗಳ ನೇತೃತ್ವದಲ್ಲಿ ಇನ್ನಿತರ ಸದಸ್ಯರನ್ನು ಒಳಗೊಂಡ ಸಮಿತಿಯು ಪಾರದರ್ಶ-ಕವಾಗಿ ಸಂದರ್ಶನ ನಡೆಸಿದೆ. ಅಭ್ಯರ್ಥಿಗಳಿಗೆ ಟಿಎ, ಡಿಎ ನೀಡುವುದಾಗಿ ನೇಮಕಾತಿ ಪ್ರಕಟಣೆಯಲ್ಲೇ ತಿಳಿಸಿರಲಿಲ್ಲ. ಹೀಗಾಗಿ ಅವರಿಗೆ ಟಿಎ, ಡಿಎ ನೀಡಿಲ್ಲ ಎಂದು ಡಾ.ಯುವರಾಜ್ ಸ್ಪಷ್ಟಪಡಿಸಿದ್ದಾರೆ. ‘ಪ್ರಜಾವಾಣಿ’ಯ ಏ.22ರ ಸಂಚಿಕೆಯಲ್ಲಿ ‘ಪ್ರಾಧ್ಯಾಪಕ ಹುದ್ದೆಗೆ ₹50 ಲಕ್ಷ?’ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.



ಕೃತಕ ಬುದ್ಧಿಮತ್ತೆ

ಜಿಪಿಯು ಏಕೆ? ಸಿಪಿಯು ಸಾಕು!

ಇ.ಎಸ್. ಸುಧೀಂದ್ರ ಪ್ರಸಾದ್

'ಸೊಳ್ಳೆಯನ್ನು ಹೊಡೆಯಲು ರಿವಾಲ್ವರ್ ಏಕೆ' – ಭಾರತೀಯ ತಂತ್ರಜ್ಞಾನ ಸಂಸ್ಥೆ ಮದ್ರಾಸ್‌ನ ನಿರ್ದೇಶಕ ಪ್ರೊ.ವಿ.ಕಾಮಕೋಟಿ ಅವರ ಈ ಮಾತು ಕಳೆದ ವಾರ ಭಾರಿ ಸುದ್ದಿಯಲ್ಲಿತ್ತು. ಅದು ಜಗತ್ತಿಗೆ ಭಾರತದ ತಾಕತ್ತು ಏನು ಎಂಬುದರ ಪ್ರತಿಧ್ವನಿಯ ಜತೆಗೆ, ಹೊಸ ತಂತ್ರಜ್ಞಾನ ಆವಿಷ್ಕಾರದ ಕನಸಿನಲ್ಲಿರುವ ಬಹಳಷ್ಟು ಸ್ಟಾರ್ಟ್‌ಅಪ್‌ಗಳಿಗೆ ಇದು ಭರವಸೆಯ ಬೆಳಕಾಗಿದೆ.

ಚೀನಾದ 'ಡೀಪ್ ಸೀಕ್' ಎಂಬ ಅಗ್ಗದ ಕೃತಕ ಬುದ್ಧಿಮತ್ತೆ ಅಮೆರಿಕದ ದೈತ್ಯ ಹಾರ್ಡ್‌ವೇರ್ ಕಂಪನಿ ಎನ್‌ವಿಡಿಯಾದ ಷೇರುಗಳನ್ನೇ ಕುಸಿಯುವಂತೆ ಮಾಡಿತು. ಕೃತಕ ಬುದ್ಧಿಮತ್ತೆ ಸಿದ್ಧಪಡಿಸಬೇಕೆಂದರೆ ದುಬಾರಿ ಬೆಲೆಯ ಹಾರ್ಡ್‌ವೇರ್ ಬೇಕು ಎಂಬ ನಂಬಿಕೆಯನ್ನೇ ಇದು ಹುಸಿಗೊಳಿಸಿತು. ಇದೀಗ ಭಾರತದಿಂದ ಹೊರಹೊಮ್ಮಿದ ಈ ಸುದ್ದಿಯ ಮೂಲಕವೂ ಅಂಥದ್ದೇ ಒಂದು ಸಂದೇಶ ಜಗತ್ತಿಗೆ ರವಾನೆಯಾಗಿದೆ.

ದುಬಾರಿ ಗ್ರಾಫಿಕ್ಸ್ ಪ್ರೊಸೆಸ್ಸಿಂಗ್ ಯೂನಿಟ್ (ಜಿಪಿಯು) ಬದಲು, ಸೆಂಟ್ರಲ್ ಪ್ರೊಸೆಸ್ಸಿಂಗ್ ಯೂನಿಟ್ (ಸಿಪಿಯು) ಬಳಸಿಯೂ ಮೆಟಾದ ಲಾಮಾ 2 ಅಥವಾ ಅಲಿಬಾಬಾದ ಖ್ವೆನ್ 2.5ನಂಥ ಬೃಹತ್ ಕೃತಕಮತ್ತೆ ತಂತ್ರಾಂಶಗಳನ್ನು ಸುಲಭವಾಗಿ ನಿರ್ವಹಿಸಲು ಸಾಧ್ಯ ಎಂದು ಐಐಟಿ ಮದ್ರಾಸ್‌ನ ಸಹಯೋಗದಲ್ಲಿ ಕ್ಯಾಲಿಫೋರ್ನಿಯಾದ ಸ್ಟಾರ್ಟ್‌ಅಪ್ ಝೀರೊ ಲ್ಯಾಬ್ಸ್ ತಂತ್ರಜ್ಞರ ತಂಡ ಸಾಬೀತು ಮಾಡಿದೆ.

'ಕಾಂಪ್ಯಾಕ್ಟ್ ಎಐ' ಎಂಬ ಈ ಸರಳ ಸಿಪಿಯು ಆಧಾರಿತ ಕಂಪ್ಯೂಟರ್ ಮೂಲಕ ಕೃತಕ ಬುದ್ಧಿಮತ್ತೆಯನ್ನು ಅನಾಯಾಸವಾಗಿ ಬಳಸುವ ತಂತ್ರಜ್ಞಾನ ಸುದ್ದಿ ಹೊರಬೀಳುತ್ತಿದ್ದಂತೆ, ಇಡೀ ಜಗತ್ತು ಭಾರತದತ್ತ ನೋಡಲಾರಂಭಿಸಿದೆ. ಈ ಮೊದಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಸಾಧನವನ್ನು ಅಭಿವೃದ್ಧಿಪಡಿಸಬೇಕೆಂದರೆ ದುಬಾರಿ ಬೆಲೆಯ ಜಿಪಿಯುವನ್ನು ಖರೀದಿಸಬೇಕು. ಅದಕ್ಕಾಗಿ ಹಲವು ದಿನಗಳು ಕಾಯಬೇಕಾಗಿತ್ತು. ಚಿಪ್ ಅಲಭ್ಯತೆಯಿಂದಾಗಿ ಬಹಳಷ್ಟು ಸಂಶೋಧನೆಗಳು ವೇಗ ಪಡೆಯಲಾಗದೆ ಪರಿತಪಿಸುವಂತಾಗಿತ್ತು. ಚೀನಾದ ಡೀಪ್‌ಸೀಕ್ ಕೂಡ ಅಗ್ಗದ ಬೆಲೆಯ ಕೆಲ ಚಿಪ್‌ಗಳನ್ನೇ ಜೋಡಿಸಿ ಯಶಸ್ಸು ಸಾಧಿಸಿದ್ದು ದೊಡ್ಡ ಸದ್ದು ಮಾಡಿತು. ಇದೀಗ ಕಾಂಪ್ಯಾಕ್ಟ್ ಕೂಡ ಅಂಥದ್ದೇ ಹೊಸ ಸಾಧ್ಯತೆಯನ್ನು ತಂತ್ರಜ್ಞಾನ ಜಗತ್ತಿಗೆ ಪರಿಚಯಿಸಿದೆ.

ಸಿಪಿಯುವನ್ನು ಬಳಸಿ ಕೃತಕ ಬುದ್ಧಿಮತ್ತೆಯ ತಂತ್ರಾಂಶದಿಂದ ಉತ್ಕೃಷ್ಟ ಗುಣಮಟ್ಟದ ಫಲಿತಾಂಶವನ್ನು ಪಡೆಯಲು ಸಾಧ್ಯವಾಗಿದೆ ಎಂದು ಎರಡೂ ಸಂಸ್ಥೆಗಳು ಹೇಳಿವೆ. ಈ ತಂತ್ರಜ್ಞಾನವನ್ನು ಚಿಪ್ ತಯಾರಿಕಾ ಕಂಪನಿಗಳಾದ ಇಂಟೆಲ್ ಮತ್ತು ಅಡ್ವಾನ್ಸ್ಡ್ ಮೈಕ್ರೊ ಡಿವೈಸ್ ಕಂಪನಿಗಳೂ ಪ್ರಯೋಗಾರ್ಥವಾಗಿ ಪರೀಕ್ಷಿಸಿವೆ ಎಂದು ಝೀರೊ ಹೇಳಿದೆ.

'ಕೃತಕ ಬುದ್ಧಿಮತ್ತೆ ಎಂಬ ಪದವೇ ನಮ್ಮಲ್ಲಿ ತಾರತಮ್ಯ ಭಾವನೆ ಮೂಡಿಸಿತ್ತು. ಉಳ್ಳವರು ಮಾತ್ರ ದುಬಾರಿ ಬೆಲೆಯ ಜಿಪಿಯು ಬಳಸಿ ಶಕ್ತಿಶಾಲಿ ಎಐಗಳನ್ನು ಅಭಿವೃದ್ಧಿಪಡಿಸಲು ಸಾಧ್ಯ ಎಂಬ ಮಾತುಗಳಿದ್ದವು. ಆದರೆ ಸೊಳ್ಳೆಯನ್ನು ಸಾಯಿಸಲು ರಿವಾಲ್ವರ್ ಬೇಡ ಎಂಬುದನ್ನು ಪ್ರಯೋಗಸಹಿತ ಜಗತ್ತಿಗೆ ತೋರಿಸಿದ್ದೀವಿ' ಎಂದು ವಿ. ಕಾಮಕೋಟಿ ಹೇಳಿದ್ದಾರೆ. ಈ ಶಕ್ತಿಶಾಲಿ ಕಂಪ್ಯೂಟರ್‌ನಲ್ಲಿ 24 ಕೋರ್ ಪ್ರಾಸೆಸರ್‌ಗಳುಳ್ಳ ಇಂಟೆಲ್‌ನ ಕ್ಸೆನಾನ್ ಸಿಲ್ವರ್ 4510 ಸಿಪಿಯು ಮತ್ತು 46 ಜಿಬಿ ರ್‍ಯಾಮ್ ಬಳಸಲಾಗಿದೆ. ಇದು ಪ್ರತಿ ಸೆಕೆಂಡ್‌ಗೆ 43 ವಿವಿಧ ಕೆಲಸಗಳನ್ನು ನಿಭಾಯಿಸಬಲ್ಲಷ್ಟು ಶಕ್ತಿ ಈ ಕಾಂಪ್ಯಾಕ್ಟ್ ಸಿಪಿಯು ಹೊಂದಿದೆ. 'ಥರ್ಡ್ ಎಐ' ಎಂಬ ಕಂಪನಿ ಬೋಲ್ಟ್ 2.5ಬಿ ಎಂಬ ಸಿಪಿಯು ಆಧಾರಿತ ಎಐ ಯಂತ್ರವನ್ನು ಅಭಿವೃದ್ಧಿಪಡಿಸಿತ್ತು. ಡೆಸ್ಕ್‌ಟಾಪ್ ಮಾದರಿಯಾಗಿದ್ದ ಇದು ಪ್ರತಿ ಸೆಕೆಂಡ್‌ಗೆ 50 ಟೋಕನ್‌ಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿತ್ತು. ಇಂಟೆಲ್ ಮತ್ತು ಆ್ಯಂಪರ್ ಚಿಪ್ ತಯಾರಿಕಾ ಕಂಪನಿಗಳು ತಮ್ಮ ಯಂತ್ರಗಳ ಮೂಲಕವೂ ಕೃತಕಬುದ್ಧಿಮತ್ತೆಯ ತಂತ್ರಾಂಶಗಳನ್ನು ನಿರ್ವಹಿಸಲು ಸಾಧ್ಯ ಎಂದೂ ಹೇಳಿದ್ದವು.

ಕಾಂಪ್ಯಾಕ್ಟ್ ಎಐ ಯಂತ್ರವು 17 ಕೃತಕ ಬುದ್ಧಿಮತ್ತೆಯ ತಂತ್ರಾಂಶವನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಸಾಮಾನ್ಯವಾಗಿ ಇಂಥ ತಂತ್ರಾಂಶಗಳನ್ನು ನಿರ್ವಹಿಸಲು ಜಿಪಿಯು ಅಗತ್ಯ ಎಂದೇ ಹೇಳಲಾಗುತ್ತದೆ. ಎನ್‌ವಿಡಿಯಾದಂಥ ಶಕ್ತಿಶಾಲಿ ಚಿಪ್‌ಗಳನ್ನು ಬಳಸಬೇಕೆಂದರೆ ₹10 ಲಕ್ಷದಿಂದ ₹20 ಲಕ್ಷಗಳಷ್ಟು ಬೇಕಾಗುತ್ತದೆ. ಆದರೆ ಕಾಂಪ್ಯಾಕ್ಟ್ ಎಐ ಯಂತ್ರವು ಇವುಗಳ ನೆರವಿಲ್ಲದೆ ಕಠಿಣ ಕೆಲಸಗಳನ್ನೂ ಸುಲಭವಾಗಿ ನಿರ್ವಹಿಸಬಲ್ಲದು.

ಇಷ್ಟೇ ಅಲ್ಲ, ಕ್ಲೌಡ್‌ನ ನೆರವಿಲ್ಲದೆ ಆಫ್‌ಲೈನ್‌ನಲ್ಲೂ ಈ ಯಂತ್ರಕ್ಕೆ ಕಾರ್ಯನಿರ್ವಹಿಸುವ ಸಾಮರ್ಥ್ಯ ಇರುವುದರಿಂದ ಸಣ್ಣ ನಗರಗಳಲ್ಲಿನ ಅಲ್ಪ ವೇಗದ ಅಂತರ್ಜಾಲ ಸೌಕರ್ಯದಲ್ಲೂ ಕಾಂಪ್ಯಾಕ್ಟ್ ಎಐ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ ಎನ್ನುವುದು ತಜ್ಞರ ಮಾತು. ಚಂದ್ರಯಾನ, ಮಂಗಳಯಾನ ಸೇರಿದಂತೆ ಕಡಿಮೆ ಖರ್ಚಿನಲ್ಲಿ ಬೃಹತ್ ಸಾಧನೆ ಮಾಡುವ ಭಾರತದ ಪರಂಪರೆ ಈಗ ಕಾಂಪ್ಯಾಕ್ಟ್‌ವರೆಗೂ ಮುಂದುವರಿದಿದೆ. ಭಾರತದ ಇಂಥ ಆವಿಷ್ಕಾರಗಳು ದೇಶದ ನೂರಾರು ತಂತ್ರಜ್ಞರಿಗೆ ಪ್ರೇರಣೆಯಾಗುವುದರ ಜತೆಗೆ, ಜಗತ್ತನ್ನೇ ಇತ್ತ ನೋಡುವಂತೆ ಮಾಡಿದೆ.



ಅಪರಾಧಿಗಳ ಬೇಟೆಗೆ 'ಟಚ್ ಡಿಎನ್‌ಎ'



ಶಶಿಕುಮಾರ್. ಎಲ್

ಅಪರಾಧಿಗಳಿಗೆ ಶಿಕ್ಷೆಯಾಗುವುದು ಎಷ್ಟು ಮುಖ್ಯವೋ, ನಿರಪರಾಧಿಗಳಿಗೆ ಶಿಕ್ಷೆ ಆಗದಂತೆ ನೋಡಿಕೊಳ್ಳುವುದು ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ 'ಟಚ್ ಡಿಎನ್‌ಎ' ತಂತ್ರಜ್ಞಾನ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಪ್ರತಿ ಮನುಷ್ಯನಲ್ಲಿನ ಡಿಎನ್‌ಎ ಗುಣಲಕ್ಷಣಗಳು ವಿಭಿನ್ನ, ಒಬ್ಬ ವ್ಯಕ್ತಿಗಿದ್ದಂತೆ ಇನ್ನೊಬ್ಬನಿಗಿರುವುದಿಲ್ಲ. ಈ ಆಧಾರದ ಮೇಲೆ ವ್ಯಕ್ತಿಯನ್ನು ಪತ್ತೆ ಹಚ್ಚಿ ತನಿಖೆಯನ್ನು ಮುಂದುವರಿಸಲು ಇಂದು ತನಿಖಾಧಿಕಾರಿಗಳಿಗೆ ನೆರವಾಗುತ್ತಿರುವುದು 'ಟಚ್ ಡಿಎನ್‌ಎ' ತಂತ್ರಜ್ಞಾನ.

'ಟಚ್ ಡಿಎನ್‌ಎ' ಎಂಬುದು ಅಪರಾಧಸ್ಥಳದಲ್ಲಿ ಉಳಿದಿರುವ ಸಣ್ಣ ಪ್ರಮಾಣದ ಡಿಎನ್‌ಎಯನ್ನು ವಿಶ್ಲೇಷಿಸಲು ಬೇಕಾದ ಒಂದು ವಿಧಿವಿಜ್ಞಾನದ ವಿಧಾನವಾಗಿದೆ. ಇದನ್ನು 'ಟ್ರೇಸ್ ಡಿಎನ್‌ಎ' ಎಂದೂ ಕರೆಯುತ್ತಾರೆ. ಕನ್ನಡದಲ್ಲಿ 'ಸ್ಪರ್ಶ ಡಿಎನ್‌ಎ' ಎಂದು ಹೇಳಬಹುದೇನೋ! ಇಂದು ಸಮಾಜದಲ್ಲಿ ಕೊಲೆ, ದರೋಡೆ, ಅತ್ಯಾಚಾರ, ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಮೊದಲಾದ ಅಪರಾಧಗಳು ಹೆಚ್ಚುತ್ತಿವೆ. ಇಂತಹ ಅಪರಾಧಗಳ ತನಿಖೆಯಲ್ಲಿ ನಿಜವಾದ ಅಪರಾಧಿಗಳನ್ನು ಕಂಡುಹಿಡಿಯಲು ಟಚ್ ಡಿಎನ್‌ಎ ತಂತ್ರಜ್ಞಾನದ ಪಾತ್ರ ಅತ್ಯಂತ ಮಹತ್ವದಾಗಿದೆ.

ಅಪರಾಧಿಗಳ ತನಿಖೆಯಲ್ಲಿ ಬೆರಳಚ್ಚು ತಂತ್ರಜ್ಞಾನ, ಸಾಕ್ಷಿಗಳ ಆಧಾರ, ಪ್ರೊಟೀನ್ ಗುಂಪುಗಳ ಆಧಾರ ಹಾಗೂ ಇತರ ಆಧಾರಗಳನ್ನು ಹೆಚ್ಚು ಬಳಸಲಾಗುತ್ತಿತ್ತು. ಆದರೆ ಪ್ರಸ್ತುತ ಟಚ್ ಡಿಎನ್‌ಎ ತಂತ್ರಜ್ಞಾನವನ್ನು ಹೆಚ್ಚು ಬಳಸುತ್ತಿದ್ದಾರೆ. ಡಿಎನ್‌ಎಯು ಜೀವಕೋಶದ ನ್ಯೂಕ್ಲಿಯಸ್‌ನ ಕ್ರೋಮೋಸೋಮ್‌ಗಳಲ್ಲಿ ಇರುತ್ತದೆ. ಇದರ ಕೆಲಸ ಮನುಷ್ಯನ ಎಲ್ಲ ಕ್ರಿಯೆಗಳನ್ನು ನಿಯಂತ್ರಿಸುವುದು. ಆದ್ದರಿಂದ ಇದನ್ನು 'ಬ್ಲೂ ಪ್ರಿಂಟ್ ಆಫ್ ಲೈಫ್' ಎಂದು ಕರೆಯುತ್ತೇವೆ. ಟಚ್ ಡಿಎನ್‌ಎ ತಂತ್ರಜ್ಞಾನ ಅತ್ಯಂತ ನಿಖರವಾದದ್ದು, ಹಾಗೂ ಯಾರೇ ಎಲ್ಲೇ ಪ್ರಯೋಗ ಮಾಡಿದರು ಒಂದೇ ಫಲಿತಾಂಶ ಸಿಗುತ್ತದೆ.

ಟಚ್ ಡಿಎನ್‌ಎ ಒಬ್ಬ ವ್ಯಕ್ತಿಯಿಂದ ಇತರ ವಸ್ತುಗಳಿಗೆ ವರ್ಗಾವಣೆ ಆಗುತ್ತದೆ. ಅದು ಜೀವಕೋಶಗಳ ಮುಖಾಂತರ, ಮುಖ್ಯವಾಗಿ ವ್ಯಕ್ತಿಯ ಕೈಯಿಂದ ಆತ ಸ್ಪರ್ಶಿಸುವ ವಸ್ತುವಿಗೆ ಕ್ಷಣಮಾತ್ರದಲ್ಲಿ ರವಾನೆಯಾಗುವ ಅಂಶ ಬೆರಗುಗೊಳಿಸುವಂತಹದ್ದು. ಟಚ್ ಡಿಎನ್‌ಎಗೆ ಯಾವುದೇ ರಕ್ತ ಅಥವಾ ವೀರ್ಯವನ್ನು ನೋಡುವ ಅಗತ್ಯವಿಲ್ಲ. ಇದಕ್ಕೆ ನಮ್ಮ ಚರ್ಮದ ಹೊರಗಿನ ಪದರದಿಂದ ಏಳು ಅಥವಾ ಎಂಟು ಕೋಶಗಳು ಮಾತ್ರ ಬೇಕಾಗುತ್ತವೆ. ಪ್ರತಿಯೊಬ್ಬರ ಡಿಎನ್‌ಎಯ ಒಳಗೆ, ಜೀನ್‌ಗಳ ನಡುವೆ ಪುನರಾವರ್ತಿತ ಸರಣಿಗಳು ಇರುತ್ತವೆ. ಇವನ್ನು 'ತಾಂಡೆಮ್ ಪುನರಾವರ್ತನೆ' (ತಾಂಡೆಮ್ ರಿಪೀಟ್) ಎನ್ನುತ್ತಾರೆ. ಈ ಪುನರಾವರ್ತನೆಯ ಅನುಕ್ರಮವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ವಿಶೇಷ ಪ್ರಯೋಗಾಲಯ ತಂತ್ರಗಳನ್ನು ಬಳಸಿಕೊಂಡು ಪ್ರತಿ ವ್ಯಕ್ತಿಗೆ ಒಂದು ಅನನ್ಯ ಪುನರಾವರ್ತನೆಯ ಮಾದರಿಯನ್ನು ನಾವು ಕಂಡುಕೊಳ್ಳಬಹುದು. ರಕ್ತಸಂಬಂಧಿಕರ ನಡುವೆ ಡಿಎನ್‌ಎ ಅನುಕ್ರಮಗಳು ಪರಸ್ಪರ ಸಂಬಂಧವಿಲ್ಲದ ವ್ಯಕ್ತಿಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಹೋಲುತ್ತವೆ. ಇದು ಹಲವಾರು ಪ್ರಕರಣಗಳಲ್ಲಿ ರಕ್ತಸಂಬಂಧಗಳನ್ನು ಸ್ಥಾಪಿಸಲು ಸಹಾಯ ಮಾಡುವುದಲ್ಲದೆ, ಅಪರಾಧಿಗಳ ಪತ್ತೆದಾರಿಕೆಗೂ ಅವಕಾಶವನ್ನು ಮಾಡಿಕೊಡುತ್ತದೆ.

ಅಪರಾಧಸ್ಥಳದಲ್ಲಿ ದಾಳಿಕೋರರು ಬಲಿಪಶುಗಳು, ಶಸ್ತ್ರಾಸ್ತ್ರಗಳು ಅಥವಾ ಇನ್ನಾವುದನ್ನಾದರೂ ಮುಟ್ಟಿದಾಗ ಉಳಿದಿರುವ ಚರ್ಮದ ಕೋಶಗಳನ್ನು 'ಟಚ್ ಡಿಎನ್‌ಎ' ವಿಧಾನದಲ್ಲಿ ವಿಶ್ಲೇಷಿಸಲಾಗುತ್ತದೆ. ಹೀಗಾಗಿಯೇ ಈ ವಿಧಾನಕ್ಕೆ 'ಟಚ್ ಡಿಎನ್‌ಎ' ಎಂದು ಹೆಸರಿಸಿರುವುದು. ಇತ್ತೀಚೆಗೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ನಿರ್ವಹಿಸಿದ ಹೆಚ್ಚಿನ ಪ್ರಕರಣಗಳು ಟಚ್ ಡಿಎನ್‌ಎ ವಿಧಾನವನ್ನು ಅವಲಂಬಿಸಿವೆ; ಅದು ಸಂಸ್ಥೆಗೆ ಯಶಸ್ಸುಗಳನ್ನೂ ತಂದು ಕೊಟ್ಟಿದೆ.

ತನಿಖಾಧಿಕಾರಿಗಳು ಮೊದಲು ಅಪರಾಧಸ್ಥಳದಲ್ಲಿ ಉಳಿದಿರುವ ಅತ್ಯಲ್ಪ ಪ್ರಮಾಣದ ಜೀವಕೋಶಗಳನ್ನು ಸಂಗ್ರಹಿಸುತ್ತಾರೆ. ಸಾಮಾನ್ಯ ಡಿಎನ್‌ಎ ಸಂಗ್ರಹಕ್ಕೆ ಅಪರಾಧಿಗಳ ಕೂದಲು, ಚರ್ಮ, ರಕ್ತದಂಥವು ನೆರವಾದರೆ ಟಚ್‌ಡಿಎನ್‌ಎ ವಿಧಾನದಲ್ಲಿ ಅಪರಾಧಿಯ ಬೆವರಿನ ಮೂಲಕ ಮಾತ್ರವೇ ಡಿಎನ್‌ಎಯನ್ನು ಪತ್ತೆಹಚ್ಚಲಾಗುತ್ತದೆ. ಜೀವಕೋಶಗಳ ಸಂಗ್ರಹದ ನಂತರ ಪ್ರಯೋಗಾಲಯದಲ್ಲಿ 'ಪಾಲಿಮರೇಸ್ ಚೈನ್ ಆ್ಯಕ್ಷನ್' (ಪಿಸಿಆರ್) ಎಂಬ ಪ್ರಕ್ರಿಯೆಯನ್ನು ಬಳಸಿಕೊಂಡು ಆ ಜೀನ್‌ಗಳ ಹಲವು ಪ್ರತಿಗಳನ್ನು ಮಾಡಿಕೊಳ್ಳಲಾಗುತ್ತದೆ. ಮುಂದೆ ವಿಜ್ಞಾನಿಗಳು ಡಿಎನ್‌ಎಯ 13 ನಿರ್ದಿಷ್ಟ ಸ್ಥಳಗಳಿಗೆ ಪ್ರತಿ 'ದೀಪಕ ಸಂಯುಕ್ತ'ಗಳನ್ನು (ಕೆಮಿ ಲ್ಯುಮಿನಿಸೆನ್ಸ್ ಪ್ರೈಮರ್) ಬೆರೆಸುತ್ತಾರೆ. ಬಳಿಕ ಆ ವ್ಯಕ್ತಿಯ ನಿರ್ದಿಷ್ಟ ಆನುವಂಶಿಕ ಭಾವಚಿತ್ರವನ್ನು ನೀಡುತ್ತಾರೆ. ಇಡೀ ಪ್ರಕ್ರಿಯೆಗೆ ಕೆಲವೇ ದಿನಗಳು ಸಾಕಾಗುತ್ತವೆ. ಜೀವಕೋಶಗಳ ಈ 13 ಸ್ಥಳಗಳು ಒಬ್ಬರಿಂದ ಒಬ್ಬರಿಗೆ ಹೆಚ್ಚು ವ್ಯತ್ಯಾಸಗಳನ್ನು ಒಳಗೊಂಡಿರುತ್ತವೆ.

ಬೋಧಗಯಾದ ಸ್ಫೋಟ ಪ್ರಕರಣದಲ್ಲಿ, ಬಾಂಬ್ ಇಟ್ಟ ವ್ಯಕ್ತಿಯು ಮುಖವಾಡವನ್ನು ತೊಟ್ಟು, ಸನ್ಯಾಸಿಯಂತೆ ವೇಷ ಧರಿಸಿದ್ದ. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳಿದ್ದರೂ ರಾಷ್ಟ್ರೀಯ ತನಿಖಾ ದಳ ಯಾವುದೇ ತೀರ್ಮಾನಕ್ಕೆ ಬರುವುದು ಕಷ್ಟಕರವಾಗಿತ್ತು. ಬಾಂಬ್ ಇಟ್ಟ ನಂತರ ಅಪರಾಧಿಯು ನಿಲುವಂಗಿಯನ್ನು ಅಲ್ಲೇ ಬಿಟ್ಟು ಹೋಗಿದ್ದ. ಕೊನೆಗೆ ಟಚ್ ಡಿಎನ್‌ಎ ವಿಧಾನದಲ್ಲಿ ಆ ನಿಲುವಂಗಿಯಿಂದ ಜೀವಕೋಶದ ಮಾದರಿಗಳನ್ನು ಸಂಗ್ರಹಿಸಲಾಯಿತು. ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಿದ ನಂತರ ಅವನ ಇರುವಿಕೆಯನ್ನು ಖಾತ್ರಿಪಡಿಸುವಲ್ಲಿ ತನಿಖಾ ದಳವು ಯಶಸ್ವಿಯಾಯಿತು. 2024ರಲ್ಲಿ ಟಚ್ ಡಿಎನ್‌ಎ ತಂತ್ರಜ್ಞಾನದಿಂದ ಸುಮಾರು 25 ಸೂಕ್ಷ್ಮ ಪ್ರಕರಣಗಳನ್ನು ಭೇದಿಸಲು ನೆರವಾಗಿ ಅಪರಾಧಿಗಳ ಹೆಡೆಮುರಿ ಕಟ್ಟಿ ಹಾಕಲು ಸಹಾಯವಾಗಿದೆ ಎಂದು ಗುಜರಾತಿನ ನ್ಯಾಯವಿಜ್ಞಾನ ಪ್ರಯೋಗಾಲಯದ ನಿರ್ದೇಶನಾಲಯ ಹೆಮ್ಮೆಯಿಂದ ಹೇಳಿಕೊಂಡಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ....ಯಲ್ಲಿ ಎರಡು ವಿಭಿನ್ನ ಅಣುಗಳು ಅಥವಾ ಅಣುಗಳ ಗುಂಪುಗಳು(ಅಯಾನುಗಳು) ವಿನಿಮಯಗೊಳ್ಳುತ್ತವೆ

ಎ) ದ್ವಿಸ್ಥಾನ ಪಲ್ಲಟ ಕ್ರಿಯೆ ಬಿ) ಅಂತರುಷ್ಣಕ ಕ್ರಿಯೆ
ಸಿ) ಪ್ರಕ್ಷೇಪನ ಕ್ರಿಯೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ದ್ವಿಸ್ಥಾನ ಪಲ್ಲಟ ಕ್ರಿಯೆ

2) ಪ್ರಕ್ಷೇಪನ ಕ್ರಿಯೆಗಳು ವಿಲೀನಗೊಳ್ಳದ .... ಗಳನ್ನು ಉತ್ಪತ್ತಿ ಮಾಡುತ್ತವೆ.

ಎ) ಕಿಣ್ವ ಬಿ) ಲವಣ
ಸಿ) ನರ ತಂತು ಡಿ) ಯಾವುದೂ ಅಲ್ಲ

ಉತ್ತರ:– (ಬಿ) ಲವಣ

3) ಸಂಯೋಗ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ವಸ್ತುಗಳು. ಸಂಯೋಗವಾಗಿ ಒಂದೇ ಹೊಸ.................. ಉಂಟಾಗುತ್ತದೆ

ಎ) ಜವ ಬಿ) ಉದ್ದ
ಸಿ) ತೂಕ ಡಿ) ವಸ್ತು

ಉತ್ತರ:– (ಡಿ) ವಸ್ತು

4) "ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ." ಇದು ಯಾವ ನಿಯಮ?

ಎ) ಗುರುತ್ವಾಕರ್ಷಣ ನಿಯಮ
ಬಿ) ನ್ಯೂಟನನ ಮೊದಲ ನಿಯಮ
ಸಿ) ರಾಶಿ ಸಂರಕ್ಷಣೆ ನಿಯಮ ಡಿ) ಹೊಸ ವಿಕಿರಣ ನಿಯಮ

ಉತ್ತರ:– (ಸಿ) ರಾಶಿ ಸಂರಕ್ಷಣೆ ನಿಯಮ

5) ಯಾವ ರಾಸಾಯನಿಕ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ಪ್ರತಿವರ್ತಕಗಳು ಸೇರಿ ಒಂದೇ ಉತ್ಪನ್ನ ಉಂಟಾಗುತ್ತದೆಯೋ ಅಂತಹ ಕ್ರಿಯೆಗೆ .... ಎನ್ನುವರು

ಎ) ಸಂಯೋಗ ಬಿ) ಕುಂಬಕ
ಸಿ) ವಿಭಜನ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ:– (ಎ) ಸಂಯೋಗ

6) ಬೆಳ್ಳಿಯ ಕ್ಲೋರೈಡ್‌ನ ಬಿಳಿ ಬಣ್ಣವು ಸೂರ್ಯನ ಬೆಳಕಿನಲ್ಲಿ ಬೂದು ಬಣ್ಣಕ್ಕೆ ತಿರುಗಿಸುತ್ತದೆ, ಇದಕ್ಕೆ ಕಾರಣ ಬೆಳಕು, ಬೆಳ್ಳಿಯ ಕ್ಲೋರೈಡ್ ಅನ್ನು .... ಮತ್ತು .... ಆಗಿ ವಿಭಜಿಸುವುದು

ಎ) ಬೆಳ್ಳಿ ಮತ್ತು ಆಕ್ಸಿಡ್ ಬಿ) ಚಿನ್ನ ಮತ್ತು ತಾಮ್ರ
ಸಿ) ಬೆಳ್ಳಿ ಮತ್ತು ಕಬ್ಬಿಣದ ಆಕ್ಸೈಡ್
ಡಿ) ಬೆಳ್ಳಿ ಮತ್ತು ಕ್ಲೋರಿನ್

ಉತ್ತರ:– (ಡಿ) ಬೆಳ್ಳಿ ಮತ್ತು ಕ್ಲೋರಿನ್

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮಿಂಚು ಹುಳು ರಾತ್ರಿವೇಳೆಯಲ್ಲಿ ಮಿಂಚಲು ಕಾರಣವೇನು?

ಉತ್ತರ: ಮಿಂಚು ಹುಳುವಿನಲ್ಲಿರುವ ಪ್ರೋಟೀನ್ ಆಕ್ಸಿಜನ್‌ನೊಂದಿಗೆ ಅಪಕರ್ಷಿಸಿ ಬೆಳಕು ಬಿಡುಗಡೆ ಮಾಡುವ ರಾಸಾಯನಿಕ ಕ್ರಿಯೆ ನಡೆಯುವುದರಿಂದ ಅದು ರಾತ್ರಿ ವೇಳೆ ಮಿಂಚುತ್ತದೆ.

2) ಈ ಕೆಳಗಿನ ಯಾವುದೆಲ್ಲವೂ ಭೌತಿಕ ಕ್ರಿಯೆ ಅಥವಾ ರಾಸಾಯನಿಕ ಕ್ರಿಯೆಗಳಾಗಿವೆ ಎಂಬುದನ್ನು ತಿಳಿಸಿ

1) ಪೆಟ್ರೋಲಿಯಂ ಅನಿಲ ದಹನ
2) ಪೆಟ್ರೋಲ್ ಬಾಷ್ಪೀಕರಿಸುವಿಕೆ
3) ಕಬ್ಬಿಣವನ್ನು ಕೆಂಪಗೆ ತ್ಕಾಯಿಸುವುದು
4) ಹಾಲು ಮೊಸರಾಗುವಿಕೆ
5) ಅಮೋನಿಯಂ ಕ್ಲೋರೈಡ್‌ನ ಸಂಸ್ಕರಣೆ
6) ನೀರು ಮಂಜುಗಡ್ಡೆಯಾಗುವುದು

ಉತ್ತರ: ಭೌತಿಕ ಕ್ರಿಯೆ: (1) ಪೆಟ್ರೋಲ್ ಬಾಷ್ಪೀಕರಿಸುವಿಕೆ
(2) ಕಬ್ಬಿಣ ಕೆಂಪಗೆ ಕಾಯಿಸುವುದು
(3) ನೀರು ಮಂಜುಗಡ್ಡೆಯಾಗುವುದು

ರಾಸಾಯನಿಕ ಕ್ರಿಯೆ: (1) ಪೆಟ್ರೋಲಿಯಂ ಅನಿಲದ ದಹನ
(2) ಹಾಲು ಮೊಸರಾಗುವಿಕೆ
(3) ಅಮೋನಿಯಂ ಕ್ಲೋರೈಡ್‌ನ ಸಂಸ್ಕರಣೆ

3) ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಮತ್ತು ದ್ವಿಸ್ಥಾನಪಲ್ಲಟ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಬರೆಯಿರಿ

ಉತ್ತರ:– ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಎಂದರೆ ಹೆಚ್ಚು ಕ್ರಿಯಾಪಟುವಾದ ಲೋಹವು ಸಂಯುಕ್ತದಿಂದ ಕಡಿಮೆ ಕ್ರಿಯಾಪಟುವಾದ ಲೋಹವನ್ನು ಸ್ಥಾನಪಲ್ಲಟಗೊಳಿಸುವ ಕ್ರಿಯೆಯಾಗಿದೆ

ಆದರೆ ಎರಡು ಪ್ರತಿವರ್ತಕಗಳ ನಡುವೆ ಆಯಾನುಗಳ ವಿನಿಯಮ ನಡೆಯುವುದೋ ಅದನ್ನು ದ್ವಿಸ್ಥಾನಪಲ್ಲಟ ಕ್ರಿಯೆ ಎನ್ನುವರು.

4) ನೈಸರ್ಗಿಕ ಅನಿಲದ ದಹನವನ್ನು ರಾಸಾಯನಿಕ ಕ್ರಿಯೆ ಎಂದು ಹೇಗೆ ತಿಳಿಯುವಿರಿ?

ಉತ್ತರ:– ನೈಸರ್ಗಿಕ ಅನಿಲವನ್ನು ದಹಿಸಿದಾಗ ಶಾಖ ಬಿಡುಗಡೆಯಾಗುವುದರೊಂದಿಗೆ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಉಂಟಾಗುವುದು ಆದ್ದರಿಂದ ಇದು ರಾಸಾಯನಿಕ ಕ್ರಿಯೆ ಎಂದು ತಿಳಿಯುತ್ತದೆ.

5) ಮಂಜುಗಡ್ಡೆ ನೀರಾಗುವುದು ರಾಸಾಯನಿಕ ಕ್ರಿಯೆ ಅಲ್ಲ ಎಂದು ಹೇಗೆ ತಿಳಿಯುವಿರಿ

ಉತ್ತರ:– ಮಂಜುಗಡ್ಡೆ ನೀರಾಗುವುದರಿಂದ ಹೊಸ ಉತ್ಪನ್ನ ಬಿಡುಗಡೆಯಾಗುವುದಿಲ್ಲ, ಆದ್ದರಿಂದ ಇದು ರಾಸಾಯನಿಕ ಕ್ರಿಯೆ ಅಲ್ಲ.

6) ಸರಿದೂಗಿಸಿದ ರಾಸಾಯನಿಕ ಸಮೀಕರಣ ಎಂದರೇನು? ರಾಸಾಯನಿಕ ಸಮೀಕರಣಗಳನ್ನು ಏಕೆ ಸರಿದೂಗಿಸಬೇಕು?

ಉತ್ತರ:– ಪ್ರತಿ ಧಾತುವಿನ ಪರಮಾಣುಗಳ ಸಂಖ್ಯೆ ರಾಸಾಯನಿಕ ಕ್ರಿಯೆಯ ಮೊದಲು ಮತ್ತು ನಂತರ ಒಂದೇ ರೀತಿ ಇರಬೇಕು ಅಂದರೆ ಪ್ರತಿವರ್ತಕ ಮತ್ತು ಉತ್ಪನ್ನಗಳಲ್ಲಿ ಸಮನಾದ ಧಾತುಗಳ ಒಟ್ಟು ರಾಶಿ ಇರುವಿಕೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣ ಎನ್ನುವರು.

ರಾಶಿ ಸಂರಕ್ಷಣೆಯ ನಿಯಮದಂತೆ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ ಆದ್ದರಿಂದ ಸಮೀಕರಣಗಳನ್ನು ಸರಿದೂಗಿಸಬೇಕು.

7) ಕಂದು ಬಣ್ಣದ ವಸ್ತು x ಅನ್ನು ಕಾಯಿಸಿದಾಗ ಅದರ ಮೇಲ್ಮೈ ಕಪ್ಪಾಗುವುದರೊಂದಿಗೆ y ಉತ್ಪತ್ತಿಯಾಗುವುದು ಬಿಸಿಯಾಗಿರುವ x ವಸ್ತುವಿನ ಮೇಲೆ ಹೈಡ್ರೋಜನ್ ಅನಿಲ ಹಾಯಿಸಿದಾಗ ಪುನಃ ಕಂದು ಬಣ್ಣದ x ವಸ್ತುವಾಗುವುದು.

ಅ) x ಮತ್ತು y ವಸ್ತುಗಳು ಯಾವುವು?
ಬ) ಇದು ಯಾವ ಬಗೆಯ ರಾಸಾಯನಿಕ ಕ್ರಿಯೆ ಆಗಿದೆ?
ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ ಬರೆಯಿರಿ

ಉತ್ತರ:–

ಅ) x ವಸ್ತು:– ತಾಮ್ರ
y ವಸ್ತು : ತಾಮ್ರದ ಆಕ್ಸೈಡ್

ಬ) ತಾಮ್ರವನ್ನು ಕಾಯಿಸಿದಾಗ ಕಪ್ಪು ತಾಮ್ರದ ಆಕ್ಸೈಡ್ ಉಂಟಾಗುವುದು ಉತ್ಕರ್ಷಣ ಕ್ರಿಯೆ

ತಾಮ್ರದ ಆಕ್ಸೈಡ್‌ಗೆ ಹೈಡ್ರೋಜನ್ ಹಾಯಿಸಿದಾಗ ಪುನಃ ತಾಮ್ರ ಉಂಟಾಗುವುದು ರೆಡಾಕ್ಸ್ ಕ್ರಿಯೆ ಅಥವಾ ಉತ್ಕರ್ಷಣ–ಅಪಕರ್ಷಣ ಕ್ರಿಯೆ.

ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ

$$Cu + O_2 \longrightarrow 2CuO$$
$$CuO + H_2 \longrightarrow Cu + H_2O$$

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

PUC- CHEMISTRY

Types of Solutions

Problems:-

1. Calculate the molality of a solution containing 5.3 g of anhydrous NaCO in 200 g of water?

Ans:-

$$\text{Molality (m)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Mass of solvent in grams}}{1000}\right)}$$

$$\therefore \text{Molality (m)} = \frac{5.3\,g/106\,g\,mol}{200\,g/1000} = \frac{(0.05\,mol)}{(0.2\,kg)} = 0.25\,mol/kg\,(or)\,0.25\,m$$

2. Calculate the molarity of the solution containing 4.9 grams of HSO dissolved in 250 mL of the solution?

Ans:-

$$\text{Molarity (M)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Volume of solution in mL}}{1000}\right)} = \frac{4.9\,g/98\,g\,mol^{-1}}{250\,mL/1000} = \frac{(0.05\,mol)}{(0.25\,L)} = 0.2\,mol\,L^{-1}\,(or)\,0.2\,M$$

3. Calculate the normality of a solution containing 0.74 g of $Ca(OH)_2$ dissolved in 200 mL of the solution?

Ans:-

$$\text{Normality (N)} = \frac{\text{Gram equivalents of the solute}}{\text{Volume of solution in litres}}$$

$$\text{Equivalent mass of } Ca(OH)_2 = \frac{\text{Molar mass}}{\text{Acidity}} = \frac{74}{2} = 37\,g\,equiv^{-1}$$

$$\therefore \text{Normality of solution (N)} = \frac{0.74\,g/37\,g\,equiv^{-1}}{200\,mL/1000} = 0.1\,equiv/L\,(or)\,0.1\,N$$

4. The density of 10% by mass of KCl solution is 1.06 g cm^{-3}. Calculate the molarity of the solution.

Ans:- ***I. Calculation of volume of the solution:***

Mass of the solution = 100 g

Density of the solution = 1.06 g cm^{-3}

$$\text{Volume of solution} = \frac{\text{Mass of solution}}{\text{Density}} = \frac{100\,g}{1.06\,g\,cm^{-3}} = 94.34\,cm^3$$

II. Calculation of molarity of the solution:

$$\text{Molarity of solution (M)} = \frac{\left(\frac{\text{Mass of KCl}}{\text{Molar mass of KCl}}\right)}{\text{Volume of solution in } dm^3}$$

Mass of the KCl = 10 g

Molar mass of KCl = 39 + 35.5 = 74.5 g mol^{-1}

Volume of the solution = 94.34 cm^3 = 0.0943 dm^3

$$\text{Molarity (M)} = \frac{10\,g/(74.5\,g\,mol^{-1})}{0.0943\,dm^3} = 1.42\,mol\,dm^{-3} = 1.42\,M$$

5. 3.6 M sulphuric acid solution is 29% H_2SO_4. Calculate the density of the solution.

Soln:- ***I. Calculation of mass of the solution:***

Mass of H_2SO_4 in 3.6 M solution

$= (3.6\,mol) \times (98\,g\,mol^{-1})$

$= 352.8\,g$

29% H_2SO_4 means,

29 g of H_2SO_4 are present in solution = 100 g

∴ 352.8 g of H_2SO_4 are present in solution

$$= \frac{100\,g}{29\,g}(352.8\,g) = 1216.5\,g$$

II. Calculation of the density of the solution:

$$\text{Density of the solution} = \frac{\text{Mass of solution}}{\text{Volume of solution}} = \frac{1216.5\,g}{1000\,mL} = 1.22\,g\,mL^{-1}$$

6. The solubility of $Ba(OH)_2.\,8H_2O$ in water at 298 K is 5.6 g per 100 g of water. What is the molality of the hydroxide ions in a saturated solution of barium hydroxide at 298 K? (Atomic mass of Ba = 137, O = 16)

Soln:- ***I. Calculation of molality of the solution:***

$$\text{Molality of solution (m)} = \frac{\left(\frac{\text{Mass of solute}}{\text{Molar mass of solute}}\right)}{\text{Mass of solvent in kg}}$$

Mass of solute, $Ba(OH)_2.\,8H_2O$ = 5.6 g

Molar mass of solute, $Ba(OH)_2.\,8H_2O$

$= 137 + 2 \times (16 + 1) + 8 \times 18 = 315\,g\,mol^{-1}$

Mass of the solvent (water) = 100 g = 0.1 kg

$$\text{Molality (m)} = \frac{5.6\,g/(315\,g\,mol^{-1})}{0.1\,kg} = 0.18\,mol\,kg^{-1} = 0.18\,m$$

II. Calculation of molality of the OH^- ions:

Barium hydroxide ionises in water as follows –

$$Ba(OH)_2 \xrightleftharpoons{(aq)} Ba^{2+}(aq) + 2OH^-(aq)$$

This shows that the molality of OH^- ions is twice the molaltiy of $Ba(OH)_2 = 2 \times 0.18\,m = 0.36\,m$

7. A solution has been prepared by dissolving 0.49 g of sulphuric acid in 100 mL of the solution. Calculate normality of the solution.

Soln:- Normality of solution (N)

$$= \frac{\text{No. of gram equivalents of } H_2SO_4}{\text{Volume of solution in litres}}$$

Mass of H_2SO_4 = 0.49 g

Equivalent Mass of H_2SO_4 =

$$= \frac{\text{Molar mass}}{\text{Basicity}} = \frac{98.0}{2} = 49.0\,g\,equiv^{-1}$$

Volume of the solution = 100 mL

$$= \frac{100}{1000} = 0.1\,L$$

$$\text{Normality of solution (N)} = \frac{\left(\frac{\text{Mass of } H_2SO_4}{\text{Eq. mass of } H_2SO_4}\right)}{\text{Volume of solution in litres}} = \frac{0.49\,g/49\,g\,equiv^{-1}}{0.1\,L} = 0.1\,equiv.L^{-1} = 0.1\,N$$

5. Calculate the number of molecules of oxalic acid ($H_2C_2O_4.\,2H_2O$) in 100 mL of 0.2 N oxalic acid solution.

Soln:- ***I. Calculation of mass of the oxalic acid:***

$$\text{Normality of solution} = \frac{\left(\frac{\text{Mass of Oxalic acid}}{\text{Equivalent mass}}\right)}{\text{Volume of solution in litres}} = 0.2\,N = 0.2\,equiv.L^{-1}$$

Equivalent mass of the acid = Molar mass / Basicity

(Contd......)

ಕಣಿವೆಯಲ್ಲಿ ಹೆಚ್ಚಿದ ಬೇಗುದಿ

ಸರ್ವ ಪಕ್ಷಗಳ ಸಭೆಗೆ ಪ್ರಧಾನಿ ಗೈರಾಗಿದ್ದಕ್ಕೆ 'ಕೈ' ಆರೋಪ • ಕಾಂಗ್ರೆಸ್ ಪೋಸ್ಟ್‌ಗೆ ಬಿಜೆಪಿ ಕಿಡಿ

'ಹೊಣೆಗಾರಿಕೆ ವೇಳೆ ಮೋದಿ ಮಾಯ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಹೊಣೆಗಾರಿಕೆ ಸಮಯದಲ್ಲಿ ಮಾಯವಾಗುತ್ತಾರೆ ಎಂದು ವ್ಯಂಗ್ಯವಾಗಿ ಬಿಂಬಿಸುವ ಚಿತ್ರವನ್ನು ಕಾಂಗ್ರೆಸ್ ತನ್ನ ಜಾಲತಾಣ ಖಾತೆಯಲ್ಲಿ ಹಂಚಿಕೊಂಡಿರುವುದು ಕಾಂಗ್ರೆಸ್-ಬಿಜೆಪಿ ಮಧ್ಯೆ ಮಂಗಳವಾರ ವಾಕ್ಸಮರಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ತನ್ನ 'ಎಕ್ಸ್' ಖಾತೆಯಲ್ಲಿ, ಪ್ರಧಾನಿ ಮೋದಿ ಅವರನ್ನೇ ಹೋಲುವಂತಹ, ಮುಖವಿಲ್ಲದ, ಕುರ್ತಾ, ಪೈಜಾಮಾ ತೊಟ್ಟಿರುವ ಹಾಗೂ ಕಪ್ಪು ಬಣ್ಣದ ಶೂ ಧರಿಸಿರುವ ಚಿತ್ರದಲ್ಲಿ ಗಾಯಬ್(ಕಾಣೆಯಾಗಿದ್ದಾರೆ) ಎಂದು ಬರೆದಿರುವ ಪೋಸ್ಟ್ ಹಂಚಿಕೊಂಡಿದೆ. ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದಂತೆಯೇ ಪೋಸ್ಟ್ ಅಳಿಸಿಹಾಕಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ



ಕಾಂಗ್ರೆಸ್ ತನ್ನ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದ ಚಿತ್ರ

ಕುರಿತು ಚರ್ಚೆಗೆ ಕರೆದ ಸರ್ವಪಕ್ಷಗಳ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಗೈರಾದ ಬೆನ್ನಲ್ಲೇ ಕಾಂಗ್ರೆಸ್ ಈ ಪೋಸ್ಟ್ ಹಂಚಿಕೊಂಡಿದೆ.

ಪಾಕ್ ಪರ 'ಕೈ' ಮುಖ ಅನಾವರಣ: 'ಇದು ಮುಸ್ಲಿಂ ಸಮುದಾಯವನ್ನು ಓಲೈಸುವ ಮತ್ತು ತಲೆಬುಡವಿಲ್ಲದ ಚಿತ್ರ. ಈ ಮೂಲಕ ಭಾರತವನ್ನು ದುರ್ಬಲಗೊಳಿಸಲು ಕಾಂಗ್ರೆಸ್ ಯತ್ನಿಸುತ್ತಿದೆ' ಎಂದು ಬಿಜೆಪಿ ಕಿಡಿ ಕಾರಿದೆ.

> ಕಾಂಗ್ರೆಸ್ ಪಕ್ಷದ ಕೈ ಪಾಕಿಸ್ತಾನದ ಉಗ್ರರ ಜೊತೆಗಿದೆ. ಅದು ಹಿಂದೂಗಳ ಹತ್ಯೆಕೋರರನ್ನು ರಕ್ಷಿಸುತ್ತಿದೆ
> **ನಿಶಿಕಾಂತ್ ದುಬೆ,** ಬಿಜೆಪಿ ಸಂಸದ

> ಕಾಂಗ್ರೆಸ್ ಪಾಕಿಸ್ತಾನದೊಂದಿಗೆ ಇದೆ ಎಂದು ಸಂದೇಶ ರವಾನಿಸುವ ಉದ್ದೇಶದಿಂದ ಈ ಪೋಸ್ಟ್ ಹಂಚಿಕೊಳ್ಳಲಾಗಿದೆ. ಪಕ್ಷವು ಲಷ್ಕರ್-ಎ-ಪಾಕಿಸ್ತಾನ್ ಕಾಂಗ್ರೆಸ್ ಆಗಿ ಬದಲಾಗುತ್ತಿದೆ
> **ಗೌರವ್ ಭಾಟಿಯಾ,** ಬಿಜೆಪಿಯ ರಾಷ್ಟ್ರೀಯ ವಕ್ತಾರ

> ಮೋದಿ ಅವರು ಭಯೋತ್ಪಾದಕ ದಾಳಿ ನಂತರ ಕರೆದ ಸರ್ವ ಪಕ್ಷ ಸಭೆಗೆ ಗೈರಾಗಿ, ಅದೇ ಸಮಯದಲ್ಲಿ ಬಿಹಾರದಲ್ಲಿ ಚುನಾವಣಾ ರ್‍ಯಾಲಿ ನಡೆಸಲು ಸಮಯ ಮಾಡಿಕೊಂಡಿದ್ದರು
> **ಜೈರಾಮ್ ರಮೇಶ್,** ಕಾಂಗ್ರೆಸ್ ನಾಯಕ

ಈ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಹಿರಿಯ ಸಂಸದ ಅನುರಾಗ್ ಠಾಕೂರ್ ಅವರು, 'ಸರ್ಜಿಕಲ್ ಸ್ಟ್ರೈಕ್ ನಡೆಸಿದಾಗಲೂ ಕಾಂಗ್ರೆಸ್ ಭಾರತವನ್ನು ಪ್ರಶ್ನಿಸಿತ್ತು. ಈಗಲೂ ಪಾಕಿಸ್ತಾನದ ಪರ ನಿಂತು ಭಾರತವನ್ನು ಪ್ರಶ್ನಿಸಲು ಆರಂಭಿಸಿದೆ. ಪಾಕ್ ಪರ ಕಾಂಗ್ರೆಸ್ ಮುಖ ಮತ್ತೆ ಅನಾವರಣವಾಗಿದೆ' ಎಂದು ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, 'ಇಂಥ ಚಿತ್ರವನ್ನು ಹಂಚಿಕೊಳ್ಳುವ ಮೂಲಕ ಕಾಂಗ್ರೆಸ್ ಮೇಲೆ ಇದ್ದ ಸಣ್ಣ ಸಂಶಯವೂ ಮಾಯವಾಗಿದೆ. ಇದು ರಾಜಕೀಯ ಹೇಳಿಕೆ ಮಾತ್ರವಾಗಿರದೆ, ಮುಸ್ಲಿಂ ಮತ ಸೆಳೆಯುವ ಉದ್ದೇಶದಿಂದ ಮಾಡಿರುವ ತಂತ್ರ' ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ಈ ರೀತಿಯ ತಂತ್ರಗಳ ಮೊರೆ ಹೋಗುತ್ತಿರುವುದು ಇದೇ ಮೊದಲಲ್ಲ. ರಾಹುಲ್ ಗಾಂಧಿ ಹಲವಾರು ಬಾರಿ ಪ್ರಧಾನಿ ಮೋದಿ ವಿರುದ್ಧದ ಹಿಂಸೆಯನ್ನು ಸಮರ್ಥಿಸಿಕೊಂಡಿದ್ದಾರೆ ಮತ್ತು ಪ್ರಚೋದನೆ ನೀಡಿದ್ದಾರೆ. ಆದಾಗ್ಯೂ ಈ ವಿಷಯದಲ್ಲಿ ಕಾಂಗ್ರೆಸ್ ಗೆದ್ದಿಲ್ಲ. ಮೋದಿ ಅವರಿಗೆ ಲಕ್ಷಾಂತರ ಭಾರತೀಯರ ಆಶೀರ್ವಾದ, ಪ್ರೀತಿ ಲಭಿಸಿದೆ' ಎಂದು ಹೇಳಿದ್ದಾರೆ.

ಪಕ್ಷದ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಅವರು, 'ಕಾಂಗ್ರೆಸ್ ಪಕ್ಷವು ಪಾಕಿಸ್ತಾನದಿಂದ ನೇರವಾಗಿ ಆದೇಶ ಪಡೆದಂತಿದೆ' ಎಂದು ಆರೋಪಿಸಿದ್ದಾರೆ.

ಪಾಕಿಸ್ತಾನವು ಕಾಂಗ್ರೆಸ್ ಪಕ್ಷಕ್ಕಾಗಿ ಬ್ಯಾಟಿಂಗ್ ಮಾಡುತ್ತಿದೆ ಮತ್ತು ಕಾಂಗ್ರೆಸ್ ಪಾಕಿಸ್ತಾನಕ್ಕಾಗಿ ಬೌಲಿಂಗ್ ಮಾಡುತ್ತಿದೆ ಎಂದು ಹೇಳಿದ್ದಾರೆ.

ಪ್ರಧಾನಿಗೆ ಖರ್ಗೆ, ರಾಹುಲ್ ಪತ್ರ

ಪ್ರಜಾವಾಣಿ ವಾರ್ತೆ

ವಿಶೇಷ ಅಧಿವೇಶನ

ನವದೆಹಲಿ: ಪಹಲ್ಗಾಮ್ ಉಗ್ರರ ದಾಳಿಯ ಹಿನ್ನೆಲೆಯಲ್ಲಿ ದೇಶದ ಸಾಮೂಹಿಕ ಸಂಕಲ್ಪ ಪ್ರದರ್ಶಿಸಲು ಸಂಸತ್‌ನ ವಿಶೇಷ ಅಧಿವೇಶನ ನಡೆಸಬೇಕು ಎಂದು ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಲೋಕಸಭೆ ಹಾಗೂ ರಾಜ್ಯಸಭೆಯ ವಿಪಕ್ಷ ನಾಯಕರಾದ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಸೋಮವಾರ ರಾತ್ರಿ ಪತ್ರ ಬರೆದಿದ್ದಾರೆ.

ಉಗ್ರರ ದಾಳಿ ಬಳಿಕ ಇಂಡಿಯಾ ಮೈತ್ರಿಕೂಟದಲ್ಲಿ ನಡೆದ ಸರಣಿ ಚರ್ಚೆಗಳು ಹಾಗೂ ವಿಶೇಷ ಅಧಿವೇಶನಕ್ಕೆ ಆಗ್ರಹಿಸಿ ಇಬ್ಬರು ಸಂಸದರು ಸರ್ಕಾರಕ್ಕೆ ಪತ್ರ ಬರೆದ ಬಳಿಕ ವಿಪಕ್ಷ ನಾಯಕರು ಸಹ ಧ್ವನಿಗೂಡಿಸಿದ್ದಾರೆ.

'ಏಕತೆ ಮತ್ತು ಒಗ್ಗಟ್ಟು ಅತ್ಯಗತ್ಯವಾದ ಈ ಕ್ಷಣದಲ್ಲಿ, ಸಂಸತ್ತಿನ ಎರಡೂ ಸದನಗಳ ವಿಶೇಷ ಅಧಿವೇಶನವನ್ನು ಆದಷ್ಟು ಬೇಗ ಕರೆಯುವುದು ಮುಖ್ಯ' ಎಂದು ಖರ್ಗೆ ಪತ್ರದಲ್ಲಿ ತಿಳಿಸಿದ್ದಾರೆ.

'ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ಎದುರಿಸಲು ನಮ್ಮ ಸಾಮೂಹಿಕ ಸಂಕಲ್ಪ ಮತ್ತು ಇಚ್ಛಾಶಕ್ತಿಗೆ ವಿಶೇಷ ಅಧಿವೇಶನವು ಪ್ರಬಲ ಪ್ರದರ್ಶನವಾಗಲಿದೆ. ಅಧಿವೇಶನವನ್ನು ಅದಕ್ಕೆ ತಕ್ಕಂತೆ ಸರ್ಕಾರ ಕರೆಯಲಿದೆ ಎಂಬ ವಿಶ್ವಾಸದಲ್ಲಿದ್ದೇವೆ' ಎಂದು ಅವರು ಹೇಳಿದ್ದಾರೆ.

'ಉಗ್ರರ ದಾಳಿಯು ಪ್ರತಿ ಭಾರತೀಯನನ್ನೂ ಕೆರಳಿಸಿದೆ. ಈ ಸಮಯದಲ್ಲಿ, ಭಯೋತ್ಪಾದನೆಯ ವಿರುದ್ಧ ಒಟ್ಟಾಗಿ ನಿಲ್ಲುತ್ತೇವೆ ಎಂದು ಭಾರತೀಯರೆಲ್ಲ ತೋರಿಸಬೇಕು. ಈ ಅಧಿವೇಶನದಲ್ಲಿ ಜನರ ಪ್ರತಿನಿಧಿಗಳು ತಮ್ಮ ಏಕತೆ ಮತ್ತು ದೃಢನಿಶ್ಚಯ ಪ್ರದರ್ಶಿಸಬಹುದು' ಎಂದು ರಾಹುಲ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ವಿಶೇಷ ಅಧಿವೇಶನ ನಡೆಸಬೇಕು ಎಂದು ಆಗ್ರಹಿಸಿ ಆರ್‌ಜೆಡಿಯ ಮನೋಜ್ ಕೆ.ಝಾ ಹಾಗೂ ಸಿಪಿಐನ ಪಿ.ಸಂದೋಷ್ ಕುಮಾರ್ ಅವರು ಮೋದಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರಿಗೆ ಸೋಮವಾರ ಪತ್ರ ಬರೆದಿದ್ದರು.

ಮಲ್ಲಿಕಾರ್ಜುನ ಖರ್ಗೆ

ರಾಹುಲ್ ಗಾಂಧಿ

ಈ ಸಂಬಂಧ ಸಮಾಜವಾದಿ ಪಕ್ಷ, ಸಿಪಿಎಂ ಹಾಗೂ ಟಿಎಂಸಿಯ ನಾಯಕರು ಮತ್ತು ಎಎಪಿಯ ಸಂಜಯ್ ಸಿಂಗ್ ಹಾಗೂ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಧ್ವನಿ ಎತ್ತಿದ್ದಾರೆ.

'ನಾವು ಒಗ್ಗಟ್ಟಾಗಿದ್ದೇವೆ ಎಂದು ಜಗತ್ತಿಗೆ ತೋರಿಸಲು ಇದು ಸಕಾಲ. ಪಹಲ್ಗಾಮ್‌ನ ಪರಿಸ್ಥಿತಿ ಸೂಕ್ಷ್ಮವಾಗಿದೆ. ಪ್ರಧಾನಿ ಈ ವಿನಂತಿಯನ್ನು ಸ್ವೀಕರಿಸುತ್ತಾರೆ ಮತ್ತು ಅವರು ಸಂಸತ್ತಿನಲ್ಲಿ ಹಾಜರಿರುತ್ತಾರೆ ಎಂದು ಭಾವಿಸುತ್ತೇವೆ' ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಹೇಳಿದ್ದಾರೆ.

'ಪ್ರಧಾನಿ ವ್ಯಕ್ತಿತ್ವಕ್ಕೆ 'ಕೈ' ನಿಂದ ಅಪಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವನ್ನು ವಿರೂಪಗೊಳಿಸಿ ಪೋಸ್ಟ್ ಮಾಡಿರುವುದು ಅಪರಾಧ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರ ಮಾತುಗಳಿಗೆ ಅವರ ಪಕ್ಷದವರೇ ಮರ್ಯಾದೆ ನೀಡುತ್ತಿಲ್ಲ. ಈ ಮಧ್ಯೆ ಪ್ರಧಾನಿಯವರ ಚಿತ್ರವನ್ನು ಕೆಟ್ಟದಾಗಿ ರೂಪಿಸಿ ಪ್ರಧಾನಿಯವರ ವ್ಯಕ್ತಿತ್ವಕ್ಕೂ ಕಾಂಗ್ರೆಸ್ ಅಪಮಾನ ಮಾಡಿದೆ' ಎಂದು ಹೇಳಿದರು.

'ನಮ್ಮ ರಾಜ್ಯದ ಕಾಂಗ್ರೆಸ್ ನಾಯಕರು ಪಾಕಿಸ್ತಾನಕ್ಕೆ ಪರೋಕ್ಷವಾಗಿ ಬೆಂಬಲ ನೀಡುತ್ತಿದ್ದಾರೆ. ಆದರೆ, ಅಸಾದುದ್ದೀನ್ ಓವೈಸಿ ಪಾಕಿಸ್ತಾನಕ್ಕೆ ಸವಾಲು ಹಾಕುವ ಮೂಲಕ ಬಿಸಿ ಮುಟ್ಟಿಸಿದ್ದಾರೆ. ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಕೂಡ ರಾಷ್ಟ್ರ ಪರ ನಿಲುವು ತಾಳಿದ್ದಾರೆ. ಇವರಿಂದ ರಾಜ್ಯದ ಕಾಂಗ್ರೆಸ್ ನಾಯಕರು ದೇಶ ಭಕ್ತಿಯ ಪಾಠ ಹೇಳಿಸಿಕೊಳ್ಳಬೇಕು. ಜಮ್ಮು-ಕಾಶ್ಮೀರ ಮುಖ್ಯಮಂತ್ರಿಯವರು ತಮ್ಮಿಂದ ತಪ್ಪು ಆಗಿದೆ ಎಂದು ಹೇಳಿದ್ದಾರೆ. ಆದರೆ ಕರ್ನಾಟಕದ ಕಾಂಗ್ರೆಸ್ ನಾಯಕರು ಎಲ್ಲದಕ್ಕೂ ಪ್ರಧಾನಿ ಮೋದಿಯನ್ನು ಪ್ರಶ್ನಿಸುತ್ತಾರೆ' ಎಂದು ಕಿಡಿಕಾರಿದರು.

'ಭಯೋತ್ಪಾದಕರು ಧರ್ಮ ನೋಡಿ ಸಾಯಿಸಿಲ್ಲ ಎಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಹಾಗಿದ್ದರೆ ಕಾಂಗ್ರೆಸ್ ಸರ್ಕಾರವು ಮಾಧ್ಯಮಗಳು ಮತ್ತು ಸಂತ್ರಸ್ತರ ವಿರುದ್ಧ ಪ್ರಕರಣ ದಾಖಲಿಸಲಿ. ಇಲ್ಲವಾದರೆ ಮಂಡಿಯೂರಿ ಕ್ಷಮೆಯಾಚಿಸಲಿ' ಎಂದು ಅಶೋಕ ಆಗ್ರಹಿಸಿದರು.

'ತಾವು ಶಾಂತಿಪ್ರಿಯರು ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಪೊಲೀಸ್ ಅಧಿಕಾರಿಗೆ ಹೊಡೆಯಲು ಹೋಗಿದ್ದಾರೆ. ಇದು ಇಡೀ ಪೊಲೀಸ್ ಇಲಾಖೆಗೆ ಮಾಡಿರುವ ಅಪಮಾನ. ಅಲ್ಲದೇ ಪೊಲೀಸರನ್ನು ಯಾರು ಬೇಕಾದರೂ ಹೊಡೆಯಬಹುದು ಎಂಬ ಸಂದೇಶವನ್ನು ಸಿದ್ದರಾಮಯ್ಯ ನೀಡಿದ್ದಾರೆ. ಇಂತಹ ದುರಂಹಕಾರ ಬಹಳ ದಿನ ನಡೆಯುವುದಿಲ್ಲ. ಕುರ್ಚಿ ಬಿಡಲೇಬೇಕಿರುವುದರಿಂದ ಎಲ್ಲರಿಗೂ ಹೀಗೆ ಬೈಯುತ್ತಿದ್ದಾರೆ' ಎಂದು ಟೀಕಿಸಿದರು.

'ಯುದ್ಧ ಮಾಡಿ, ಬೇಡವೆಂದಿಲ್ಲ'

ಬೆಳಗಾವಿ: 'ಬಿಜೆಪಿಯವರು ನಾಳೆ ಬೆಳಿಗ್ಗೆ 8ಕ್ಕೆ ಯುದ್ಧ ಆರಂಭ ಮಾಡಲಿ. ನಾವೇನೂ ಬೇಡ ಅಂದಿಲ್ಲವಲ್ಲ. ಯುದ್ಧ ಬೇಡ ಎನ್ನಲು ಸಿದ್ದರಾಮಯ್ಯ ಅವರೇನೂ ಲೆಫ್ಟಿನೆಂಟ್ ಕಮಾಂಡರ್ ಅಲ್ಲ. ಅವರ ಮಾತುಗಳನ್ನು ತಿರುಚಲಾಗಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಸಿದ್ದರಾಮಯ್ಯ ಆರ್ಥಿಕ ತಜ್ಞರು. ಯುದ್ಧದಿಂದ ಏನೇನೂ ನಷ್ಟ, ಆರ್ಥಿಕ ಸಮಸ್ಯೆ ಎಷ್ಟಾಗುತ್ತದೆ ಎಂಬ ಲೆಕ್ಕಾಚಾರ ದಲ್ಲಿ ಅವರು ಯುದ್ಧ ಬೇಡ ಎಂದಿದ್ದಾರೆ. ಯುದ್ಧ ಬೇಕು ಎನ್ನುವವರು ಯಾರೂ ಯುದ್ಧ ಮಾಡಲು ಗಡಿಗೆ ಹೋಗುವುದಿಲ್ಲ. ಇಲ್ಲೇ ಕೂತು ಹೇಳುತ್ತಾರೆ ಅಷ್ಟೇ' ಎಂದರು.

ಆಕಸ್ಮಿಕವಾಗಿ ಪಾಕ್ ಗಡಿ ಪ್ರವೇಶಿಸಿದ್ದ ಸಾಹು • ಕೇಂದ್ರಕ್ಕೆ ಕಾಂಗ್ರೆಸ್ ಪ್ರಶ್ನೆ

ಯೋಧನ ವಾಪಸಾತಿಗೆ ಕ್ರಮವೇನು?

ನವದೆಹಲಿ (ಪಿಟಿಐ): ಪಾಕಿಸ್ತಾನ ಸೇನೆಯ ವಶದಲ್ಲಿರುವ ಬಿಎಸ್‌ಎಫ್ ಯೋಧ ಪೂರ್ಣಂ ಸಾಹು ಸುರಕ್ಷಿತ ವಾಪಸಾತಿಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಮಂಗಳವಾರ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ಆಕಸ್ಮಿಕವಾಗಿ ಪಾಕಿಸ್ತಾನದ ಗಡಿ ಪ್ರವೇಶಿಸಿದ್ದ ಸಾಹು ಅವರನ್ನು ಏ.23 ರಂದು ಪಂಜಾಬ್‌ನ ಫಿರೋಜ್‌ಪುರದ ಕೃಷಿ ಭೂಮಿಯಿಂದ ಪಾಕಿಸ್ತಾನದ ರೇಂಜರ್ಸ್ ಸೈನಿಕರು ಬಂಧಿಸಿ ಕರೆದೊಯ್ದಿದ್ದಾರೆ.

'ಸಾಹು ಅವರನ್ನು ಪಾಕಿಸ್ತಾನ ಸೇನೆ ಬಂಧಿಸಿ ಆರು ದಿನಗಳು ಕಳೆದಿವೆ. ಅವರ ಕುಟುಂಬವು ಆತಂಕದಿಂದ ಉತ್ತರಕ್ಕಾಗಿ ಕಾಯುತ್ತಿದೆ. ಸುರಕ್ಷಿತವಾಗಿ ಕರೆತರಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎನ್ನುವುದನ್ನು ಸ್ಪಷ್ಟಪಡಿಸಲಿ' ಎಂದು ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಎಸ್‌ಎಫ್ ಅಧಿಕಾರಿಗಳ ಪ್ರಕಾರ, ಗಡಿಯ ಬಳಿ ರೈತರಿಗೆ ಬೆಂಗಾವಲು ನೀಡುತ್ತಿದ್ದ ಸಾಹು, ಬಿಸಿಲಿನ ಕಾರಣಕ್ಕೆ ಮರದ ಕೆಳಗೆ ವಿಶ್ರಾಂತಿ ಪಡೆಯಲು ಹೋಗಿ ತಿಳಿಯದೆ ಪಾಕಿಸ್ತಾನದ ಗಡಿ ಪ್ರವೇಶಿಸಿದ್ದರು. ಸಾಹು ಅವರನ್ನು ಫಿರೋಜ್‌ಪುರದ ಗಡಿಯಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.

ಸಾಹು ಬಿಡುಗಡೆಗಾಗಿ ಮಾತುಕತೆ ನಡೆಸಲು ಭಾರತ ಮತ್ತು ಪಾಕಿಸ್ತಾನದ ಗಡಿ ಭದ್ರತಾ ಪಡೆಗಳು ಫ್ಲ್ಯಾಗ್ ಮೀಟಿಂಗ್ ನಡೆಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಸಾಹು ಕುಟುಂಬಕ್ಕೆ ಹೆಚ್ಚಿನ ಮಾಹಿತಿ ಸಿಕ್ಕಿಲ್ಲ. ಹಲ್ಗಾಮ್‌ನಲ್ಲಿ ಏಪ್ರಿಲ್ 22 ರಂದು 26 ಜನರನ್ನು ಭಯೋತ್ಪಾದಕರು ಗುಂಡಿಕ್ಕಿ ಹತ್ಯೆ ಮಾಡಿರುವ ಕಾರಣದಿಂದ ಉಭಯ ದೇಶಗಳ ನಡುವಿನ ಸಂಬಂಧ ಬಿಗಡಾಯಿಸಿರುವಾಗಲೇ ಈ ಘಟನೆ ನಡೆದಿದೆ.

ಪಾಕ್‌ಗೆ ಐಎಂಎಫ್ ಸಾಲ ಸಿಗದಂತೆ ಮಾಡಲು ಕಾಂಗ್ರೆಸ್ ಆಗ್ರಹ

ಪಾಕಿಸ್ತಾನವು ಹೊಸದಾಗಿ ಸುಮಾರು ₹11 ಸಾವಿರ ಕೋಟಿ (1.3 ಬಿಲಿಯನ್ ಡಾಲರ್) ಸಾಲ ನೀಡುವಂತೆ ಮಾಡಿರುವ ಮನವಿ ಪರಿಗಣಿಸಲು ಐಎಂಎಫ್ ತನ್ನ ಕಾರ್ಯಕಾರಿ ಮಂಡಳಿ ಮೇ 9 ರಂದು ಸಭೆ ಸೇರುವುದಾಗಿ ಪ್ರಕಟಿಸಿದೆ. ಈ ಸಾಲದ ನೆರವು ನೀಡದಂತೆ ಭಾರತವು ಬಲವಾದ ವಿರೋಧ ವ್ಯಕ್ತಪಡಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಪಾಕಿಸ್ತಾನವು ₹11 ಸಾವಿರ ಕೋಟಿ ನೆರವು ನೀಡುವಂತೆ ಐಎಂಎಫ್‌ಗೆ ಮನವಿ ಮಾಡಿದೆ. ಈ ಮನವಿಯನ್ನು ಪರಿಗಣಿಸಲು ಐಎಂಎಫ್‌ನ ಕಾರ್ಯಕಾರಿ ಮಂಡಳಿ ಸಭೆ ನಡೆಸುತ್ತಿದೆ. ಪಾಕಿಸ್ತಾನಕ್ಕೆ ನೆರವು ನೀಡದಂತೆ ಭಾರತ ಪ್ರಬಲ ವಿರೋಧ ವ್ಯಕ್ತಪಡಿಸಬೇಕೆಂದು ಕಾಂಗ್ರೆಸ್ ಆಗ್ರಹಿಸುತ್ತಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಕರುಳ ಬಂಧ ಭಾರತೀಯ ಪ್ರಜೆಯಾಗಿರುವ ಕಂದಮ್ಮನನ್ನು ತೊರೆದು ವಾಘಾ ಗಡಿ ಮೂಲಕ ಪಾಕಿಸ್ತಾನಕ್ಕೆ ಮರಳಿದ ತಾಯಿಯ ರೋದನ — ಎಎಫ್‌ಪಿ ಚಿತ್ರ

ಉಗ್ರರನ್ನು ಹಿಮ್ಮೆಟ್ಟಿಸಲು ಒಗ್ಗಟ್ಟು ಅಗತ್ಯ: ಎಚ್.ಡಿ. ದೇವೇಗೌಡ

ಪ್ರಜಾವಾಣಿ ವಾರ್ತೆ



ಮೈಸೂರು: 'ಪಹಲ್ಗಾಮ್ ದಾಳಿ ಹೀನ ಕೃತ್ಯ. ಉಗ್ರರನ್ನು ಹಿಮ್ಮೆಟ್ಟಿಸುವ ವಿಚಾರದಲ್ಲಿ ಒಗ್ಗಟ್ಟು ತೋರಬೇಕು ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಹಾಗೂ ಇಂಡಿಯಾ ಒಕ್ಕೂಟವು ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಬೆಂಬಲಕ್ಕೆ ನಿಂತಿರುವುದು ಸ್ವಾಗತಾರ್ಹ ' ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹೇಳಿದರು.

ನಗರದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, 'ಮೋದಿ ವಿಶ್ವ ನಾಯಕರಾಗಿ ಬೆಳೆದಿದ್ದಾರೆ. ಉಗ್ರರ ವಿಚಾರದಲ್ಲಿ ಅನೇಕ ರಾಷ್ಟ್ರಗಳು ಭಾರತವನ್ನು ಬೆಂಬಲಿಸಿದ್ದು, ಜೊತೆ ನಿಲ್ಲುವ ಭರವಸೆ ನೀಡಿವೆ. ಸರ್ಕಾರವೂ ಉಗ್ರರ ಶೋಧವನ್ನು ಮುಂದುವರಿಸಿದ್ದು, ಅಗತ್ಯ ಕ್ರಮ ಕೈಗೊಳ್ಳುತ್ತದೆ' ಎಂದರು.

ಪೊಲೀಸ್ ಅಧಿಕಾರಿ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೈ ಎತ್ತಿದ ಕುರಿತು ಪ್ರತಿಕ್ರಿಯಿಸಿ, 'ರಾಜ್ಯದ ರಾಜಕಾರಣದ ಬಗ್ಗೆ, ಮುಖ್ಯಮಂತ್ರಿ–ಉಪಮುಖ್ಯಮಂತ್ರಿ ಬಗ್ಗೆ ನಾನು ಮಾತನಾಡುವುದಿಲ್ಲ. ನಮ್ಮದು ಪ್ರಾದೇಶಿಕ ಪಕ್ಷ. ರಾಜ್ಯದ ಆಡಳಿತದ ಬಗ್ಗೆ ಪ್ರತಿನಿತ್ಯ ಪತ್ರಿಕೆ ಓದಿ ತಿಳಿದುಕೊಂಡಿದ್ದೇನೆ. ಅಸತ್ಯ ಹೇಳಲಿಕ್ಕೆ ಹೋಗುವುದಿಲ್ಲ. ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

'ಕುಮಾರಣ್ಣನ ನಾಯಕತ್ವಕ್ಕೆ ಭಗವಂತ ಎಷ್ಟು ದಿನ ಆಯಸ್ಸು ಕೊಡುತ್ತಾನೋ ಗೊತ್ತಿಲ್ಲ. ನಮ್ಮ ಪಕ್ಷಕ್ಕೆ ಅವರು ನಾಯಕರು. ನನ್ನ ಶಕ್ತಿ ಮೀರಿ ಅವರ ಕೈ ಬಲಪಡಿಸುವೆ' ಎಂದರು.

ಜಿಪ್‌ಲೈನ್ ರೈಡ್ ವಿಡಿಯೊದಲ್ಲಿ ದಾಳಿ ಸೆರೆ

ಅಹಮದಾಬಾದ್ (ಪಿಟಿಐ): ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಯ 53 ಸೆಕೆಂಡ್‌ನ ವಿಡಿಯೊ ವೈರಲ್ ಆಗಿದೆ. ಬೈಸರನ್ ಕಣಿವೆಯಲ್ಲಿ ಅಹಮದಾಬಾದ್ ಮೂಲದ ಪ್ರವಾಸಿಗ ರೊಬ್ಬರು ಜಿಪ್‌ಲೈನ್ ರೈಡ್ ವೇಳೆ ಈ ವಿಡಿಯೊ ಚಿತ್ರೀಕರಿಸಿದ್ದಾರೆ.

ರಿಷಿ ಭಟ್ ಎಂಬ ವ್ಯಕ್ತಿ ಜಿಪ್‌ಲೈನ್ ರೈಡ್ ನಡೆಸುವಾಗ ಸೆಲ್ಫಿ ಸ್ಟಿಕ್ ಮೂಲಕ ವಿಡಿಯೊ ಮಾಡಿದ್ದಾರೆ. ರಿಷಿ ರೈಡ್ ಆರಂಭಿಸಿದ ಸಮಯದಲ್ಲೇ ಉಗ್ರರು ದಾಳಿ ನಡೆಸಿದ್ದಾರೆ. ಜೀವ ಉಳಿಸಿಕೊಳ್ಳಲು ಜನರು ಓಡುತ್ತಿರುವ, ವ್ಯಕ್ತಿಯೊಬ್ಬರು ಉಗ್ರರ ಗುಂಡೇಟಿಗೆ ಬಲಿಯಾದ ದೃಶ್ಯವೂ ವಿಡಿಯೊದಲ್ಲಿ ಸೆರೆಯಾಗಿದೆ. ವಿಡಿಯೊ ಕುರಿತು ಮಾಧ್ಯಮಗಳಿಗೆ ರಿಷಿ ಭಟ್ ಮಾಹಿತಿ ನೀಡಿದ್ದು, ' ನಾನು ಜಿಪ್‌ಲೈನ್‌ನಿಂದ ಕೆಳಗೆ ಇಳಿದು ಗಮನಿಸಿದಾಗ, ಉಗ್ರರು ಪ್ರವಾಸಿಗರ ಧರ್ಮ ಯಾವುದು ಎಂದು ಪ್ರಶ್ನಿಸಿ, ಗುಂಡಿಟ್ಟು ಕೊಲ್ಲುತ್ತಿದ್ದರು. ನಾನು ನನ್ನ ಕುಟುಂಬ ಹಾಗೂ ಇನ್ನೂ ಹಲವರು ಮರಗಳ ಮರೆಯಲ್ಲಿ ಅವಿತು ಜೀವ ಉಳಿಸಿಕೊಂಡೆವು' ಎಂದಿದ್ದಾರೆ.

ಮೋದಿ ಭೇಟಿಯಾದ ಮೋಹನ್ ಭಾಗವತ್

ನವದೆಹಲಿ(ಪಿಟಿಐ): ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಗಳವಾರ ಭೇಟಿ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಈ ವೇಳೆ ಉಪಸ್ಥಿತರಿದ್ದರು ಎಂದು ಮೂಲಗಳು ಹೇಳಿವೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬಗ್ಗೆ ಅವರು ಚರ್ಚಿಸಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಗಡೀಪಾರು: ಶೌರ್ಯ ಚಕ್ರ ಪುರಸ್ಕೃತ ಯೋಧನ ತಾಯಿಗೆ ಸಂಕಷ್ಟ

ಒಂದನೇ ಪುಟದಿಂದ...

ದೇಶದಿಂದ ಹೊರಹಾಕಲು ಸರ್ಕಾರ ಗುರುತಿಸಿರುವ 60 ಜನರಲ್ಲಿ ಶಮೀಮಾ ಅವರೂ ಸೇರಿದ್ದಾರೆ.

ಉಗ್ರರೊಂದಿಗೆ ಹೋರಾಡುವ ವೇಳೆ, 2022ರ ಮೇನಲ್ಲಿ ಮುದಸಿರ್ ಶೇಖ್ ಅವರು ಹುತಾತ್ಮರಾಗಿದ್ದರು. ಬಾರಾಮುಲ್ಲಾ ನಗರದ ಚೌಕವೊಂದಕ್ಕೆ 'ಶಹೀದ್ ಮುದಸಿರ್ ಚೌಕ್' ಎಂದು ನಾಮಕರಣ ಮಾಡಲಾಗಿದೆ.

ಮುದಸಿರ್ ಅವರಿಗೆ ಮರಣೋತ್ತರವಾಗಿ ಶೌರ್ಯ ಚಕ್ರ ಘೋಷಿಸಲಾಗಿತ್ತು.

2023ರ ಮೇನಲ್ಲಿ ಶಮೀಮಾ– ಮೊಹಮ್ಮದ್ ಮಕ್ಸೂದ್ ದಂಪತಿ ಈ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಸ್ವೀಕರಿಸಿದ್ದರು. ಮೊಹಮ್ಮದ್ ಮಕ್ಸೂದ್ ಅವರನ್ನು 1990ರಲ್ಲಿ ಶಮೀಮಾ ಮದುವೆಯಾಗಿದ್ದರು. ಮಕ್ಸೂದ್ ಅವರು ನಿವೃತ್ತ ಪೊಲೀಸ್ ಅಧಿಕಾರಿ. 'ಶಮೀಮಾ ಅವರು ಪಾಕಿಸ್ತಾನ ಆಕ್ರಮಿತ ಕಾಶ್ಮೀರಕ್ಕೆ (ಪಿಒಕೆ) ಸೇರಿದವರು. ಪಿಒಕೆ ಕೂಡ ಭಾರತದ ಪ್ರದೇಶವಾಗಿದೆ. ಪಾಕಿಸ್ತಾನ ಪ್ರಜೆಗಳನ್ನು ಮಾತ್ರ ಗಡೀಪಾರು ಮಾಡಬೇಕಿತ್ತು' ಎಂದು ಶಮೀಮಾ ಅವರ ಸಂಬಂಧಿ ಮೊಹಮ್ಮದ್ ಯೂನುಸ್ ಅಸಮಾಧಾನ ವ್ಯಕ್ತಪಡಿಸಿದರು. 'ಇಲ್ಲಿಗೆ ಬಂದಾಗ ಶಮೀಮಾ 20 ವರ್ಷದವಳಿದ್ದಳು. ಕಳೆದ 45 ವರ್ಷಗಳಿಂದ ಆಕೆ ಇಲ್ಲಿ ವಾಸವಿದ್ದಾಳೆ. ಆಕೆಯನ್ನು ಪಾಕಿಸ್ತಾನಕ್ಕೆ ಗಡೀಪಾರು ಮಾಡದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಮಾಡುತ್ತೇನೆ' ಎಂದು ಹೇಳಿದರು.

ಪ್ರತೀಕಾರ: ಸೇನೆಗೆ ಅಧಿಕಾರ

ಒಂದನೇ ಪುಟದಿಂದ...

ಉನ್ನತ ಮಟ್ಟದ ಸಭೆಯಲ್ಲಿ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಮತ್ತು ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮನ್ ಪ್ರೀತ್ ಸಿಂಗ್ ಅವರು ಪ್ರಸ್ತುತ ಉದ್ವಿಗ್ನ ಪರಿಸ್ಥಿತಿಯ ಕುರಿತು ಮಾಹಿತಿ ನೀಡಿದರು. ಸಶಸ್ತ್ರ ಪಡೆಗಳ ವೃತ್ತಿಪರ ಸಾಮರ್ಥ್ಯದ ಮೇಲೆ ಮೋದಿ ಅವರು ಸಂಪೂರ್ಣ ನಂಬಿಕೆ ಹಾಗೂ ವಿಶ್ವಾಸ ವ್ಯಕ್ತಪಡಿಸಿದರು. ಭಯೋತ್ಪಾದನೆಗೆ ಘೋರ ಹೊಡೆತ ನೀಡುವುದು ರಾಷ್ಟ್ರೀಯ ಸಂಕಲ್ಪ ಎಂದು ಪ್ರಧಾನಿಯವರು ಹೇಳಿದರು ಎಂದು ಮೂಲಗಳು ತಿಳಿಸಿವೆ.

ಭಯೋತ್ಪಾದಕರ ದಾಳಿಯ ನಂತರ ಬಿಹಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಾಗೂ ಮನ್ ಕಿ ಬಾತ್‌ನಲ್ಲಿ ಮಾತನಾಡಿದ್ದ ಪ್ರಧಾನಿಯವರು ಉಗ್ರರ ಮೂಲೋತ್ಪಾಟನೆಗೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಶಪಥ ಮಾಡಿದ್ದರು. 'ಪ್ರವಾಸಿಗರನ್ನು ಹತ್ಯೆ ಮಾಡಿರುವ ಉಗ್ರರನ್ನು ಹುಡುಕಿ ಶಿಕ್ಷಿಸಲಾಗುವುದು. ಅವರ ಕಲ್ಪನೆಗೂ ಮೀರಿದಂತಹ ಶಿಕ್ಷೆ ನೀಡಲಾಗುವುದು. ಎಲ್ಲಿಯೇ ಅಡಗಿದ್ದರೂ ಅವರನ್ನು ಪತ್ತೆ ಮಾಡಲಾಗುವುದು. ಉಗ್ರರಿಗೆ ಮಾತ್ರವಲ್ಲ ಅವರಿಗೆ ಬೆಂಬಲ ನೀಡುತ್ತಿರುವವರನ್ನೂ ಭಾರತ ದಂಡಿಸಲಿದೆ' ಎಂದು ಎಚ್ಚರಿಸಿದ್ದರು. ಪಾಕಿಸ್ತಾನವನ್ನು ಗುರಿಯಾಗಿರಿಸಿ ಅವರು ಈ ಮಾತುಗಳನ್ನು ಹೇಳಿದ್ದರು.



ಪಾಕಿಸ್ತಾನದೊಂದಿಗಿನ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಲು ಏಪ್ರಿಲ್ 23ರಂದು ಭದ್ರತೆ ಕುರಿತ ಸಂಪುಟ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಪಾಕಿಸ್ತಾನಿ ಪ್ರಜೆಗಳ ವೀಸಾಗಳ ರದ್ದು ಸೇರಿದಂತೆ ಹಲವು ಕಠಿಣ ಕ್ರಮಗಳನ್ನು ಸರ್ಕಾರ ಕೈಗೊಂಡಿತ್ತು.

ಮಂಗಳವಾರ ಇಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಪ್ರಧಾನಿ, 'ಸಮಯ ಕಡಿಮೆ ಇದೆ. ಗುರಿ ದೊಡ್ಡದು ಇದೆ' ಎಂದು ಹೇಳಿದರು. ಬಳಿಕ ಅವರು, ಈ ಮಾತನ್ನು ಪ್ರಸ್ತುತ ಪರಿಸ್ಥಿತಿ ಬಗ್ಗೆ ಹೇಳುತ್ತಿಲ್ಲ ಎಂದೂ ಸ್ಪಷ್ಟಪಡಿಸಿದರು. 'ಅಭಿವೃದ್ಧಿ ಹೊಂದಿದ ಭಾರತದ ಗುರಿಗಾಗಿ ನಾವು ಮುಂದಿನ 25 ವರ್ಷಗಳ ಕಾಲಮಿತಿ ನಿಗದಿಪಡಿಸಿದ್ದೇವೆ. ನಮಗೆ ಸೀಮಿತ ಸಮಯವಿದೆ; ಗುರಿಗಳು ದೊಡ್ಡದಿವೆ' ಎಂದು ಅವರು ತಿಳಿಸಿದರು.

ಉರಿಯಲ್ಲಿ ಸೈನಿಕರ ಮೇಲಿನ ಭಯೋತ್ಪಾದಕ ದಾಳಿ ಮತ್ತು ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಸಿಬ್ಬಂದಿಯ ಹತ್ಯೆಯ ನಂತರ ಕೇಂದ್ರ ಸರ್ಕಾರವು ಪಾಕಿಸ್ತಾನದೊಳಗೆ ನುಗ್ಗಿ ಸರ್ಜಿಕಲ್ ದಾಳಿ ನಡೆಸಿತ್ತು.

ಮಂಗಳವಾರ ಇಲ್ಲಿ ಪ್ರತ್ಯೇಕವಾಗಿ, ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಮೂರು ಅರೆಸೈನಿಕ ಪಡೆಗಳ ಮುಖ್ಯಸ್ಥರು ಮತ್ತು ಇತರ ಎರಡು ಭದ್ರತಾ ಸಂಸ್ಥೆಗಳ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದರು. ಸಭೆಯಲ್ಲಿ ಯಾವೆಲ್ಲ ವಿಷಯಗಳ ಬಗ್ಗೆ ಚರ್ಚೆ ನಡೆಯಿತು ಎಂಬುದು ಬಹಿರಂಗಗೊಂಡಿಲ್ಲ.

27 ಜನರ ಬಂಧನ (ಗುವಾಹಟಿ ವರದಿ): ಪಾಕಿಸ್ತಾನವನ್ನು ಸಮರ್ಥಿಸಿಕೊಂಡಿದ್ದಕ್ಕೆ ಅಸ್ಸಾಂನಲ್ಲಿ 27 ಜನರನ್ನು ಬಂಧಿಸಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ.

'ಅಗತ್ಯಬಿದ್ದರೆ, ಬಂಧಿತರ ಮೇಲೆ ರಾಷ್ಟ್ರೀಯ ಭದ್ರತಾ ಕಾಯ್ದೆಯ ನಿಬಂಧನೆಗಳನ್ನು ವಿಧಿಸಲಾಗುವುದು' ಎಂದಿದ್ದಾರೆ.

48 ಪ್ರವಾಸಿ ತಾಣ ಬಂದ್

ಒಂದನೇ ಪುಟದಿಂದ...

ಆದರೆ, ಗುಲ್ಮರ್ಗ್ ಮತ್ತು ಸೋನ್‌ಮರ್ಗ್ ಸೇರಿದಂತೆ ಉಳಿದ ಸ್ಥಳಗಳಿಗೆ ಪ್ರವಾಸಿಗರ ಭೇಟಿಗೆ ಯಾವುದೇ ನಿರ್ಬಂಧ ಇಲ್ಲ. ಈ ತಾಣಗಳಲ್ಲಿ ಹೆಚ್ಚಿನ ಭದ್ರತೆ ಏರ್ಪಡಿಸಲಾಗಿದೆ.

ಪ್ರವಾಸಿ ತಾಣಗಳನ್ನು ಮುಚ್ಚುವ ಸಂಬಂಧ ಸರ್ಕಾರವು ಆದೇಶ ಹೊರಡಿಸದಿದ್ದರೂ, ಮಂಗಳವಾರದಿಂದಲೇ ಈ ಕ್ರಮ ಜಾರಿಗೆ ಬಂದಿದೆ. ಕೋಕರ್‌ನಾಗ್, ಯುಸ್ಮರ್ಗ್, ತೋಸಾಮೈದಾನ್, ದೂಧ್‌ಪತ್ರಿ, ಅಹರ್ಬಾಲ್, ಕೌಸರ್‌ನಾಗ್ ಮತ್ತು ಪಹಲ್ಗಾಮ್‌ನ ಎತ್ತರದ ಪ್ರದೇಶಗಳು ಸೇರಿದಂತೆ ವಿವಿಧೆಡೆಯಿರುವ ರಮಣೀಯ ಹುಲ್ಲುಗಾವಲುಗಳು ಮತ್ತು ಉದ್ಯಾನಗಳಿಗೆ ಪ್ರವಾಸಿಗರ ಭೇಟಿಗೆ ನಿರ್ಬಂಧ ಹೇರಲಾಗಿದೆ. ಬೈಸರನ್ ಹುಲ್ಲುಗಾವಲು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಅಧಿಕಾರಿಗಳು ಸಂಪೂರ್ಣವಾಗಿ ಮುಚ್ಚಿದ್ದಾರೆ.

ಈಗಾಗಲೇ ನಿಗದಿಯಾಗಿರುವ ಪ್ರವಾಸದ ವೇಳಾಪಟ್ಟಿಯನ್ನು ಬದಲಿಸುವಂತೆ ಮತ್ತು ನಿರ್ಬಂಧ ಹೇರಿರುವ ತಾಣಗಳಿಗೆ ಪ್ರವಾಸಿಗರನ್ನು ಕರೆದೊಯ್ಯದಂತೆ ಪ್ರವಾಸೋದ್ಯಮ ಇಲಾಖೆಯು ವಿವಿಧ ಟ್ರಾವೆಲ್ ಏಜೆನ್ಸಿಗಳಿಗೆ ಸೂಚಿಸಿದೆ. ಪ್ರವಾಸಿ ತಾಣಗಳನ್ನು ಮುಚ್ಚುವ ನಿರ್ಧಾರವನ್ನು ಕಾಲಕಾಲಕ್ಕೆ ಪರಿಶೀಲಿಸಲಾಗುವುದು ಮತ್ತು ಪ್ರವಾಸಿಗರ ಸುರಕ್ಷತೆಗೆ ಯಾವುದೇ ಆತಂಕ ಇಲ್ಲ ಎಂಬುದು ಖಾತ್ರಿಯಾದರೆ ಅವುಗಳನ್ನು ಪುನಃ ತೆರೆಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀನಗರದ ಬಾಲಮಂದಿರದಲ್ಲಿರುವ ಯುವತಿಯ ಕೋರಿಕೆ

'ಇಲ್ಲೇ ಇರುತ್ತೇವೆ; ಪಾಕ್‌ಗೆ ಕಳುಹಿಸಬೇಡಿ'

ಪ್ರಜಾವಾಣಿ ವಾರ್ತೆ

ಶ್ರೀನಗರ: 'ನಾವು ತಾಯಿಯನ್ನು ಕಳೆದುಕೊಂಡಿದ್ದೇವೆ, ಮನೆಯನ್ನೂ ಕಳೆದುಕೊಂಡಿದ್ದೇವೆ, ದಯವಿಟ್ಟು ನಮ್ಮ ಏಕೈಕ ಭರವಸೆಯನ್ನು ಕಸಿದುಕೊಳ್ಳಬೇಡಿ'

– ಶ್ರೀನಗರದ ಬಾಲಮಂದಿರದಲ್ಲಿರುವ 18 ವರ್ಷದ ಯುವತಿಯೊಬ್ಬಳ ಈ ಮಾತುಗಳು ಭಾರತ–ಪಾಕಿಸ್ತಾನ ನಡುವಣ ರಾಜತಾಂತ್ರಿಕ ಬಿಕ್ಕಟ್ಟು ಕೆಲವರ ಬದುಕನ್ನು ಅತಂತ್ರ ಸ್ಥಿತಿಗೆ ತಳ್ಳಿರುವುದನ್ನು ಸೂಚಿಸುತ್ತದೆ.

2018ರಿಂದಲೂ ಬಾಲಮಂದಿರದಲ್ಲಿ ನೆಲಸಿರುವ ಯುವತಿ ಹಾಗೂ ಆಕೆಯ ತಮ್ಮ ಇದೀಗ ಪಾಕಿಸ್ತಾನಕ್ಕೆ ಗಡೀಪಾರು ಆಗುವ ಭೀತಿ ಎದುರಿಸುತ್ತಿದ್ದಾರೆ. ಪಾಕಿಸ್ತಾನಿ ತಾಯಿ ಮತ್ತು ಕಾಶ್ಮೀರಿ ತಂದೆಗೆ ಜನಿಸಿರುವ ಇವರು ಬಾಲಮಂದಿರದಲ್ಲಿ ನೆಮ್ಮದಿ ಕಂಡುಕೊಂಡಿದ್ದರು.

ಇವರ ತಂದೆ ಉತ್ತರ ಕಾಶ್ಮೀರದ ಬಂಡಿಪೋರಾ ಜಿಲ್ಲೆಯ ನಿವಾಸಿ ಬಶೀರ್ ಅಹ್ಮದ್ ಖಾನ್ 1994ರಲ್ಲಿ ಪಾಕಿಸ್ತಾನಕ್ಕೆ ತೆರಳಿ ಅಲ್ಲೇ ನೆಲಸಿದ್ದರು. ಜಮ್ಮು ಮತ್ತು ಕಾಶ್ಮೀರ ಸರ್ಕಾರದ ವಾಪಸಾತಿ ಮತ್ತು ಪುನರ್ವಸತಿ ಯೋಜನೆಯಡಿ ಅವರು 2016ರಲ್ಲಿ ಕಾಶ್ಮೀರಕ್ಕೆ ಮರಳಿದ್ದರು. ಪಾಕ್ ಪ್ರಜೆಯಾಗಿರುವ ಪತ್ನಿ ಮತ್ತು ನಾಲ್ವರು ಮಕ್ಕಳು (ಮರಣ ಹೊಂದಿದ ಮೊದಲ ಪತ್ನಿಯ ಇಬ್ಬರು ಮತ್ತು ಎರಡನೇ ಪತ್ನಿಯ ಇಬ್ಬರು) ಕೂಡಾ ಜತೆಗಿದ್ದರು.

ಕಾಶ್ಮೀರಕ್ಕೆ ಬಂದ ಬಳಿಕ, ಬಶೀರ್ ಅವರ ಮೊದಲ ಪತ್ನಿಯ ಇಬ್ಬರು ಮಕ್ಕಳ ಜೀವನ ಕರಾಳ ತಿರುವು ಪಡೆದುಕೊಂಡಿತು. 'ಮಲತಾಯಿಯ ನಿರಂತರ ಕಿರುಕುಳ ಸಹಿಸದೆ ಅಕ್ಕ ಮತ್ತು ತಮ್ಮ ಮನೆಯಿಂದ ಓಡಿಹೋಗಿ, ಬಾಲಮಂದಿರದಲ್ಲಿ ಆಶ್ರಯ ಪಡೆದರು' ಎಂದು ಅವರ ಕುಟುಂಬದ ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು. ಪಾಕ್ ತಾಯಿಗೆ ಪಾಕಿಸ್ತಾನದಲ್ಲಿ ಜನಿಸಿರುವ ಕಾರಣ ಇಬ್ಬರು ತಾಂತ್ರಿಕವಾಗಿ ಪಾಕ್ ಪ್ರಜೆಗಳೇ ಆಗಿದ್ದಾರೆ.

'ಅವರ ತಾಯಿ ಮೃತಪಟ್ಟಿದ್ದಾರೆ. ಅವರನ್ನು ಬರಮಾಡಿಕೊಳ್ಳಲು ಅಥವಾ ನೋಡಿಕೊಳ್ಳಲು ಪಾಕಿಸ್ತಾನದಲ್ಲಿ ಯಾವುದೇ ಕುಟುಂಬವಿಲ್ಲ. ಇಲ್ಲಿ ಅವರು ಚೆನ್ನಾಗಿ ಓದುತ್ತಿದ್ದು, ನೆಮ್ಮದಿಯಿಂದ ಬದುಕುತ್ತಿದ್ದಾರೆ. ಈ ಮಕ್ಕಳಿಗೆ ಪಾಕಿಸ್ತಾನದಲ್ಲಿ ಯಾವುದೇ ರಕ್ತ ಸಂಬಂಧಿಗಳಿಲ್ಲ. ಇಂತರ ಪರಿಸ್ಥಿತಿಯಲ್ಲಿ ಅವರನ್ನು ಪಾಕಿಸ್ತಾನದ ಯಾರಿಗೋ ಒಪ್ಪಿಸುವುದು ಅಮಾನವೀಯ ನಡೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಹೇಳಿದರು.

'ಹಲವು ವರ್ಷಗಳ ನೋವು ಮತ್ತು ಸಂಕಷ್ಟದ ಬಳಿಕ ಪ್ರೀತಿಯನ್ನು ಕಂಡುಕೊಂಡ ಏಕೈಕ ಸ್ಥಳ ಇದು. ಪಾಕಿಸ್ತಾನದಲ್ಲಿ ನಮಗೆ ಯಾರೂ ಇಲ್ಲ. ಕಾಶ್ಮೀರವೇ ನಮ್ಮ ಏಕೈಕ ಮನೆ' ಎಂದು ತಮ್ಮನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ಹೇಳುವಾಗ ಯುವತಿ ಕಣ್ಣೀರಾದರು.

ಈ ಇಬ್ಬರಿಗೆ ಕಾಶ್ಮೀರದಲ್ಲೇ ನೆಲಸಲು ಅವಕಾಶ ನೀಡಬೇಕೆಂದು ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ ಸದಸ್ಯರು ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಮಕ್ಕಳ ಚಿಕಿತ್ಸೆಗಾಗಿ ಬಂದಿದ್ದ ಪಾಕ್ ಕುಟುಂಬ ಮತ್ತೆ ತವರಿಗೆ

ಕರಾಚಿ (ಪಿಟಿಐ): ಅನಾರೋಗ್ಯಪೀಡಿತ ಇಬ್ಬರು ಮಕ್ಕಳ ಚಿಕಿತ್ಸೆಗಾಗಿ ನವದೆಹಲಿಗೆ ಭೇಟಿ ನೀಡಿದ್ದ ಪಾಕಿಸ್ತಾನದ ಕುಟುಂಬವೊಂದು ಸಿಂಧ್ ಪ್ರಾಂತ್ಯದ ಹೈದರಾಬಾದ್‌ಗೆ ಮರಳಿತು.

ಪಹಲ್ಗಾಮ್ ದಾಳಿ ನಂತರ ಪಾಕಿಸ್ತಾನ ಪ್ರಜೆಗಳು ತವರಿಗೆ ಮರಳಲು ಭಾರತ ಸರ್ಕಾರ ಗಡುವು ವಿಧಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮಕ್ಕಳ ತಂದೆ ಶಾಹೀದ್ ಅಲಿ, 'ಮಕ್ಕಳ ಚಿಕಿತ್ಸಾ ಪ್ರಕ್ರಿಯೆಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕಾಗಿದೆ. ಕಳೆದ ಮಾರ್ಚ್‌ನಲ್ಲಿ ಇಲ್ಲಿಗೆ ಭೇಟಿ ನೀಡಿ ಹಲವು ಪರೀಕ್ಷೆಗಳನ್ನು ಮಾಡಿಸಲಾಗಿತ್ತು. ತಜ್ಞ ವೈದ್ಯರನ್ನು ಸಹ ಭೇಟಿ ಮಾಡಿದ್ದೆವು. ಆದರೆ ಪಹಲ್ಗಾಮ್ ದಾಳಿ ನಂತರ ಪರಿಸ್ಥಿತಿ ಬದಲಾಗಿದೆ. ನಮ್ಮ ಮನವಿ ತಿಳಿಸಲೂ ಸಮಯ ಆಗಲಿಲ್ಲ' ಎಂದು ಹೇಳಿದರು.

ಚಿಕಿತ್ಸೆಗಾಗಿ ಸಾಕಷ್ಟು ಹಣ ವ್ಯಯಿಸಿದ್ದೇವೆ. ಆದರೆ, ಪ್ರಕ್ರಿಯೆಗಳು ಇನ್ನೂ ಪೂರ್ಣಗೊಂಡಿಲ್ಲ ಎಂದು ಹೇಳಿದರು. ಬೇರೆ ಯಾವುದಾದರೂ ದೇಶದಲ್ಲಾದರೂ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳ್ಳಬೇಕು ಎಂದು ಪಾಕಿಸ್ತಾನ ಸರ್ಕಾರವನ್ನು ಮನವಿ ಮಾಡಿದರು. ವರದಿಗಳ ಪ್ರಕಾರ, ಮೂರು ದಿನಗಳಲ್ಲಿ ಭಾರತದಿಂದ 610 ಪಾಕ್ ಪ್ರಜೆಗಳು ತವರಿಗೆ ಮರಳಿದ್ದರೆ, ಪಾಕಿಸ್ತಾನದಿಂದ 850 ಭಾರತೀಯರು ತವರಿಗೆ ಬಂದಿದ್ದಾರೆ.

'ಭಾರತವೇ ನನ್ನ ದೇಶ; ವಾಪಸ್ ಹೋಗಲ್ಲ'

ಬುಲಂದ್‌ಶಹರ್ (ಪಿಟಿಐ): 'ನಾನು ಇಸ್ಲಾಮಾಬಾದ್‌ನವಳು. ಭಾರತದವನನ್ನು ಮದುವೆಯಾಗಿದ್ದೇನೆ. ನನ್ನ ದೇಶ ಬಿಟ್ಟು ನಾನು ಇಲ್ಲಿಗೆ ಬಂದಿದ್ದೇನೆ. ಈಗ ಭಾರತವೇ ನನ್ನ ದೇಶ. ವಾಪಸು ಹೋಗಲು ನನಗೆ ಇಷ್ಟವಿಲ್ಲ. ಇಲ್ಲೇ ಇರಲು ಅವಕಾಶ ಕೊಡಿ' ಎಂದು ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯ ಮರಿಯಂ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

'ಗಂಡ ಎಲ್ಲಿರುತ್ತಾರೊ ಅದೇ ನನ್ನ ಮನೆ. ಅವರ ಜೊತೆಯಲ್ಲಿಯೇ ಇರಲು ಅವಕಾಶ ಮಾಡಿಕೊಡಿ' ಎಂದೂ ಅವರು ಕೇಳಿಕೊಂಡಿದ್ದಾರೆ. ಮರಿಯಂ ಅವರು ಮೂರು ವರ್ಷಗಳ ಹಿಂದೆ ಜಿಲ್ಲೆಯ ಖುರ್ಜ್ ಪ್ರದೇಶದ ಅಮಿರ್ ಎನ್ನುವರನ್ನು ವರಿಸಿದ್ದರು. ಎರಡು ತಿಂಗಳ ಹಿಂದಷ್ಟೆ ಅವರಿಗೆ ಅಲ್ಪಾವಧಿ ವೀಸಾ ದೊರಕಿತ್ತು. ದೀರ್ಘಾವಧಿ ವೀಸಾ ನೀಡುವಂತೆಯೂ ಅವರು ಅರ್ಜಿ ಸಲ್ಲಿಸಿದ್ದರು.

'ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬಗ್ಗೆ ನನಗೆ ತೀವ್ರ ದುಃಖವಾಗಿದೆ. ಈ ದಾಳಿ ನಡೆಸಿದವರನ್ನು ಶಿಕ್ಷಿಸಿ' ಎಂದು ಮರಿಯಂ ಹೇಳಿದರು.

ಸರ್ಕಾರ ಹೇಳುವುದೇನು: 'ಮರಿಯಂ ಅವರು ಅರ್ಜಿ ಸಲ್ಲಿಸಿದ್ದಾರೆ. ನಮ್ಮ ಮೇಲಧಿಕಾರಿಗಳ ಸೂಚನೆ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ವರಿಷ್ಠಾಧಿಕಾರಿ ತೇಜ್‌ವೀರ್ ಸಿಂಗ್ ಪ್ರತಿಕ್ರಿಯಿಸಿದ್ದಾರೆ. ಪೊಲೀಸರ ಪ್ರಕಾರ ಇದೇ ಜಿಲ್ಲೆಯಲ್ಲಿ ಒಟ್ಟು ನಾಲ್ವರು ಮಹಿಳೆಯರ ಬಳಿ ಅಲ್ಪಾವಧಿ ವೀಸಾ ಇತ್ತು. ಈ ಪೈಕಿ ಮೂವರನ್ನು ವಾಪಸು ಕಳುಹಿಸಲಾಗಿದೆ. ಮರಿಯಂ ಕೊನೆಯವರು.

ನಿಖರ ಮಾಹಿತಿ ನೀಡಿಲ್ಲ: 'ಕೇಂದ್ರ ಸರ್ಕಾರದ ಆದೇಶದ ಮೇರೆಗೆ ತನ್ನ ರಾಜ್ಯದಲ್ಲಿ ಇರುವ ಎಲ್ಲ ಪಾಕಿಸ್ತಾನಿ ಪ್ರಜೆಗಳನ್ನು (ಒಬ್ಬರನ್ನು ಹೊರತುಪಡಿಸಿ) ವಾಪಸು ಕಳುಹಿಸಿರುವ ರಾಜ್ಯ ನಮ್ಮದು' ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿಕೊಂಡಿದೆ. ಆದರೆ, ರಾಜ್ಯದಲ್ಲಿ ಎಷ್ಟು ಮಂದಿ ಪಾಕ್ ಪ್ರಜೆಗಳು ಇದ್ದರು, ಎಷ್ಟು ಜನರನ್ನು ವಾಪಸು ಕಳುಹಿಸಲಾಗಿದೆ ಎಂಬ ನಿಖರ ಮಾಹಿತಿಯನ್ನು ರಾಜ್ಯ ಸರ್ಕಾರ ಬಹಿರಂಗಪಡಿಸಿಲ್ಲ.

ಬಾಕಿ ಉಳಿದಿರುವ ಪಾಕ್ ಪ್ರಜೆ ಮರಿಯಂ ಅವರೇ ಎಂಬುದನ್ನು ಸರ್ಕಾರ ಖಚಿತವಾಗಿ ಹೇಳಿಲ್ಲ.

ಮಹಿಳೆಯರಿಗೆ ಯಾವಾಗಲೂ ಕಷ್ಟ



> ಪಾಕಿಸ್ತಾನ ಪ್ರಜೆಗಳನ್ನು ವಾಪಸು ಕಳುಹಿಸುವ ಭಾರತ ಸರ್ಕಾರದ ನಿರ್ಧಾರದಿಂದಾಗಿ 30–40 ವರ್ಷಗಳ ಹಿಂದೆ ಮದುವೆಯಾಗಿ ಭಾರತಕ್ಕೆ ಬಂದ ಮಹಿಳೆಯರು ಕಷ್ಟ ಅನುಭವಿಸುವಂತಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಇಂಥ ಹಲವು ಪ್ರಕರಣಗಳಿವೆ. ಹಲವು ವರ್ಷಗಳಿಂದ ಶಾಂತಿಯುತವಾಗಿ ಇಲ್ಲಿ ನೆಲಸಿರುವ ಮಹಿಳೆಯರನ್ನು ಹೀಗೆ ವಾಪಸು ಕಳುಹಿಸುವುದರಿಂದ ಆಯಾ ಕುಟುಂಬಗಳು ಭಾವನಾತ್ಮಕವಾಗಿ ತೀವ್ರ ಸಂಕಟ ಅನುಭವಿಸುವಂತಾಗುತ್ತದೆ. ಇದು ಅಮಾನವೀಯ ಕೂಡ. ಮಹಿಳೆಯರು, ಮಕ್ಕಳು ಮತ್ತು ವೃದ್ಧರ ಕುರಿತು ಮಾನವೀಯ ಕಾಳಜಿಯಿಂದ ವರ್ತಿಸಬೇಕು ಎಂದು ನಾವು ಸರ್ಕಾರವನ್ನು ಒತ್ತಾಯಿಸುತ್ತೇವೆ
> **ಮೆಹಬೂಬಾ ಮುಫ್ತಿ,** ಪಿಡಿಪಿ ಮುಖ್ಯಸ್ಥೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,328
ಇಂದಿನ ಅಂತ್ಯ	24,335
▲	7
ದಿನದ ಗರಿಷ್ಠ	24,457

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹465
12 ಕ್ಕೆ	₹63
ಮೈಸೂರು	
100ಕ್ಕೆ	₹475

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹275-612
ದ್ವಿತಳಿ (ಬಿ.ವಿ)	₹412-689

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹195
ಆರ್‌ಎಸ್‌ಎಸ್-5	₹190
ಗುಡ್ ಲಾಟ್	₹180

ಇಂಡಸ್ ಇಂಡ್ ಬ್ಯಾಂಕ್ ಸಿಇಒ ರಾಜೀನಾಮೆ

ನವದೆಹಲಿ (ಪಿಟಿಐ): ಖಾಸಗಿ ವಲಯದ ಇಂಡಸ್ ಇಂಡ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸುಮಂತ್ ಕಠ್ಪಾಲಿಯಾ ಅವರು, ತಮ್ಮ ಹುದ್ದೆಗೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ.

2024–25ನೇ ಆರ್ಥಿಕ ವರ್ಷದ ಬ್ಯಾಂಕ್‌ನ ಲೆಕ್ಕಪತ್ರದಲ್ಲಿ ₹1,960 ಕೋಟಿ ವ್ಯತ್ಯಾಸ ಕಂಡು ಬಂದಿದೆ. ಹೀಗಾಗಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಸಲ್ಲಿಸಿದ್ದಾರೆ. ತಕ್ಷಣದಿಂದಲೇ ರಾಜೀನಾಮೆ ಅಂಗೀಕರಿಸುವಂತೆ ಬ್ಯಾಂಕ್‌ನ ಆಡಳಿತ ಮಂಡಳಿಗೆ ಬರೆದಿರುವ ಪತ್ರದಲ್ಲಿ ಕೋರಿದ್ದಾರೆ ಎಂದು ಬ್ಯಾಂಕ್, ಷೇರುಪೇಟೆಗೆ ತಿಳಿಸಿದೆ.

ಸೋಮವಾರ ಬ್ಯಾಂಕ್‌ನ ಡೆಪ್ಯುಟಿ ಸಿಇಒ ಅರುಣ್ ಖುರಾನಾ ರಾಜೀನಾಮೆ ಸಲ್ಲಿಸಿದ್ದರು. ಜನವರಿಯಲ್ಲಿ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಗೋವಿಂದ್ ಜೈನ್ ರಾಜೀನಾಮೆ ನೀಡಿದ್ದರು.

ಅಕ್ಷಯ ತೃತೀಯ ಇಂದು: ₹16,000 ಕೋಟಿ ವಹಿವಾಟು ಅಂದಾಜು

12 ಟನ್ ಚಿನ್ನ ಮಾರಾಟ ನಿರೀಕ್ಷೆ

ನವದೆಹಲಿ (ಪಿಟಿಐ): ಚಿನ್ನದ ಬೆಲೆ ಏರಿಕೆಯಿಂದಾಗಿ ಬುಧವಾರ ನಡೆಯಲಿರುವ ಅಕ್ಷಯ ತೃತೀಯ ಹಬ್ಬದಂದು ದೇಶದ ಚಿನಿವಾರ ಪೇಟೆಯು ಗ್ರಾಹಕರಿಂದ ಮಿಶ್ರ ಪ್ರತಿಕ್ರಿಯೆಗೆ ಸಾಕ್ಷಿಯಾಗುವ ನಿರೀಕ್ಷೆಯಿದೆ ಎಂದು ಅಖಿಲ ಭಾರತ ವರ್ತಕರ ಒಕ್ಕೂಟ (ಸಿಎಐಟಿ) ಹೇಳಿದೆ.

'ಅಕ್ಷಯ ತೃತೀಯ ದಿನದಂದು ಸಹಜವಾಗಿ ಚಿನ್ನ, ಬೆಳ್ಳಿ ಆಭರಣಗಳ ಖರೀದಿ ಹೆಚ್ಚಿರುತ್ತದೆ. ಆದರೆ, ಬೆಲೆ ಹೆಚ್ಚಳವು ಗ್ರಾಹಕರ ಖರೀದಿ ಉತ್ಸಾಹದ ಮೇಲೆ ಪರಿಣಾಮ ಬೀರಿದೆ' ಎಂದು ಅಖಿಲ ಭಾರತ ಆಭರಣಗಳ ಮತ್ತು ಅಕ್ಕ ಸಾಲಿಗರ ಒಕ್ಕೂಟದ ಅಧ್ಯಕ್ಷ ಪಂಕಜ್ ಅರೋರಾ ಹೇಳಿದ್ದಾರೆ.

'ಈ ಬಾರಿ ₹12 ಸಾವಿರ ಕೋಟಿ ಮೌಲ್ಯದ 12 ಟನ್ ಚಿನ್ನ ಮತ್ತು ₹4 ಸಾವಿರ ಕೋಟಿ ಮೌಲ್ಯದ 400 ಟನ್ ಬೆಳ್ಳಿ ಮಾರಾಟವಾಗುವ ನಿರೀಕ್ಷೆಯಿದೆ' ಎಂದು ಹೇಳಿದ್ದಾರೆ.

ಕಳೆದ ವರ್ಷದ ಅಕ್ಷಯ ತೃತೀಯದಂದು 10 ಗ್ರಾಂ ಚಿನ್ನದ ಬೆಲೆಯು ₹73,500 ಇತ್ತು. ಈಗ ₹1 ಲಕ್ಷದ ಹತ್ತಿರದಲ್ಲಿದೆ. ಪ್ರತಿ ಕೆ.ಜಿಗೆ ₹86 ಸಾವಿರ ಇದ್ದ ಬೆಳ್ಳಿ ಬೆಲೆಯು ₹1 ಲಕ್ಷ ದಾಟಿದೆ.

'ಸದ್ಯ ಮದುವೆ ಋತು ಶುರುವಾಗಿದೆ. ಆದರೆ, ಬೆಲೆ ಹೆಚ್ಚಳದಿಂದಾಗಿ ಚಿನ್ನಾಭರಣ ಖರೀದಿಗೆ ಗ್ರಾಹಕರು ಹಿಂದೇಟು ಹಾಕುತ್ತಿದ್ದಾರೆ' ಎಂದು ಸಿಎಐಟಿ ಅಧ್ಯಕ್ಷ ಬಿ.ಸಿ. ಭಾರ್ತಿಯಾ ಹೇಳಿದ್ದಾರೆ.

ಅಮೆರಿಕದ ಪ್ರತಿ ಸುಂಕ ನೀತಿಯಿಂದಾಗಿ ಜಾಗತಿಕ ಮಟ್ಟದಲ್ಲಿ ಆರ್ಥಿಕ ಅನಿಶ್ಚಿತ ಸ್ಥಿತಿ ತಲೆದೋರಿದೆ. ಕಚ್ಚಾ ತೈಲದ ಬೆಲೆ ಏರಿಕೆಯಾಗಿದ್ದು, ರೂಪಾಯಿ ಮೌಲ್ಯ ಇಳಿಕೆಯಾಗಿದೆ. ಹಾಗಾಗಿ, ಸುರಕ್ಷಿತ ಹೂಡಿಕೆಯಾದ ಹಳದಿ ಲೋಹದ ಮೇಲೆ ಹೂಡಿಕೆ ಹೆಚ್ಚಿದೆ. ಇದರಿಂದ ಚಿನ್ನದ ಬೆಲೆ ಏರಿಕೆಯಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಬಂಗಾರದ ಬೆಲೆ ₹1,050 ಏರಿಕೆ

ಅಕ್ಷಯ ತೃತೀಯ ಹಬ್ಬದ ಬೆನ್ನಲ್ಲೇ ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆಯು ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1,050 ಹೆಚ್ಚಳವಾಗಿದ್ದು, ₹99,450 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ₹1,100 ಹೆಚ್ಚಳವಾಗಿದ್ದು, ₹99 ಸಾವಿರ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ವರ್ಷದ ಡಿಸೆಂಬರ್ 31ರಂದು 10 ಗ್ರಾಂ ಚಿನ್ನದ ಬೆಲೆಯು ₹78,950 ಇತ್ತು. ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ 10 ಗ್ರಾಂಗೆ ₹20,500 ಏರಿಕೆಯಾಗಿದೆ.

ಬೆಳ್ಳಿ ಧಾರಣೆಯು ಹೆಚ್ಚಳವಾಗಿದೆ. ಪ್ರತಿ ಕೆ.ಜಿಗೆ ₹3,500 ಏರಿಕೆಯಾಗಿದ್ದು, ₹1.02 ಲಕ್ಷ ಆಗಿದೆ.

'ಬುಧವಾರ ಅಕ್ಷಯ ತೃತೀಯ ಹಬ್ಬವಿದೆ. ಇದರಿಂದ ಆಭರಣ ತಯಾರಕರು ಮತ್ತು ದಾಸ್ತಾನುಗಾರರಿಂದ ಬೇಡಿಕೆ ಹೆಚ್ಚಳವಾಗಿದೆ. ಹಾಗಾಗಿ, ಹಳದಿ ಲೋಹದ ಬೆಲೆಯು ಏರಿಕೆಯಾಗಿದೆ' ಎಂದು ಚಿನಿವಾರ ಪೇಟೆ ತಜ್ಞರು ತಿಳಿಸಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಿರಂಜನ್, ಬೆಳಗಾವಿ.

- **ಪ್ರಶ್ನೆ: ನಾನು ಶಾಲಾ ಶಿಕ್ಷಕ. ನನ್ನ ತಂದೆ ಇತ್ತೀಚೆಗೆ ನಿಧನರಾದರು. ಅವರು ಮ್ಯೂಚುವಲ್ ಫಂಡ್‌ಗಳಲ್ಲಿ ಕಳೆದ ಕೆಲವು ವರ್ಷಗಳಿಂದ ತಿಂಗಳಿಗೆ ₹10 ಸಾವಿರದಿಂದ ₹15 ಸಾವಿರ ಹೂಡಿಕೆ ಮಾಡಿದ್ದರು. ಅವರಿಗೆ ಲಾಭ ಬರುತ್ತಿದ್ದ ಬಗ್ಗೆ ಆಗಾಗ್ಗೆ ಹೇಳುತ್ತಿದ್ದರು. ಆದರೆ, ನಾನು ಅವರ ಹೂಡಿಕೆಯ ವಿವರದ ಬಗ್ಗೆ ನಿಖರ ಮಾಹಿತಿ ಹೊಂದಿಲ್ಲ. ಅವರ ಎಲ್ಲಾ ಫೋಲಿಯೊ ವಿವರವುಳ್ಳ ಹೂಡಿಕೆ ಮೊತ್ತದ ಬಗ್ಗೆ ತಿಳಿದುಕೊಳ್ಳುವುದು ಹೇಗೆ? ಅವರು ನಾಮಿನಿಯಾಗಿ ಉಲ್ಲೇಖಿಸಿದ ವ್ಯಕ್ತಿಯ ಹೆಸರಿನಲ್ಲಿ ಫಂಡ್ ಮೊತ್ತವನ್ನು ಹೇಗೆ ಹಸ್ತಾಂತರಿಸಿ ಕೊಳ್ಳಬಹುದು. ಈ ಬಗ್ಗೆ ತಿಳಿಸಿ.**

ಉತ್ತರ: ನಿಮ್ಮ ತಂದೆಯವರ ಮ್ಯೂಚುವಲ್ ಫಂಡ್ ಹೂಡಿಕೆ ಬಗ್ಗೆ ಟ್ರ್ಯಾಕ್ ಮಾಡಲು ಮತ್ತು ನಾಮಿನಿ ಹೆಸರಿನಲ್ಲಿ ಹಸ್ತಾಂತರಿಸಿಕೊಳ್ಳಲು ನೀವು ಸೆಬಿ ರೂಪಿಸಿರುವ 'ಮಿತ್ರ' (ಮ್ಯೂಚುವಲ್ ಫಂಡ್ ಹೂಡಿಕೆದಾರರ ಟ್ರ್ಯಾಕಿಂಗ್ ಮತ್ತು ಪರಿಹಾರ ಸಹಾಯಕ) ಎಂಬ ಆನ್‌ಲೈನ್ ವೇದಿಕೆಯನ್ನು ಬಳಸಬಹುದು. ಹೂಡಿಕೆದಾರರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಹೂಡಿಕೆ ವಿವರ ಪತ್ತೆ ಹಚ್ಚಲು ಮತ್ತು ಸಮಸ್ಯೆಗಳ ಪರಿಹಾರಕ್ಕೆ ಸಹಾಯ ಮಾಡಲು ಇದನ್ನು ವಿನ್ಯಾಸಗೊಳಿಸಲಾಗಿದೆ.

ಇದು ನಿಮ್ಮ ತಂದೆಯ ಎಲ್ಲಾ ಮ್ಯೂಚುವಲ್ ಫಂಡ್ ಫೋಲಿಯೊಗಳು ಮತ್ತು ಹೂಡಿಕೆಯ ವಿವರವನ್ನು ಸುಲಭವಾಗಿ ಪತ್ತೆ ಹಚ್ಚಲು ನಿಮಗೆ ಸಹಾಯ ಮಾಡುತ್ತದೆ.

ನೀವು ಮಿತ್ರ ಪ್ಲಾಟ್‌ಫಾರ್ಮ್‌ನ ವೆಬ್‌ಸೈಟ್ https://www.mfcentral.comಗೆ ಭೇಟಿ ನೀಡಿ. ಈ ವೆಬ್‌ಸೈಟ್‌ನಲ್ಲಿ ನಿಮ್ಮ ತಂದೆಯವರ ಪ್ಯಾನ್ ಸಂಖ್ಯೆ, ಇ–ಮೇಲ್ ಐಡಿ ಅಥವಾ ಮೊಬೈಲ್ ನಂಬರ್, ಇತರೆ ಮಾಹಿತಿ ಬಳಸಿ ಲಾಗಿನ್ ಮಾಡಿ, ಅವರ ಎಲ್ಲಾ ಫೋಲಿಯೊಗಳ ವಿವರ, ಪೋರ್ಟ್‌ಫೋಲಿಯೊ ವಿವರವನ್ನು ಇಲ್ಲಿ ಪಡೆಯಬಹುದು. ಈ ವೇದಿಕೆಯು ಪ್ಯಾನ್ ಸಂಖ್ಯೆಯ ಮಾಹಿತಿ ಹಾಗೂ ಮೊಬೈಲ್/ ಇ–ಮೇಲ್ ಮಾಹಿತಿಯೊಂದಿಗೆ ಕಾರ್ಯ ನಿರ್ವಹಿಸುತ್ತದೆ. ಇಲ್ಲಿ ಯಾವುದೇ ಕೆವೈಸಿ ವಿವರ, ಎಸ್‌ಐಪಿ ವಿವರ, ಕ್ಯಾಪಿಟಲ್ ಗೈನ್ ಸೇರಿ ಒಟ್ಟಾರೆ ಹೂಡಿಕೆ ಇತ್ಯಾದಿ ವಿವರ ಪಡೆಯಬಹುದು.

ಫೋಲಿಯೊಗಳನ್ನು ಪತ್ತೆ ಹಚ್ಚಿದ ನಂತರ ಮುಂದಿನ ಹಂತದಲ್ಲಿ ಆ ಹೂಡಿಕೆಗಳನ್ನು ನಾಮಿನಿ ಹೆಸರಿಗೆ ಹಸ್ತಾಂತರಿಸಲು ಸಂಬಂಧಪಟ್ಟ ಮ್ಯೂಚುವಲ್ ಫಂಡ್ ಕಂಪನಿಗೆ ಅರ್ಜಿ ಸಲ್ಲಿಸಬೇಕಿದೆ. ಇದಕ್ಕಾಗಿ ಸಾಮಾನ್ಯವಾಗಿ ಅರ್ಜಿಯೊಂದಿಗೆ ಮರಣ ಪ್ರಮಾಣ ಪತ್ರ, ಪ್ಯಾನ್ ಕಾರ್ಡ್ ಪ್ರತಿ ಮತ್ತು ಕೆಲವೊಮ್ಮೆ ಮುಚ್ಚಳಿಕೆ ಪತ್ರ ಸಲ್ಲಿಸಬೇಕಿದೆ. ಈ ಬಗ್ಗೆ ಸ್ಪಷ್ಟ ಮಾಹಿತಿಗಾಗಿ ಸ್ಥಳೀಯ ಫಂಡ್ ಶಾಖೆಗಳನ್ನು ಸಂಪರ್ಕಿಸಿ.

ಸತೀಶ್ ಮೋಹನ್, ಮೈಸೂರು.

- **ಪ್ರಶ್ನೆ: ನಾನು ಪ್ರತಿ ವರ್ಷ ₹7 ಲಕ್ಷ ಪಿಂಚಣಿ ಪಡೆಯುತ್ತಿದ್ದೇನೆ. ಇತ್ತೀಚೆಗೆ ಘೋಷಿತ ಆದಾಯ ತೆರಿಗೆ ಸಡಿಲಿಕೆಗಳ ಪ್ರಯೋಜನ ಪಡೆಯಲು ಸುಮಾರು 10 ವರ್ಷದ ಹಿಂದೆ ಖರೀದಿಸಿದ್ದ ಷೇರಿನಲ್ಲಿ ₹4 ಲಕ್ಷ ಹಾಗೂ 5 ವರ್ಷದ ಹಿಂದೆ ಹೂಡಿದ್ದ ಮ್ಯೂಚುವಲ್ ಫಂಡ್‌ನಲ್ಲಿ ₹1 ಲಕ್ಷ ಮೌಲ್ಯದ ಹೂಡಿಕೆ ಹಿಂತೆಗೆದುಕೊಳ್ಳಲು ಉದ್ದೇಶಿಸಿದ್ದೇನೆ. ಈ ರೀತಿಯಲ್ಲಿ ನನ್ನ ಒಟ್ಟು ಆದಾಯ ₹12 ಲಕ್ಷ ಆಗಲಿದೆ. ನಾನು ಆದಾಯ ತೆರಿಗೆ ಪಾವತಿಸಬೇಕಾಗುತ್ತದೆಯೇ? ಅಲ್ಲದೆ, ನಾನು ₹5 ಲಕ್ಷ ಮೌಲ್ಯದ ಷೇರುಗಳನ್ನು ನನ್ನ ಕುಟುಂಬದ ಸದಸ್ಯರಿಗೆ (ಯಾವುದೇ ಆದಾಯವಿಲ್ಲದವರಿಗೆ) ವರ್ಗಾವಣೆ ಮಾಡಿದರೆ ಮತ್ತು ಅವರು ಈ ವರ್ಷವೇ ಮಾರಾಟ ಮಾಡಿದರೆ ಅವರು ತೆರಿಗೆ ಪಾವತಿಸಬೇಕಾಗುತ್ತದೆಯೇ? ಈ ಬಗ್ಗೆ ಸ್ಪಷ್ಟನೆ ನೀಡಿರಿ.**

ಉತ್ತರ: ನಿಮ್ಮ ಈ ವರ್ಷದ ಗಳಿಕೆ ₹12 ಲಕ್ಷ ಎಂದು ಪರಿಭಾವಿಸಿದ್ದರೂ ತೆರಿಗೆಗೆ ಸಂಬಂಧಿಸಿ ಈ ಮೊತ್ತವು ಸಂಪೂರ್ಣ ತೆರಿಗೆಗೊಳಪಡುವ ಲಾಭವಲ್ಲ. ಏಕೆಂದರೆ ನೀವು ಕೆಲವು ವರ್ಷದ ಹಿಂದೆ ಷೇರು ಖರೀದಿಸಿರುವಾಗ ಅದಕ್ಕೂ ಅಸಲು ಮೊತ್ತ ಕೊಟ್ಟಿರುತ್ತೀರಿ.

ಒಂದು ವೇಳೆ 2018ರ ಜನವರಿ 31ಕ್ಕಿಂತ ಹಿಂದೆ ಹೂಡಿಕೆ ಮಾಡಿದ್ದರೆ ಅಂದಿನ ಮಾರುಕಟ್ಟೆ ಮೌಲ್ಯ ಅಥವಾ ನಿಜವಾದ ಖರೀದಿ ಮೌಲ್ಯದಲ್ಲಿ ಯಾವುದು ಅಧಿಕವೋ ಅದು ನಿಮ್ಮ ಪರಿಷ್ಕೃತ ಖರೀದಿ ಮೌಲ್ಯ ಎಂಬುದಾಗಿ ತಿಳಿಯಲಾಗುತ್ತದೆ. ಹೀಗಾಗಿ, ಮಾರಾಟವಾದ ಮೌಲ್ಯ ಮತ್ತು ಪರಿಷ್ಕೃತ ಖರೀದಿ ಮೌಲ್ಯದೊಳಗಿನ ಅಂತರವಷ್ಟೇ ನಿಮ್ಮ ಲಾಭ, ನಷ್ಟ ಎಂಬುದನ್ನು ಗಮನಿಸಿ. ಅದೇ ರೀತಿ 2018ರ ಜನವರಿ 31ರ ನಂತರ ಮ್ಯೂಚುವಲ್ ಫಂಡ್ ಖರೀದಿಸಿದ್ದರೆ ನಿಮ್ಮ ಅಸಲು ಮೊತ್ತವನ್ನೇ ಪರಿಗಣಿಸಿ ಲಾಭ, ನಷ್ಟವನ್ನು ಲೆಕ್ಕ ಹಾಕಲಾಗುತ್ತದೆ.

ನಿಮ್ಮ ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳು ದೀರ್ಘಾವಧಿಯ ಬಂಡವಾಳ ಆಸ್ತಿಗಳಾಗಿವೆ. ಇದರಿಂದ ಇವುಗಳ ಮಾರಾಟದಿಂದ ಬರುವ ಲಾಭದ ಮೇಲೆ ಸೆಕ್ಷನ್ 112ಎ ಪ್ರಕಾರ ₹1.25 ಲಕ್ಷದವರೆಗೆ ಲಾಭ ಇದ್ದರೆ ತೆರಿಗೆ ಸಂಪೂರ್ಣ ಮುಕ್ತವಾಗಿರುತ್ತದೆ. ಅದಕ್ಕಿಂತ ಹೆಚ್ಚಿನ ಮೊತ್ತದ ಮೇಲಷ್ಟೇ ಶೇ 12.5ರ ದರದಲ್ಲಿ ತೆರಿಗೆ ವಿಧಿಸಲಾಗುತ್ತದೆ. ಇದು ನಿಮ್ಮ ವಿವಿಧ ಸ್ಲ್ಯಾಬ್ ತೆರಿಗೆ ದರಕ್ಕಿಂತ ಭಿನ್ನವಾಗಿದ್ದು, ಮೇಲಿನ ನಿಶ್ಚಿತ ದರದಲ್ಲಿ ತೆರಿಗೆಗೆ ಒಳಪಡುತ್ತದೆ.

ಆದರೆ, 2025-26ನೇ ಆರ್ಥಿಕ ವರ್ಷದಲ್ಲಿ ನಡೆಯಲಿರುವ ಈ ವ್ಯವಹಾರ ಹಾಗೂ ಆದಾಯಕ್ಕೆ ಸೆಕ್ಷನ್ 87ಎ ಅಡಿ ತೆರಿಗೆ ರಿಬೇಟ್ (ವಿನಾಯಿತಿ) ಇರುವ ಕಾರಣ ಒಟ್ಟು ಆದಾಯ ₹12 ಲಕ್ಷದೊಳಗೆ ಇರುವವರಿಗೆ ಯಾವುದೇ ತೆರಿಗೆ ಪಾವತಿಸುವ ಅಗತ್ಯವಿಲ್ಲ. ಆದರೆ, ರಿಟರ್ನ್ಸ್ ಸಲ್ಲಿಸಬೇಕಿದೆ. ಹೀಗಾಗಿ ನಿಮ್ಮ ಷೇರು- ಮ್ಯೂಚುವಲ್ ಫಂಡ್‌ಗಳ ಖರೀದಿ ಮಾಹಿತಿ ನಿಖರವಾಗಿ ಪಡೆದುಕೊಂಡು ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ನೈಜ ಲಾಭದ ಬಗ್ಗೆ ತಿಳಿದು ಮುಂದಿನ ವರ್ಷ ಸಕಾಲದಲ್ಲಿ ರಿಟರ್ನ್ಸ್ ಸಲ್ಲಿಸಿ.

ಷೇರುಗಳನ್ನು ಕುಟುಂಬದ ಸದಸ್ಯರಿಗೆ ಉಡುಗೊರೆ ರೂಪದಲ್ಲಿ ಹಸ್ತಾಂತರಿಸುವುದು ತೆರಿಗೆ ಪರಿಧಿಯಲ್ಲಿ ಬರುವುದಿಲ್ಲ. ಉದಾಹರಣೆಗೆ ಪತ್ನಿ, ಮಕ್ಕಳು, ತಂದೆ- ತಾಯಿ, ಅಣ್ಣ- ತಮ್ಮ, ಅಕ್ಕ- ತಂಗಿ ಹೀಗೆ ಇನ್ನೂ ಕೆಲವು ನಿರ್ದಿಷ್ಟ ವರ್ಗದ ಮಂದಿಗೆ ಆರ್ಥಿಕ ಮೌಲ್ಯ ಇರುವ ಆಸ್ತಿಗಳನ್ನು ಹಸ್ತಾಂತರಿಸಿದರೆ ಆ ಸಂದರ್ಭದಲ್ಲಿ ತೆರಿಗೆಗೊಳಪಡುವುದಿಲ್ಲ. ಆದರೆ, ಅವರು ತದನಂತರ ಮಾರಾಟ ಮಾಡಿದಾಗ ಬರುವ ಲಾಭ, ನಷ್ಟವನ್ನು ಅವರ ರಿಟರ್ನ್ಸ್‌ನಲ್ಲಿ ಸೇರ್ಪಡೆಗೊಳಿಸಬೇಕಾಗುತ್ತದೆ. ಅವರು ಸ್ವತಂತ್ರವಾಗಿ ತಮ್ಮ ಆದಾಯಕ್ಕೆ ತೆರಿಗೆ ಪಾವತಿಸಬೇಕು.

ಅವರು ಈಗಾಗಲೇ ಆದಾಯ ತೆರಿಗೆ ಮಿತಿಯೊಳಗಿದ್ದರೆ ಯಾವುದೇ ತೆರಿಗೆ ಅನ್ವಯವಾಗದಿರುವ ಸಾಧ್ಯತೆ ಇದೆ. ಇಂತಹ ಲಾಭ, ನಷ್ಟ ಲೆಕ್ಕ ಹಾಕುವಾಗ ನೀವು ಈಗಾಗಲೇ ಯಾವ ಮೌಲ್ಯಕ್ಕೆ ಖರೀದಿಸಿರುತ್ತೀರೋ ಆ ಮೌಲ್ಯವೇ ಮುಂದೆ ಅವರ ಅಸಲು ಮೌಲ್ಯವಾಗಿರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

'ಎಟಿಎಂನಲ್ಲಿ ₹100, ₹200 ನೋಟು ಲಭ್ಯವಾಗಲಿ'

ಮುಂಬೈ (ಪಿಟಿಐ): ಎಟಿಎಂಗಳಲ್ಲಿ ₹100 ಮತ್ತು ₹200 ಮುಖಬೆಲೆಯ ನೋಟುಗಳು ಗ್ರಾಹಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುವಂತೆ ಬ್ಯಾಂಕ್‌ಗಳು ಕ್ರಮವಹಿಸಬೇಕಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ದೇಶನ ನೀಡಿದೆ.

ಬ್ಯಾಂಕ್‌ಗಳು ಮತ್ತು ಎಟಿಎಂಗಳನ್ನು ನಿರ್ವಹಣೆ ಮಾಡುವ ಸಂಸ್ಥೆಗಳು ಹಂತ ಹಂತವಾಗಿ ಈ ಬಗ್ಗೆ ಕ್ರಮವಹಿಸಬೇಕಿದೆ. ಗ್ರಾಹಕರಿಗೆ ತೊಂದರೆಯಾಗದಂತೆ ಎಚ್ಚರವಹಿಸಬೇಕಿದೆ ಎಂದು ಹೇಳಿದೆ.

ಎಟಿಎಂಗಳಲ್ಲಿ ಅಳವಡಿಸಿರುವ ಕ್ಯಾಸೆಟ್‌ಗಳ (ಹಣ ಸಂಗ್ರಹಿಸಲು ಬಳಸುವ ಪೆಟ್ಟಿಗೆ) ಪೈಕಿ ಒಂದು ಕ್ಯಾಸೆಟ್‌ನಲ್ಲಿ ₹100 ಮತ್ತು ₹200 ಮುಖಬೆಲೆಯ ನೋಟುಗಳು ಇರುವಂತೆ ನೋಡಿಕೊಳ್ಳಬೇಕು. ಸೆಪ್ಟೆಂಬರ್ 30ರೊಳಗೆ ಹಾಲಿ ಇರುವ ಎಟಿಎಂಗಳ ಪೈಕಿ ಶೇ 75ರಷ್ಟರಲ್ಲಿ ಈ ನಿಯಮ ಪಾಲಿಸಬೇಕು. 2026ರ ಮಾರ್ಚ್ 31ರೊಳಗೆ ಶೇ 90ರಷ್ಟು ಎಟಿಎಂಗಳಲ್ಲಿ ಈ ನಿಯಮವನ್ನು ಜಾರಿಗೊಳಿಸಬೇಕಿದೆ ಎಂದು ಸೂಚಿಸಿದೆ.

ರಾಜ್ಯಗಳ ಅಭಿವೃದ್ಧಿ ಸಾಮರ್ಥ್ಯ: ಕೇರ್‌ಎಡ್ಜ್ ವರದಿ ಪ್ರಕಟ

ಕರ್ನಾಟಕಕ್ಕೆ ಮೂರನೇ ಸ್ಥಾನ

ಕೋಲ್ಕತ್ತ (ಪಿಟಿಐ): ರಾಜ್ಯಗಳ ಅಭಿವೃದ್ಧಿ ಸಾಮರ್ಥ್ಯ ಆಧಾರದ ಮೇಲೆ ಕ್ರೆಡಿಟ್ ರೇಟಿಂಗ್ ಏಜೆನ್ಸಿಯಾದ ಕೇರ್‌ಎಡ್ಜ್ ರೇಟಿಂಗ್ಸ್ ಸಿದ್ಧಪಡಿಸಿರುವ ಶ್ರೇಯಾಂಕ ಪಟ್ಟಿಯಲ್ಲಿ ಕರ್ನಾಟಕವು ಮೂರನೇ ಸ್ಥಾನ ಪಡೆದಿದೆ.

ನೆರೆಯ ಮಹಾರಾಷ್ಟ್ರವು ಅಗ್ರಸ್ಥಾನದಲ್ಲಿದ್ದರೆ, ಆ ನಂತರದ ಸ್ಥಾನದಲ್ಲಿ ಗುಜರಾತ್ ಮತ್ತು ಕರ್ನಾಟಕ ಇದೆ.

ಆರ್ಥಿಕತೆ, ಹಣಕಾಸು, ಮೂಲಸೌಕರ್ಯ, ಹಣಕಾಸು ಅಭಿವೃದ್ಧಿ, ಸಾಮಾಜಿಕ ಸ್ಥಿತಿ, ಆಡಳಿತ ಮತ್ತು ಪರಿಸರ ಅಭಿವೃದ್ಧಿ ವಿಷಯದ ಮೇಲಿನ 50 ಮಾನದಂಡಗಳನ್ನು ಈ ಪಟ್ಟಿಗೆ ಅಳತೆಗೋಲಾಗಿ ಪರಿಗಣಿಸಲಾಗಿದೆ. ಇದರಲ್ಲಿ ತೋರಿರುವ ಸಾಮರ್ಥ್ಯದ ಆಧಾರದ ಮೇಲೆ ದೇಶದ 17 ರಾಜ್ಯಗಳ ಶ್ರೇಯಾಂಕ ಪಟ್ಟಿಯನ್ನು ಸಿದ್ಧಪಡಿಸಿದೆ.

ಪಶ್ಚಿಮ ಮತ್ತು ದಕ್ಷಿಣ ಭಾಗದ ರಾಜ್ಯಗಳು ಮೊದಲ ಐದು ಸ್ಥಾನಗಳಲ್ಲಿ ಇವೆ. ಆರ್ಥಿಕತೆ ಹಾಗೂ ಹಣಕಾಸು ಅಭಿವೃದ್ಧಿಯು ಪಶ್ಚಿಮ ಭಾಗದ ರಾಜ್ಯಗಳ ಆಧಾರಸ್ತಂಭವಾಗಿದೆ. ಆರ್ಥಿಕತೆ, ಹಣಕಾಸು ಅಭಿವೃದ್ಧಿ, ಪರಿಸರ ಮತ್ತು ಉತ್ತಮ ಆಡಳಿತವು ದಕ್ಷಿಣದ ರಾಜ್ಯಗಳ ಆಧಾರಸ್ತಂಭವಾಗಿದೆ ಎಂದು ವರದಿ ವಿವರಿಸಿದೆ.

ಕೇರ್‌ಎಡ್ಜ್ ಸಿದ್ಧಪಡಿಸಿರುವ ಶ್ರೇಯಾಂಕದಲ್ಲಿ ಸಂಯೋಜಿತವಾಗಿ ಒಟ್ಟು 56.5 ಅಂಕ ಪಡೆದಿರುವ ಮಹಾರಾಷ್ಟ್ರ ಅಗ್ರಸ್ಥಾನ ಗಿಟ್ಟಿಸಿಕೊಂಡಿದೆ. ಈ ರಾಜ್ಯವು ಹಣಕಾಸು ನಿರ್ವಹಣೆ, ಹಣಕಾಸು ಅಭಿವೃದ್ಧಿ, ಆಡಳಿತ ಮತ್ತು ಸಾಮಾಜಿಕ ಅಭಿವೃದ್ಧಿ ವಿಷಯದಲ್ಲಿ ಉತ್ತಮ ಸಾಧನೆ ತೋರಿದೆ.

ಆಡಳಿತ ನಿರ್ವಹಣೆಯಲ್ಲಿ ಪಶ್ಚಿಮ ಬಂಗಾಳವು 46.5 ಅಂಕ ಪಡೆದಿದ್ದು, ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆಯಿದೆ. ಪೊಲೀಸ್ ವ್ಯವಸ್ಥೆಯ ಸದೃಢತೆ, ಶಿಕ್ಷೆ ಪ್ರಮಾಣ ಮತ್ತು ಇ–ಆಡಳಿತದ ನಿರ್ವಹಣೆಗೆ ಸಂಬಂಧಿಸಿದ ಮಾನದಂಡಗಳಲ್ಲಿ ಕಡಿಮೆ ಸಾಮರ್ಥ್ಯ ತೋರಿದೆ. ಈ ವಿಷಯಗಳಲ್ಲಿ ತಮಿಳುನಾಡು (64.6), ಕರ್ನಾಟಕ (64.5) ಮತ್ತು ಮಧ್ಯಪ್ರದೇಶ (66.3) ಉತ್ತಮ ಸಾಮರ್ಥ್ಯ ತೋರಿವೆ.

ಜಾರ್ಖಂಡ್ ಮತ್ತು ಬಿಹಾರ ಕ್ರಮವಾಗಿ 36 ಅಂಕ ಮತ್ತು 34.8 ಅಂಕ ಪಡೆಯುವ ಮೂಲಕ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿವೆ.

ಸಣ್ಣ ಮತ್ತು ಈಶಾನ್ಯ ರಾಜ್ಯಗಳ ಪೈಕಿ ಗೋವಾ 62.1 ಅಂಕ ಪಡೆಯುವ ಮೂಲಕ ಮೊದಲ ಸ್ಥಾನದಲ್ಲಿದೆ. ಆ ನಂತರದ ಸ್ಥಾನದಲ್ಲಿ ಉತ್ತರಾಖಂಡ ಮತ್ತು ಸಿಕ್ಕಿಂ ಇದೆ.

'2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪಟ್ಟಿಗೆ ಸೇರ್ಪಡೆಗೊಳಿಸಲು ಕೇಂದ್ರ ಸರ್ಕಾರವು ಗುರಿ ಹೊಂದಿದೆ. ಸರ್ಕಾರದ ವಿಕಸಿತ ಭಾರತದ ಆಶಯ ಈಡೇರಿಕೆಯಲ್ಲಿ ಈ ರಾಜ್ಯಗಳ ಪಾಲು ದೊಡ್ಡದಿದೆ' ಎಂದು ಕೇರ್‌ಎಡ್ಜ್ ರೇಟಿಂಗ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮೆಹುಲ್ ಪಾಂಡ್ಯ ಹೇಳಿದ್ದಾರೆ.

ಸಮುದ್ರ ಮೀನುಗಾರಿಕೆ ಗಣತಿಗೆ ಚಾಲನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 5ನೇ ಸಮುದ್ರ ಮೀನುಗಾರಿಕೆ ಗಣತಿಗೆ ಚಾಲನೆ ನೀಡಿದೆ. ಈ ಬಾರಿ ಮೊಬೈಲ್ ಆ್ಯಪ್ ಮೂಲಕ ದೇಶದಲ್ಲಿರುವ 12 ಲಕ್ಷ ಮೀನುಗಾರರ ಕುಟುಂಬಗಳ ದತ್ತಾಂಶ ಸಂಗ್ರಹಿಸಲು ನಿರ್ಧರಿಸಿದೆ.

ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆಯು (ಸಿಎಂಎಫ್‌ಆರ್‌ಐ) ನೋಡಲ್ ಏಜೆನ್ಸಿಯಾಗಿದೆ. ಕರಾವಳಿ ತೀರ ಪ್ರದೇಶ ಹೊಂದಿರುವ 9 ರಾಜ್ಯಗಳಲ್ಲಿ ಗಣತಿ ನಡೆಯಲಿದೆ. ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯದೊಳಗೆ ಗಣತಿ ಪೂರ್ಣಗೊಳ್ಳಲಿದೆ.

ಐಸಿಎಆರ್– ಸಿಎಂಎಫ್‌ಆರ್‌ಐನಿಂದ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಪರಿಣಾಕಾರಿ ಮತ್ತು ಪಾರದರ್ಶಕವಾಗಿ ದತ್ತಾಂಶ ಸಂಗ್ರಹಿಸಲು ಇದರಿಂದ ನೆರವಾಗಲಿದೆ ಎಂದು ತಿಳಿಸಿದೆ.

ಮೇ ಮತ್ತು ಜೂನ್‌ನಲ್ಲಿ ಮೀನುಗಾರರ ಕುಟುಂಬಗಳು ವಾಸಿಸುವ ಗ್ರಾಮಗಳ ಗಣತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಬಳಿಕ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಕುಟುಂಬಗಳ ದತ್ತಾಂಶ ಸಂಗ್ರಹಿಸಲಾಗುವುದು ಎಂದಿದೆ.

ಭೌತಿಕ ರೂಪದಲ್ಲಿ ಮಾಹಿತಿ ಸಂಗ್ರಹದ ವೇಳೆ ಆಗುವ ಲೋಪದೋಷ ತಪ್ಪಿಸಲು ಆ್ಯಪ್ ಅನ್ನು ವಿನ್ಯಾಸಗೊಳಿಸಲಾಗಿದೆ. ದೇಶದಲ್ಲಿ ಮೀನುಗಾರರ ಕುಟುಂಬಗಳಿಗೆ ಅಗತ್ಯವಿರುವ ಯೋಜನೆ ರೂಪಿಸಲು ಮತ್ತು ಅಗತ್ಯ ಸೌಲಭ್ಯ ಕಲ್ಪಿಸಲು ಈ ಗಣತಿ ನೆರವಾಗಲಿದೆ ಎಂದು ತಿಳಿಸಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹10000-16600
ಬೆಂಗಳೂರು	₹20000-21500
ದಾವಣಗೆರೆ	₹12800-12800
ಪುತ್ತೂರು	₹11000-17500

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1275 (1290)
ಸೂರ್ಯಕಾಂತಿ (ರಿಫೈನ್ಡ್)	₹1380 (1385)
ಪಾಮೋಲಿನ್	₹1250 (1255)

ಅಡಿಕೆ ಧಾರಣೆ (₹ಗಳಲ್ಲಿ)

ಪುತ್ತೂರು	
ಕೋಕ	25000-30000
ಹೊಸತು	26000-46000
ಸಾಗರ	
ಬಿಳಿಗೋಟು	16214-26600
ಚಾಲಿ	34699-38610
ಕೋಕ	8700-23099
ಕೆಂಪುಗೋಟು	15989-30209
ರಾಶಿ	22989-55229
ಶಿವಮೊಗ್ಗ	
ಬೆಟ್ಟೆ	50910-60589
ಗೊರಬಲು	18211-34869
ರಾಶಿ	48006-58009
ಸರಕು	59450-97540
ಸಿದ್ದಾಪುರ	
ಬಿಳಿಗೋಟು	20099-32580
ಚಾಲಿ	34089-41899
ಕೋಕ	10669-24619
ಕೆಂಪುಗೋಟು	18099-22388
ರಾಶಿ	38089-50169
ತಟ್ಟಿಬೆಟ್ಟೆ	26300-43099
ಶಿರಸಿ	
ಬೆಟ್ಟೆ	29899-40399
ಬಿಳಿಗೋಟು	20000-32899
ಚಾಲಿ	35198-43618
ಕೆಂಪುಗೋಟು	16699-23699
ರಾಶಿ	41169-49889
ಯಲ್ಲಾಪುರ	
ಅಪಿ	56599-64421
ಬಿಳಿಗೋಟು	14899-34899
ಚಾಲಿ	35600-44011
ಕೋಕ	6899-18899
ಕೆಂಪುಗೋಟು	15299-27012
ರಾಶಿ	40921-55109
ತಟ್ಟಿಬೆಟ್ಟೆ	27369-38921

ಕ್ರೆಡೈ ಅಧ್ಯಕ್ಷರಾಗಿ ಭಾಸ್ಕರ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಭಾಸ್ಕರ್ ಟಿ ನಾಗೇಂದ್ರಪ್ಪ

ಬೆಂಗಳೂರು: ಕಾನ್ಫೆಡರೇಶನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ಸ್ ಆಫ್ ಇಂಡಿಯಾ (ಕ್ರೆಡೈ) ಕರ್ನಾಟಕ ಘಟಕದ ಅಧ್ಯಕ್ಷರಾಗಿ (2025-26ರವರೆಗೆ) ಭಾಸ್ಕರ್ ಟಿ. ನಾಗೇಂದ್ರಪ್ಪ ಅವರು ಅಧಿಕಾರ ಸ್ವೀಕರಿಸಿದರು.

ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಭಾಸ್ಕರ್ ಅವರಿಗೆ ಹಿಂದಿನ ಅಧ್ಯಕ್ಷ ಪ್ರದೀಪ್ ಡಿ. ರಾಯಕರ್ ಅಧಿಕಾರ ಹಸ್ತಾಂತರಿಸಿದರು.

ಭಾಸ್ಕರ್ ಅವರು ಕ್ರೆಡೈ ಬೆಂಗಳೂರು ಘಟಕದ ಅಧ್ಯಕ್ಷರಾಗಿ (2021-2023) ಮತ್ತು ಕ್ರೆಡೈ ಕರ್ನಾಟಕ ಘಟಕದ ನಾಮನಿರ್ದೇಶಿತ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಪದಾಧಿಕಾರಿಗಳು: ಉದಯ ಶಂಕರ ಶೆಟ್ಟಿ (ಉಪಾಧ್ಯಕ್ಷ–ಉತ್ತರ), ಡಿ. ಶ್ರೀಹರಿ (ಉಪಾಧ್ಯಕ್ಷ– ದಕ್ಷಿಣ), ಮಹಾವೀರ ಎಸ್. ಮೆಹತಾ (ಕಾರ್ಯದರ್ಶಿ), ಮಮತಾ ಭರಕ್ತಿಯ (ಜಂಟಿ ಕಾರ್ಯದರ್ಶಿ), ಪಂಚಾಕ್ಷರಿ ಎಸ್. ಹಿರೇಮಠ (ಜಂಟಿ ಕಾರ್ಯದರ್ಶಿ–ಉತ್ತರ), ಅರುಣ್ ಪಂಡಿತ ಎಲ್. (ಜಂಟಿ ಕಾರ್ಯದರ್ಶಿ–ದಕ್ಷಿಣ), ಧನರಾಜ ತಲಂಪಳ್ಳಿ (ಖಜಾಂಚಿ).

ಕೆನಡಾ: ಕಾಣೆಯಾಗಿದ್ದ ಭಾರತದ ವಿದ್ಯಾರ್ಥಿನಿ ಶವವಾಗಿ ಪತ್ತೆ

ವಂಶಿಕಾ ಸೈನಿ

ಒಟ್ಟಾವಾ (ಪಿಟಿಐ): 'ಮೂರು ದಿನಗಳ ಹಿಂದೆ ನಾಪತ್ತೆ ಆಗಿದ್ದ 21 ವರ್ಷದ, ಭಾರತದ ವಿದ್ಯಾರ್ಥಿನಿ ವಂಶಿಕಾ ಸೈನಿ ಅವರ ಮೃತದೇಹವು ಕೆನಡಾದ ಒಂಟಾರಿಯೊ ಪ್ರಾಂತ್ಯದಲ್ಲಿ ಪತ್ತೆಯಾಗಿದೆ' ಎಂದು ಇಲ್ಲಿನ ಅಧಿಕಾರಿಗಳು ದೃಢಪಡಿಸಿದ್ದಾರೆ.

ವಂಶಿಕಾ ಮೃತಪಟ್ಟಿರುವುದನ್ನು ಒಟ್ಟಾವಾದಲ್ಲಿರುವ ಭಾರತೀಯ ಹೈ ಕಮಿಷನ್ ಕಚೇರಿ 'ಎಕ್ಸ್'ನಲ್ಲಿ ಖಚಿತಪಡಿಸಿದೆ.

'ವಂಶಿಕಾ ಮೃತಪಟ್ಟಿರುವುದನ್ನು ತಿಳಿಸಲು ತೀವ್ರ ಬೇಸರವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸುತ್ತಿದ್ದು, ಪ್ರಕರಣ ತನಿಖೆಯಲ್ಲಿದೆ' ಎಂದು ತಿಳಿಸಿದೆ.

'ಒಟ್ಟಾವಾದ ಮೆಜೆಸ್ಟಿಕ್ ಡ್ರೈವ್‌ನ ಬಾಡಿಗೆ ಕೊಠಡಿಯೊಂದರಲ್ಲಿ ವಾಸವಾಗಿದ್ದ ವಂಶಿಕಾ ಅವರು ಕಳೆದ ಶುಕ್ರವಾರ ರಾತ್ರಿ 8ರಿಂದ 9 ಗಂಟೆ ಸುಮಾರಿಗೆ ಮನೆ ಬಿಟ್ಟು ಹೊರಟಿದ್ದರು. ರಾತ್ರಿ 11.40ರ ವೇಳೆಗೆ ಅವರ ಮೊಬೈಲ್ ಸ್ವಿಚ್‌ಆಫ್ ಆಗಿತ್ತು. ಮರುದಿನ ನಡೆದ ಅತ್ಯಂತ ಮುಖ್ಯವಾದ ಪರೀಕ್ಷೆಗೂ ಗೈರಾಗಿದ್ದರು' ಎಂದು ಇಂಡಿಯಾ– ಕೆನಡಿಯನ್ ಒಕ್ಕೂಟವು ತನ್ನ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.

'ಇದಾದ ಬಳಿಕ ಅವರನ್ನು ಸಂಪರ್ಕಿಸಲು ನಿರಂತರ ಪ್ರಯತ್ನಿಸಲಾಯಿತು. ಯಾವುದೇ ಮಾಹಿತಿ ಸಿಕ್ಕರೂ ಸ್ಥಳೀಯ ಸಮುದಾಯ ಸಂಘಟನೆಗಳನ್ನು ಸಂಪರ್ಕಿಸುವಂತೆ ಕೋರಲಾಗಿತ್ತು' ಎಂದು ಭಾರತೀಯ ಹೈ ಕಮಿಷನ್ ಕೂಡ 'ಎಕ್ಸ್'ನಲ್ಲಿ ತಿಳಿಸಿತ್ತು.

ವಂಶಿಕಾ ಅವರು ಚಂಡೀಗಢದ ದೇರಾ ಬಸ್ಸಿಯ ನಿವಾಸಿ. ಪಂಜಾಬ್‌ನ ಆಮ್‌ಆದ್ಮಿ ಪಕ್ಷದ ಮುಖಂಡ ದೇವಿಂದರ್ ಸಿಂಗ್ ಅವರ ಪುತ್ರಿ.

ಮಧುಬಲೆ ಪ್ರಕರಣದಲ್ಲಿ ಸಚಿವ ಕೆ.ಎನ್. ರಾಜಣ್ಣ ವಿಚಾರಣೆ

'ನೀಲಿ ಬಟ್ಟೆ ತೊಟ್ಟಿದ್ದಳು... ಹುಡುಕಿ'

ಪ್ರಜಾವಾಣಿ ವಾರ್ತೆ

ಕೆ.ಎನ್.ರಾಜಣ್ಣ

ಬೆಂಗಳೂರು: 'ಅಸಭ್ಯವಾಗಿ ವರ್ತಿಸಿದ ಯುವತಿ ನೀಲಿ ಬಟ್ಟೆ ಧರಿಸಿದ್ದಳು. ನೀವು (ಸಿಐಡಿ) ಹುಡುಕಿದರೆ ಆಕೆ ಸಿಗಬಹುದು...'

–ಮಧುಬಲೆ (ಹನಿಟ್ರ್ಯಾಪ್) ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಸಿಐಡಿ ಅಧಿಕಾರಿಗಳ ಎದುರು ಈ ರೀತಿ ಹೇಳಿಕೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೂಚನೆ ಮೇರೆಗೆ ಮಧುಬಲೆ ಪ್ರಕರಣದ ವಿಚಾರಣೆಯನ್ನು ಸಿಐಡಿ ಅಧಿಕಾರಿಗಳು ನಡೆಸುತ್ತಿದ್ದು, ನಾಲ್ಕು ದಿನಗಳ ಹಿಂದೆ ಇಲ್ಲಿನ ಜಯಮಹಲ್ ರಸ್ತೆಯಲ್ಲಿ ಸಚಿವರ ನಿವಾಸಕ್ಕೆ ತನಿಖಾಧಿಕಾರಿಗಳು ಭೇಟಿ ನೀಡಿ, ಸಚಿವರಿಂದ ಮಾಹಿತಿ ಕಲೆಹಾಕಿದ್ದಾರೆ.

'ಪ್ರಮುಖ ವಿಚಾರವನ್ನು ಮಾತನಾಡುವುದಾಗಿ ಹೇಳಿಕೊಂಡು ಮನೆಗೆ ಬಂದಿದ್ದಳು. ಪ್ರಮುಖ ವಿಚಾರ ಎಂದಾಗ ಕ್ಯಾಬಿನ್ ಒಳಗೆ ಕರೆದೊಯ್ದು ಮಾತನಾಡಿಸಿದ್ದೆ. ಆಗ ನನ್ನ ಕೈಹಿಡಿದು ಎಳೆಯಲು ಪ್ರಯತ್ನಿಸಿದ್ದಳು. ಅಸಭ್ಯವಾಗಿ ವರ್ತಿಸಿದ್ದಳು. ಆಗ ಕೆನ್ನೆಗೆ ಹೊಡೆದು ಕಳುಹಿಸಿದ್ದೆ. ಆಕೆಯ ಮುಖ ಪರಿಚಯ ಇಲ್ಲ ಎಂಬುದಾಗಿ ಸಚಿವರು ಹೇಳಿಕೆ ಕೊಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

ಗಡ್ಡಧಾರಿ ವ್ಯಕ್ತಿ: 'ಜಯಮಹಲ್‌ನಲ್ಲಿರುವ ಸರ್ಕಾರಿ ನಿವಾಸಕ್ಕೆ ಎರಡು ಬಾರಿ ಬೇರೆ ಬೇರೆ ಯುವತಿಯರು ಬಂದಿದ್ದರು. ಇಬ್ಬರ ಪರಿಚಯವೂ ಇಲ್ಲ. ಅವರ ಜತೆಗೆ ಗಡ್ಡಧಾರಿ ವ್ಯಕ್ತಿ ಬಂದಿದ್ದರು. ಘಟನೆ ನಡೆದ ದಿನ ಮನೆಯಲ್ಲಿ ಕಾರ್ಯಕರ್ತರು ಹಾಗೂ ಮುಖಂಡರು ಇದ್ದರು. ಘಟನೆ ನಡೆದ ದಿನ ಯಾವುದು ಎಂಬ ಮಾಹಿತಿ ಇಲ್ಲ' ಎಂದು ಹೇಳಿಕೆ ನೀಡಿದ್ದಾರೆ.

ಭದ್ರತಾ ಸಿಬ್ಬಂದಿಯ ವಿಚಾರಣೆ: ಮಾರ್ಚ್ 31ರಂದು ರಾಜಣ್ಣ ಅವರ ಆಪ್ತ ಸಹಾಯಕ (ಪಿ.ಎ), ಇಬ್ಬರು ಅಂಗರಕ್ಷಕರನ್ನು ವಿಚಾರಣೆಗೆ ಒಳಪಡಿಸಿ ಪ್ರಕರಣದ ಕುರಿತು ಮಾಹಿತಿ ಪಡೆದುಕೊಳ್ಳಲಾಗಿದೆ. ಜತೆಗೆ ಡೈರಿಯಲ್ಲಿ ನಮೂದಿಸಿದ್ದ ಮೊಬೈಲ್ ಫೋನ್ ಸಂಖ್ಯೆಗಳನ್ನು ಪಡೆದು ಸಚಿವರ ಮನೆಗೆ ಬಂದಿದ್ದವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶೀಘ್ರದಲ್ಲೇ ವರದಿ ಸಲ್ಲಿಕೆ?: 'ಗೃಹ ಸಚಿವ ಜಿ.ಪರಮೇಶ್ವರ ಹಾಗೂ ಅಲೋಕ್ ಮೋಹನ್ ಅವರ ಸೂಚನೆ ಮೇರೆಗೆ ತನಿಖೆ ನಡೆಯುತ್ತಿದೆ. ಸದ್ಯದಲ್ಲೇ ತನಿಖೆ ಪೂರ್ಣಗೊಳಿಸಿ ಇಬ್ಬರಿಗೂ ವರದಿ ಸಲ್ಲಿಸಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಕೆನಡಾ ಚುನಾವಣೆ: ಕಾರ್ನೇ ಪಕ್ಷಕ್ಕೆ ಜಯ

ಟೊರೊಂಟೊ (ಎಪಿ): ಕೆನಡಾದಲ್ಲಿ ನಡೆದ ಚುನಾವಣೆಯಲ್ಲಿ ಪ್ರಧಾನಿ ಮಾರ್ಕ್ ಕಾರ್ನೇ ನೇತೃತ್ವದ ಲಿಬರಲ್ ಪಕ್ಷವು ಗೆಲುವು ಸಾಧಿಸಿದೆ.

ಕಾರ್ನೇ ಪ್ರತಿಸ್ಪರ್ಧಿ ಪಾಪ್ಯುಲಿಸ್ಟ್, ಕನ್ಸರ್ವೇಟಿವ್ ಪಕ್ಷದ ನಾಯಕ ಪಿಯೆರಿ ಪೊಯ್‌ಲಿವರ್ ಅವರು ಒಟ್ಟಾವಾ ಕ್ಷೇತ್ರದಲ್ಲಿ ಪರಾಭವಗೊಂಡಿದ್ದಾರೆ.

ಸಂಸತ್ತಿನ 343 ಕ್ಷೇತ್ರಗಳ ಪೈಕಿ ಬಹುತೇಕ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದಾಗಿ ಲಿಬರಲ್ ಪಕ್ಷವು ವಿಶ್ವಾಸ ವ್ಯಕ್ತಪಡಿಸಿತ್ತು. ಬಹುಮತಕ್ಕೆ ಬೇಕಾಗಿರುವ 172 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆಯೇ ಅಥವಾ ಸರ್ಕಾರ ಸ್ಥಾಪನೆಗೆ ಸಣ್ಣ ಪಕ್ಷಗಳ ನೆರವು ಪಡೆಯಲಿದೆಯೇ ಎಂಬುದು ತಕ್ಷಣಕ್ಕೆ ಖಚಿತವಾಗಿಲ್ಲ.

ಅಮೆರಿಕದಿಂದ ವಂಚನೆ: ವಿಜಯೋತ್ಸವದಲ್ಲಿ ಮಾತನಾಡಿದ ಕಾರ್ನೇ ಅವರು, ಅಮೆರಿಕದ ಬೆದರಿಕೆಗಳನ್ನು ಎದುರಿಸಲು ಒಗ್ಗಟ್ಟಿನಿಂದ ಇರಬೇಕಾದ ಮಹತ್ವವನ್ನು ಒತ್ತಿ ಹೇಳಿದರು.

ಅಮೆರಿಕಕ್ಕೆ ನಮ್ಮ ಭೂಮಿ, ಸಂಪನ್ಮೂಲ, ನೀರು, ದೇಶ ಬೇಕಿದೆ. ಟ್ರಂಪ್ ನಮ್ಮ ಒಗ್ಗಟ್ಟನ್ನು ಮುರಿಯಲು ಯತ್ನಿಸುತ್ತಿದ್ದಾರೆ. ಆದರೆ ಅದು ಎಂದೆಂದಿಗೂ ಸಾಧ್ಯವಿಲ್ಲ

ಮಾರ್ಕ್ ಕಾರ್ನೇ, ಕೆನಡಾ ಪ್ರಧಾನಿ

'ಎರಡನೇ ವಿಶ್ವ ಯುದ್ಧದಿಂದ ಅಮೆರಿಕ ಮತ್ತು ಕೆನಡಾ ಪಾಲಿಸುತ್ತಿದ್ದ ಪರಸ್ಪರ ಅನುಕೂಲ ವ್ಯವಸ್ಥೆಯು ಅಂತ್ಯಗೊಂಡಿದೆ. ಅಮೆರಿಕದ ವಂಚನೆಯಿಂದ ಆಘಾತಕ್ಕೊಳಗಾಗಿದ್ದೇವೆ, ಆದರೆ ಅದರಿಂದ ನಾವು ಪಾಠ ಕಲಿಯಬೇಕಿದೆ' ಎಂದರು.

ಪಾಕ್ ವಿರುದ್ಧ ವಿಶ್ವಸಂಸ್ಥೆಯಲ್ಲಿ ಭಾರತ ಕಿಡಿ

'ಉಗ್ರರಿಗೆ ಹಾಲೆರೆವ ಪುಂಡ ದೇಶ'

ವಿಶ್ವಸಂಸ್ಥೆ (ಪಿಟಿಐ): ಪಾಕಿಸ್ತಾನವು ಭಯೋತ್ಪಾದಕ ಸಂಘಟನೆಗಳಿಗೆ ಹಣದ ನೆರವು ನೀಡಿದ್ದನ್ನು, ಬೆಂಬಲ ಒದಗಿಸಿದ್ದನ್ನು ಅಲ್ಲಿನ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅವರು ಬಹಿರಂಗವಾಗಿ ಒಪ್ಪಿಕೊಂಡಿರುವುದು ಅದು ಜಾಗತಿಕ ಭಯೋತ್ಪಾದನೆಗೆ ಹಾಲೆರೆಯುವ, ಪ್ರಾದೇಶಿಕ ಅಸ್ಥಿರತೆ ಉಂಟುಮಾಡುವ 'ಪುಂಡ ದೇಶ' ಎಂಬುದನ್ನು ತೋರಿಸುತ್ತಿದೆ ಎಂದು ಭಾರತ ಹೇಳಿದೆ.

ವಿಶ್ವಸಂಸ್ಥೆಯ ಭಯೋತ್ಪಾದನಾ ವಿರೋಧಿ ಕಚೇರಿಯ 'ಭಯೋತ್ಪಾದನೆಯ ಸಂತ್ರಸ್ತರ ಒಕ್ಕೂಟ ಜಾಲ'ಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ವಿಶ್ವಸಂಸ್ಥೆಯಲ್ಲಿನ ಭಾರತ ಉಪ ಶಾಶ್ವತ ಪ್ರತಿನಿಧಿ ಯೋಜ್ನಾ ಪಟೇಲ್ ಅವರು ಈ ಮಾತು ಹೇಳಿದ್ದಾರೆ. ಪಾಕಿಸ್ತಾನದ ಪ್ರತಿನಿಧಿಯು ಪಹಲ್ಗಾಮ್ ದಾಳಿಯ ಬಗ್ಗೆ ಉಲ್ಲೇಖಿಸಿದಾಗ ಯೋಜ್ನಾ ಅವರು ತಿರುಗೇಟು ನೀಡಿದ್ದಾರೆ.

'ಭಯೋತ್ಪಾದಕ ಸಂಘಟನೆಗಳಿಗೆ ಬೆಂಬಲ ನೀಡಿದ, ತರಬೇತಿ ಒದಗಿಸಿದ, ಹಣಕಾಸಿನ ನೆರವು ಕೊಟ್ಟ ಇತಿಹಾಸ ಪಾಕಿಸ್ತಾನಕ್ಕೆ ಇದೆ ಎಂಬುದನ್ನು ಆಸಿಫ್ ಅವರು ಒಪ್ಪಿಕೊಂಡಿರುವುದನ್ನು ಇಡೀ ವಿಶ್ವ ಕೇಳಿಸಿಕೊಂಡಿದೆ' ಎಂದು ಯೋಜ್ನಾ ಹೇಳಿದ್ದಾರೆ.

'ನಾವು ಈ ಎಲ್ಲ ಕೊಳಕು ಕೆಲಸಗಳನ್ನು ಅಮೆರಿಕಕ್ಕಾಗಿ, ಬ್ರಿಟನ್ ಸೇರಿದಂತೆ ಪಾಶ್ಚಿಮಾತ್ಯರಿಗಾಗಿ ಮೂರು ದಶಕಗಳಿಂದ ಮಾಡುತ್ತಿದ್ದೇವೆ' ಎಂದು ಆಸಿಫ್ ಅವರು 'ಸ್ಕೈ ನ್ಯೂಸ್'ಗೆ ಹೇಳಿದ್ದಾರೆ.

ಪಹಲ್ಗಾಮ್ ದಾಳಿಯ ನಂತರದಲ್ಲಿ ಜಾಗತಿಕ ಸಮುದಾಯವು ಭಾರತಕ್ಕೆ ನೀಡಿದ ಬೆಂಬಲವು, ಭಯೋತ್ಪಾದನೆಯನ್ನು ಜಾಗತಿಕ ಸಮುದಾಯ ಸಹಿಸಿಕೊಳ್ಳುವುದಿಲ್ಲ ಎಂಬುದಕ್ಕೆ ಸಾಕ್ಷಿ ಎಂದೂ ಯೋಜ್ನಾ ಹೇಳಿದ್ದಾರೆ.

ಬಿಕ್ಕಟ್ಟು ತಿಳಿಗೊಳಿಸಲು ಗುಟೆರಸ್ ನೆರವು

ವಿಶ್ವಸಂಸ್ಥೆ (ಪಿಟಿಐ): 'ಭಾರತ ಮತ್ತು ಪಾಕಿಸ್ತಾನದ ನಡುವಿನ ಬಿಕ್ಕಟ್ಟನ್ನು ಶಮನಗೊಳಿಸಲು, ಮಾತುಕತೆಗಳನ್ನು ಪುನರಾರಂಭಿಸಲು ಎರಡೂ ದೇಶಗಳಿಗೆ ಒಪ್ಪಿಗೆಯಾಗುವ ಯಾವುದೇ ಕ್ರಮಕ್ಕೆ ಬೆಂಬಲ ಒದಗಿಸಲು ಸಿದ್ಧ' ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿರುವುದಾಗಿ ಅವರ ಕಚೇರಿ ತಿಳಿಸಿದೆ.

ಭಾರತ ಮತ್ತು ಪಾಕಿಸ್ತಾನದ ನಡುವಿನ ಈಗಿನ ಸ್ಥಿತಿಯ ವಿಚಾರವಾಗಿ ಗುಟೆರಸ್ ಅವರು ತೀವ್ರ ಕಳವಳ ಹೊಂದಿದ್ದಾರೆ. ಎರಡೂ ದೇಶಗಳು ಗರಿಷ್ಠ ಸಂಯಮ ಪ್ರದರ್ಶಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ ಎಂದು ಅವರ ಕಚೇರಿಯ ಹೇಳಿಕೆ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಶ್ರೀ ಶಕ್ತಿ ಹೆಲ್ತ್ ಕೇರ್, ಶೇಷಾದ್ರಿಪುರಂ ಬೆಂಗಳೂರು, ರಾಜ್ಯದಾದ್ಯಂತ ತೆರೆಯಲಿರುವ ನಮ್ಮ ಶಾಖೆಗಳಿಗೆ ಹೆಲ್ಪರಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 25000/- ಸಂಪರ್ಕಿಸಿ: 7349494852

ವೈಯಕ್ತಿಕ

Change of Name

I PUSPA RAI D/O Sarvadev Narayan Rai & W/O AJAY KUMAR residing at No. 22, Pushp, 4th Cross, Golden Retreat Enclave, Ashwath Nagar, Thanisandra, Bengaluru-560077, Karnataka have changed my name as 'PUSHPA KUMAR' sworn before notary D Rajanna, Bangalore vide affidavit dated 25.04.2025. Hereafter I shall be called PUSHPA KUMAR only.

ಭವಿಷ್ಯ

Astrology

★॥ನಂ.1.ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ ವಶೀಕರಣ ಸಂಭೋಗ ವಶೀಕರಣ ನೋಡುವ ಮೂಲಕ ಹೆಸರಿನ ಮೂಲಕ ಹನ್ನೊಂದು ಗಂಟೆಯಲ್ಲಿ ಶಾಶ್ವತ ಪರಿಹಾರ. ಪಂಡಿತ್. ಸಾಯಿಭಟ್. 9900222591

ಪ್ರವಾಸ

Travel

ಪ್ರತಿ ಶುಕ್ರವಾರದಿಂದ 3 ದಿನಗಳ ಪ್ರವಾಸ 6.6.2025 ಕೋನಾರ್ಕ ಭುವನೇಶ್ವರ್ ಗಾಯಿತ್ರಿ ಶಕ್ತಿಪೀಠ ಪುರಿಜಗನ್ನಾಥ್ ವಿಮಾನದಲ್ಲಿ ಪ್ರಯಾಣ. 9.6.2025 10ದಿನಗಳು ನೈಮಿಶಾರಣ್ಯ ಅಯೋಧ್ಯ ಪ್ರಯಾಗ್‌ರಾಜ್ ಗಯಾ,ಕಾಶಿ ವಾರಣಾಸಿ 30.5.2025ಚಾರ್‌ಧಾಮ್ ಪ್ರವಾಸ 28.6.2025 13ದಿನಗಳ ವೈಷ್ಣೋದೇವಿ ಕಾಶ್ಮೀರ್ ಗುಲ್ಮಾರ್ಗ ಸೋನಾಮಾರ್ಗ ಅಮರ್ನಾಥ್ ಅಮೃತ್‌ಸರ್ ಕುರುಕ್ಷೇತ್ರ ಸಂಪರ್ಕಿಸಿ ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು70 9342287551 9482239855

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
www.dhclassifieds.com BOOK NOW
@ 750/-* PER SQCM
SINGLE / DOUBLE / MULTIPLE COLUMN
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | +91 9731810277

ಡುಪ್ಲೆಸಿ ಅರ್ಧಶತಕ; ವರುಣ್ ಚಕ್ರವರ್ತಿಗೆ ಎರಡು ವಿಕೆಟ್ • ಡೆಲ್ಲಿ ಕ್ಯಾಪಿಟಲ್ಸ್‌ಗೆ ಸತತ ಎರಡನೇ ಸೋಲು

ಸುನಿಲ್ ಸ್ಪಿನ್; ನೈಟ್‌ರೈಡರ್ಸ್ ಜಯಭೇರಿ

ನವದೆಹಲಿ (ಪಿಟಿಐ): ಆಲ್‌ರೌಂಡರ್ ಸುನಿಲ್ ನಾರಾಯಣ್ ಅವರ ಅಮೋಘ ಬೌಲಿಂಗ್ ಬಲದಿಂದ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಇಲ್ಲಿ ನಡೆದ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ತಂಡವು 14 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಗೆದ್ದಿತು. 205 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ್ದ ಅತಿಥೇಯ ತಂಡಕ್ಕೆ ಸುನಿಲ್ (29ಕ್ಕೆ3) ಅಡ್ಡಿಯಾದರು. ಅವರ ಶಿಸ್ತಿನ ದಾಳಿಯಿಂದಾಗಿ ಡೆಲ್ಲಿ ತಂಡಕ್ಕೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 190 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಫಾಫ್ ಡುಪ್ಲೆಸಿ (62; 45ಎ, 4X7, 6X2), ಅಕ್ಷರ್ ಪಟೇಲ್ (43; 23ಎ, 4X4, 6X3) ಮತ್ತು ವಿಪ್ರಜ್ ನಿಗಮ್ (38; 19ಎ, 4X5, 6X2) ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡಿದರೂ ಡೆಲ್ಲಿ ತಂಡಕ್ಕೆ ಜಯ ಒಲಿಯಲಿಲ್ಲ.

ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ತಂಡವು ಅಗ್ರಕ್ರಮಾಂಕದ ಬ್ಯಾಟರ್‌ಗಳ ಸಂಘಟಿತ ಆಟದ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 204 ರನ್ ಗಳಿಸಿತು. ತಂಡದ ಯುವ ಬ್ಯಾಟರ್ ಅಂಗಕ್ರಿಷ್ ರಘುವಂಶಿ (44; 32ಎ, 4X3, 6X2) ಅವರು ಕೋಲ್ಕತ್ತ ತಂಡದಲ್ಲಿ ಗರಿಷ್ಠ ವೈಯಕ್ತಿಕ ಸ್ಕೋರ್ ಗಳಿಸಿದ ಆಟಗಾರನಾದರು. ಆರಂಭಿಕ ಬ್ಯಾಟರ್ ರೆಹಮಾನುಲ್ಲಾ ಗುರ್ಬಾಜ್ (26; 12ಎ, 4X5, 6X1) ಹಾಗೂ ಸುನಿಲ್ ನಾರಾಯಣ್ (27; 16ಎ, 4X2, 6X2) ಅವರು ಅಬ್ಬರದ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 48 ರನ್ ಸೇರಿಸಲು ಇವರಿಬ್ಬರೂ ಎದುರಿಸಿದ್ದು 18 ಎಸೆತಗಳನ್ನು ಮಾತ್ರ.

ವೇಗಿ ಮಿಚೆಲ್ ಸ್ಟಾರ್ಕ್ ಅವರು ಗುರ್ಬಾಜ್ ವಿಕೆಟ್ ಗಳಿಸುವ ಮೂಲಕ ಈ ಜೊತೆಯಾಟವನ್ನು ಮುರಿದರು. ಕ್ರೀಸ್‌ಗೆ ಬಂದ ನಾಯಕ ಅಜಿಂಕ್ಯ ರಹಾನೆ ಕೂಡ ಬೀಸಾಟವಾಡಿದರು. ಅವರು 14 ಎಸೆತಗಳಲ್ಲಿ 26 ರನ್ ಹೊಡೆದರು. ಇದರಿಂದಾಗಿ ತಂಡದ ಮೊತ್ತ ವೇಗವಾಗಿ ಏರಿತು. ಸ್ಪಿನ್ನರ್ ವಿಪ್ರಜ್ ನಿಗಮ್ ಅವರು ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದ ಸುನಿಲ್ ನಿರ್ಗಮಿಸಿದರು. ನಂತರದ ಓವರ್‌ನಲ್ಲಿ ಡೆಲ್ಲಿ ನಾಯಕ, ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಹಾಕಿದ ಎಲ್‌ಬಿ ಬಲೆಗೆ ರಹಾನೆ ಬಿದ್ದರು.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ರಘುವಂಶಿ ಇನಿಂಗ್ಸ್ ಬಲಪಡಿಸುವ ಹೊಣೆಯನ್ನು ತಮ್ಮ ಮೇಲೆಳೆದುಕೊಂಡರು. ಆದರೆ ಅವರಿಗೆ ಜೊತೆ ನೀಡುವ ಪ್ರಯತ್ನದಲ್ಲಿದ್ದ ವೆಂಕಟೇಶ್ ಅಯ್ಯರ್ (7 ರನ್) ಮತ್ತೆ ಎಡವಿದರು. ಅಕ್ಷರ್ ಎಸೆತದಲ್ಲಿ ದೊಡ್ಡ ಹೊಡೆತ ಆಡಿ ಫೀಲ್ಡರ್ ವಿಪ್ರಜ್‌ಗೆ ಕ್ಯಾಚ್ ಆದರು.

ರಘುವಂಶಿ ಜೊತೆಗೂಡಿದ ರಿಂಕು ಸಿಂಗ್ (36; 25ಎ, 4X3, 6X1) ತಂಡದ ಮೊತ್ತ ಹೆಚ್ಚಲು ಕಾರಣರಾದರು. ಐದನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 9ಕ್ಕೆ204 (ರೆಹಮಾನುಲ್ಲಾ ಗುರ್ಬಾಜ್ 26, ಸುನಿಲ್ ನಾರಾಯಣ್ 27, ಅಜಿಂಕ್ಯ ರಹಾನೆ 26, ಅಂಗಕ್ರಿಷ್ ರಘುವಂಶಿ 44, ರಿಂಕು ಸಿಂಗ್ 36, ಮಿಚೆಲ್ ಸ್ಟಾರ್ಕ್ 43ಕ್ಕೆ3, ವಿಪ್ರಜ್ ನಿಗಮ್ 41ಕ್ಕೆ2, ಅಕ್ಷರ್ ಪಟೇಲ್ 27ಕ್ಕೆ2) **ಡೆಲ್ಲಿ ಕ್ಯಾಪಿಟಲ್ಸ್:** 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 190 (ಫಾಫ್ ಡುಪ್ಲೆಸಿ 62, ಅಕ್ಷರ್ ಪಟೇಲ್ 43, ಸುನಿಲ್ ನಾರಾಯಣ್ 29ಕ್ಕೆ3) ಫಲಿತಾಂಶ: ಕೋಲ್ಕತ್ತ ನೈಟ್‌ರೈಡರ್ಸ್ ತಂಡಕ್ಕೆ 14 ರನ್‌ಗಳ ಜಯ.

ವಿಕೆಟ್ ಪಡೆದ ಸುನಿಲ್ ನಾರಾಯಣ್ (ಮಧ್ಯದಲ್ಲಿ) ಅವರನ್ನು ವಿಕೆಟ್ ಕೀಪರ್ ರಹಮಾನುಲ್ಲಾ ಗುರ್ಬಾಜ್ (ಎಡಗಡೆ) ಮತ್ತು ರಿಂಕು ಸಿಂಗ್ (ಬಲಗಡೆ) ಅಭಿನಂದಿಸಿದರು. ಎಎಫ್‌ಪಿ ಚಿತ್ರ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	10	7	3	14	0.521
ಮುಂಬೈ ಇಂಡಿಯನ್ಸ್	10	6	4	12	0.889
ಗುಜರಾತ್ ಟೈಟನ್ಸ್	9	6	3	12	0.748
ಡೆಲ್ಲಿ ಕ್ಯಾಪಿಟಲ್ಸ್	10	6	4	12	0.362
ಪಂಜಾಬ್ ಕಿಂಗ್ಸ್	9	5	3	11	0.177
ಲಖನೌ ಸೂಪರ್ ಜೈಂಟ್ಸ್	10	5	5	10	-0.325
ಕೋಲ್ಕತ್ತ ನೈಟ್ ರೈಡರ್ಸ್	10	4	5	9	0.271
ರಾಜಸ್ಥಾನ ರಾಯಲ್ಸ್	10	3	7	6	-0.349
ಸನ್‌ರೈಸರ್ಸ್ ಹೈದರಾಬಾದ್	9	3	6	6	-1.103
ಚೆನ್ನೈ ಸೂಪರ್ ಕಿಂಗ್ಸ್	9	2	7	4	-1.302

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 456 ರನ್

ಪರ್ಪಲ್ ಕ್ಯಾಪ್
ಜೋಶ್ ಹೇಜಲ್‌ವುಡ್ (ಆರ್‌ಸಿಬಿ) 18 ವಿಕೆಟ್



ಲಿವರ್‌ಪೂಲ್ ತನ್ನ 20ನೇ ಪ್ರೀಮಿಯಮ್ ಲೀಗ್ ಪಂದ್ಯ ಗೆದ್ದುಕೊಂಡಿತು!

ಕೊನೆಗೊಳ್ಳುವುದೇ ಸಿಎಸ್‌ಕೆ ಪರದಾಟ?

ಧೋನಿ

ಶ್ರೇಯಸ್

ಚೆನ್ನೈ (ಪಿಟಿಐ): ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಹಾಲಿ ಐಪಿಎಲ್‌ನಲ್ಲಿ ಪ್ಲೇಆಫ್ ಅವಕಾಶ ದೂರವಾಗಿದೆ. ಬುಧವಾರ ನಡೆಯಲಿರುವ ಪಂದ್ಯದಲ್ಲಿ ಪ್ರಬಲ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿರುವ ಚೆನ್ನೈ ಸೂಪರ್ ಕಿಂಗ್ಸ್ ತನ್ನ ಪರದಾಟವನ್ನು ಕೊನೆಗೊಳಿಸುವ ವಿಶ್ವಾಸದಲ್ಲಿದೆ.

ಒಂಬತ್ತು ಪಂದ್ಯಗಳಲ್ಲಿ ಕೇವಲ ಎರಡರಲ್ಲಿ ಗೆದ್ದಿರುವ ಮಹೇಂದ್ರ ಸಿಂಗ್ ಧೋನಿ ಬಳಗ ಈಗ ಅಂಕಪಟ್ಟಿಯ ತಳದಲ್ಲಿದೆ. ಇನ್ನೊಂದು ಕಡೆ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ಇಷ್ಟೇ ಪಂದ್ಯಗಳಿಂದ ಐದರಲ್ಲಿ ಜಯಗಳಿಸಿದೆ. ಆಘಾತದಲ್ಲಿರುವ ಸಿಎಸ್‌ಕೆ ಮೇಲೆ ಗೆದ್ದು ತನ್ನ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಲೆಕ್ಕಾಚಾರದಲ್ಲಿದೆ.

ಈ ಬಾರಿ ಚೆನ್ನೈ ತಂಡದ ಸಂಯೋಜನೆ ಕೈಕೊಟ್ಟಿವೆ. ಭದ್ರ ನೆಲೆ ಚೆಪಾಕ್‌ನಲ್ಲಿಯೇ ಸಾಲು ಸಾಲು ಸೋಲು ಕಂಡಿದ್ದು ತಂಡಕ್ಕೆ ಅರಗಿಸಿಕೊಳ್ಳಲಾಗುತ್ತಿಲ್ಲ. ಮೂರನೇ ಗೆಲುವಿನೊಡನೆ ಪ್ಲೇಆಫ್‌ನ ಆಸೆಗೆ ಜೀವತರುವ ಯತ್ನದಲ್ಲಿ ತಂಡ ಇದೆ.

ಮುಖಾಮುಖಿ: ಈ ಬಾರಿ ಚೆನ್ನೈ ತಂಡಕ್ಕೆ ತಡವಾಗಿ ಸೇರ್ಪಡೆ ಆಗಿರುವ ಯುವಮುಖ ಆಯುಷ್ ಮ್ಹಾತ್ರೆ ಅವರು ಅನುಭವಿ ವೇಗಿ ಅರ್ಷದೀಪ್ ಸಿಂಗ್ ಅವರನ್ನು ಯಾವ ರೀತಿ ನಿಭಾಯಿಸುವರು ಎಂಬುದು ಕುತೂಹಲಕಾರಿ. ಮಧ್ಯಮ ಹಂತದ ಓವರುಗಳಲ್ಲಿ ಶಿವಂ ದುಬೆ ಮತ್ತು ಪಂಜಾಬ್ ಬೌಲರ್ ಯಜುವೇಂದ್ರ ಚಾಹಲ್ ನಡುವಣ ಮುಖಾಮುಖಿ ನಿರೀಕ್ಷಿಸಲಾಗಿದೆ.

ಕಿಂಗ್ಸ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಸದ್ಯ ಲಯದಲ್ಲಿದ್ದಾರೆ. ಆರಂಭ ಆಟಗಾರರಾದ ಪ್ರಿಯಾಂಶ್, ಪ್ರಭಸಿಮ್ರನ್ ಸಿಂಗ್ ಸಾಕಷ್ಟು ರನ್ ಗಳಿಸುತ್ತಿದ್ದಾರೆ. ಅವರನ್ನು ನಿಯಂತ್ರಿಸುವ ಸವಾಲು ಎಡಗೈ ವೇಗಿ ಖಲೀಲ್ ಅಹ್ಮದ್ ಮೇಲಿದೆ. ಕಿಂಗ್ಸ್ ನಾಯಕ ಅಯ್ಯರ್ ಕೂಡ ಪಂದ್ಯದ ಗತಿ ಬದಲಾಯಿಸುವ ಸಾಮರ್ಥ್ಯ ಹೊಂದಿದ್ದಾರೆ.

43 ವರ್ಷ ವಯಸ್ಸಿನ ಧೋನಿ ಅಲ್ಲೊಮ್ಮೆ, ಇಲ್ಲೊಮ್ಮೆ ಗಮನ ಸೆಳೆದಿದ್ದಾರೆ. ಗಾಯಾಳು ಋತುರಾಜ್ ಗಾಯಕವಾಡ ಅವರಿಂದ ನಾಯಕತ್ವ ವಹಿಸಿಕೊಂಡಿರುವ ಈ ಚಾಣಾಕ್ಷ ತಂತ್ರಗಾರ ತಂಡವನ್ನು ಗೆಲುವಿನ ಹಳಿಗೆ ತರಲು ಪರದಾಡುತ್ತಿದ್ದಾರೆ. ಆರಂಭ ಆಟಗಾರ ರಚಿನ್ ರವೀಂದ್ರ ಸ್ಥಿರ ಪ್ರದರ್ಶನ ನೀಡಿಲ್ಲ. ದಿಗ್ಗಜ ಆಟಗಾರರಾದ ರವೀಂದ್ರ ಜಡೇಜ, ರವಿಚಂದ್ರನ್ ಅಶ್ವಿನ್ ಕೂಡ ತಂಡವನ್ನು ಕಾಪಾಡಿಲ್ಲ. ರಾಹುಲ್ ತ್ರಿಪಾಠಿ ನಿರೀಕ್ಷೆಗೆ ತಕ್ಕಂತೆ ಆಡಿಲ್ಲದಿರುವುದು ತಂಡಕ್ಕೆ ಹಿನ್ನಡೆ ತಂದಿದೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಜಿಯೊ ಹಾಟ್ ಸ್ಟಾರ್ ಆ್ಯಪ್

ಪಾಲಕರ ಬೆಂಬಲ, ಕುಟುಂಬದ ಕಷ್ಟ ನೆನೆದ ಉದಯೋನ್ಮುಖ ತಾರೆ ವೈಭವ್ ಸೂರ್ಯವಂಶಿ

‘ಸಾಧನೆಗೆ ಅಪ್ಪ, ಅಮ್ಮನೇ ಪ್ರೇರಣೆ’

ನವದೆಹಲಿ/ಜೈಪುರ/ಪಟ್ನಾ (ಪಿಟಿಐ): ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ 14ರ ಪೋರ ವೈಭವ್ ಸೂರ್ಯವಂಶಿಯ ಮಿಂಚಿನ ಶತಕ ನೋಡಿದವರ ಕಂಗಳು ಅಚ್ಚರಿಯಿಂದ ಅರಳಿದವು. ‘ಬಾಲಪ್ರತಿಭೆ’ಯ ಅಗಾಧ ಭುಜಬಲವನ್ನು ನೋಡಿದವರೆಲ್ಲರೂ ‘ಅಬ್ಬಾ..’ ಎನ್ನದೇ ಇರಲಿಲ್ಲ.

ಬಿಹಾರದ ಸಮಸ್ತಿಪುರದ ‘ಮಗು ಮುಖ’ದ ವೈಭವ್ ಅವರು ಐಪಿಎಲ್‌ನಲ್ಲಿ ಶತಕ ದಾಖಲಿಸಿದ ಅತ್ಯಂತ ಕಿರಿಯ ವಯಸ್ಸಿನ ಆಟಗಾರನಾದರು. ಅವರ ತಂದೆ, ತಾಯಿ ವರ್ಷಾನುಗಟ್ಟಲೇ ಪಟ್ಟ ಶ್ರಮದಿಂದಾಗಿ ವೈಭವ್ ಈ ಮಟ್ಟಕ್ಕೆ ಬೆಳೆದಿದ್ದಾರೆ.

ಮಗನ ಕ್ರಿಕೆಟ್ ಕಲಿಕೆಯ ವೆಚ್ಚ ಭರಿಸಲು ಸಂಜೀವ್ ಸೂರ್ಯವಂಶಿ ಅವರು ತಮಗಿದ್ದ ಕೃಷಿ ಭೂಮಿಯನ್ನೂ ಮಾರಿದ್ದರು.

‘ನಮ್ಮ ಹಳ್ಳಿ, ರಾಜ್ಯ ಮತ್ತು ಭಾರತವೇ ಹೆಮ್ಮೆಪಡುವಂತೆ ನನ್ನ ಮಗ ಸಾಧನೆ ಮಾಡಿದ್ದಾನೆ’ ಎಂದು ಸಂಜೀವ್ ಹೆಮ್ಮೆಯಿಂದ ಹೇಳುತ್ತಾರೆ.

‘ರಾಜಸ್ಥಾನ ರಾಯಲ್ಸ್ ತಂಡಕ್ಕೆ ನಾನು ಬಹಳಷ್ಟು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕಳೆದ ಮೂರ್ನಾಲ್ಕು ತಿಂಗಳುಗಳಲ್ಲಿ ಆಟವನ್ನು ತಿದ್ದಿ ತೀಡುವಲ್ಲಿ ತಂಡದವರ ಪಾತ್ರ ದೊಡ್ಡದಿದೆ. ಅವರೆಲ್ಲರ ಸಹಾಯ ಇಲ್ಲದೇ ಹೋಗಿದ್ದರೆ ನಾವು ಇವತ್ತು ಸಂಭ್ರಮಿಸುವ ಅವಕಾಶ ಇರುತ್ತಿರಲಿಲ್ಲ’ ಎಂದು ಸಂಜೀವ್ ಹೇಳಿದ್ದಾರೆ.

ಕಳೆದ ಮೆಗಾ ಹರಾಜಿನಲ್ಲಿ ರಾಜಸ್ಥಾನ ತಂಡವು ₹1.10 ಕೋಟಿ ನೀಡಿ ವೈಭವ್ ಅವರನ್ನು ಖರೀದಿಸಿತ್ತು. ಹರಾಜು ಪ್ರಕ್ರಿಯೆಯಲ್ಲಿ ಅವರ ಮೂಲಬೆಲೆಯು ₹ 30 ಲಕ್ಷ ಆಗಿತ್ತು. ವೈಭವ್ ಅವರು 2014ರ ಜನವರಿಯಲ್ಲಿ ನಡೆದಿದ್ದ ಮುಂಬೈ ಎದುರಿನ ರಣಜಿ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ಅಲ್ಲದೇ ಅವರು 19 ವರ್ಷದೊಳಗಿನವರ ಭಾರತ ತಂಡದಲ್ಲಿಯೂ ಆಡಿದ್ದಾರೆ. ಕೆಲವು ತಿಂಗಳುಗಳ ಹಿಂದೆ ನಾಗಪುರದಲ್ಲಿ ನಡೆದಿದ್ದ ರಾಯಲ್ಸ್ ಪ್ರತಿಭಾ ಶೋಧದ ಟ್ರಯಲ್ಸ್‌ಗೆ ವೈಭವ್ ಅವರನ್ನು ಕರೆದಿತ್ತು. ತಂಡದ ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಅವರು ಈ ಹುಡುಗನ ಆಟವನ್ನು ಮೆಚ್ಚಿಕೊಂಡರು.

ಹೋದ ವಾರ ಐಪಿಎಲ್‌ನಲ್ಲಿ ಪದಾರ್ಪಣೆ ಪಂದ್ಯದ ಮೊದಲ ಎಸೆತವನ್ನೇ ಸಿಕ್ಸರ್‌ಗೆತ್ತಿದ ವೈಭವ್ ತಮ್ಮ ಪ್ರತಿಭೆ ಮತ್ತು ಮನೋಬಲವನ್ನು ತೋರಿಸಿದ್ದರು. 20 ಎಸೆತಗಳಲ್ಲಿ 34 ರನ್ ಹೊಡೆದಿದ್ದರು. ತಮ್ಮ ಮೂರನೇ ಪಂದ್ಯದಲ್ಲಿ ನೂರು ರನ್ ಹೊಡೆದಿದ್ದಾರೆ.

‘ದೇಶಿ ಕ್ರಿಕೆಟ್ ಮತ್ತು 19 ವರ್ಷದೊಳಗಿನವರ ಭಾರತ ತಂಡದಲ್ಲಿ ಆಡಿದ್ದೇನೆ. ಮೊದಲ ಎಸೆತವನ್ನು ಸಿಕ್ಸರ್‌ಗೆತ್ತುವುದು ನನಗೆ ಅತ್ಯಂತ ಸಾಮಾನ್ಯವಾದ ಸಂಗತಿ. ನಾನು ಎದುರಿಸುವ ಮೊದಲ ಹತ್ತು ಎಸೆತಗಳಲ್ಲಿ ಯಾವುದೇ ಒತ್ತಡವಿರುವುದಿಲ್ಲ. ನನ್ನ ಕಣ್ಣಳತೆಗೆ ಸಿಗುವ ಎಸೆತಗಳನ್ನು ಹೊಡೆಯುವುದೇ ನನ್ನ ಮನೋಭಾವ’ ಎಂದು ವೈಭವ್ ಅವರು ಐಪಿಎಲ್ ಟಿ20 ವೆಬ್‌ಸೈಟ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಐಪಿಎಲ್ ಟೂರ್ನಿ ಶುರುವಾದ ಮೂರು ವರ್ಷಗಳ ನಂತರ ವೈಭವ್ ಜನಿಸಿದವರು. ‘ಪಾಲಕರ ಶ್ರಮದಿಂದಾಗಿಯೇ ಇವತ್ತು ನಾನು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಪ್ರತಿ ರಾತ್ರಿ 11ರ ನಂತರ ಮಲಗುತ್ತಿದ್ದ ಅಮ್ಮ ಬೆಳಗಿನ ಜಾವ 3 ಗಂಟೆಗೇ ಏಳುತ್ತಿದ್ದರು. ನಾನು ಅಭ್ಯಾಸಕ್ಕಾಗಿ ತೆರಳುವ ಮುನ್ನ ಅಡುಗೆ ಮಾಡಿಕೊಡುತ್ತಿದ್ದರು. ಅಪ್ಪ ನನಗಾಗಿ ತಮ್ಮ ನೌಕರಿಯನ್ನೂ ಬಿಟ್ಟಿದ್ದರು. ಅಣ್ಣ ಕೆಲಸ ಮಾಡಿ ಮನೆ ನೋಡಿಕೊಳ್ಳುತ್ತಿದ್ದ.

ಕುಟುಂಬ ನಿರ್ವಹಣೆ ಕಷ್ಟದಾಯಕವಾಗಿತ್ತು. ಆದರೂ ಅಪ್ಪ ಸದಾ ನನ್ನ ಬೆಂಬಲಕ್ಕೆ ನಿಂತರು. ಒಂದಂತೂ ನಿಜ. ಕಠಿಣ ಪರಿಶ್ರಮ ಮತ್ತು ಶ್ರದ್ಧೆಯಿಂದ ಕೆಲಸ ಮಾಡುವವರನ್ನು ದೇವರು ಕೈಬಿಡುವುದಿಲ್ಲ. ತಂದೆ, ತಾಯಿಯ ತ್ಯಾಗ, ಪ್ರೋತ್ಸಾಹ ಮತ್ತು ಪ್ರೀತಿಯಿಂದಾಗಿಯೇ ಈ ಸಾಧನೆ ಮಾಡಲು ಸಾಧ್ಯವಾಗಿದೆ’ ಎಂದು ವೈಭವ್ ಹೇಳಿದ್ದಾರೆ. ವೈಭವ್ ಅವರಿಗೆ ತರಬೇತಿ ನೀಡಿರುವ ಕೋಚ್ ಮನೀಷ್ ಓಜಾ ಅವರ ಸಂತಸ ಮುಗಿಲುಮುಟ್ಟಿದೆ.

‘ಒಬ್ಬ ಕೋಚ್ ಆಗಿ ಹೆಮ್ಮೆಯಾಗಿದೆ. ಬಿಹಾರದಲ್ಲಿ ಕ್ರೀಡೆಗೆ ಸೌಲಭ್ಯ ಮತ್ತು ಪ್ರೋತ್ಸಾಹವಿಲ್ಲ. ಅಂತಹ ವಾತಾವರಣದಲ್ಲಿ ವೈಭವ್ ಆಶಾಕಿರಣವಾಗಿದ್ದಾರೆ. ಅವರ ಸಾಧನೆ ಇನ್ನೂ ಬಹಳಷ್ಟು ಮಕ್ಕಳಿಗೆ ಪ್ರೇರಣೆಯಾಗಲಿದೆ. ಇನ್ನೊಂದೆರಡು ವರ್ಷಗಳಲ್ಲಿ ವೈಭವ್ ಭಾರತ ಟಿ20 ತಂಡದಲ್ಲಿ ಆಡಬಹುದು’ ಎಂದು ಮನೀಷ್ ಭರವಸೆ ವ್ಯಕ್ತಪಡಿಸಿದ್ದಾರೆ.

₹10 ಲಕ್ಷ ಬಹುಮಾನ

ವೈಭವ್ ಸೂರ್ಯವಂಶಿ ಅವರಿಗೆ ಬಿಹಾರ ರಾಜ್ಯದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ₹ 10 ಲಕ್ಷ ಬಹುಮಾನ ಘೋಷಿಸಿದ್ದಾರೆ.

‘2024ರಲ್ಲಿ ಒಂದು ಬಾರಿ ವೈಭವ್ ಮತ್ತು ಅವರ ತಂದೆಯನ್ನು ಭೇಟಿಯಾಗಿದ್ದೆ. ಈಗ ಐಪಿಎಲ್‌ನಲ್ಲಿ ಅವರ ಸಾಧನೆ ನೋಡಿ ಖುಷಿಯಾಗಿದೆ. ಅವರಿಗೆ ಫೋನ್ ಕರೆ ಮಾಡಿ ಅಭಿನಂದಿಸಿದ್ದೇನೆ. ಅವರಿಗೆ ರಾಜ್ಯ ಸರ್ಕಾರದಿಂದ ₹10 ಲಕ್ಷ ಬಹುಮಾನ ಘೋಷಿಸಿದ್ದೇವೆ. ವೈಭವ್ ಅವರು ಭವಿಷ್ಯದಲ್ಲಿ ಭಾರತ ತಂಡಕ್ಕೆ ಆಯ್ಕೆಯಾಗಲಿ. ದೊಡ್ಡ ಸಾಧನೆ ಮಾಡಿ ದೇಶಕ್ಕೆ ಉತ್ತಮ ಹೆಸರು ತರಲಿ’ ಎಂದು ನಿತೀಶ್ ಕುಮಾರ್ 'ಎಕ್ಸ್'ನಲ್ಲಿ ಶುಭ ಹಾರೈಸಿದ್ದಾರೆ.

ಬೆಂಗಳೂರು ಡ್ರೀಮ್ಸ್‌ಗೆ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಜವಾಹರ್ ಯೂನಿಯನ್ ಎಫ್‌ಸಿ ವಿರುದ್ಧ 4-0 ಗೋಲುಗಳಿಂದ ಭರ್ಜರಿ ಗೆಲುವು ದಾಖಲಿಸಿತು.

ಡ್ರೀಮ್ ಯುನೈಟೆಡ್ ಪರ ಕೆ. ಲಾಲ್‌ರಿನ್‌ಫೆಲ್ಲಾ (3ನೇ ನಿ.), ಲಕ್ಷ್ಮೀಕಾಂತ್ ಬಿ. ಶ್ರೀನಿವಾಸ್ (22ನೇ ನಿ.) ಮತ್ತು ಲಾಂಡಅಪ್ ಲೆಪ್ಕಾ (76ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ವಿಜಯನಗರ ಎಫ್‌ಸಿ ತಂಡವು 1-0 ಗೋಲಿನಿಂದ ಡಿವೈಇಎಸ್ ಎಫ್‌ಸಿ ತಂಡದ ವಿರುದ್ಧ ಜಯಿಸಿತು.

ಮಹಿಳಾ ಕ್ರಿಕೆಟ್: ತ್ರಿಕೋನ ಏಕದಿನ ಸರಣಿಯಲ್ಲಿ ಭಾರತದ ಗೆಲುವು

ಸ್ನೇಹ, ರಾವಲ್ ಮಿಂಚು

ಸ್ನೇಹ ರಾಣಾ

ಕೊಲಂಬೊ (ಪಿಟಿಐ): ಆಫ್ ಸ್ಪಿನ್ನರ್ ಸ್ನೇಹ ರಾಣಾ ಅವರು ಒಂದೇ ಓವರಿನಲ್ಲಿ ಮೂರು ವಿಕೆಟ್ ಸೇರಿದಂತೆ ಐದು ವಿಕೆಟ್‌ಗಳ ಗೊಂಚಲು ಪಡೆದರು. ಅವರ ಅಮೋಘ ಬೌಲಿಂಗ್ ಮತ್ತು ಪ್ರತೀಕಾ ರಾವಲ್ ಅವರ ಕೌಶಲಭರಿತ ಅರ್ಧಶತಕದ ನೆರವಿನಿಂದ ಭಾರತ ಮಹಿಳಾ ತಂಡ ತ್ರಿಕೋನ ಏಕದಿನ ಸರಣಿಯ ಪಂದ್ಯದಲ್ಲಿ ಮಂಗಳವಾರ ದಕ್ಷಿಣ ಆಫ್ರಿಕಾ ತಂಡದ ಮೇಲೆ 15 ರನ್‌ಗಳ ಜಯ ಗಳಿಸಿತು.

ಟಾಸ್ ಗೆದ್ದ ಹರ್ಮನ್‌ಪ್ರೀತ್ ಕೌರ್ ಬ್ಯಾಟ್ ಮಾಡಲು ನಿರ್ಧರಿಸಿದರು. ಪ್ರತೀಕಾ ಉತ್ತಮ ಆಟ ಮುಂದುವರಿಸಿ 91 ಎಸೆತಗಳಲ್ಲಿ 78 ರನ್ (4x7, 6x1) ಬಾರಿಸಿದರು. ಭಾರತ 50 ಓವರುಗಳಲ್ಲಿ 6 ವಿಕೆಟ್‌ಗೆ 276 ರನ್ ಹೊಡೆಯಿತು.

ಮಧ್ಯಮ ಕ್ರಮಾಂಕದಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್ (ಅಜೇಯ 41, 48ಎ) ಮತ್ತು ಜೆಮಿಮಾ ರೋಡ್ರಿಗಸ್ (41, 32ಎ) ಅವರೂ ಉಪಯುಕ್ತ ಕೊಡುಗೆ ನೀಡಿದರು.

ನಂತರ ಸ್ನೇಹ ರಾಣಾ 43 ರನ್‌ಗಳಿಗೆ 5 ವಿಕೆಟ್ ಪಡೆದು ದಕ್ಷಿಣ ಆಫ್ರಿಕಾ ತಂಡವನ್ನು 49.2 ಓವರುಗಳಲ್ಲಿ 261 ರನ್‌ಗಳಿಗೆ ಆಲೌಟ್ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಆರಂಭ ಆಟಗಾರ್ತಿ ತಾಝ್ಮಿನ್ ಬ್ರಿಟ್ಸ್ ಅವರ 109 ರನ್‌ಗಳ (107ಎ, 4x13, 6x3) ಆಟ ಫಲ ನೀಡಲಿಲ್ಲ. ದಕ್ಷಿಣ ಆಫ್ರಿಕಾ ತಂಡ ಕೊನೆಯ 5 ವಿಕೆಟ್‌ಗಳನ್ನು 21 ರನ್‌ಗಳಿಗೆ ಕಳೆದುಕೊಂಡಿತು.

ಒಂದು ಹಂತದಲ್ಲಿ ದಕ್ಷಿಣ ಆಫ್ರಿಕಾ 46ನೇ ಓವರುಗಳ ನಂತರ 5 ವಿಕೆಟ್‌ಗೆ 240 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿತ್ತು. 48ನೇ ಓವರಿನಲ್ಲಿ ರಾಣಾ ಅವರು ಕೇವಲ ಮೂರು ರನ್ನಿತ್ತು ಮೂರು ವಿಕೆಟ್ ಪಡೆದಿದ್ದು ಪಂದ್ಯವನ್ನು ಭಾರತದ ಕಡೆಗೆ ವಾಲಿಸಿತು. ತಾಝ್ಮಿನ್ ಅವರನ್ನು ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಪಡೆಯುವ ಮೂಲಕ ರಾಣಾ ಅವರು ಎದುರಾಳಿ ತಂಡಕ್ಕೆ ಬಲವಾದ ಹೊಡೆತ ನೀಡಿದರು.

ಇದು ಭಾರತಕ್ಕೆ ಟೂರ್ನಿಯಲ್ಲಿ ಸತತ ಎರಡನೇ ಜಯ.

ಸಂಕ್ಷಿಪ್ತ ಸ್ಕೋರು- ಭಾರತ ಮಹಿಳಾ ತಂಡ: 50 ಓವರುಗಳಲ್ಲಿ 6ಕ್ಕೆ276 (ಪ್ರತೀಕಾ ರಾವಲ್ 78, ಸ್ಮೃತಿ ಮಂದಾನ 36, ಹರ್ಲಿನ್ ಡಿಯೋಲ್ 29, ಹರ್ಮನ್‌ಪ್ರೀತ್ ಕೌರ್ ಔಟಾಗದೇ 41, ಜೆಮಿಮಾ ರೋಡ್ರಿಗಸ್ 41, ರಿಚಾ ಘೋಷ್ 24; ನಾನ್‌ಕುಲುಲೆಕೊ ಮ್ಲಾಬಾ 55ಕ್ಕೆ2); **ದಕ್ಷಿಣ ಆಫ್ರಿಕಾ:** 49.2 ಓವರುಗಳಲ್ಲಿ 261 (ಲಾರಾ ವೋಲ್ವಾರ್ಟ್ 43, ತಾಝ್ಮಿನ್ ಬ್ರಿಟ್ಸ್ 109, ಸುನೆ ಲಸ್ 28, ಅನೇರಿ ಡೆರ್ಕ್‌ಸೆನ್ 30; ಸ್ನೇಹ ರಾಣಾ 43ಕ್ಕೆ5). ಪಂದ್ಯದ ಆಟಗಾರ್ತಿ: ಸ್ನೇಹ ರಾಣಾ. ಭಾರತಕ್ಕೆ 15 ರನ್ ಜಯ

ಸುದೀರ್‌ಮನ್ ಕಪ್: ಭಾರತ ನಿರ್ಗಮನ

ಷಾಮೆನ್ (ಚೀನಾ), (ಪಿಟಿಐ): ಲಯಕ್ಕೆ ಪರದಾಡುತ್ತಿರುವ ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರು ಮತ್ತೊಮ್ಮೆ ನಿರಾಸೆ ಮೂಡಿಸಿದರು. ಇದರಿಂದ ಭಾರತ ತಂಡವು, ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಸುದೀರ್‌ಮನ್ ಕಪ್ ಡಿ ಗುಂಪಿನ ಪಂದ್ಯದಲ್ಲಿ ಇಂಡೊನೇಷ್ಯಾ ಎದುರು 1-4 ರಿಂದ ಸೋಲನುಭವಿಸಿ ಟೂರ್ನಿಯಿಂದ ಹೊರಬಿತ್ತು.

ಭಾನುವಾರ ಮೊದಲ ಪಂದ್ಯದಲ್ಲಿ ಡೆನ್ಮಾರ್ಕ್ ಎದುರು ಇದೇ ಅಂತರದ ಮುಖಭಂಗ ಅನುಭವಿಸಿದ್ದರಿಂದ ಭಾರತಕ್ಕೆ ಮಂಗಳವಾರದ ಪಂದ್ಯ ಮಾಡು–ಇಲ್ಲವೇ–ಮಡಿ ಎಂಬಂತೆ ಆಗಿತ್ತು.

ಭಾರತ ತಂಡವು ಗುರುವಾರ ನಡೆಯುವ ಗುಂಪಿನ ಕೊನೆಯ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಇಂಗ್ಲೆಂಡ್ ಕೂಡ ಹೊರಬಿದ್ದಿರುವ ಕಾರಣ ಆ ಪಂದ್ಯ ಮಹತ್ವ ಕಳೆದುಕೊಂಡಿದೆ.

ಇಂಡೊನೇಷ್ಯಾ ಮತ್ತು ಡೆನ್ಮಾರ್ಕ್ ತಂಡಗಳು ನಾಕೌಟ್ ಹಂತ ತಲುಪಿವೆ. ಮಂಗಳವಾರ ನಡೆದ ಇನ್ನೊಂದು ಪಂದ್ಯದಲ್ಲಿ ಡೆನ್ಮಾರ್ಕ್ 5–0 ಯಿಂದ ಇಂಗ್ಲೆಂಡ್ ತಂಡವನ್ನು ಸದೆಬಡಿಯಿತು.

ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲ ಮತ್ತು ತನಿಶಾ ಕ್ರಾಸ್ಟೊ 10–21, 21–18, 21–19 ರಿಂದ ಇಂಡೊನೇಷ್ಯಾದ ರೆಹಾಲ್ ನೌಫಲ್ ಮತ್ತು ಗ್ಲೋರಿಯಾ ಎಮಾನುಯೆಲ್ ವಿಡ್ಜಜಾ ಅವರನ್ನು ಸೋಲಿಸಿದ್ದು ಭಾರತ ಶುಭಾರಂಭ ಮಾಡಿತ್ತು. ಆದರೆ ಮಹಿಳಾ ಸಿಂಗಲ್ಸ್‌ನಲ್ಲಿ ಸಿಂಧು 11ನೇ ಕ್ರಮಾಂಕದ ಪುತ್ರಿ ಕುಸುಮ ವರ್ಧನಿ ಅವರಿಗೆ 12–21, 13–21ರಲ್ಲಿ ಸೋತರು. ಹೀಗಾಗಿ ಸ್ಕೋರ್ 1-1 ಸಮನಾಯಿತು.

ಪುರುಷರ ಸಿಂಗಲ್ಸ್‌ನಲ್ಲಿ ಜೊನಾಥನ್ ಕ್ರಿಸ್ಟಿ 21–14, 21–12ರಲ್ಲಿ ಪ್ರಣಯ್ ಅವರನ್ನು ಸೋಲಿಸಿ ಇಂಡೊನೇಷ್ಯಾಕ್ಕೆ ಮುನ್ನಡೆ ಒದಗಿಸಿದರು.

ಸೂಪರ್‌ಬೆಟ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿ

ಚಿದಂಬರಮ್‌ಗೆ ಜಂಟಿ ಅಗ್ರಸ್ಥಾನ

ವಾರ್ಸಾ (ಪೋಲೆಂಡ್), (ಪಿಟಿಐ): ಒತ್ತಡದಲ್ಲೂ ಉತ್ತಮ ಪ್ರದರ್ಶನ ನೀಡಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದಂಬರಮ್ ತಮ್ಮ ಅಂತಿಮ ಪಂದ್ಯದಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಅವರನ್ನು ಸೋಲಿಸಿ, ಸೂಪರ್‌ಬೆಟ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯ ರ್‍ಯಾಪಿಡ್ ವಿಭಾಗದಲ್ಲಿ ಜಂಟಿ ಅಗ್ರಸ್ಥಾನ ಗಳಿಸಿದರು.

ಅರವಿಂದ್ ಈ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದರು. ಅಗ್ರಸ್ಥಾನಕ್ಕೆ ಬರಲು ಅರವಿಂದ್ ಅವರಿಗೆ ಗೆಲುವು ಅನಿವಾರ್ಯವಾಗಿದ್ದು, ಸೋಮವಾರ ಅದನ್ನು ಸಾಧಿಸಿದರು. ಇರಾನ್ ಸಂಜಾತ ಫ್ರಾನ್ಸ್‌ನ ಆಟಗಾರ ಸಮಯದ ಒತ್ತಡಕ್ಕೆ ಸಿಲುಕಿ ಸೋತರು. ಅರವಿಂದ್, ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ ಮತ್ತು ಅಲಿರೇಝಾ ತಲಾ 11 ಪಾಯಿಂಟ್ಸ್ ಗಳಿಸಿದರು.

ಮೊದಲ ಎರಡು ದಿನ ಹಿನ್ನಡೆಯಲ್ಲಿದ್ದ ಭಾರತದ ಆರ್.ಪ್ರಜ್ಞಾನಂದ ಅವರೂ ಚೇತರಿಸಿಕೊಂಡು ಜಂಟಿ ನಾಲ್ಕನೇ ಸ್ಥಾನಕ್ಕೇರಿದರು. ಅವರು ಕೊನೆಯ ಎರಡು ಸುತ್ತುಗಳಲ್ಲಿ ಕ್ರಮವಾಗಿ ರುಮೇನಿಯಾದ ಡೇವಿಡ್ ಗಾವ್ರಿಲೆಸ್ಕು (7) ಮತ್ತು ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡೂಡಾ (8) ಅವರನ್ನು ಸೋಲಿಸಿದರು.

ಪ್ರಜ್ಞಾನಂದ ಅವರು ಅಮೆರಿಕದ ಲೆವೊನ್ ಅರೋನಿಯನ್ ಜೊತೆ ತಲಾ 10 ಪಾಯಿಂಟ್ಸ್ ಕಲೆಹಾಕಿದರು.ಈ ಟೂರ್ನಿಯ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಈ ಟೂರ್ನಿಯಲ್ಲಿ 18 ಬ್ಲಿಟ್ಜ್ ಪಂದ್ಯಗಳನ್ನು ಆಡಲು ಬಾಕಿಯಿದೆ.

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

KEA

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್ಸ್), ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆರ್‌ಇಸಿ/ಸಿ.ಆರ್–01/2025 ದಿನಾಂಕ: 25–04–2025

PGCET-2025 - ಮೊದಲನೆ ವರ್ಷದ/1ನೇ ಸೆಮಿಸ್ಟರ್‌ಗಳ ಎಂಬಿಎ / ಎಂಸಿಎ / ಎಂಇ / ಎಂ.ಟೆಕ್ / ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಕೋರ್ಸುಗಳಿಗೆ ಪ್ರವೇಶ

1) ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳಿಂದ 2025–26 ನೇ ಸಾಲಿನ ಮೊದಲನೆ ವರ್ಷದ / 1ನೇ ಸೆಮಿಸ್ಟರ್‌ಗಳ (ಪೂರ್ಣಾವಧಿ / ಅರೆಕಾಲಿಕ) ಎಂಬಿಎ / ಎಂಸಿಎ / ಎಂಇ / ಎಂ.ಟೆಕ್ / ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2) **ಎಂಬಿಎ / ಎಂಸಿಎ / ಎಂಇ / ಎಂ.ಟೆಕ್** ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಪಿಜಿಸಿಇಟಿ ನಿಯಮಗಳು 2005 ಮತ್ತು 2011 ರ ಅನ್ವಯ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ – 2025 ಕ್ಕೆ ಹಾಜರಾಗಬೇಕು. ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕಾಗಿ Council of Architecture, New Delhi ನಡೆಸುವ PGETA 2025 ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸಲಾಗುವುದು.

3) **ಇಂಜಿನಿಯರಿಂಗ್ ಹಾಗೂ ಟೆಕ್ನಾಲಜಿ ವಿಭಾಗದಲ್ಲಿ GATE ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಮಾತ್ರ ವಿಟಿಯು, ಬೆಳಗಾವಿ ಅಡಿಯಲ್ಲಿನ ವಿವಿಧ ಎಂ.ಟೆಕ್ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.** ಗೇಟ್ ಪರೀಕ್ಷೆಯಲ್ಲಿ ಮಾನ್ಯತೆ ಅಂಕಗಳನ್ನು ಹೊಂದಿರುವವರು (Valid GATE Score) ಎಂಇ / ಎಂ.ಟೆಕ್ / ಎಂ. ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕಾಗಿ, **ಪಿಜಿಸಿಇಟಿ – 2025 ಕ್ಕೆ ಹಾಜರಾಗಬೇಕಾಗಿರುವುದಿಲ್ಲ,** ಆದರೆ ಅಂತಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಭರ್ತಿ ಮಾಡಿ ಶುಲ್ಕವನ್ನು ಪಾವತಿಸಿ ಪ್ರವೇಶಕ್ಕೆ ಅರ್ಹರಾಗಬಹುದು.

4) ಎಮ್.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಾತಿಗೆ ಅಭ್ಯರ್ಥಿಗಳು ಕೌನ್ಸಿಲ್ ಆಫ್ ಆಕಿಟೆಕ್ಚರ್, ನವದೆಹಲಿ ರವರು ನಡೆಸುವ ಪಿಜಿಇಟಿಎ – 2025 ರಲ್ಲಿ ಅರ್ಹತೆ ಪಡೆದಿರಬೇಕು. ಕೆಇಎ ಮೂಲಕ ಸೀಟು ಹಂಚಿಕೆಯಲ್ಲಿ ಭಾಗವಹಿಸಲು, ಕರ್ನಾಟಕದ ಪಿಜಿಸಿಇಟಿ–2025 ಕ್ಕೆ ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.

5) ಕರ್ನಾಟಕೇತರ ಅಭ್ಯರ್ಥಿಗಳು ಎಂಬಿಎ ಮತ್ತು ಎಂಸಿಎ ಪ್ರವೇಶಕ್ಕೆ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಬಿಟ್ಟುಕೊಡುವ ಸೀಟುಗಳನ್ನು ಮಾತ್ರ ಆಯ್ಕೆ ಮಾಡಲು ಅರ್ಹತೆ ಪಡೆಯುತ್ತಾರೆ.

6) SC / ST / OBC ಅರ್ಹತಾ ಮಾನದಂಡಗಳು ಕರ್ನಾಟಕದ SC / ST / OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

7) **ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ – PGCET-2025 – ಪರೀಕ್ಷಾ ವೇಳಾಪಟ್ಟಿ ಮತ್ತು ವಿಧಾನ**

ದಿನಾಂಕ	ಸಮಯ	ಮೊದಲನೇ ವರ್ಷದ/ ಮೊದಲನೇ ಸೆಮಿಸ್ಟರ್ ಪ್ರವೇಶ	ಒಟ್ಟು ಪ್ರಶ್ನೆಗಳು	ಒಟ್ಟು ಅಂಕಗಳು	ಪರೀಕ್ಷಾ ವಿಧಾನ
31–05–2025 ಶನಿವಾರ	ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆಯವರೆಗೆ	ಎಂಇ / ಎಂ.ಟೆಕ್	100	100	ಪಿಜಿಸಿಇಟಿ ಅನ್ನು ಓಎಂಆರ್ ಮೂಲಕ ನಡೆಸಲಾಗುತ್ತದೆ. ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ ಬಹು ಆಯ್ಕೆ ಮಾದರಿ ಯಾಗಿರುತ್ತದೆ.
ಎಂ.ಟೆಕ್. ಕಂಪ್ಯೂಟರ್ ವಿಷಯದ ಪಿಜಿಸಿಇಟಿ ನಡೆಸುವ ದಿನಾಂಕ ಮತ್ತು ವಿಧಾನವನ್ನು ಕೆಇಎ ವೆಬ್‌ಸೈಟಿನಲ್ಲಿ ನಂತರ ಪ್ರಕಟಿಸಲಾಗುವುದು. ಇತರೆ ವಿಷಯಗಳಿಗೆ ಪಿಜಿಸಿಇಟಿ–2025 ರ ಪರೀಕ್ಷೆಯು ಓಎಂಆರ್ ಆಧಾರಿತ ಪರೀಕ್ಷೆಯಾಗಿರುತ್ತದೆ.					
22–06–2025 ಭಾನುವಾರ	ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ	ಎಂಸಿಎ	100	100	
	ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆಯವರೆಗೆ	ಎಂಬಿಎ	100	100	

(Non-programmable calculators are allowed for M.E. / M.Tech examination only)

ಗಮನಿಸಿ: ಎಮ್. ಆರ್ಕಿಟೆಕ್ಚರ್ ಕೋರ್ಸು ಪ್ರವೇಶಕ್ಕಾಗಿ ಪ್ರಾಧಿಕಾರವು ಪಿಜಿಸಿಇಟಿ–2025 ಪರೀಕ್ಷೆಯನ್ನು ನಡೆಸುವುದಿಲ್ಲ.

8) ಪಠ್ಯಕ್ರಮ: **PGCET-2025** ರ ಪಠ್ಯಕ್ರಮವನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

9) ಆಸಕ್ತ ಅಭ್ಯರ್ಥಿಗಳು **ಪಿಜಿಸಿಇಟಿ–2025 ಕ್ಕೆ ದಿನಾಂಕ: 25–04–2025 ರಂದು ಬೆಳಿಗ್ಗೆ 11.00 ರಿಂದ ದಿನಾಂಕ: 10–05–2025 ರಂದು ರಾತ್ರಿ 11.59 ರೊಳಗಾಗಿ** ಆನ್‌ಲೈನ್ ಮೂಲಕ ನೋಂದಣಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ದಿನಾಂಕ: **12–05–2025 ರಂದು ಸಂಜೆ 6.00 ರೊಳಗೆ** ಶುಲ್ಕವನ್ನು ಪಾವತಿಸಬಹುದಾಗಿರುತ್ತದೆ. ಪಾವತಿಸಿರುವ ಶುಲ್ಕ ರಸೀದಿಯು ದೃಢಪಟ್ಟ ನಂತರವೇ ಅಭ್ಯರ್ಥಿಗಳಿಗೆ **ಪಿಜಿಸಿಇಟಿ – 2025 ಪರೀಕ್ಷೆಗೆ** ಅಡ್ಮಿಶನ್ ಟಿಕೆಟ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅನುಮತಿಸಲಾಗುವುದು.

10) ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿರುವ ಮಾಹಿತಿ ಪುಸ್ತಕ, ಶೈಕ್ಷಣಿಕ ಅರ್ಹತೆ, ವಿವಿಧ ವರ್ಗಗಳ ಸೀಟುಗಳಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳು ಮತ್ತು ಅಂತಹ ಸೀಟುಗಳಿಗೆ ನಿಗದಿಪಡಿಸಿರುವ ಅಭ್ಯರ್ಥಿಯ ಅರ್ಹತೆ ಹಾಗೂ ಇತ್ಯಾದಿ ಮಾನದಂಡಗಳನ್ನು ಕಡ್ಡಾಯವಾಗಿ ಓದಿಕೊಂಡು ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ.

11) ಅಭ್ಯರ್ಥಿಗಳು ಹೊಂದಿರುವ ಯುಜಿ ಪದವಿಗಳ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುವ ಸ್ನಾತಕೋತ್ತರ ಪದವಿಗಳು ಮತ್ತು ಪ್ರಾಧಿಕಾರವು ನೀಡುವ ಎಲ್ಲಾ ಪ್ರವೇಶಗಳು; ಸರ್ಕಾರ, ಸಂಬಂಧಿಸಿದ ವಿಶ್ವವಿದ್ಯಾನಿಲಯಗಳ ಹಾಗೂ ಅಪೆಕ್ಸ್ ಸಂಸ್ಥೆಗಳು ನೀಡುವ ಅನುಮೋದನೆಗೆ ಒಳಪಟ್ಟಿರುತ್ತದೆ.

12) ಪ್ರವೇಶಾತಿ ನಿಯಮಾವಳಿಗಳು, ವಿವರವಾದ ಅಧಿಸೂಚನೆ, ಅರ್ಹತಾ ಕಂಡಿಕೆಗಳು, ವಿವಿಧ ವೇಳಾಪಟ್ಟಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್: **https://kea.kar.nic.in** ಗೆ ಭೇಟಿ ನೀಡುವುದು.

ಸಹಿ/–
(ಹೆಚ್. ಪ್ರಸನ್ನ, ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/414/2025–26



ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. **ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ಕಾಗದಪತ್ರ ಅಗತ್ಯವಿರಬಹುದು. **ಬಡ್ಡಿ ದರಗಳು, ಡೌನ್ ಪೇಮೆಂಟ್ ಮತ್ತು ಅವಧಿ ಆಯ್ಕೆಗಳು ಅರ್ಜಿದಾರರ ಸಾಲ ಪ್ರೊಫೈಲ್ ಅನ್ನು ಸಾಲದಾತರು ವಿಶ್ಲೇಷಣೆ ಮಾಡುವುದನ್ನು ಆಧರಿಸಿದೆ. **ಕೊಡುಗೆಗಳು/ವೈಶಿಷ್ಟ್ಯಗಳನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. #ಪೈನ್ ಲ್ಯಾಬ್ಸ್ ಮಶಿನ್‌ಗಳ ಮೂಲಕ IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿಕೊಂಡು ಮಾಡಿದ EMI ವಹಿವಾಟುಗಳಿಗೆ ಆಯ್ದ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಆಫರ್ ಲಭ್ಯವಿದೆ. #ಗ್ರಾಹಕರು 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಗರಿಷ್ಠ ₹5000 ವರೆಗೆ ಪಡೆಯಬಹುದು. #ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್ ಗೆ ಒಂದು ವಹಿವಾಟಿಗೆ ಮಾನ್ಯವಾಗಿದೆ. #ಸ್ಕೀಮ್ ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಲಭ್ಯವಿದೆ. *3 ವರ್ಷಗಳ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್ ಕೇವಲ Activa 110 ಮತ್ತು Activa 125 ಡಿಲಕ್ಸ್ ವೇರಿಯಂಟ್‌ನಲ್ಲಿ ಮಾತ್ರ ಲಭ್ಯವಿದೆ. *₹5500 ಮೌಲ್ಯದ 3 ವರ್ಷದ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್‌ನ ವಿವರವಾದ ನಿಯಮ ಮತ್ತು ಷರತ್ತುಗಳ ಬಗ್ಗೆ ದಯವಿಟ್ಟು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರುಗಳನ್ನು ಸಂಪರ್ಕಿಸಿ. *ಈ ಮೇಲಿನ ಸ್ಕೀಮ್ ಅನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಎಲ್ಲ ಕೊಡುಗೆಗಳು 2025 ಏಪ್ರಿಲ್ 30 ರ ವರೆಗೆ ಮಾನ್ಯವಾಗಿದೆ. ^ಸೀಮಿತ ಅವಧಿಯ ವಿಶೇಷ ದರವು ಕರ್ನಾಟಕ ರಾಜ್ಯದಲ್ಲಿ Activa 110cc ಸ್ಟಾಂಡರ್ಡ್ OBD2B ವೇರಿಯಂಟ್‌ಗಾಗಿದೆ. ಸೀಮಿತ ಅವಧಿಯ ವಿಶೇಷ ಬೆಲೆಯ ಬಗ್ಗೆ ವಿವರಗಳಿಗಾಗಿ, ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳನ್ನು ಸಂಪರ್ಕಿಸಿ. ಕ್ರಿಯೇಟಿವ್‌ನಲ್ಲಿ ತೋರಿಸಿದ ವೈಶಿಷ್ಟ್ಯಗಳು ಎಲ್ಲ ವೇರಿಯಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. ಚಿತ್ರದಲ್ಲಿ ತೋರಿಸಿದ ಉತ್ಪನ್ನಗಳು ಮಾರ್ಕೆಟ್‌ನಲ್ಲಿನ ಅಸಲಿ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: **Ananda Honda** - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda** - **ANEKAL:** 080-27830234, 9880417779; **City Honda** - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda** - **DOMLUR:** 49656565, 9342432156; **INDIRANAGAR:** 9342432157; **Dhruvdesh Honda** - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; **Raja Honda** - **KORAMANGALA:** 08067329000,9035310055; **Prime Honda** - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda** - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda** - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda** - **KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda** - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda** - **DODDABALLAPURA:** 7022620885; **NELAMANAGALA:** 080-27722333, 7022008894; **Wings Honda** - **HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda** - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda** - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda** - **GOWRIBIDANUR:** 9900007422/33; **SIDLAGHATTA:** 9611596113; **Century Honda** - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda** - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda** - **PAVAGADA:** 9535941215; **Annapoorna Honda** - **MADHUGIRI:** 9886627429; **Vignesh Honda** - **TIPTUR:** 9886711161; **TURUVEKERE:** 9448214014; **Sri Srinivasa Honda** - **CHIKKANAYAKANAHALLI:** 8722522221; **Prestige Honda** - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda** - **BIDADI:** 9945966771, 9164871007; **Springs Honda** - **KENGERI:** 9513771114; **Nideesh Honda** - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in